MADRAS GOVERNMENT ORIENTAL SERIES

No. CXLIX

ಕಾಮಂದಕೀಯನೀತಿಸಾರ ವ್ಯಾಖ್ಯಾಟೀಕೆ

KĀMANDAKĪYANĪTISĀRA VYĀKHYĀTĪKE

MADRAS GOVERNMENT ORIENTAL SERIES

PUBLISHED UNDER THE AUTHORITY OF
THE GOVERNMENT OF MADRAS.

General Editor
T. CHANDRASEKHARAN, M.A., L.T.,
Curator, Government Oriental Manuscripts Library,
Madras.

No. 149

ಕಾಮಂದಕೀಯನೀತಿಸಾರ ವ್ಯಾಖ್ಯಾಟೀಕೆ

KAMANDAKIYANITISARA VYAKHYATIKE

Critically edited with Introduction

BY

V. Hanumantachar, M.A., L.T.,

(Retd. Librarian, Oriental Mss. Library, Madras)

GOVERNMENT ORIENTAL MANUSCRIPTS LIBRARY, MADRAS.

1956

Price Rs. 3—4—0

PRINTED AT
THE SREEVATHSA PRESS
ROYAPETTAH, MADRAS.

INTRODUCTION

The Government of Madras took up for consideration the question of publication of the various manuscripts in different languages on subjects like Philosophy, Medicine, Science, etc, early in May 1948. Important Manuscript Libraries in the Madras Presidency were requested to send a list of unpublished manuscripts with them for favour of being considered by the Government for publication. The Honorary Secretary of the Tanjore Maharaja Serfoji's Sarasvathi Mahal Library, Tanjore, alone complied with this request. This list as well as a similar list of unpublished manuscripts in the Government Oriental Manuscripts Library, Madras were carefully examined and a tentative selection of Manuscripts suitable for publication was made. The Government in their Memorandum No. 34913/48-10. Education, dated 4—4—1949. constituted an Expert Committee with the Curator of the Government Oriental Manuscripits Library, Madras, as the Secretary, for the final selection of Manuscripts suitable for printing and for estimating the cost of publication.

The following are the members of the Committee :—

1. Sri T. M. Narayanaswami Pillai, M.A., B.L.
2. ,, R. P. Sethu Pillai, B.A., B.L.
3. C. M. Ramachandra Chettair, B.A., B.L.
4. R. Krishnamoorthy, (Kalki).
5. Dr. N. Venkataramanayya, M.A., PH. D.
6. Sri M. Ramanuja Rao Naidu, M.A.
7. ,, V. Prabhakara Sastri.
8. N. Venkata Rao, M.A.
9. H. Sesha Ayyangar.
10. Masti Venkatesha Ayyangar.
11. M. Mariappa Bhat, M.A., L.T.
12. Dr. C. Achyuta Menon, B.A., PH. D.
13. ,, C. Kunhan Raja, M.A., D. PHIL.
14. ,, A. Sankaran M.A., PH. D., L.T.
15. Sri Polakam Rama Sastri.
16. ,, S. K. Ramanatha Sastri.

17. Dr. M. Abdul Haq, M.A., D. Phil., (Oxon.)
18. Afzul-ul Ulama Hakim Khader Ahamed.
19. Sri P. D. Joshi.
20. S. Gopalan, B.A., B.L.
21. T. Chandrasekharan, M.A., L.T.

With the exception of Sri Masti Venkatesa Ayyangar, and Dr. C. Kunhan Raja, the above members continued to be members of the Expert committee for 1950-51 also to which the following gentlemen were added in Govt. Memo. 7297-E/50-3, Education, dated 19th May, 50 and Govt. Memo. No. 15857-E/50-4, Education, dated 7th Sept. '50.

1. Dr. A. Chidambaranatha Chettiar, M.A., PH.D.
2. Sri S. Govindarajulu, B.A., B.L., LL.B., BAR-AT-LAW.
3. Capt. G. Srinivasamoorthy, B.A., B.L., M.B., & C.M.
4. Dr. Muhammed Hussian Nainar, M.A., PH.D.
5. Sri T. V. Subba Rao, B.A., B.L.
6. Principal, College of Indian Medicine, Madras.

The members of the Committee formed into Sub-Committees for the various languages Sanskrit, Tamil, Telugu, Kannada, Malayalam, Mahrathi and Islamic Languages. They met during the month of May, 1949, at Madras and at Tanjore to examine the manuscripts and make a selection. The recommendations of the Committee were accepted by the Government and they dicided to call these publication as the "MADRAS GOVERNMENT ORIENTAL SERIES," and appointed the Curator, Government Oriental Manuscripts Library, Madras, as the General Editor of the publications under this series.

The following manuscripts were taken up for publication during 1949-50

"A" From The Government Oriental Manuscripts Library, Madras.

TAMIL

1. Kappal Sattiram
2. Anubhava Vaiddiya Murai
3. Attanakolahalam
4. Upadesa Kandam
5. Colan Purva Pattayam
6. Sivajnana Dipam

TELUGU

1. Ausadha Yogamulu.
2. Vaidya Nighantuvu.
3. Dhanurvidya Vilasamu.
4. Yoga Darsana Visayamu.
5. Khadga Laksana Siromani.

SANSKRIT

1. Visanarayaniyam (Tantrasarasangraha)
2. Bhargava Nadika.
3. Hariharacaturangam.
4. Brahmasutravrtti—Mitakshara.
5. Nyayasiddhanta Tattvamrtam.

MALAYALAM

1. Garbha Cikitsa.
2. (*a*) Vastulakshanam.
   (*b*) Silpavishayam.
3. Mahasaram.
4. Kanakkusaram.
5. Kriyakraman.
6. Kanakkusaram (Balaprabodham).

KANNADA

1. Lokopakaram.
2. Rattamatam.

3. Asvasastram.
4. Vividha Vaidya Visoayagalu.
5. Sangitaratnakara.
6. Supasastra.

ISLAMIC LANGUAGES

1. Jamil-Al-Ashya.
2. Tibb-E-Faridi.
3. Tahqiq-Al-Buhran.
4. Safinat-Al-Najat.

"B" FROM THE TANJORE MAHARAJA SERFOJI'S SARASWATHY MAHAL LIBRARY, TANJORE.

TAMIL

1. Sarabhendra Vaiddiya Murai (Diabetes).
2. Do. (Eyes).
3. Do. (Anaemia).
4. Do. (Svasakasam).
5. Agastiar 2000.
6. Konkanarsarakku Vaippu.
7. Tiruccirrambalakkovaiyar with Padavurai.
8. Talasamudram.
9. Bharatanatyam.
10. (*a*) Pandikeli Vilasa Natakam.
    (*b*) Pururava Cakravarti Natakam.
    (*c*) Madana Sundara Vilasa Natakam.
11. Percy Macqueen's Collection of Folklore in the Madras University Library.
12. Ramaiyan Ammanai.

TELUGU

1. Kamandakanitisaramu.
2. Taladasapranapradipika.

3. Raghunatha Nayakabhyudayamu.
4. Rajagopala Vilasamu.
5. Ramayanamu by Katta Varadaraju.

MAHRATHI

1. Natyasastra Sangraha.
2. (*a*) Book of Knowledge.
   (*b*) Folk Songs.
   (*c*) Dora Darun Veni Paddhati.
   (*d*) Asvasa Catula Dumani.
3. (*a*) Pratapasimhendra Vijaya Prabandha.
   (*b*) Sarabhendra Tirthavali.
   (*c*) Lavani.
4. Devendra Kuravanji.
5. Bhakta Vilasa.
6. Sloka Baddha Ramayana.

SANSKRIT

1. Asvasastra with Tricolour illustrations.
2. Rajamrganka.
3. Anandakandam.
4. Ayurvedamahodadhi.
5. Gita Govinda Abhinaya.
6. (*a*) Cholachampu.
   (*b*) Sahendra Vilasa.
7. Dharmakutam—Sundara Kanda.
8. Jatakasara.
9. Visnutattvanirnaya Vyakhya.
10. Sangita Darpana.
11. Bijapallava.

During 1950 only the Sub-committee for TAMIL, TELUGU and KANNADA met in the mouth of July 1950 at Madras.

The following books were taken up for publication in the various languages during 1950-51 :—

TAMIL

1. Datcanayanar Vaiddiya Attavanai.
2. Vaiddiyak Kalanciyam.
3. Anubhava Vaiddiya Murai, Vol. 3.

TELUGU

1. Saivacarsangrahamu.
2. Anubhava Vaidyamu.
3. Abhinayadarpanamu.

SANSKRIT

1. Arogyacintamani.
2. Tattvasara with Ratnasarini.
3. Sutrarthamrta Lahari.
4. (*a*) Ratnadipika.
   (*b*) Ratnasastra.

MALAYALAM

1. Asvacikitsa.
2. Phalasarasamuccaya.

KANNADA

Vaidya Sara Sangraha Vol. I.

During 1951-52, only the Sub-committees for TAMIL, TELUGU and MALAYALAM met in the month of April 1951. The following books were taken up for publication in the various languages :—

TAMIL

1. Saptarishinadi, Vol. I, Mesa Lagna.
2. Karnatakarajakkal Savistara Carittiram.
3. Bharata Siddantam.
4. Pillaippinivakatam Vol. I.
5. Anubhava Vaiddiyam, Vol. 4.
6. Mattuvakatam.

TELUGU

1. Brahmavidya Sudharnavamu.
2. Ragatalacintamani.
3. Vaidyacintamani.
4. Kumararamuni Katha.
5. Katamraju Katha.

SANSKRIT

1. Devakeralam—Candrakala Nadi.
2. Patanjala Yogasutra Bhasya Vivarana by SrSankraai - carya.

MALAYALAM

1. Kilivandusamvadam.
2. Advaita Vedantam.
3. Barhaspatyasutra with Malayalam commentary.
4. Karanapaddhati.

KANNADA

1. Sadgururahasyam.

ARABIC

1. Shawakil-Ul-Hur.

In Government Memorandum No. 13947-E/52-2, Education, dated 7th August 1952, a few changes were made in the personnel of the Expert Committee.

The names of the following members were deleted :—

1. Sri V. Prabhakara Sastri.
2. Dr. C. Achyuta Menon.
3. Dr. M. Abdul Haq.

The following gentlemen were included as members of the Expert Committee :—

1. Sri M. Somasekhara Sarma.
2. Dr. V. Raghavan, M.A., PH.D.
4. Dr. R. Nagaraja Sarma, M.A., PH.D.
4. Dr. S. Krishnan Nayar, M.A., PH.D.
5. Prof. S. A. Bukhari, M.A.

The Sub-Committee for all the languages met during September 1952 for selecting manuscripts for publication.

The following manuscripts were taken up for publication during 1952—53 :—

TAMIL

1. Saptarishinadi, Vol. II—Virushabha Lagna.
2. Temple Inscriptions of South India, Vol. I.

TELUGU

1. Sariramu.

KANNADA

1. Vaidyasara Sangraha, Vol. II.

MALAYALAM

1. Vidyamadhaviyam.
2. Sarvasadharana Cikitsa.
3. Vishacikitsa and Vishappattusaram.

SANSKRIT

1. Nyayaratnam with the commentary Dyutimalika
2. Cikitsatilakam
3. Nrittaratnavali

The Government in their G. O. Ms. No. 1820 Education dated 4—8—1952 sanctioned a grant of rupees 9,000 to the Dr. V. Swaminatha Iyer's Library, Adyar, towards the publication of the following Tamil Manuscripts as part of the "Madras Government Oriental Series."

1. Tiruvacaka Vyakhyanam.
2. Mahabharata Cudamani.

The following books were taken up for publication during 1953-54 :—

TAMIL

1. Saptarishinadi, Vol. III, Mithuna Lagna.
2. Temple Inscriptions of South India, Vol. II.

TELUGU

1. Bharatasarasangraha.

KANNADA

1. Manmathavijaya.

MALAYALAM

1. Jnanapiyusham.

SANSKRIT

1. Daivajnabharana.

PRESIAN

1. Baharisthan Sukhan.

Out of the seven books taken up for publication, five books excepting one in Telugu and one in Persian were printed during the year.

The following books were taken up for publication during 1954-55:—

TAMIL

1. Pillaippinivakatam (on Infantile disease). Vol. II.
2. Saptarishinadi, Vol. IV, Kataka Lagna.
3. Perur Kovai.
4. Siddhantavilakkam.

5. Samudrikalakshanam.
6. Anandaranga Kovai.

KANNADA

1. Abhidhanaratnamala.
2. Vyavaharaganita.

MALAYALAM

1. Vetalapancavimsati.
2. Yudhisthiravijayam.

SANSKRIT

1. Abhoga.
2. Aumapatam.
3. Mahabhaskariyam.

PERSIAN

1. Nuskha-e-Shajahani.

On account of the formation of the Andhra State, the printing of the Telugu manuscripts could be undertaken only in consultation with that State. Since the concurrence of that State has not been received so far, no work in Telugu was taken up for publication although three works, namely, Bobbili-Yuddhakatha, Haider Caritramu and Aryabhtiya Siddhanta Vyakhya were selected for publication during 1954-55.

It is hoped that the publication of most of the important manuscripts will be completed within the next few years.

Some of the manuscripts taken up for publication are represented by single copies in the Library and consequently the mistakes that are found in them could not be corrected by comparing them with other copies. The editors have, however, tried their best to suggest correct readings. The wrong readings are given in round brackets and correct readings have been suggested in square brackets. When different readings are

found, they have been given in the foot-notes except in the case of a few books in which the correct readings have been given in the foot-note or incorporated in the text itself.

The Government of Madras have to be thanked for financing the entire scheme of publication although there is a drive for economy in all the departments. My thanks are due to the members of the expert Committee who spared no pains in selecting the manuscripts for publication. I have also to thank the various editors, who are experts in their own field, for readly consenting to edit the manuscripts and see them through the Press. The various Presses that have co-operated in printing the manuscripts in the best manner possible also deserve my thanks for the patience exhibited by them in carrying out the corrections made in the proofs.

This edition of Kamandakiyanitisaravakyateeke is based on one paper manuscript, $19\frac{3}{4}'' \times 7\frac{1}{2}''$ in size, bearing D. No. 282 of this library. This is a rendering in Kannada prose of the Sanskrit Kamandakaniti by Cikkupadhyaya. The work contains 16 sargas out of which only the first 8 sargas are available in this manuscript, and the same is printed.

Govt. Oriental Manuscripts Library,
Madras.
28—2—1956

T. CHANDRASEKHARAN,
General Editor,
Madras Govt. Oriental Series.

— ವಿ ಷ ಯಾ ನು ಕ್ರ ಮ ಣಿ ಕೆ —

		ಪುಟದಿಂದ–ಪುಟದವರೆಗೆ
1.	Introduction	1 — 15
2.	ಮುನ್ನುಡಿ—	
	(i) ಇಂಗ್ಲೀಷಿನಲ್ಲಿ	1 — 4
	(ii) ಕನ್ನಡದಲ್ಲಿ	5 — 8
3.	ಚಿಕ್ಕ ದೇವಮಹಾರಾಯನ ವಂಶಾವಳ್ಯಾದಿ ವರ್ಣನಂ	1 — 16
4.	ಇಂದ್ರಿಯ ಜಯಂ—ಪ್ರಥಮ ಸರ್ಗ	17 — 36
5.	ವಿದ್ಯಾ ಸಮುದ್ದೇಶ, ವರ್ಣಾಶ್ರಮಧರ್ಮ, ದಂಡ ಮಾಹಾತ್ಮ್ಯಂ—ದ್ವಿತೀಯ ಸರ್ಗ	37 — 44
6.	ಆಚಾರ್ಯ ವ್ಯವಸ್ಥಾಪನಂ—ತೃತೀಯ ಸರ್ಗ	45 — 50
7.	ಪ್ರಕೃತಿ ಸಂಪದ್ವಿಭಾಗಂ—ಚತುರ್ಥ ಸರ್ಗ	51 — 62
8.	ಸೇನಾಧರ್ಮಂ—ಪಂಚಮ ಸರ್ಗ	63 — 75
9.	ಕಂಟಕ ಶೋಧನಂ—ಷಷ್ಠ ಸರ್ಗ	76 — 78
10.	ಆತ್ಮ ರಕ್ಷಣಂ—ಸಪ್ತಮ ಸರ್ಗ	79 — 85
11.	ಮಂಡಲಶೋಧನಂ—ಅಷ್ಟಮ ಸರ್ಗ	86 — 99
12.	ಪರಿಶಿಷ್ಟ ೧	101 — 133
13.	ಪರಿಶಿಷ್ಟ ೨	134 — 137
14.	ಶುದ್ಧಾಶುದ್ಧ ಪತ್ರಿಕೆ	138 — 140

INTRODUCTION

This edition of the Kannada Comentery on the Sanskrit gloss for the *Kamandaka Niti Sastra* is based on the paper manuscript belonging to the Mackenzie Collection, preserved in the Government Oriental Manuscripts Library, Madras under D.No.282. The papers of the manuscript are very brittle and damaged and the writing most illegible. The press copy was, collated with the paper manuscript available at the Government Oriental Library Mysore, under No. 181. But the readings in the two manuscripts are almost identical and as more manuscripts of this work were not available, it was not possible to give the correct readings in some places. Some incorrect readings, however have been corrected with the help of the Sanskrit printed edition of the *Kamandakaniti* in the Government Oriental Manuscripts Library and another edition with Telugu translation available in the Adyar Library Madras. Although it is not quite easy to follow the commentary without the original text, the text is omitted in this edition as the original manuscript does not contain the same. The Sanskrit gloss which is mentioned as "*Upadhyayanirapeksa*" and is the basis for this Kannada Commentary, does not appear to have been printed anywhere, and even the very existence of this in manuscript form is not known. Even the available Kannada manuscript is not complete; it contains the commentary for the first eight adhyayas. It is not clear whether the commentator wrote the commentary for the complete text or whether the remaining portion was not available to the scribe, although the commentator completed the work. Therefore the contents of the remaining chapters have been summarised in the appendix No. 1. The commentator has mentioned only sixteen chapters in the table of contents. But the printed edition of the *Kamandakaniti* available in the Adyar Library contains twenty chapters. Therefore the contents of the last four chapters

are also briefly given. The quotations taken by the author from other works are selected and given in the appendix No.2.

As stated above this is a Kannada Commentary on the Sanskrit gloss "*Upadhyayanirapesaka*" for the *Kamandakaniti*. After the benedictory verses, at the begining of the work, the author has briefly described in the first chapter the Mysore State: he has then given a brief account of the earlier kings who ruled at Mysore and of Chikadeva Raja the great patron of learning. The second chapter begins with the description of the court of King Chikadeva Raja. The king tells in the court that he knows about all *sastras* and *puranas* and expresses his desire to know also about the *Kamandakaniti* in Kannada. This work is thus written at the instance of king Chikadeva Raja of Mysore by one of the court pandits. It is not clear who this pandit was. In the introductory portion the genealogy of the author abruptly stops with one Brhaspati who was of the *Paurakutsagotra*, *yajusakha* and a resident of Kadambapura in Gundlupeta Taluk. The text then begins with salutation to Sri Ramanuja. It may therefore be presumed that this Brhaspati is the author. If this presumption is correct his date may be assigned to the beginning of the 17 century A.D. The salutation made to Sri Ramanuja at the commencement of the work clearly shows that this author was a Sri Vaisnava Brahmin. Sriman R. Narasimhachar in his "Lives of Kannada poets"in the description of this work, quotes the colophan appearing at the end of the firstchapter. According to this colophon one Lakshmipati Pandit who was a minister of Chikadeva Raja is the author. In that case Brhaspati is his title and he will have to be accepted as the author for the Sanskrit as well as for the Kannada commentaries.

The subject of this work is politics. In ancient days the people felt that in order to safeguard the interests of the people a king was quite essential as the head of a state. The king was expected to be fair and just to all as otherwise there would be chaos in the country. This "*Niti Sastra*" deals with the duties of the king towards his subjects.

The tradition regarding this work is that it was first explained in onethousand chapters by Brahma.As this was too lengthy it was subsequently summarised by Narada, Sukra, Brhaspati, Bharadvaja, Visalaksa, Bhisma, Parasara, Manu and others. Based on these earlier works, Visnugupta who was responsible for the destruction of Nandas and instalation of Chandragupta as king wrote a work on politics. This was later summarised by Kamandaka, for which the commentary *Upadhyayanirapeksa* was written in Sanskrit. It is unfortunate that this work is not available now. The present edition is a Kannada commentary ofthis Sanskrit work.

Kannadigas have to a large extent translated into Kannada most of the valuable literary works in Sanskrit. *Puranas* and *Itihasas* have appeared in Kannada in various forms as Prose, Poetry, Drama, Campu etc. But translations of Sastraic works are not many. This work will bring to the notice of the Kannadigas about the existence of translations of such sastratic works also. It is unfortunate that the work is not available in full, I appeal to the Kannada scholars to take interest in discovering the remaining portion, so that it may also be published under the same series.

My heart felt thanks are due the Government forfinancing the scheme for publishing such rare works in various languages, to Sri T. Chandrasekhara Dikshitar M.A.L.T.curator. Government Oriental Manuscripts Library Madras, .for selecting this work for publication and giving me an opportunity for serving

even after my retirement, the Library in which I started and completed my official career, to Pandit H. Sesha Iyengar who cooperated with me at every stage in editting this work and to the Propritor Sreevathsa Press for printing the work within a very short period with great care and efficiency.

V. Hanumanthachar
Editor

ಮುನ್ನುಡಿ

ಮುದ್ರಣವಿಚಾರ

ಈ ಗ್ರಂಥವು ಮದ್ರಾಸ್ ಸರ್ಕಾರದ ರಾಜಕೀಯ ಪ್ರಾಚೀನ ಪುಸ್ತಕಭಂಡಾರ 282 ನೆಯ ನಂಬರಿನ ಕಾಗದಪ್ರತಿಯ ಆಧಾರದಿಂದ ಮುದ್ರಿತವಾಗಿದೆ. ಮೈಸೂರುಸರ್ಕಾರದ ಪುಸ್ತಕಭಂಡಾರದಲ್ಲಿರುವ 181 ನಂ. ಕಾಗದದ ಪ್ರತಿಯೊಡನೆ ಸಂಪ್ರತಿಸಿದೆ ಆದರೆ ಎರಡರ ಪಾಠವೂ ಸ್ವಲ್ಪ ಹೆಚ್ಚು ಕಡಿಮೆ (ಲೇಖಕ ಪ್ರಾಮಾದಿಕ ದೋಷವನ್ನು ಬಿಟ್ಟರೆ) ಒಂದೇ ಸಮನಾಗಿರುವುದರಿಂದ ಗ್ರಂಥ ಶೋಧನೆಯಲ್ಲಿ ಹೆಚ್ಚಿನ ಪ್ರಯೋಜನವಾಗಲಿಲ್ಲ–ಹಸ್ತಲಿಖಿತ ಪ್ರತಿಗಳ ಆಧಾರವು ಹೆಚ್ಚಾಗಿಲ್ಲದಿರುವುದರಿಂದ ಅಲ್ಲಲ್ಲೇ ಅಲ್ಪಸ್ವಲ್ಪ ಲೋಪದೋಷಗಳು ಇದ್ದೇಇವೆ. ಕೆಲವು ಅಸಾಧುಪಾಠಗಳನ್ನು ಶುದ್ಧಿಮಾಡಲು ಇದೇಲೈಬ್ರರಿಯದೇವನಾಗರೀಲಿಪಿಯಲ್ಲಿರುವ ಮುದ್ರಿತವಾಗಿರುವ ಕಾಮಂದಕೀನೀತಿಯ ಸಂಸ್ಕೃತ ಮೂಲಗ್ರಂಥದ ಆಧಾರದಿಂದಲೂ, ಮತ್ತು ಅಡಿಯಾರ್ ಲೈಬ್ರರಿಯ ತೆಲುಗು ಅಕ್ಷರದ ತೆಲುಗು ತಾತ್ಪರ್ಯದೊಡನೆ ಮುದ್ರಿತವಾಗಿರುವ ಪ್ರತಿಯ ಸಹಾಯದಿಂದಲೂ ಅಲ್ಪಸ್ವಲ್ಪ ಸಹಾಯವನ್ನು ಪಡೆದಿವೆ. ಮೂಲವಿಲ್ಲದ ವ್ಯಾಖ್ಯಾನವು ಅಷ್ಟು ಸುಗಮವಾದುದಲ್ಲವಾದರೂ ಹಸ್ತಲಿಖಿತ ಪ್ರತಿಗಳಲ್ಲಿ ಮೂಲವಿಲ್ಲದೆ ವ್ಯಾಖ್ಯಾಟೀಕೆಯೇ ಇದ್ದುದರಿಂದ ಮೂಲವನ್ನು ಇಲ್ಲಿ ಕೊಡಲಾಗಲಿಲ್ಲ. ಈ ಟೀಕೆಗೆ ಆಧಾರವಾಗಿರುವ ಉಪಾಧ್ಯಾಯನಿರಪೇಕ್ಷಾ ಎಂಬ ಸಂಸ್ಕೃತ ವ್ಯಾಖ್ಯಾನವು ಎಲ್ಲಿಯೂ ಮುದ್ರಿತವಾಗಿರುವಂತೆ ತಿಳಿಯಲಿಲ್ಲ– ಹಸ್ತಲಿಖಿತ ಪ್ರತಿಗಳ ಅಸ್ತಿತ್ವವೂ ತಿಳಿದುಬರಲಿಲ್ಲ. ಅದು ದೊರಕಿದ್ದರೆ ಈ ಟೀಕಾಮುದ್ರಣಕ್ಕೆ ತುಂಬಾ ಸಹಾಯವಾಗುತ್ತಿತ್ತು– ಆದರೂ ತಕ್ಕಮಟ್ಟಿಗೆ ಗ್ರಂಥಭಾಗವನ್ನು ಶುದ್ಧಿಮಾಡಿದೆ– ಹಸ್ತಲಿಖಿತ ಪ್ರತಿಗಳ ಪಾಠಗಳನ್ನೇ ಮುದ್ರಿಸಿದ್ದರೆ ತುಂಬಾ ಆಭಾಸವೇ ಆಗುತ್ತಿತ್ತೆಂಬುದರಲ್ಲಿ ಸಂದೇಹವೇ ಇಲ್ಲ–* ಗ್ರಂಥವು ಪೂರ್ತಿಯಾಗಿ ದೊರಕಲಿಲ್ಲ. ಆದಿಯಿಂದ 8 ಅಧ್ಯಾಯಗಳು ಮಾತ್ರವೇ ದೊರಕಿರುವುದರಿಂದ ಅಷ್ಟನ್ನು ಮುದ್ರಿಸಿದೆ. ಉಳಿದ ಭಾಗಕ್ಕೆ ಟೀಕೆಯು ರಚಿತವಾಗಿದ್ದು ಲೇಖಕರಿಗೆ ದೊರಕಲಿಲ್ಲವೋ ? ಗ್ರಂಥಕರ್ತೃವೇ ರಚಿಸಲಿಲ್ಲವೋ ? ನಿರ್ಧರವಾಗಿ ಹೇಳಲು ಯಾವ ಆಧಾರವೂ ಇಲ್ಲ – ಆದುದರಿಂದ ಉಳಿದ ಅಧ್ಯಾಯಗಳ ವಿಷಯವನ್ನು ವಿವರವಾಗಿ ಮೂಲಗ್ರಂಥವನ್ನನುಸರಿಸಿ ಪರಿವರ್ತಿಸಿ ಮೊದಲನೆಯ ಪರಿಶಿಷ್ಟವನ್ನಾಗಿ ಕೊಟ್ಟಿದೆ– ಈ ಗ್ರಂಥದಲ್ಲಿ ಗ್ರಂಥಕರ್ತೃವು ಗ್ರಂಥವಿಷಯದಲ್ಲಿ ೧೬ ಸರ್ಗಗಳಿಗೆ ಮಾತ್ರ ಅನುಕ್ರಮಣಿಕೆಯನ್ನು ಕೊಟ್ಟಿರುವುದರಿಂದ ಹದಿನಾರರಿಂದ ಮುಂದಣ ನಾಲ್ಕು ಅಧ್ಯಾಯಗಳ ವಿಷಯವನ್ನೂ ಸಂಗ್ರಹಿಸಿಕೊಟ್ಟಿದೆ. ಈ ಗ್ರಂಥದಲ್ಲಿ ಉದ್ಧೃತವಾಗಿರುವ ಇತರ ಗ್ರಂಥಗಳ ವಾಕ್ಯಗಳನ್ನು ಆರಿಸಿ ೨ನೆಯ ಪರಿಶಿಷ್ಟವಾಗಿ ಕೊಟ್ಟಿದೆ.

---

* ಮದ್ರಾಸ್ ಪ್ರತಿಯ ಕೊನೆಯಲ್ಲಿ 9 ಸರ್ಗದ ಪೀಠಿಕಾರೂಪವಾದ ಕಂದಗಳಿರುವುದರಿಂದ ಗ್ರಂಥವು ಮುಂದುವರಿದು ಪೂರ್ಣವಾಗಿತ್ತೆಂದು ಭಾಸವಾಗುವುದು.

ಗ್ರಂಥಕರ್ತೃವಿಚಾರ

ಈ ಗ್ರಂಥವು ಸಂಸ್ಕೃತಭಾಷೆಯ ಕಾಮಂದಕನೀತಿಯ ಉಪಾಧ್ಯಾಯ ನಿರಪೇಕ್ಷಾ ಎಂಬ ವ್ಯಾಖ್ಯಾನದ ಕನ್ನಡ ಟೀಕೆಯಾಗಿದೆ. ಗ್ರಂಥಕರ್ತೃವು ಗ್ರಂಥಾರಂಭದಲ್ಲಿ ಮಂಗಳಪದ್ಯಗಳಾದ ನಂತರ ಮೈಸೂರು ದೇಶವನ್ನೂ, ಅಲ್ಲಿ ರಾಜ್ಯವಾಳಿದ ಪ್ರಾಚೀನರಾಜರ ಚರಿತ್ರವನ್ನೂ ೧೭ ನೆಯ ಶತಮಾನದಲ್ಲಿ ರಾಜ್ಯವಾಳುತ್ತಿದ್ದು ಮೈಸೂರರಸರಲ್ಲಿ ತುಂಬಾ ಪ್ರಸಿದ್ಧನಾಗಿ ದೇಶವನ್ನೂ, ಪ್ರಜೆಗಳ ಗ್ರಂಥಭಂಡಾರವನ್ನೂ ತುಂಬಾ ವೃದ್ಧಿಗೊಳಿಸಿದ ಚಿಕ್ಕದೇವರಾಜ ಒಡೆಯರ ಆಡಳಿತವನ್ನು ಶ್ಲಾಘಿಸಿ ಮೊದಲನೆ [1] ಆಶ್ವಾಸವನ್ನು ಮುಗಿಸಿ– ಎರಡನೆಯ ಆಶ್ವಾಸದ ಆರಂಭದಲ್ಲಿ ಚಿಕ್ಕದೇವರಾಯನ ಸಭೆಯ ವೈಭವನ್ನು ವರ್ಣಿಸಿ ರಾಜನು ಸಭೆಯಲ್ಲಿರುವ ವಿದ್ವಾಂಸರನ್ನೆಲ್ಲಾ ಸಂಬೋಧಿಸಿ ನಾನು ನಿಮ್ಮಿಂದ ಎಲ್ಲಾ ಶಾಸ್ತ್ರವಿಷಯಗಳನ್ನೂ ಪುರಾಣೇತಿಹಾಸಗಳನ್ನೂ ಕೇಳಿ ಸಂಗೀತ ಸಾಹಿತ್ಯಾದಿಗಳ ಸುಖಾಸ್ವಾದನವನ್ನೂ ಮಾಡಿದೆನು. ಆದರೆ ಕಾಮಂದಕೀನೀತಿಯನ್ನು ಮಾತ್ರ ಕೇಳಲಿಲ್ಲ. ಅದನ್ನು ಕನ್ನಡಗಲ್ಲಿ ಕೇಳಬೇಕೆಂಬ ಆಸೆಯುಂಟು, ಎನ್ನಲು – ಆ ಸಮಯದಲ್ಲಿ ಈ ಮಾತನ್ನು ಕೇಳಿದ ಸಭಾಸದರಲ್ಲಿ ಮೈಸೂರುಸೀಮೆಯ ಸರ್ವಸಂಪತ್ಸಮೃದ್ಧವಾದ ತ್ರಿಕದಂಬಪುರ (ಗುಂಡ್ಲುಪೇಟೆ ತಾಲ್ಲೂಕು ತೆರುಕಣಾಂಬಿ ಎಂಬ ಗ್ರಾಮ – ಅದು ಆ ಕಾಲದಲ್ಲಿ ದೊಡ್ಡ ನಗರವಾಗಿ ನಾಡ ರಾಜಧಾನಿಯಾಗಿತ್ತು) ವಾಸಿಯಾದ ಯಜುಶ್ಶಾಖೆಗೆ ಸೇರಿದ ಪೌರಕುತ್ಸಗೋತ್ರದ ಹರಿಸೇವಾ ನಿರತಾಮನನಾದವನು ಹುಟ್ಟಿದಂ ಬೃಹಸ್ಪತಿ – ಎಂದು (ಈ ಕಂದದ ಕೊನೆಯ ಭಾಗ ಲಿಖಿತವಾಗಿಲ್ಲ. ಯೆನಿಪಂ ಎಂದು ಸೇರಿಸಿ ಕಂದವನ್ನು ಪೂರ್ಣಗೊಳಿಸಿದೆ) ಹೇಳಿ, ಶ್ರೀಮತೇ ರಾಮಾನುಜಾಯನಮಃ ಶುಭಮಸ್ತು ಎಂದು ಬರೆದು ಬಳಿಕ ಈ ಕಾಮಂದಕನೀತಿಯೊಳ್ ಎಂಬ ಪ್ರಕೃತಿಟೀಕಾಗ್ರಂಥವು ಆರಂಭವಾಗಿದೆ— ಇದರಿಂದ ಈ ಗ್ರಂಥವನ್ನು ಈ ಬೃಹಸ್ಪತಿಯೆಂಬುವನೇ ಬರೆದಿರಬಹುದೆಂದು ಊಹಿಸಲು ಅವಕಾಶವುಂಟು. ಈ ಬೃಹಸ್ಪತಿಯೆಂಬುದು ಈತನ ಬಿರುದಾಗಿರಬಹುದು. ನಿಜವಾದ ಹೆಸರು ಏನಿರಬಹುದೆಂದು ತಿಳಿಯಲು ಅಥವಾ ಊಹಿಸಲು ಅವಕಾಶವಿಲ್ಲ. ಅಥವಾ ಇನ್ನು ಈ ಕವಿಯ ವಿಚಾರವನ್ನು ತಿಳಿಸುವ ಈ ಕಂದದಿಂದ ಮುಂದಣ ಗ್ರಂಥಭಾಗವು ಉಕ್ತವಾಗಿರುವುದರಿಂದ ಕವಿಯ ನಿಜವಾದ ಹೆಸರನ್ನು ತಿಳಿಯಲು ಅವಕಾಶವೇ ಇಲ್ಲವಾಗಿದೆ. ರಾಜನು ಕಾಮಂದಕನೀತಿಯನ್ನು ಕೇಳಬೇಕೆಂದ ಮೇಲೆ ಆ ಸಭೆಯಲ್ಲಿದ್ದ ತ್ರಿಕದಂಬಪುರದ ಯಜುಶ್ಶಾಖೆಯ ಪುರುಕುತ್ಸಗೋತ್ರದಲ್ಲಿ ಪುಟ್ಟಿದ ಬೃಹಸ್ಪತಿ ಎಂದು ಪೀಠಿಕಾಪ್ರಕರಣವು ನಿಂತಿರುವುದರಿಂದ ಮುಂದೆ ಹೇಳುವ ಗ್ರಂಥವಿಷಯಕ್ಕೂ ಈ ಬೃಹಸ್ಪತಿಗೂ ಏನಾದರೂ ಸಂಬಂಧವಿದ್ದೇಇರಬೇಕು, ಎಂದರೆ ಈ ಗ್ರಂಥಕರ್ತೃವಿನ ಮೂಲಪುರುಷನೋ ಅಥವಾ ಗ್ರಂಥವನ್ನೇ ಬರೆದವನೋ ಇವರಲ್ಲಿ ಒಬ್ಬನಾಗಿರಬೇಕು. ಹಾಗೆ ಈತನೇ ಗ್ರಂಥಕರ್ತೃವಾಗುವುದಾದರೆ ಇವನ ಕಾಲ ೧೭ ನೆಯ ಶತಮಾನದ ಆದಿಭಾಗ, ಇವನ ವಾಸಸ್ಥಳ ಈಗಣ ಮೈಸೂರು ದೇಶದ ಗುಂಡ್ಲುಪೇಟೆತಾಲೂಕು ತ್ರಿಕದಂಬಪುರ. ಈತನು ಆದಿಯಲ್ಲಿ ರಾಮಾನುಜಸ್ತೋತ್ರಮಾಡಿರುವುದರಿಂದ ಈತನು ಯಜುಶ್ಶಾಖೆಯಪುರುಕುತ್ಸದಗೋತ್ರದ ಶ್ರೀವೈಷ್ಣವ ಬ್ರಾಹ್ಮಣವರ್ಣದವನೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ—

(1) ಗದ್ಯಪದ್ಯ ಮಿಶ್ರಗ್ರಂಥವಾದುದರಿಂದ ಗ್ರಂಥವಿಭಾಗಕ್ಕೆ ಆಶ್ವಾಸವೆಂದು ಸಂಜ್ಞೆಮಾಡಿರುವನು.

*ಕರ್ಣಾಟಕ ಕವಿಚರಿತಕಾರರಾದ ಶ್ರೀಮಾನ್ ಆರ್. ನರಸಿಂಹಾಚಾರ್ಯರು ತಮ್ಮ ಗ್ರಂಥದಲ್ಲಿ ಈ ಗ್ರಂಥದ ವಿಷಯವಾಗಿ— " ಇದು ಸಂಸ್ಕೃತ ಕಾಮಂದಕನೀತಿಗೆ ಗದ್ಯರೂಪವಾದ ಕನ್ನಡಟೀಕೆ–ಆಶ್ವಾಸ 8–ಈ ಟೀಕೆಗೆ ಉಪಾಧ್ಯಾಯನಿರಪೇಕ್ಷಾ ಎಂದು ಹೆಸರು. ಗ್ರಂಥಾದಿಯಲ್ಲಿ ವಿಷ್ಣುಸ್ತುತಿಯಿದೆ. ಬಳಿಕ ಕವಿ ಲಕ್ಷ್ಮೀ ರಾಮಾನುಜ ಇವರುಗಳನ್ನು ಸ್ಮರಿಸಿದ್ದಾನೆ–ಆಶ್ವಾಸಗಳ ಕೊನೆಯಲ್ಲಿ ಈ ಗದ್ಯವಿದೆ "—

ಇದು ಸತತನತಶತಧೃತಿಶಿತಿಗಳಶತಮುಖಮುಖಸುರವಿತತಿ ವಿತತ ಕೋಟೀರ ಕೋಟೀರಟಘಟಿತ ಚಟುಲಹರಿನೀಲಮಣಿ ಸ್ತೋಮಾಭಿರಾಮ ಧಾಮರೋಲಂಬಜಾಲ ಮೇಳಿತಕಂದಳದರವಿಂದಾಮಂದ ಸುಂದರ ಮಂಗಳ – ರಂಗನಾಥ ಚರಣಸುರುಚಿರ ನಖಮಯೂಖನಿಸ್ತಂದ್ರಸಾಂದ್ರಚಂದ್ರಿಕಾ ಲೋಲಲೀಲಾಚಕೋರ ಯಶೋ ವಿಮಲ ಸುಮುಸಮುದಯ ಸುರಭಿ ಹರಿದಂತಾ ಪ್ರತಿವಾಪ್ರತಾಪಪ್ರಮುರಪ್ರಭಾ ಪಲ್ಲವಸಮುಲ್ಲಸಿತ ಸಕಲವಿಬುಧ ನಿಕರಸುಕರಮನೋರಥಪ್ರದಫಲಲಲಿತ ಚಿಕದೇವರಾಜರಾಜಿತಾನಲ್ಪಕಲ್ಪತರು ಸಮಾಶ್ರಿತ ಲಕ್ಷ್ಮೀಪತಿರವ್ಯಾಭಿಧಾನ ಚಿಕುಪಾಧ್ಯಾಯ ಸಚಿವ ಶಿರೋಮಣಿ ವಿರಚಿತಮಪ್ಪ ಕಾಮಂದಕನೀತಿಯೊಳ್— ಎಂದು ಹೇಳಿ ಈ ಗ್ರಂಥದಿಂದ ಚಿಕ್ಕದೇವರಾಯನ ಖಡ್ಗವನ್ನು ವರ್ಣಿಸುವ " ನಂದಕಮುರು " ಎಂಬ ಕಂದವನ್ನು ಎತ್ತಿ ಬರೆದಿರುವರು—ಆದರೆ ನಮಗೆ ದೊರಕಿರುವ ಎರಡು ಹಸ್ತಲಿಖಿತಪ್ರತಿಗಳಲ್ಲೂ ಈ ಆಶ್ವಾಸಾಂತ್ಯ ಗದ್ಯವಿಲ್ಲ – "ಇತಿ ಕಾಮಂದಕ ನೀತಿಸಾರ ದೀಪಿಕಾಯಾಮುಪಾಧ್ಯಾಯನಿರಪೇಕ್ಷಾಯಾಮಿಂದ್ರಿಯ ಜಯೋನಾಮ ಪ್ರಥಮಸ್ಸರ್ಗಃ"–ಎಂದಿಷ್ಟೇ ಇದೆ—

ಶ್ರೀಮಾನ್ ಆರ್. ನರಸಿಂಹಾಚಾರ್ಯರು ಬರೆದಿರುವ ಗದ್ಯದಂತೆ, ಈ ಕನ್ನಡ ಟೀಕೆಯನ್ನು ಬರೆದವನು ಚಿಕ್ಕದೇವರಾಜನ ಸಚಿವಶಿರೋಮಣಿಯಾದ (ಮಂತ್ರಿವರ್ಯ) ಲಕ್ಷ್ಮೀಪತಿಪಂಡಿತನೆಂದು ಹೇಳಬೇಕಾಗುವುದು – ಆಗ ಬೃಹಸ್ಪತಿ ಎಂದು ಹೇಳಿರುವುದು ಆತನ ಬಿರುದಾಗಿರಬಹುದೆಂದು ಭಾವಿಸಬೇಕಾಗುವುದು.

ಗ್ರಂಥವಿಚಾರ

ಈ ಗ್ರಂಥವು ರಾಜನೀತಿಯನ್ನು ತಿಳಿಸುವ ಗ್ರಂಥವಾಗಿದೆ. ಪ್ರಾಚೀನಕಾಲದಲ್ಲಿ ಪರಾಕ್ರಮಶಾಲಿಯಾದ ನ್ಯಾಯವಾಗಿ ವರ್ತಿಸುವ ಕ್ಷತ್ರಿಯವರ್ಣದ ರಾಜನೊಬ್ಬನಿಲ್ಲದಿದ್ದರೆ ರಾಜ್ಯವು ಮಾತ್ಸ್ಯನ್ಯಾಯದಿಂದ ಕ್ಷೋಭಹೊಂದಿ ಪ್ರಜೆಗಳಿಗೆ ಅಪಾರಕಷ್ಟನಷ್ಟಗಳುಂಟಾಗುವುವೆಂದು ಹೇಳಿ ರಾಜನ ಆವಶ್ಯಕತೆಯನ್ನು ಪ್ರತಿಪಾದಿಸಿ ಈ ಬಗೆಯ ರಾಜನು ಅಶಕ್ತನಾಗಿ ಅನ್ಯಾಯದಿಂದವರ್ತಿಸಿದರೆ ಆಗಲೂ ಇದೇ ರೀತಿಯ ಕಷ್ಟನಷ್ಟಗಳುಂಟಾಗುವುದೆಂದು ಸಂಸ್ಮೃತಿಯಿದ್ದುದರಿಂದ ಪ್ರಜಾಸ್ಥಿತಿಗೆ ಆಧಾರಭೂತನಾದ ರಾಜನು ಹೇಗೆ ನಡೆಯಬೇಕೆಂಬ ಪ್ರಕಾರವನ್ನು ವಿವರಿಸುವ ಶಾಸ್ತ್ರವೇ ನೀತಿಶಾಸ್ತ್ರವೆಂದು ಪ್ರಸಿದ್ಧಿಪಡೆದಿತ್ತು. ಈ ನೀತಿಶಾಸ್ತ್ರವನ್ನು ಆ ಬ್ರಹ್ಮನು ಸಾವಿರ ಅಧ್ಯಾಯಗಳಿಂದ

*ಕವಿಚರಿತ್ರೆ ಸಂಪುಟ2–ಪುಟ 484– ಶ್ರೀ ನರಸಿಂಹಾಚಾರ್ಯರ ಬರೆಹದಿಂದಸಂಸ್ಕೃತದ ಕಾಮಂದಕನೀತಿಗೆ ಕನ್ನಡಟೀಕೆಯು ಉಪಾಧ್ಯಾಯನಿರಪೇಕ್ಷಾ ಎಂಬ ವ್ಯಾಖ್ಯಾನವಾಗಿರುವುದು ಎಂದು ಅರ್ಥವಾಗುವುದು, ಅದು ಸಾಧುವೆಂದು ತೋರುವುದಿಲ್ಲ – ಏಕೆಂದರೆ ಈ ಕನ್ನಡ ವಚನವು ಕಾಮಂದಕನೀತಿಯಾದ ಸಂಸ್ಕೃತ ಶ್ಲೋಕಗಳ ವಿವರಣೆಯಲ್ಲ. ಈ ಸಂಸ್ಕೃತದಲ್ಲಿಬರೆದಿರುವ ಕಾಮಂದಕನೀತಿಯು ಗದ್ಯರೂಪವಾದ ವ್ಯಾಖ್ಯಾನದ ಕನ್ನಡಟೀಕೆಯಾಗಿರುವುದು. ಆದುದರಿಂದ ಸಂಸ್ಕೃತದ ಕಾಮಂದಕನೀತಿಗೆ ಕಾಮಂದಕನೀತಿಸಾರವೆಂದೂ, ಅದರ ಉಪಾಧ್ಯಾಯ ನಿರಪೇಕ್ಷಾ ಎಂಬ ವ್ಯಾಖ್ಯಾನಕ್ಕೆ ಕಾಮಂದಕನೀತಿಸಾರದೀಪಿಕೆಯೆಂದೂ ಹೆಸರು. ಈ ಟೀಕೆಯು ಸಂಸ್ಕೃತದ ಗದ್ಯರೂಪವಾದ ವಾಕ್ಯಗಳ ಕನ್ನಡದ ಅನುವಾದವು ಎಂದು ಗ್ರಹಿಸಬೇಕು–ಮತ್ತು ಶ್ರೀಮಾನ್ ಆರ್. ನರಸಿಂಹಾಚಾರ್ಯರು 8 ಸರ್ಗ ಎಂದು ಬರೆದಿರುವರು. ಅವರು ಮೂಲಗ್ರಂಥದ ಆಧಾರದಿಂದ ಹಾಗೆ ಬರೆದಿರುವರು.

ತುಂಬಾ ವಿಶಾಲವಾಗಿ ಹೇಳಿದ್ದುದನ್ನು ಕಾಲಾನುಗುಣವಾಗಿ ಜನರ ಬುದ್ಧಿಶಕ್ತಿ ಆಯುರ್ನಿಯತಿಗಳನ್ನು ಅನುಸರಿಸಿ ನಾರದ, ಶುಕ್ರ, ಗುರು (ಬೃಹಸ್ಪತ್ಯಾಚಾರ್ಯರು), ಭಾರ್ಗವ, ಭಾರದ್ವಾಜ ವಿಶಾಲಾಕ್ಷ, ಭೀಷ್ಮ (ಭಾರತದಲ್ಲಿ ಧರ್ಮರಾಯನಿಗೆ ಹೇಳಿರುವ ರಾಜಧರ್ಮಪ್ರಕರಣ) ಪಾರಾಶರರು ಸಂಕ್ಷೇಪಮಾಡಿದರು. ಬಳಿಕ ಮನುವೂ, ಇತರ ಮಹರ್ಷಿಗಳೂ ಇದೇಮಾರ್ಗವನ್ನು ಅನುಸರಿಸಿ ರಾಜ ನೀತಿಶಾಸ್ತ್ರವನ್ನು ಸಂಕ್ಷೇಪಮಾಡಿರುವರು. ಇವೆಲ್ಲವನ್ನೂ ನೋಡಿ ಮಹಾತ್ಮನಾದ ವಿಷ್ಣುಗುಪ್ತನು(ಚಾಣ[1]ಕ್ಯನು–ದರ್ಪಿಷ್ಠರೂ, ಅಧರ್ಮಿಗಳೂ ಆದ ನಂದರಾಜರನ್ನು ನಾಶಮಾಡಿ ಚಂದ್ರಗುಪ್ತನನ್ನು ರಾಜ್ಯದಲ್ಲಿ ಸ್ಥಾಪಿಸಿದವ-) ಸಂಕ್ಷೇಪದಿಂದ ರಾಜರ ಅರ್ಥಸಿದ್ಧಿಗಾಗಿ ಹೇಳಿರುವನು– ಎಂದು ಕಾಮಂದಕನು ಹೇಳಿ, ತಾನು ಆ ವಿಷ್ಣುಗುಪ್ತನು ಹೇಳಿರುವುದನ್ನು ಸಂಗ್ರಹಿಸಿ ಬರೆಯುವೆನೆಂದು ಹೇಳಿರುವುದನ್ನೂ ಈ ವ್ಯಾಖ್ಯಾಕಾರನು ಹೇಳಿರುವುದನ್ನೂ ಈ ಟೀಕಾಕಾರನೂ ಅನುವಾದಮಾಡಿ ವ್ಯಾಖ್ಯಾನದಲ್ಲಿ ಅಲ್ಲಲ್ಲಿ ಕೌಟಿಲ್ಯ, ವಿಷ್ಣುಗುಪ್ತ, ಚಾಣಕ್ಯ, ಅಸ್ಮದ್ಗುರು (ತನ್ನ ಗುರು) ಎಂದು ಕೌಟಿಲ್ಯನ ಹೆಸರನ್ನು ಅವನ ಗ್ರಂಥಭಾಗ ಅಥವಾ ಅವನ ವಾಕ್ಯದ ತಾತ್ಪರ್ಯ ಇವನ್ನು ಅನುವಾದಮಾಡಿರುವನು. ಆದುದರಿಂದ ಈ ಪ್ರಕೃತಗ್ರಂಥವು ಸಂಸ್ಕೃತದಲ್ಲಿ ಕಾಮಂದಕನೆಂಬುವನು ವಿಷ್ಣುಗುಪ್ತನು ಹೇಳಿರುವ ನೀತಿಶಾಸ್ತ್ರವನ್ನು ಸಂಗ್ರಹಮಾಡಿ ಸಂಸ್ಕೃತದಲ್ಲಿ ಬರೆದಿರುವ "ಕಾಮಂದಕನೀತಿ" ಎಂಬ ಗ್ರಂಥದ "ಉಪಾಧ್ಯಾಯನಿರಪೇಕ್ಷಾ" ಎಂಬ ವ್ಯಾಖ್ಯಾನದ ಕನ್ನಡಟೀಕೆಯು— ಈ ಟೀಕೆಯನ್ನೂ ಕೂಡ ಯಾರು ಮಾಡಿದರೆಂದು ತಿಳಿಯಲು ಆಧಾರವಿಲ್ಲ. ಅದು ಮುದ್ರಿತವಾಗಿಯೂ ಇಲ್ಲ. ಭಾರತವರ್ಷದ ಪುಸ್ತಕಭಂಡಾಗಾರಗಳಲ್ಲಿ ಹಸ್ತಲಿಖಿತ ಗ್ರಂಥ ರೂಪದಲ್ಲಾದರೂ ದೊರಕದಿರುವುದು ತುಂಬಾ ವಿಷಾದಕರವಾಗದೆ.

ಸಂಸ್ಕೃತಭಾಷೆಯಲ್ಲಿ ರಚಿತವಾಗಿರುವ ಗ್ರಂಥರಾಶಿಗಳಲ್ಲಿ ಅಡಗಿರುವ ಅಮೂಲ್ಯವಾದ ಜ್ಞಾನಭಂಡಾರವನ್ನು ಕನ್ನಡಿಗರೂ ಹಲವು ವಿಧದಲ್ಲಿ ತಮ್ಮ ಭಾಷೆಯಲ್ಲಿ ಸಂಗ್ರಹಿಸಿರುವರು. ಪುರಾಣ ಇತಿಹಾಸ ಶಾಸ್ತ್ರಗಳು ಇವುಗಳನ್ನು ಕನ್ನಡಭಾಷೆಗೆ ಗದ್ಯಪದ್ಯ ಚಂಪೂನಾಟಕ ರೂಪ ಗ್ರಂಥಗಳಾಗಿ ಪರಿವರ್ತಿಸಿರುವರು. ಹಲವು ಗ್ರಂಥಗಳನ್ನು ಸಂಗ್ರಹಿಸಿ ಬರೆದಿರುವರು. ಆದರೆ ಸಂಸ್ಕೃತಶಾಸ್ತ್ರ ಗ್ರಂಥಗಳ ವ್ಯಾಖ್ಯಾನವನ್ನು ಈ ರೀತಿ ಕನ್ನಡಿಸಿರುವುದು ತುಂಬಾ ಅಪೂರ್ವ ವಿಷಯವಾಗಿದ್ದುದರಿಂದ ಈ ಗ್ರಂಥದ ವೈಶಿಷ್ಟ್ಯವನ್ನು ಕನ್ನಡಿಗರ ಗಮನಕ್ಕೆ ತರುವುದಕ್ಕಾಗಿ ಈ ಗ್ರಂಥವನ್ನು ಮುದ್ರಿಸಿದೆ.

ಇಂತಹ ಅಮೂಲ್ಯವಾದ ಗ್ರಂಥಮುದ್ರಣಕ್ಕೆ ಅವಕಾಶವಿತ್ತ ಮದ್ರಾಸ್ ಮ್ಯಾನಸ್ಕ್ರಿಪ್ಟ್ ಲೈಬ್ರರಿ ಕ್ಯೂವೇಟರಾದ ಶ್ರೀ ಚಂದ್ರಶೇಖರ ದೀಕ್ಷಿತರವರಿಗೂ, ಇದರ ಮುದ್ರಣಕ್ಕೆ ಆರ್ಥಿಕ ಸಹಾಯವಿತ್ತ ಭಾರತಮಧ್ಯಸರಕಾರಕ್ಕೂ, ಈ ಗ್ರಂಥಶೋಧನೆಯಲ್ಲಿ ನನಗೆ ಅಮೂಲ್ಯ ಸಹಾಯವಿತ್ತ ನನ್ನ ಪರಮಮಿತ್ರರಾದ ಪಂಡಿತ ಹೆಚ್. ಶೇಷಯ್ಯಂಗಾರ್ಯರಿಗೂ, ಮತ್ತು ಆದಷ್ಟುಬೇಗನೆ ಅಂದವಾಗಿ ಮುದ್ರಿಸಿಕೊಟ್ಟ "ಶ್ರೀವತ್ಸಪ್ರೆಸ್" ಅಧಿಕಾರಿಗಳಿಗೂ – ನನ್ನ ಅನಂತಾನಂತ ಧನ್ಯವಾದಗಳು.

ಇಂತು,

— ಸಂಪಾದಕ.

---

(1) ಈತನ ಗ್ರಂಥವು ಇಂಗ್ಲೀಷ್ ಪರಿವರ್ತನನೊಡನೆ ಮೈಸೂರು ಸರ್ಕಾರದ ಪುಸ್ತಕಭಂಡಾರದಲ್ಲೂ, ಸಂಸ್ಕೃತ ವ್ಯಾಖ್ಯಾನದೊಡನೆ ಅನಂತಶಯನದ ರಾಜಕೀಯ ಶಾಖೆಯಿಂದಲೂ ಮುದ್ರಿತವಾಗಿದೆ—

ಶ್ರೀಮತೇ ರಾಮಾನುಜಾಯ ನಮಃ ॥

— ಶುಭಮಸ್ತು —

ಕಾಮಂದಕೀಯನೀತಿಸಾರವ್ಯಾಖ್ಯಾಟೀಕೆ

— ಪ್ರಥಮಾಶ್ವಾಸಂ —

ಉ॥ ಶ್ರೀಮದಪಾಂಗಲಬ್ಧವಿಭವಾಜಭವೇಂದಿರೆಯಾಣ್ಮನಾತ್ಮರಾ ।
ಮಾಮಳಪುಷ್ಪಲೋಲಮುನಿಪಾಳಿ ಸುಕೌಸ್ತುಭಹಾರನಚ್ಯುತಂ ॥
ಭೂಮನಿಜಾತಿಶುಫುಲ್ಲಯದ ? ಸೈನ್ಯಮುಖಾಂಬುಜ ಚಕ್ರಧಾರಿಯು ।
ದ್ದಾಮಪವಿತ್ರಸಿಂಧುಪದನೀಗೆ ವಿನೋದಿ ಜಗಕ್ಕೆ ರಾಗಮಂ ॥ ೧ ॥

ಶಾ॥ ಶ್ರೀರಾಮಾನುಜಮೌಳಿಸಂನುತಪದಂ ಗಾಂಗೇಯನೇತ್ರಾಶ್ರಯಾ ।
ಕಾರಂ ಗೋಪತಿವಾಹನಂ ವಿಮಲ ಸದ್ಬೃಂದಾವನಾ.... ॥
ಧಾರಂ ನಾಗಮುಖಾವನಾತಿನಿರತಂ ರಾಜಾರ್ಜುನಾತ್ಯಂತ ವ ।
ರ್ಣಾರಾಜದ್ವರಧಾಮನುರ್ವಿಪರಮೇಶಂ ರಕ್ಷಿಕೊಳ್ದೆಲ್ಲರಂ ॥ ೨ ॥

ಮ॥ ನರಕಾದೀವೆಯನೇಕವಕ್ತ್ರಜನಕಂ ಶೋಭಾಕರಾಬ್ಜಾಕ್ಷನ ।
ಕ್ಷರನೌದಾರ್ಯಸುರಾಗಧರ್ಮಕಲಿತಂ ಸತ್ಯಾಸ್ಪದಂ ರಾಜಶೇ ॥
ಖರದುರ್ವರ್ಣಕುಭೃದ್ವಿಶಾಲನಗರಂ ಭಾಸ್ವದ್ವೃಷಾಂಕಂ ಸಮಾ ।
ಭರದಿಂ ಶಂಕರನೊಲ್ದು ಪಾಲಿಸುಗಜಸ್ರಂ ಸಜ್ಜನವ್ಯೂಹಮಂ ॥ ೩ ॥

ಕಲಹಂಸ ದ್ವಿಜರಾಜ ಸಂಶ್ರಿತನುದಾರಂ ವಿಶ್ವನಿರ್ಮಾಣ ಕೌ ।
ಶಲದೀನಂ ಭುಮನಾಸ್ಪದಂ ಸಕಲಪಂ ಕಾಮಾರಿ ಯೋಗಾಯನಂ ॥
ವಿಲಸದ್ಗೋವಿಭುಲೋಕಪೂಜಿತಪದಂ ಕಲ್ಯಾಣಗರ್ಭಂ ಧರಾ ।
ತಲಕಾನಂದಮನೀಗಜಂ ವಿಬುಧಬೃಂದಾನಂದಕಂ ಸಂತತಂ ॥ ೪ ॥

ಹೃತದೋಷಂ ಕಮಲಾಶ್ರಯಂ ನವವರಾಹಶ್ರೀಕರಂ ರಾಜರಂ ।
ಜಿತತೇಜೋಹರಣಂ ಮಹಾಬುಧಲಸತ್ಕಾವ್ಯಾದಿ ಸಂಭಾವನಂ ॥
ಸತತಂ ಗೋಕುಲಸೇವಿ(ಶೋಭಿ)ತಂ ಕಲಿಹರಂ ಸನ್ಮಾರ್ಗಚಾರಿತ್ರ ನೂ ।
ರ್ಜಿತಸೌಭಾಗ್ಯಮನೀಗೆ ಸೂರಿಚಯಕಾದಿತ್ಯಂ ಜಗನ್ನಾಯಕಂ ॥ ೫ ॥

ಚಂ॥ ಜಿತಪರ ದಾನವಾರಿಮಿಳಿತಂ ಪ್ರಮದಾಳಿನಿಷೇವಿತಂ ಕರಾಂ ।
ಚಿತವರಪುಷ್ಕರಂ ವಿಬುಧಮಂಡಿತ ನಕ್ಷರಪೂಜಿತಂ ವಿರಾ ॥
ಜಿತ ಸುಮನಃಖಗಾಸನಹರಪ್ರಿಯನೀಗೆಮಗೀಪ್ಸಿತಾರ್ಥದು ।
ನ್ನತಿಯನುದಾರ ದೇವಗಣನಾಯಕನಾವಗಮಾಂತು ಮೋದಮಂ ॥ ೬ ॥

ಮ. ಸ್ರ|| ನತನಾನಾಧೀಶಕಾಂತಾಕಚಭರ ಘನದಿಂ ನೂಪುರಾರಾವಸದ್ಗ |
ರ್ಜಿತದಿಂ ಸ್ವಾಂಗಾಂಶುವಿದ್ಯುಲ್ಲತೆಯಿನಳಕ ಸಮ್ಯಗ್ಗಳತ್ಪುಷ್ಪಸಂದೋ ||
ಹತತಾಂಭೋದೋಪಲವ್ಯೂಹದಿನುರುಕರುಣಾಸಾರಮಂ ವರ್ಷಿಪಾರಾ |
ಜಿತಶೋಭಾಪಾಂಗದಿಂ ಕಾರ್ಸಿರಿಯವೊಲೆಸೆವಾ ಶ್ರೀಲಕ್ಷ್ಮಿಯೊಲ್ದೀವುಗೆಮ್ಮಂ || ೭ ||

ಮ|| ಅಳಿನೀಳಾಳಕೆ ತಾರಹಾರವಿಲಸತ್ಸುಗ್ರೀವೆ ಹೇಮಾಂಗದೋ |
ಜ್ಜ್ವಳಬಾಹಾಲತೆ ಯುಲ್ಲಸತ್ಕುಶಲವಲ್ಲಕ್ಯಾರವೋತ್ಸಾಹಮಂ ||
ಜುಳೆ ಶೋಭಾತ್ಯಭಿರಾಮಚಂದ್ರಮುಖಿ ನಿತ್ಯಾರಾಜಿತಾಕ್ಷಸ್ರಗಂ |
ಗುಳಿ ರಾಮಾಯಣ ಸೇನೆಯಂತೆಸೆವ ಭಾಷಾನಾರಿ ಯಿಾಗರ್ತ್ಥಮಂ || ೮ ||

ಕಮಲಾ ನಾಥಪದಾರವಿಂದನಖ ಶೋಭಾಮಲ್ಲಿಕಾದಾಮಸಂ |
ಭ್ರಮದಿಂದಿಂದಿರನಿಂದಿರಾರಮಣ ಕಾರುಣ್ಯಾಮೃತಾಂಭೋಧಿವಿ ||
ಭ್ರಮಹಂಸಂ ನಿಜಸೇವಕಾಮರನಗಂ ರಾಮಾನುಜಾಚಾರ್ಯಯೋ |
ಗಿ ಮನೋವಾಂಛೆಯನಿತ್ತು ಪಾಲಿಸುಗೆ ನಿಚ್ಚಂ ಸಜ್ಜನವ್ರಾತಮಂ || ೯ ||

ನುತಿಯಂ ಮಾಱ್ಪೆನಪಾರದುಷ್ಟಜನತಾಹೃದ್ಬಾಣನಂ ಬಾಣನಂ |
ತತಸತ್ಕಾವ್ಯರಸಾಬ್ಧಿವರ್ಧನಪರಶ್ರೀಚಂದ್ರನಂ ಚಂದ್ರನಂ ||
ಚತುರಾಲಂಕರಣಪ್ರಯುಕ್ತ ಕವಿತಾಸತ್ಕಾಮನಂ ಕಾಮನಂ |
ಸತತಧ್ಯಾತರಮಾಧಿನಾಥಮೃದುಪಾದಾಂಭೋಜನಂ ಭೋಜನಂ || ೧೦ ||

ಕಂ|| ಪಿರಿದುಂ ಕಂಟಕಯುಕ್ತಂ |
ಪರತರವಿಬುಧಾಳಿ ನಿತ್ಯಸುಮನೋರಹಿತಂ ||
ಸುರುಚಿಫಲಶೂನ್ಯಮಾಗೀ |
ಧರೆಯೊಳ್ ಬಬ್ಬೂರದಂತೆ ಖಲಜನಮೆಸೆಗುಂ || ೧೧ ||

ಸರಸಕವಿತ್ವದ ಸೊಗಸಿನ |
ಪರಿಯಂ ಪಲ್ವಲಸಪಂಕಪಾಥಃಸಾರೋ ||
ದರ ಪೂರ್ಣಭೇಕದಂತಿರೆ |
ಪರುಷಧ್ವನಿಗೆಯ್ವ ದುಷ್ಟನೇನಱಿದಪನೇ || ೧೨ ||

ಮ|| ಸುರಸಾಲದ್ರುಮಜಾತಪಕ್ವಫಲದುದ್ಯತ್ಸಾರಮಂ ಕೀರದಂ |
ತಿರೆ ಘೂಕಂ ಮಿಗೆ ಬಲ್ಲುದೇ ಸುಮಲಸತ್ಸೌರಭ್ಯಮಂ ತುಂಬಿಯಂ ||
ತಿರೆ ಪಾರ್ಚಿಟ್ಟೆಯದೇಂ ಕರಂ ತಿಳಿಗುಮೇ ವಿದ್ವತ್ಕವೀಶಂ ಕವಿ |
ತ್ವರಸಸ್ಫೂರ್ತಿಯ ಬಲ್ಲನಲ್ಲದೆ ಖಲಂ ತಾಂ ಬಲ್ಲನೇ ಧಾತ್ರಿಯೊಳ್ || ೧೩ ||

ಕಂ|| ಕವಿತೆಯ ರಸಮಂ ತಿಳಿಯದೆ |
ಬವಣಿಗೊಳುತ್ತಿರ್ಪ ದುರ್ಜನಂಗಾಂ ಮುಳಿಯೆಂ ||
ಯುವತಿಕೃತಸುರತಸುಖದನು |
ಭವಮಂ ತಿಳಿಯದ ನಪುಂಸಕಂಗೇಂ ಕುಂದೇ || ೧೪ ||

ಮನದೊಳ್ ರಂಗೇಶನ ಪದ |
ವನರುಹಮಂ ಭಾವಿಸುತ್ತೆ [ಸತತಂ] ಕಾಮಂ ||
ದನ ಪದ್ಯನೀತಿಯಂ ಬುಧ |
ರನುಮತಿಯಿಂ ಬಲ್ಲತೆಱದಿನಾನೊಲ್ದುಸಿರ್ವೆಂ || ೧೫ ||

ವ|| ಅದೆಂತೆಂದೊಡೆ—

ಮ|| ವಿಳಸದ್ವಿದ್ರುಮವಲ್ಲಿಯಿಂ ನೊರೆಗಳಿಂ ವ್ಯಾಳಂಗಳಿಂ ಮೀನ್ಗಳಿಂ |
ಚಳದೂರ್ಮಿವ್ರಜದಿಂ ವಿರಾಜಿಪ ಮರಾಳವ್ಯೂಹದಿಂ ಗ್ರಾಹದಿಂ ||
ಬಳಭಿದ್ವಜ್ರವಿಘಾತಿಭೀತಿಪತಿತಾಗಾನೀಕದಿಂ ಭೇಕದಿಂ |
ಸುೞಿಯಿಂ ಬೊಬ್ಬುಳಿಯಿಂ ಸಮುದ್ರಮೆಸೆಗುಂ ರತ್ನಾಳಿಯಿಂ ಪಾೞಿಯಿಂ || ೧೬ ||

ಕಂ|| ಘನಚಕ್ರಾಹಿಮಕರರಂ |
ಜನಮಂಬರದಂತಿಭಪ್ರವಿಷ್ಟವನಂಬೋಲ್ ||
ವಿನುತಪ್ರವಾಳಭಂಗಾ |
ಭಿನವ ಶ್ರೀಮಿಳಿತಮಾಗಿ ಸಾಗರಮಿರ್ಕುಂ || ೧೭ ||

ವ|| ಇಂತೊಪ್ಪಂಬೆತ್ತಂಬುಧಿಯ ಮಧ್ಯದೊಳ್—

ಮ|| ಚರದಾದಿತ್ಯವರೂಥಚಕ್ರಚಯಶಾಣೋಲ್ಲೀಢತತ್ಸಾನು ಭಾ |
ಸುರರತ್ನಾಂಶುನವಾತಪಸ್ಫುಟವಿಯದ್ಗಂಗಾರವಿಂದಾಳಿಗಾ ||
ವರಿಸುತ್ತಿರ್ಪಳಿಯಂತೆ ತತ್ಸಲಿಲ ಕೇಳ್ಯಾಸಕ್ತ ದೇವಾಂಗನೋ |
ತ್ತರಕೇಶಾವಳಿಯೊಪ್ಪೆ ಮೇರುಕುಧರಂ ರಾರಾಜಿಕುಂ ಚೆಲ್ವಿನಿಂ || ೧೮ ||

ವ|| ಆ ಮೇರುಗಿರಿಯ ದಕ್ಷಿಣದಿಗ್ಭಾಗದ ನಾನಾದೇಶಭೂಷಣಮಾಗಿ—

ಚಂ|| ದರದಳಿತಾಬ್ಜಪೂರಿತ ತಟಾಕಚಯಂ ಕಳಹಂಸದಂಪತಿ |
ಸ್ಫುರಿತನದೀನದಾಳಿ ಯಳಿವೃಂದಸಮಾವೃತಪುಷ್ಪವಾಟಿಕೋ ||
ತ್ಕರಮುರುಕೀರ ಕೋಕಿಲ ಮೃದುಧ್ವನಿಮಂಡಿತ ಕಾನನಂಗಳೊ |
ಪ್ಪಿರೆ ಚಿಕದೇವಭೂರಮಣನಾಳ್ವಿಳೆ ರಂಜಿಸುತಿರ್ಕುಮೊಪ್ಪಿನಿಂ || ೧೯ ||

ಕಂ|| ಸುತಧನ ಪತ್ನಿಯರಿಂದು |
ನ್ನತಸೌಖ್ಯಮನಾನದಿರ್ಪ ಪ್ರಜೆಗಳ್ ಶೌರ್ಯೋ ||
ದ್ಧತರಲ್ಲದ ಸುಭಟರ್ ತತ್ |
ಕ್ಷಿತಿಯಲ್ಲಿಲ್ಲೆನೆ ಸಮಂತು ಮೆಱೆಗುಂ ರಾಜ್ಯಂ || ೨೦ ||

ವ|| ಆ ರಾಜ್ಯದೊಳ್ ನಾನಾಪುರನಗರಗ್ರಾಮಮಡಂಬಖರ್ವಟ ಖೇಟಾದಿವಿಷಯಂಗಳ್ಗೆ ಶಿಖಾಮಣಿಯಾಗಿ ರಂಜಿಪ ಭೂಮಿಯಲ್ಲಿ—

ಮ|| ದಳಿತಾಂಭೋರುಹಗಂಧಹೃತ್ಪವನನಿಂ ಸೌರಭ್ಯಮಂ ತಾಳ್ದು ಮಂ |
ಜುಳತತ್ತನ್ನದಿಯಂಬುವಿಂ ಬಳೆದು ಕ್ಗೂಗುತ್ತಿಂಪುವೀಱುತ್ತೆ ಮಂ ||
ಡಳಿಸುತ್ತಿರ್ಪ ಶುಕಾಳಿಗಧ್ವಗಚಯಕ್ಕಾನಂದಮಂ ತೋಱು ಕಂ |
ಗೊಳಿಕುಂ ಸ್ವರ್ಣಮನೋಜ್ಞಕಾಂತಿಕಳಿತಂ ಸದ್ಗಂಧಶಾಲೀವನಂ || ೨೧ ||

ವ|| ಆ ಶಾಲಿವನಮಧ್ಯದೊಳ್—

ಚಂ|| ನೆಲೆಮೊಲೆಗಳ್ ಕದಕ್ಕದಿಸೆ ತೆಳ್ನಡು ಬಳ್ಕೆ ನಿಜಾಂಗಗಂಧಕಂ |
ತಲಸದೆ ತುಂಬಿಯಾವರಿಸೆ ನೂಪುರರಾವಕೆ ಹಂಸಸಂಚಯಂ ||
ನಲಿಯೆ ಸರೋಜಕೋರಕಚಯಂಗಳನಿಟ್ಟು ಶುಕಂಗಳಂ ಕರಂ |
ಚಲಿಸದೆ ಸೋವುತಧ್ವಗರನೀಱ್ಕಳಿಗೊಂಡುದು ಪಾಮರೀಜನಂ || ೨೨ ||

ವ|| ಅಲ್ಲಿಯುಂ ಬಟ್ಟೆಯೊಳ್—

ಚಂ|| ಸುರುಚಿರಸತ್ಕಟಾಕ್ಷರುಚಿಯಿಂ ನಲಿದೀಕ್ಷಿಸಿ ಕಂಪುವೀಱು ಮೇಣ್ |
ದರಹಸಿತಾಸ್ಯದಿಂಮಡಿಸಿ ವಿಶ್ರಮಮೊಂದಿಸಿ ಹಸ್ತಕಂಜದಿಂ ||
ಕರದುರೆ ಬಿಜ್ಜಣಂದಳೆದು ಬೀಸಿ ಪ್ರಪಾಂತದೊಳೆತ್ತಣಿಂದೆ ಬಂ |
ದಿರೆನುತೆ ನಾರಿಯರ್ ಸ್ಮರನ ಕೆಯ್ಯ ಕಠಾರಿಯರಿರ್ದರಲ್ತಿಯಿಂ || ೨೩ ||

ವ|| ಇಂತು ಪೊಸ(ತು)ಚಾರಮಪ್ಪವೊಲೆಸಗಿ ಶ್ರಮಮಂ ನಿವಾರಿಸಿ—

ಮ. ಸ್ರ|| ಸುಮನೋಮಾಲ್ಯಂಗಳಂ ಚಂದನರಸಮುಮನೊಡ್ಡಿತ್ತುತಾಂಬೂಲಮಂ ಕೊ |
ಟ್ಟಮಲೋದ್ಯಚ್ಚಂದ್ರಕಾಂತಾಶ್ಮದ ಕಳಸದೆ ಶೈತ್ಯಾಚ್ಛಸೌರಭ್ಯ ಸಾರೋದ ||
ಕಮನೊರ್ವಳ್ ತೀವಿವೀರುತ್ತಿರೆ ಶಶಿಮುಖಿಯರ್ ಮಲ್ಲಿಕಾಹಾಸೆಯರ್ ವಿ |
ಭ್ರಮಪದ್ಮಾಲೋಕೆಯರ್ ಪಾಂಥರ ಹೃ(ದ)ಯಮನಾಕರ್ಷಿಸುತ್ತಿರ್ಪರಾಗಳ್ ||೨೪||

ವ|| ಇಂತು ವಿರಾಜಿತಪ್ರಪಾಶಾಲಾಪುರೋಭಾಗದೊಳ್—

ಮ. ಸ್ರ|| ಕನಕಪ್ರಾಕಾರದಿಂ ಬಜ್ಜರದ ತೆನೆಗಳಿಂ ರಾಜತಾಟ್ಟಾಲದಿಂದಂ |
ಮಿನುಗುತ್ತಿರ್ಪಿಂದುಕಾಂತೋಪಲವಿರಚಿತಸೌಧಂಗಳಿಂದಾವಗಂ ಕ ||
ಣ್ಮನಕಿಂಬಂ ಬೀಱುತುಂ ಭಾಗ್ಯದಮೆನೆ ಸುಖದಂಭೋದಿಯಾನಂದವೇಶ್ಮಂ |
ಘನಸತ್ಯಾರಾಮಮೊಪ್ಪಿತ್ತುರೆ ಮಹಿ(ಷ)ಪುರಂ ಶ್ರೀಕರಂ ಕೀರ್ತಿಪೂರಂ || ೨೫ ||

ಕಂ|| ಇಂತೆಸೆವ ಮಹಿಷಪುರದೊಳ್ |
ಕಂತುಸಮಾಕಾರ ಚಿಕ್ಕದೇವ ನೃಪಾಲಂ ||
ಸಂತಸಮಂ ತಾಳ್ದಿರೆಯೊಡೆ |
ತನಮಂ ತಳೆದು ಧರ್ಮದಿಂದೆ ಪಾಲಿಸುತಿರ್ಕುಂ || ೨೬ ||

ಮ|| ವರಕೀರ್ತಿಪ್ರಭೆಯಂ ಹಿಮಾಂಶು ಸುರಭೂಜಂ ದಾನಮಂ ಸುಪ್ರತಾ |
ಪರುಚಿಸ್ಫೂರ್ತಿಯನಬ್ಜ ಬಂಧು ರಿಪುಭೂಪರ್ ಶೌರ್ಯಮಂ ಶೇಷನಿ ||
ರ್ಜರರಿರ್ವರ್ಮೂತಿಯಂ ವಧೂಸಮುದಯಂ ಸೌಂದರ್ಯಮಂ ನೋಡಿಸೋ |
ಲ್ತಿರೆ ಶ್ರೀಮಚ್ಚಿಕದೇವರಾಯನೆಸೆದಂ ಸಚ್ಚಾರುಗೇಹಾಂತದೊಳ್ || ೨೭ ||

ಕಂ|| ಶ್ರೀರುಚಿರಲತೆ ವಿರಾಜಿಕು |
ಮಾರಯೆ ರಂಗೇಶಕಲ್ಪಕೋಪಘ್ನಂ ತಾಂ ||
ಚಾರುಸುಮನೋನುರಮ್ಯಂ |
ಭೂರಿಭ್ರಮರಹಿತಂ ವಾಂಛೆಯಂ ವರ್ಷಿಸುತುಂ || ೨೮ ||

ವ|| ಈ ನವೀನನೀತಿಪ್ರಸಂಗವೆಂತೆಂದೊಡೆ—

ರಾಜಕುಲಾದ್ಯಂ ಶ್ರಿತಸುರ |
ಭೂಜಂ ಬ್ರಹ್ಮಾಂಡಪೋಷಣಾತಿಸಮರ್ಥಂ ||
ರಾಜೀವನಾಭನಿಂದ ಭ |
ವಾಜಕಿರೀಟಾನಕಾಂಘ್ರಿಯಾದಿಯೊಳೆಸೆದಂ || ೨೯ ||

ಉ|| ಶ್ರೀವರನಾಭಿಯೊಳ್ ಸಕಲಸೃಷ್ಟಿಗೆ ಕಾರಣಮಾಗಿ ಲೋಕಜ್ಯೇ |
ಷ್ಠಾವಿಧನಾತ್ಮಸಾಮ್ಯತನಯಂ ವಿಧಿ ಪುಟ್ಟಿದನಾತನಿಂದೆ ಸ ||
ರ್ವಾವನಿನಾಥಗೋತ್ರತರುಕಂದಮೆನಿಪ್ಪಮತ್ರಿಯಾದ ನಂ |
ತಾ ವಿಮಲಾತ್ರಿ(ಕ್ಷಿ)ಯಿಂದೊಗೆದಸಿಂದು ಸುಧಾದ್ಯುತಿರಾಜತೇಜದಿಂ || ೩೦ ||

ಆ ತುಹಿನಾಂಶುವಿಂ ಜನಿಸಿದಂ ವಿಲಸತ್ಕಲೆಗಾದಿಕಾರಣಂ |
ಪೂತತೆವೆತ್ತು ಸೌಮ್ಯನವನಿಂದೆ ಪೂರೂರವನಾದನಾತನಿಂ ||
ಖ್ಯಾತಿಯನಾಳ್ದ ದೇವಗಣಿಕಾಮಣಿಯೂರ್ವಶಿಯಿಂದೆ ಪುಟ್ಟಿದಂ |
ಭೂತಿವಿಲಾಸಿಯಾಯು ವವನಿಂದೊಗೆದಂ ನಹುಷಾವನೀಶ್ವರಂ || ೩೧ ||

ಕಂ|| ಕ್ರತುಶತಮನೆಸಗಿ ನಿರ್ಜರ |
ಪತಿಪದಮಂ ಪಡೆಯಲಿರ್ದ ನಹುಷೋರ್ವಿಪನಿಂ ||
ಸುತನುದಿಸಿದ ನತಿಶೌರ್ಯಾ |
ನ್ವಿತಸತ್ಯಾಂಚಿತ ಯಯಾತಿ ಧರ್ಮೋಪೇತಂ || ೩೨ ||

ಚಂ|| ಆ ನೃಪನಿಂದನು ತುರ್ವಸು |
ಭೂನುತದ್ರುಹ್ಯಾಖ್ಯ ಪೂರು ಯದುವೆನಿಪಿರ್ವರ್ ||
ಸೂನುಗಳುದಯಿಸಿ ಪ್ರತಿ |
ಷ್ಠಾನಾಹ್ವಯ ನಗರದಲ್ಲಿ ರಾಜಿಸುತಿರ್ದರ್ || ೩೩ ||

ಚಂ|| ಅವರೊಳ್ ಪಿರಿಯಂ ಯದುಭೂ |
ವರವರ್ಯಂ ಕೀರ್ತಿಚಂದ್ರಿಕಾಧವಳಿತ ಲೋಕವಿ ||
ಸ್ತರನಾತನಿನಾದರ್ ಪ್ರವಿ |
ಮಲಯಾದವನೃಪಾಲರಧಿಕಸುಶೀಲರ್ || ೩೪ ||

ಮ|| ಮಧುರಾಪಟ್ಟಣದಲ್ಲಿ ಯಾದವರ ಪಾರಂಪರ್ಯದೊಳ್ ಶೂರಸೇ |
ನಧರಾನಾಯಕನಾದನಾ ನೃಪತಿಯಿಂ ತಾಂ ಪುಟ್ಟಿದಂ ಸೋಮುವಂ ||
ಶಘುರೀಣಂ ವಸುದೇವನಾತನಿನುದಾರಂ ದೇವಕೀಗರ್ಭದಿಂ |
ಬುಧವಂದ್ಯಂ ಯದುವಂಶಕಲ್ಪತರುಬೀಜಂ ಶ್ರೀವರಂ ಪುಟ್ಟಿದಂ || ೩೫ ||

ಶಕಟಾರಿಷ್ಟಬಕಾಘಧೇನುಕತೃಣಾವರ್ತಾರಿ ಕಂಸಾದಿ ಘಾ |
ತುಕರಂ ಗೆಲ್ದು ಸುರರ್ಗೆ ಸಂತಸಮನಿತ್ತುರ್ವೀಮಹಾಭಾರಮಂ ||
ಸುಕರಂ ಬರ್ಪವೊಳಿಕ್ಕಿ ವಿಪ್ರನಿಕರಕ್ಕಾನಂದಮಂ ಬೀಱಿ ತಾಂ |
ಶುಕಕೃತ್ತಚ್ಚರಿತಾಬ್ಧಿವರ್ಧನಶಶಾಂಕಂ ಕೃಷ್ಣನೊಲ್ದೊಪ್ಪಿದಂ || ೩೬ ||

ಕಂ|| ಜಲಜಾಕ್ಷನೊರ್ಮೆ ಯುಷ್ಮ |
ತ್ಕುಲವರ್ಧನಮಾಗದೆಂದು ತದ್ದ್ವಾರಕಿಯಂ ||
ಜಲಧಿಯೊಳೊಂದಿಪ ಸಮಯದೊ |
ಳೊಲವಿಂ ನಿಜವಾಯೆಯೊಡನೆ ತಾಸಿಂತೆಂದಂ || ೩೭ ||

ಮ|| ಮೊದಲಸ್ಮತ್ಕುಲದೇವನೈದಿ ಯದುಶೈಲೇಂದ್ರಾಗ್ರದಲ್ಲಿರ್ದಪಂ |
ಮುದಮಂ ತಾಳ್ದು ಮದನ್ವಯಂ ಸ್ಫುರಿಪವೋಲ್ ಕೊಂಡೊಯ್ದು ತತ್ಪರ್ವತೋ ||
ದ್ಯದವಾಚೀದಿಶೆಯಲ್ಲಿ ಸಾರ್ಚಿ ಮಿಗೆ ನೀನಾ ವಂಶಜರ್ಗೀಪ್ಸಿತಾ |
ರ್ಥದಸಂಸಿದ್ಧಿಯನೀಯುತುಂ ಪೊಸೆದು ತತ್ಸಾನ್ನಿಧ್ಯದಲ್ಲಿರ್ಕ್ಕಣಾ || ೩೮ ||

ಕಂ|| ಇಂತೆಂದು ಪೇಳ್ದ ಲಕ್ಷ್ಮೀ |
ಕಾಂತನ ನುಡಿಗೇಳ್ದು ಮಾಯೆ ತಾಂ ಬಂದು ಮಹಾ ||
ಸಂತುಷ್ಟೆ ದುರ್ಗಿ ನೆಲಸಿದ |
ಳಂತಾ ಮಹಿಷಾಪುರಾಗ್ನಿಭಾಗದ ಗಿರಿಯೊಳ್ || ೩೯ ||

ಯಾದವನೃಪಪೂಜಿತಮೃದು |
ಪಾದಂ ನಾರಾಯಣಂ ಯದೂರ್ವೀಧರದೊಳ್ ||
ಮೋದದಿನಿರ್ಕುಂ ಗಿರಿಶಮ |
ಹಾದಧಿನಾ ಕೃಷ್ಣನನುಜೆ ತದನುಗ್ರಹದಿಂ || ೪೦ ||

ಮ|| ಹರಿವಜ್ರಾಂಚಿತಮೌಳಿಯಂ ಕಳೆದು ತಾಂ ಕೊಂಡೊಯ್ಯೆ ಪ್ರಹ್ಲಾದಜಂ |
ಭರದಿಂದೆಯ್ದಿ ಖಗೇಶನುರ್ವಿತಳಮಂ ಪೊಕ್ಕಾತನಂ ಕೊಂದು ಭಾ ||
ಸುರಕೋಟೀರಮನಾಂತು ವಾಯುಪಥದೊಳ್ ಬರ್ಪಲ್ಲಿ ಬೃಂದಾವನಾಂ |
ತರದಲ್ಲೀಕ್ಷಿಸಿ ಕೃಷ್ಣನಂ ಹರಿಯೆನುತ್ತುಂ [ಸಾರ್ಚಿ] ಸ(ತ)ನ್ಮೌಳಿಯಂ || ೪೧ ||

ಕಂ|| ಈ ಮಕುಟಮನಾ ಕೃಷ್ಣಂ |
ಪ್ರೇಮದೆ ನಿಜವಂಶದೇವಶೀರ್ಷಕ್ಕಿಡೆ ಯು ||
ದ್ದಾಮಕಿರೀಟಂ ಮೆಱೆಗುಂ |
ನಾಮದೆ ತಾಂ ವೈರಮುಡಿಯೆನಿಸಿ ವಲಮನಿಶಂ || ೪೨ ||

ದೇವಕಿಯ ಗರ್ಭದಿಂ ಬಲ |
ದೇವನ ನೆಂತೊಯ್ದು ರೋಹಿಣೀಗರ್ಭದೊಳೊ ||
ಲ್ದಾ ವಿಮಳಮಾಯೆ ಮೊದಲಾ |
ಶ್ರೀವರ ನನುಮತಿಯೊಳಿರಿಸಿದಳ್ ಕಡುಭರದಿಂ || ೪೩ ||

ದ್ವಾರಕಿಯಿಂ ತಂದು ಯದೂ |
ರ್ವೀರಮಣಾನ್ವಯಮನಂತು ಕೃಷ್ಣಾನುಜೆ ತ ||
ತ್ಸಾರಾನುಗ್ರಹದಿಂ ವಿಭ |
ವಾರಾಜಿತಮಹಿಷಪುರದೊಳಿಟ್ಟಳಲಂಪಿಂ || ೪೪ ||

ಮ|| ಹಿಮಕೃದ್ವಂಶಜರಾದಿಯೊಳ್ ಮಿಗೆ ಪ್ರತಿಷ್ಠಾನಾಖ್ಯದಲ್ಲಿರ್ದು ಮ |
ತ್ತೆ ಮುದಂಬೆತ್ತು ಸಮುಲ್ಲಸನ್ಮಧುರೆಗೆಯ್ತಂದಂತು ಸದ್ದ್ವಾರಕಾ ||
ಖ್ಯಮಹಾ ಪಟ್ಟಣಕೊಲ್ದು ಬಂದು ಬಱಿಕೀಕರ್ಣಾಟದೇಶೋರ್ವಿಗೆ |
ಯ್ದಿ ಮನೋಲ್ಲಾಸದೆ ಸೇರಿ ರಮ್ಯಮಹಿಷಗ್ರಾಮಾಖ್ಯ(ದ್ಯ)ದೊಳ್ ರಂಜಿಕುಂ || ೪೫ ||

ವ|| ಅಂತು ಮಹಿಷಾಪುರಕೆಯ್ತಂದು ಚಾಮುಂಡೀಕರುಣಾಕಟಾಕ್ಷಾವಲೋಕನ ಪರಿಲಬ್ಧ ಮಹೈಶ್ವರ್ಯರಾಗಿ ನಿರಂತರಧ್ಯಾತದೇವೀಚರಣಾರುಣಾಂಶುಬಾಲಾತಪಕಂದಳಿತ ಹೃದಯಾರವಿಂದರುಂ, ನಿಜವಂಶಪಯಃಪಾರಾವಾರವರ್ಧನಸುಧಾಕರಸನ್ನಿಭರುಂ, ಸಕಲಗುಣಮಣಿ ಭೂಷಿತ ಕಳೇವರರುಮಾಗಿ ಅತೀವವಿಭವದಿಂದನಾಹತಶೌರ್ಯದಿಂದನವಧಿಕಾತಿಶಯ ಧೈರ್ಯದಿಂ ರಂಜಿಸಿರ್ದರವರ ಪಾರಂಪರ್ಯದೊಳ್—

ಚಂ|| ಸುರತರು ಮಧ್ಯದಲ್ಲಿ ಮಿಗೆ ಕಲ್ಪಕಮೊಪ್ಪುಗುಮೆಂತುಟೆಂತು ಭಾ
ಸುರಶಶಿವಂಶದಲ್ಲಿ ರಿಪುಮರ್ದನ ಬೆಟ್ಟದ ಚಾಮಭೂಪನೊ ||
ಪ್ಪಿರೆ ಪಡೆದಾತನಿಂದೊಗೆದರುತ್ಸವಸಂಯುತ ತಿಮ್ಮರಾಜ ಬಂ |
ಧುರಗುಣ ಕೃಷ್ಣರಾಜ ವರಚಾಮನೃಪರ್ ತನುಜರ್ ವಿಲಾಸದಿಂ || ೪೬ ||

ಕಂ|| ಅರಿನೃಪಖಂಡನನಿರತ(ರ್) |
ಸ್ಫುರದಸಿಧಾರಾಂಬುವಿಂದೆ ಜಲಕೇಳಿಯನಾ ||
ದರದಿಂದೆಸಗೆ ನಿಜಶ್ರೀ |
ತರುಣಿ ಕರಂ ತಿಮ್ಮರಾಜ ಭೂಮಿಪನೆಸೆದಂ || ೪೭ ||

ಕಂ|| ಬಿರುದಂತೆಂಬರಗಂಡಂ |
ಪಿರಿದೆನಿಸುವ ತಿಮ್ಮರಾಜನತಿಶೌರ್ಯಂಗೇ ||
ಳ್ದರಿಗಳೆರ್ದೆಯುರಿಯುತಿರ್ಕುಂ |
ಪರಿವಚಿಸುವಡಳವೆ ತತ್ಪ್ರತಾಪಮನಿಳೆಯೊಳ್ || ೪೮ ||

ಚಂ|| ತದನುಜ ಚಾಮಭೂಮಿಪತಿಯಾಹವರಂಗದೊಳಾಂತು ನಿಂದ ಸಂ |
ಮದಯುತ ರಾಮರಾಜ ಬಲನಾಯಕ ರೇಮಟವೆಂಕಟೇಂದ್ರನಂ ||
ಸದೆದನಿಳಾತಳಂ ಪೊಗೞೆ ಪೂರ್ವದೊಳರ್ಜುನಹಸ್ತಕಂಜದೊಳ್ |
ಭಿದುರಮದೆಂತು ತಾಗಿಯೊಳಗಾದುದು ಕೃಷ್ಣನ ಮೈಮೆಯೇೞ್ಗೆಯಿಂ || ೪೯ ||

ಮ.ಸ್ರ|| ಪದೆದಂತೀ ಚಾಮರಾಜೋರ್ವಿಪನನಶನಿ ತಾಂ ತಾಗಿ ಕೇಶಾಗ್ರಮಂ ಕೋ |
ದೊದೞುತ್ತುಂ ಭೂಮಿಗಾ ಫಲ್ಗುನನೆನುತಿರಲೆಯ್ದಿತ್ತು ಚಾಮುಂಡಿಕಾಪ್ರೇ ||
ಮದಿನಾತಂಗಾತ್ಮಜರ್ ನಾಲ್ವರೊಗೆದರೊಲವಿಂ ರಾಜಭೂಪಾಲಕಂ ಬೆ |
ಟ್ಟದ ಚಾಮೇಂದ್ರಂ ಮಹಾದೇವ ನೃಪತಿ ವಿಲಸಚ್ಚಿನ್ನರಾಜಾವನೀಶಂ || ೫೦ ||

ಕಂ|| ರಾಜನೃಪಂ ವೈಚಿತ್ರ್ಯದಿ |
ನಾಜಿಯೊಳುರೆ ಕಾರಿಕಾಖ್ಯಪುರದೊಡೆಯನ ವಿ ||
ಭ್ರಾಜಿತನಾಸಿಕಮಂ ಕರ |
ರಾಜೀವಕಶಾಗ್ರಘಾತಿಯಿಂ ಛೇದಿಸಿದಂ || ೫೧ ||

ಅದನಾದಿವಿಡಿದು ತತ್ಸೈ |
ನ್ಯದ ಸುಭಟರ್ ಯುದ್ಧದಲ್ಲಿ ರಿಪುನಾಸಾಚ್ಛೇ ||
ದದ ಕೃತ್ಯಮನೆಸಗುವರು |
ನ್ಮದದಿಂ "ದೆಂತರಸನಂತೆ ಪ್ರಜೆಗಳ್" ಮೆಱೆಗುಂ || ೫೨ ||

ತಿರುಮಲ ರಾಜನ ನತಿ ಚಿ |
ತ್ರರಚನೆಯಿಂ ಗೆಲ್ದು ರಾಜಭೂಪಂ ಮುದದಿಂ ||
ದರರಂಗೇಶಕಟಾಕ್ಷ |
ಸ್ಫುರಿತಶ್ರೀರಂಗಪುರಮನೀೞ್ದಾಳ್ವನದಂ || ೫೩ ||

ವ|| ಇಂತು ಶ್ರೀರಂಗಪಟ್ಟಣದಲ್ಲಿರ್ದ ಮಲೆವರಿ ಭೂಪರ ಕೊಟ್ಟಮಂ ಮುಱಿದು ತತ್ತತ್ಪುರಂಗಳಂ ಸ್ವವಶಂಗೆಯ್ದು ರಂಗನಾಥ ಚರಣಾರವಿಂದ ಮಕರಂದರಸಾಸ್ವಾದನನಿರತ ಮಧುಕರೋಪಮಂ ರಾಜನೃಪಂ ಸಾಮ್ರಾಜ್ಯಮನಾಳುತ್ತಿರ್ದೊಂದು ಸಮಯದೊಳ್—

ಕಂ|| ತಿರುಪತಿಯರಸನನುಜ್ಞೆಯ |
ನಿರದೆಯ್ತಂದೊರ್ವಮಾನತಂಗಕ್ಷಿಯ ನ ||
ಚ್ಚರಿಯೆಂದು ಸಕಲರುಲಿಯು |
ತ್ತಿರೆ ಕೊಟ್ಟವನಂ ಕಡಂಗಿ ಕಳಿಪಿದನರಸಂ || ೫೪ ||

ವ|| ಮತ್ತೊಂದು ಪ್ರಸ್ತಾವದೊಳ್—

ಮ. ಸ್ರ|| ಹರಿಧಾಮಕ್ಕೆಯ್ದುವಾಗಳ್ ಯದುಗಿರಿಪತಿ ನಾರಾಯಣಾಗಾರದೊಳ್ ಭೂ |
ವರನಂ ಕಾಣುತ್ತುಮಲ್ಲಿರ್ಪಖಿಳಜನಚಯಂ ದೇವಗೇಹಾಂತದೊಳ್ ಭಾ ||
ಸುರ ನಾನಾದೀಪವಾದ್ಯಂಗಳನೆಸಗಿದಿರೆೞ್ದೀಕ್ಷಿಸಲ್ ಕಾಣದಂತ |
ಚ್ಚರಿವಟ್ಟರ್ ಭೂಮಿಪಂ ಮುಕ್ತಿಗೆ ಗಮಿಸಿದನೆಂದುರ್ವಿಯಾನಂದದಿಂ || ೫೫ ||

ಕಂ|| ಆ ರಾಜಭೂಪನನುಜಂ |
ವೀರಾದ್ಯಂ ದೇವ ಭೂವರಂಗೆ ತನೂಜರ್ ||
ಮಾರಸಮರೂಪರತಿಗುಣ |
[ಸಾರರ್] ನಾಲ್ವರ್ ಸಮಂತು ಜನಿಸಿದರೊಲವಿಂ || ೫೬ ||

ವ|| ಅವರಾರೆಂದೊಡೆ—

ಕಂ|| ವರದೊಡ್ಡದೇವರಾಜಂ |
ಸುರುಚಿರ ಚಿಕದೇವನೃಪತಿ ದೇವಮಹೀಶಂ ||
ಧರಣಿಪಮತಿ ದೇವೇಂದ್ರಂ |
ಕರುಣಿಗಳಾ ದಶರಥಾತ್ಮಜರವೋಲ್ ಮೆಱೆದರ್ || ೫೭ ||

ವ|| ಆ ನಾಲ್ವರೊಳ್—

ಕಂ|| ಸಾರಗುಣರೂಪ ಗಭೀರಾ |
ಕಾರತಾರ್ಯ ಶೀಲಸತ್ಕೀರ್ತಿಗಳಿಂ ||
ಭೂರಿಯ ವಿಭವದಿನೆಸೆದಂ |
ಧೀರಾಗ್ರಣಿ ದೊಡ್ಡದೇವರಾಜ ನರೇಂದ್ರಂ || ೫೮ ||

ವ|| ಮತ್ತಂ—

ಕಂ|| ಜಲಜಾಕ್ಷಂ ಕಂಬುಗಲಂ |
ವಿಲಸಚ್ಚಂದ್ರಾನನಂ ಪ್ರವಾಳಾಧರನು ||
ಜ್ಜ್ವಲಕಾಯಂ ವಿಪುಲೋರ |
ಸ್ಸ್ಥಲನೆಸೆದಂ ದೊಡ್ಡದೇವರಾಜನೃಪಾಲಂ || ೫೯ ||

ನರನೆಂತೂರ್ವಶಿ ಮೋಹಿಸಿ |
ಬರೆ ಮದನಾಸ್ತ್ರಕ್ಕೆ ಸಿಲ್ಕದಿರ್ದನದರವೋಲ್ ||
ತರುಣಿಯರೆಲ್ಲರ್ ಕಾಮಿಸಿ |
ಬರೆ ಮೋಹಿಪನಲ್ತು ದೊಡ್ಡದೇವಜನೇಂದ್ರಂ || ೬೦ ||

ಕಮನೀಯರಾಮಭದ್ರಂ |
ಗೆ ಮಹೀಸುತೆಯಂತೆ ದೊಡ್ಡದೇವನರೇಂದ್ರಂ ||
ಗೆ ಮುದಂಬೆತ್ತಿರ್ದಳ್ ತಾ |
ನಮೃತಾಂಬಾದೇವಿ ರಾಣಿಯಾಗಿ ಯಜಸ್ರಂ || ೬೧ ||

ಮ|| ವರಪುಣ್ಯಾಮರಭೂರುಹಂ ಜವಳಿವಣ್ಣಂದಾಳ್ದುದೋ ಕೀರ್ತಿವ |
ಲ್ಲರಿ ತಾನಿರ್ಗುಡಿ ಗೊಂಡುದೋ ಎನೆ ಕುಮಾರರ್ ಚಿಕ್ಕದೇವೇಂದ್ರಭಾ ||
ಸುರಕಂಠೀರವ ಭೂಪರುದ್ಭವಿಸಿದರ್ ಸೌಭಾಗ್ಯಸಾರರ್ ಮನೋ |
ಹರರೂಪರ್ ತವೆ ದೊಡ್ಡದೇವಜನಪಂಗುದ್ಯದ್ಯಶೋಭೂಷಣರ್ || ೧೨ ||

ಕಂ|| ಆ ದೊಡ್ಡದೇವನೃಪತಿಗೆ |
ಭೂದೇವಾವನಸುಶೀಲನನುಜಾತಂ ಪು ||
ಣ್ಯೋದಧಿಶಶಿ ವಿತರಣ ಸಂ |
ಪಾದಕನೊಪ್ಪಿರ್ದನತುಳದೇವನೃಪಾಲಂ || ೧೩ ||

ವ|| ಕಮನೀಯ ಗುಣಮಣಿಗಣ ವಿಭೂಷಣರಂಗನಾಥ ಪಾದಾರವಿಂದ ಬಂಧುರ ಸೇವಾ ನಿರತಂ, ನಿರಂತರಭೂಸುರನಿಕರ ಕ್ರಿಯಮಾಣ ಜ್ಯೋ(ತಿ)ಷ್ಟೋಮಾತಿರಾತ್ರಪೌಂಡರೀ(ಕ) ವಾಜಪೇಯ ಮುಖಾನೇಕಮುಖಹವಿರ್ಭಾಗಾಸ್ವಾದನ ಮುದಿತಸಮಸ್ತಾಮರಸ್ತೋಮಂ, ಪ್ರದೀಯಮಾನಾನೂನಬಹುಳಸ್ವಾಸ್ತ್ಯಸ್ವಸ್ಥಚಿತ್ತಬುಧಕದಂಬಸಮಾವೃತಂ, ಸತತಕೃತಸತ್ರ ಪವಿತ್ರಾನ್ನಭೋಜನಸಂತುಷ್ಟಯಾಚಕನಿಚಯಂ, ಬ್ರಹ್ಮಾಂಡಸಪ್ತಾಂಬುಧಿ ಕನಕರಥಿಬಾಶ್ವ ಕಲ್ಪವಲ್ಲೀ ವಿಶ್ವಚಕ್ರಕಾಮಧೇನುರತ್ನಗೋಸ್ವರ್ಣ ಭೂಮಿಹಿರಣ್ಯಗರ್ಭಕಲ್ಪವೃಕ್ಷ ಪಂಚಹಲ ತುಲಾಪೂರುಷ ಗೋಸಹಸ್ರಭೂತಘಟಮಿಳಿತ ಷೋಡಶಮಹಾದಾನ ಪರಿಲಬ್ಧ ಮಹೈಶ್ವರ್ಯ ಸಂಪನ್ನ ವಿತ್ಪನ್ನವಿಪ್ರಪ್ರಕರಂ, ಮತ್ತಮನೇಕ ನಾನಾಭಾವಸಂಭಾವಿತಭಾವುಕಸಮೂಹಂ, ಸತತನತರಿಪು ನೃಪತಿಮಕುಟತತಿ ಮಂಜುಮಣಿಪುಂಜ ರಂಜಿತಪಾದಕಂಜನು ಮೆನಿಸಿ ಸುಖದಿಂದಿರ್ಪಲ್ಲಿ–

ಕಂ|| ರಾಮನ ಪಾದುಕೆಯೊಲವಿಂ |
ಭೂಮಿಯನಾ ಭರತನಾಳ್ದನೆಂತತಿ[ವಿ]ಬುಧ ||
ಪ್ರೇಮಿ ಚತುರ್ದಶವರ್ಷಂ |
ಭೂಮಾಗ್ರಜಭಕ್ತಿಯಿಂದೆ ಪೊರೆದೀ ಮಹಿಯಂ || ೧೪ ||

ಪರಪೋಷಣಧೀರಂ ದು |
ಷ್ಟರ ನಿಗ್ರಹದಿಂದೆ ಶಿಷ್ಟಪಾಲನೆಯಿಂದಂ ||
ಸ್ರಷ್ಟೃವ ಸೃಷ್ಟಿಯೊಳಿಲ್ಲೆನೆ |
ಯಷ್ಟೈಶ್ವರ್ಯಯುತನೊಪ್ಪಿದಂ ದೇವನೃಪಂ || ೧೫ ||

ಧರಣೀಪಾಲನಭಾರಮು |
ನಿರದರ್ಪಿಸಿ ಚಿಕ್ಕದೇವನೃಪತಿಗೆ ಭಾ ||
ಸುರಸುರಪತಿಪದವಿಯ ಭೋ |
ಗರಸಕ್ಕೆಯ್ದಿದನುದಾರ ದೇವಜನೇಶಂ || ೧೬ ||

ಕಂ|| ದೇವೇಶ್ವರಾರ್ಪಿತಾಖಿಲ |
ಭೂವಲಯದ ಪಾಲನಾತಿಚತುರನನಾವಂ ||
ಭಾವಿಸಿ ಬಣ್ಣಿಪನೀ ಚಿಕ |
ದೇವಮಹಾರಾಯನಂ ಬುಧಾಳಿಪ್ರಿಯನಂ || ೧೭ ||

ವ|| ಅಂತಹ ಭೂಪನಂ ಮದ್ಬುದ್ಧಿಗೆ ತೋರ್ದನಿತಂ ಬಣ್ಣಿಪೆ ನದೆಂತೆಂದೊಡೆ—

ಮ|| ವರಸಾಹಿತ್ಯವಿನೋದಿ ಯಾಶ್ರಿತ ಜನಾನಂದಾಕರಂ ಗಾನಚಾ |
ರುರಸಜ್ಞಂ ಕವಿಕಲ್ಪಕಂ ಸಕಲಧರ್ಮಾಚಾರಯುಕ್ತ ಪ್ರತಾ ||
ಪರುಚಿ ತ್ರಸ್ತ ಸಮಸ್ತವೈರಿಕುಮುದಂ ಪೌಢಾಗ್ರಗಣ್ಯಂ ಬುಧಾ |
ವರಣಂ ಶ್ರೀ ಚಿಕದೇವರಾಯನೆಸೆದಂ ಸೌಂದರ್ಯಸಾರೋದಯಂ || ೧೮ ||

ಚಂ|| ಹರಿಚರಣಾರವಿಂದಮಕರಂದಮಧುವ್ರತನಿಂದಿರೇಶ ಭ |
ಕ್ತಿರಸಸುಧಾಬ್ಧಿಸೋಮ ನಭಿರಾಮಯಶೋರುಚಿ ಪೂರ್ಣಚಂದ್ರಿಕಾ ||
ಸ್ಫುರಿತಜಗನ್ನಿಕಾಯ ನತಿಶೋಭನಕಾಯ ನರಾತಿಭೂವರೋ |
ತ್ಕರತಿಮಿರಾರ್ಕನೊಲ್ದು ಚಿಕದೇವಮಹೀಶ್ವರನಿಂತು ರಾಜಿಕುಂ || ೧೯ ||

ಪರತರಧರ್ಮಕೋಶಮೆರಡಂ (ಪರಿ) ವರ್ಧಿಪನಿಂದಿರೇಶ ಭ |
ಕ್ತರ ಪರಿರಕ್ಷೆಯಂ ನೆಗಳ್ವನಾಶ್ರಿತವರ್ಗಕೆ ವಾಂಛಿತಾರ್ಥಮಂ ||
ಕರೆಕರೆದಿತ್ತು ಪಾಲಿಪನರಾತಿನರೇಂದ್ರರನಾತ್ಮಪಾದಪಂ |
ಕರುಹಕೆ ನಿಚ್ಚಮಾನತರನಾಗಿಪ ನೀಚಕದೇವ ಭೂಮಿಪಂ || ೨೦ ||

ವಿತರಣದಿಂ ಸುಪರ್ವನಗಮಂ ನಗಮಂ ಘನಧೈರ್ಯದಿಂದಮಾ |
ರ್ಜಿತಯಶದಿಂದೆ ಚಂದ್ರಹರಿಯಂ ಹರಿಯಂ ನಿಜತೇಜದಿಂದೆ ವಿ ||
ಶ್ರುತಮತಿಯಿಂದೆ ಕಂಜಭವನಂ ಭವನಂ ನಿಜಶೌರ್ಯದಿಂದೆ ಮಂ |
ಡಿತಗುಣರಾಜಿ ರಾಜಿಸೆ ವಿಡಂಬಿಪನೀ ಚಿಕದೇವಭೂಮಿಪಂ || ೨೧ ||

ಮ|| ಘನವರ್ಣಂ ಸದನಂತಭೋಗವಿಲಸತ್ಕಾಯಂ ರಸಾಲಿಂಗಿತಂ |
ವಿನತಾನಂದನಪಕ್ಷಗಂ ವಿಬುಧರಕ್ಷತ್ಸತ್ವಚಕ್ರಾಂಚಿತಂ ||
ಮನವೊಲ್ದಿನ್ನವೊಲೆಂದು ವಿಷ್ಣು ಚಿಕದೇವೇಂದ್ರಂಗೆ ಲೋಕವ್ರಜಾ |
ವನತಾತ್ಮಸ್ಥಿತಿಯಿತ್ತು ತಾನಹಿಪರಾಜತ್ತಳ್ಪಮಂ ನಂಬಿದಂ || ೨೨ ||

ಚಂ|| ಸುರನದಿಯಲ್ಲಿ ಮಿಂದು ರಜತಾದ್ರಿಪಯೋಧರಕೊಲ್ದು ಲೇಪಮಂ |
ವಿರಚಿಸಿ ತತ್ಪ್ರತಾಪ ರುಚಿಕುಂಕುಮದಿಂ ನಿಜಖಡ್ಗಖಂಡಿತ ||
ಸ್ಫುರದರಿಕುಂಭಿಕುಂಭ [ರುಚಿರ] ಸ್ಥಳದುನ್ನತಮೌಕ್ತಿಕ ಹಾರಮಾಂತು ಭಾ |
ಸುರ ಚಿಕದೇವರಾಯನುರುಕೀರ್ತಿವಧೂಟಿ ಕಡಂಗಿ ರಾಜಿಕುಂ || ೨೩ ||

ವ|| ಅಂತುಮಲ್ಲದೆಯುಂ—

ಕಂ|| ಶ್ರೀನಿಳಯ ನೆಸೆದನತುಳ ಕ |
ಳಾನಿಧಿ ಜೈವಾತೃಕಂ ಸುವೃತ್ತಂ ಸೋಮಂ ||
ಭೂನುತ ಸತ್ಕವಿಬುಧಕೃತ |
ನಾನಂದದೆ ಚಿಕ್ಕದೇವರಾಜಂ ಶಶಿವೋಲ್ || ೭೪ ||

ಉರುತರರಿಪುನರಕಚ್ಛೇ |
ದರತಂ ವಿಜಯಾವಿರುದ್ಧ ಬಲದರ್ಪಕ ವಿ ||
ಸ್ಫುರಿತಂ ಚಿಕದೇವೇಂದ್ರನ |
ವರನಂದನ [ನಂದಕ] ಖಡ್ಗಮೊಪ್ಪುಗುಂ ಕೃಷ್ಣನವೋಲ್ || ೭೫ ||

ಮ|| ಸತತಂ ಚಾರುಸುವರ್ಣರಂಜಿತ ಪದಾಲಂಕಾರಸಂತಾನಮುಂ |
ಡಿತೆ ಭಾಸ್ವದ್ಗುಣಯುಕ್ತ್ರಷಾಳಧರೆ ನಾನಾರಾಗಸಂಯುಕ್ತ ಸಂ ||
ಭೃತಸಮ್ಯಗ್ವಿತತಪ್ರಸೂನೆ ಲಲಿತಾಂಕಾಸಕ್ತೆ ರಾಜತ್ಕಲಾ |
ವತಿ ಸದ್ವಲ್ಲಕಿ ಕಾಂತೆವೋಲ್ ಸ್ಫುರಿಸುಗುಂ ಶ್ರೀ ಚಿಕ್ಕದೇವೇಂದ್ರನಾ || ೭೬ ||

ವಿತತೋತ್ಸಂಗಮನೆಯ್ದಿ ಪೊರ್ದಿಯುರಮುಂ ಹಸ್ತಾಂಚಲಾಮೃಷ್ಟಸಂ |
ಗತಿಯಂ ತಾಳ್ದು ನಖಾಂಚಿತಂ ಪ್ರಣಯದಿಂ ತತ್ತದ್ರಸಾಂಗಾಸ್ಪದೋ ||
ಚಿತಸುಸ್ಥಾನ(ಗ)ಳಿಂಚರಂ ಮಿಗೆ ಕದಂಪಂ ವಾಸಿಸುತ್ತುಂ ಕಲಾ |
ವತಿ ಸದ್ವಲ್ಲಕಿ ನಾರಿಯಂತೆ ಮೆಱೆಗುಂ ಶ್ರೀಚಿಕ್ಕದೇವೇಂದ್ರನಾ || ೭೭ ||

ಮ. ಸ್ರ|| ಸಲೆ ಬೇಳ್ಪರ್ಗಿಲ್ಲ ಪೋಗೆನ್ನದೆ ಕೊಡುವ ಸದೌದಾರ್ಯಮಾಂತಿರ್ಪ ವಿಡ್ವಿ |
ಟ್ಕುಲಮಂ ಸೀಟ್ಬಿಕ್ಕುವಾರ್ವಾನತರನನುದಿನಂ ಪಾಲಿಪೊಳ್ಪಿಂದಿರಾಕಾಂ ||
ತಲಸದ್ಭಕ್ತಾಳಿಯಂ ಲಾಲಿಪ ಬಗೆ ತೊದಳೊಂದಿಲ್ಲದೊಳ್ವಾತು ಶಾಸ್ತ್ರಾ |
ವಲಿ ರಾಜತ್ಪ್ರೌಢಿ ತಾಂ ರಾಜಿಸೆ ವಲಮೆಸೆಗುಂ ಚಿಕ್ಕದೇವೋರ್ವಿಪಾಲಂ || ೭೮ ||

ಕಂ|| ಇಂತತಿಶಯ ಗುಣ ಸಮುದಯ |
ಕಾಂತಂ ವರ್ಣಾಶ್ರಮಕ್ರಮುಂದಪ್ಪದೆ ಭೂ ||
ಕಾಂತಂ ಚಿಕದೇವೇಂದ್ರಂ |
ಸಂತೋಷದಿನೀಳ್ಗೆಯನಾಳ್ಗುಮಚ್ಯುತನೊಲವಿಂ || ೭೯ ||

ವ|| ಯಿಾ ಪ್ರಕಾರದಿಂ ರಾಜಧರ್ಮಮಂ ಪರಿಗ್ರಹಿಸಿ ಪೂರ್ವದ ಷೋಡಶಾವನಿಪರಂ ಮಱೆಯಿಸಿ ಭೂಮಂಡಲವನಾಳ್ವ ಸಮನಂತರದೊಳ್—

ಮ|| ಚೊಕಲಿಂಗಕ್ಷಿತಿಪಾಲನಂ ಜಯಿಸಿ ಸಂಗ್ರಾಮೋರ್ವಿಯೊಳ್ಮೆಲ್ಬಿನೊ |
ಯ್ದು ಕರಿ ವ್ಯೂಹತುರಂಗವೃಂದ ಧನಶಸ್ತ್ರಾಂದೋಳಿಕಾನರ್ಘ್ಯವ ||
ಸ್ತುಕದಂಬಂಗಳನಾರ್ಪಿನಿಂ ಮಳಲಿ ಮುಷ್ಟಾಂಜಟ್ಟಿಯಾರೋಡು ಸು |
ಪ್ರಕಟೋದ್ಯತ್ಪರಮತ್ತ್ಯನಂತಗಿರಿ ಮುಖ್ಯಗ್ರಾಮಮಂ ಬೇಗದಿಂ || ೮೦ ||

ಕಂ|| ಲೀಲಾಮಾತ್ರದೆ ಖಂಡಿಸಿ |
ವೇಲಾಪುರದರಸನಾರ್ಪನಾಹವದೆಡೆಯೊಳ್ ||
ಮೇಲಾದರ್ಕಲ್ಗೂಡಂ |
ಲಾಲಿಸಿ ಕೊಂಡೆಸೆದನೊಲ್ದು ಚಿಕದೇವನೃಪಂ || ೮೧ ||

ಪೊಡವಿಯೊಳಸ್ಮದ್ದುರ್ಗಕೆ |
ಪಡೆಯಂಪರಿಯೆಂಬ ನರಸನಾಯಕನಧಟಂ ||
ಕಿಡಿಸಿ ಜಡಿದೀಲ್ದುಕೊಂಡಂ |
ಜಡಕನದುರ್ಗಮನುದಾರ ಚಿಕದೇವನೃಪಂ || ೮೨ ||

ತುರುಕರ ಗರ್ವಮನಧಟಂ |
ದೊರಸಿಕರಂ ಪೊನ್ನವಳ್ಳಿಯಂ ತುಮಕೂರಂ ||
ಭರದಿಂ ಕೇತಸಮುದ್ರಮ |
ನುರುಶೌರ್ಯದೆ ಕೊಂಡನೊಲ್ದು ಚಿಕದೇವನೃಪಂ || ೮೩ ||

ನಾಳಿಕೆರಾಂಬುರುಚಿಗಂ |
ತಾಳೋಚಿಸಿ ನಲವಿನಿಂದೆ ಹಂದನಕೆಱೆಯಂ ||
ದೂಳಿಗೋಂಟೆಯೆನೆ ಮಿಗೆ ಕರು |
ಣಾಳುಗಳಧಿನಾಥ ನೀಲ್ದ ನವನಿಪತಿಲಕಂ || ೮೪ ||

ವ|| ಇಂತು ಸಮಸ್ತದಿಗ್ವಿಜಯಮಂ ಮಾಡಿ ನಿಶ್ಶಂಕಂ ರಿಪುಕುಂಭಿಕುಂಭಸ್ಥಳವಿದಳನಾಂಕುಶಂ ಚಿಕದೇವರಾಜಂ ಸುಖದಿಂ ಸಾಮ್ರಾಜ್ಯಮನಾಳುತ್ತುಮಿರ್ದೊಂದು ಶುಭವಾಸರದೊಳ್—

ಚಂ|| ವನಜಸಖೋದಯಾದಿಯೊಳಲಂಪಿನಿನಚ್ಯುತಪಾದ ಪದ್ಮಮಂ |
ನೆನೆದೊಡನೆಲ್ದು ಮಾಡಿ ರದಧಾವನಮಂ ಸುರಭಿಪ್ರಯುಕ್ತ ನೂ ||
ತನಜಲದಿಂ ಮುಖಾಂಬುರುಹಮಂ ತೊಳೆದಂಗಕೆ ಕುಂಕುಮಾದಿಲೇ |
ಪನಮನೊಡರ್ಚಿ(ಫಾಲ)ಕೆ ಲಲಾಮವನಿಟ್ಟು ಮನೋನುರಾಗದಿಂ || ೮೫ ||

ಮಿಸುನಿಯ ಪೆಂಡೆಯಂ ಕನಕಕಾಂಚಿ ರಣನ್ಮಣಿಕಂಕಣಂ ಸಮು |
ಲ್ಲಸಿತಕರಾಂಗುಳೀಯಕಮುದಾರನವಾಂಗದಮಾಣಿಮುತ್ತಿನಿಂ ||
ಮಿಸುಗುವ ಹಾರಮೊಪ್ಪೆ ಹುರುಮಂಜಿಯ ಮೌಕ್ತಿಕಕರ್ಣಭೂಷಣಂ |
ಪಸರಿಸೆ ಮೌಳಿ ತಾಂ ಪಸದನಂಬಡೆದಂ ಚಿಕದೇವ ಭೂಮಿಪಂ || ೮೬ ||

ಕಂ|| ಸುರುಚಿರಕಂಚುಕಮಂ ತೊ |
ಟ್ಟುರುತರ ವಿದ್ಯುತ್ಪ್ರಭಾಂಬರಂಬೊದೆದುರ್ವೀ ||
ವರನೆಸೆದಂ ನೂತನಸುಮ |
ಶರನಂತೆವೊಲಿಳಿಗೆ ಚಿಕ್ಕ ದೇವನೃಪಾಲಂ || ೮೭ ||

ಚಂ|| ಸುಲಲಿತ ನಾಮತೀರ್ಥಮನೊಡರ್ಚಿ ಲಸದ್ಧರಿಪಾದತೀರ್ಥಮಂ |
ನಲಿದೊಡನೀಂಟಿ ಹೋಮವಿಧಿಗೆಯ್ದು ಬುಧಾಳಿಗೆ ದಾನಮಿತ್ತು ಮಂ ||
ಜುಳತರ ಷಡ್ರಸಾನ್ವಿತದ ಭೋಜನಮಂ ಮಿಗೆ ಮಾಡಿ ಮೋದದಿಂ |
ಸಲೆ ನಿಜಪಾದಸೇವಕರನಾದರಿಸುತ್ತೆ ಮಹೀಶಶೇಖರಂ || ೮೮ ||

ವ || ಅಂತು ಸಂತಸಮಂ ತಳೆದಭಿನವಕಂತುಮದದಂತಿಗಮಕದಿಂ ಝಣಝಣರಣಿತ ಕನತ್ಕನಕ ಪಾದುಕೆಗಳಂ ಮೆಟ್ಟಿ ನಿಜಸಚಿವರುಚಿರ ಕರತಳನ್ಯಸ್ತಹಸ್ತಾಂಬುಜಂ, ಲೀಲಾಕಟಾಕ್ಷ ವೀಕ್ಷಣ ಕೌಮುದೀನಿರಸ್ತಸಮಸ್ತಜನಸ್ತೋಮಮನಃಖೇದತಿಮಿರಂ, ಕಮನೀಯಹೇಮಮಣಿ ಸಮುದಯರಚಿತಸಮುಚಿತಾಂದೋಲಿಕಾರೂಢನಾಗಿ ನಾನಾವಿಧರತ್ನನಿಚಯಖಚಿತ ಪ್ರಚುರ ಪ್ರತ್ಯಗ್ರಶಾತಕುಂಭಸ್ತಂಭಾಲಯಕ್ಕೆ ಲೀಲೆಯಿಂದವತರಿಸಿ ಸ್ಫುರಿಸುವರತ್ನಸಮಂಚಿತಕಾಂಚನ ಮೃಗೇಂದ್ರಪೀಠದೊಳ್ ಕುಳ್ಳಿರ್ಪಾಗಳ್—

ಮ.ಸ್ರ|| ಧರಣೀಶರ್ ಗಾಯಕರ್ ವಾದಿಗಮಕಿಕವಿಗಳ್ ವಾಗ್ಮಿಕರ್ ಜೊಯಿಸರ್ವೈ |
ದ್ಯರಮಾತ್ಯರ್ ವಂದಿಗಳ್ ಬೋಧಸುಭಟತುರಗಾರೋಹಕರ್ ಶಾಸ್ತ್ರಿಗಳ್ವೇ ||
ದರಸಜ್ಞರ್ ಹಾಸ್ಯ ಕಾರರ್ ಸಚಿವಕರಣಿಕರ್ ಮಲ್ಲನಾನಾಗಮಜ್ಞರ್ |
ನೆರೆದೆಯ್ತಂದೊಪ್ಪಿದರ್ ತತ್ಸಭೆಯೊಳುರುಕಥಾಸಾಗರರ್ ಮಾಗಧಾದ್ಯರ್ || ೮೯ ||

ಮ|| ಸುಲಿಪಲ್ ತುಂಬಿಗುರುಳ್ ಪ್ರವಾಳರುಚಿರೋಷ್ಠಂ ಕಂಬುಕಂಠಂ ರಸಾ |
ಲಲಸತ್ಪಲ್ಲವಪಾಣಿ ಕೋಮಲಪದಂ ರಂಭೋರು ಚಂದ್ರಾನನಂ ||
ಪುಲಿನಶ್ರೋಣಿ ಗಭೀರನಾಭಿ ಯಲರ್ಗಣ್ ಚಕ್ರಸ್ತನಂ ಹೇಮಮಂ |
ಜುಲಕಾಯಂ ನ(ಸಿ)ಳಿತೋಳ್ ಕರಂ ಮೆಱೆಯೆ ಬಂದರ್ ವಾರಸತ್ಕಾಂತೆಯರ್ ||೯೦||

ಚಂ|| ಪರಹಸಿತಾಸ್ಯದಿಂದೆ ಗಣಿತಾಂಗನೆಯರ್ಕಳನೀಕ್ಷಿಸುತ್ತೆ ಮೇಣ್ |
ಮುರಿದೆಳಮೀಸೆಯಂ ರದನಪೀಡಿತಬಿಂಬನಿಭೋಷ್ಠರಾಗಿ ಭಾ ||
ಸುರಕರಖಡ್ಗಮಂ ನೆಗಪಿ ಚಿಮ್ಮುತೆ ಭೂಷಣಕಾಂತಿ ಪೊಣ್ಮೆ ಭೂ |
ವರಸುತರೊಪ್ಪಿದರ್ ಮದ(ನ)ಮೋಷನಮೂರ್ತಿಗಳಾ ಸಭಾಂತರಾಳದೊಳ್ || ೯೧ ||

ವ|| ಆ ಸಮಯದೊಳ್—

ಉ|| ಕೇರಳನಾಥ ನಿಲ್ ದ್ರವಿಡನಾಯಕ ಮುಂದಕೆ ಪೋಗು ಪಾಂಡ್ಯ ಸೀಂ |
ಸಾರುಲಿಗುಂದು ಘೂರ್ಜರ ವಿದರ್ಭ ನಿದಾನಿಸಿ ಮಾತನಾಡು ಕಾ ||
ಶ್ಮೀರ ಕೆಲಕ್ಕೆ ಬಾ ಮಗಧ ಸೈತಿರವಂತಿಯಧೀಶ ಕುಳ್ಳಿರೆಂ |
ದಾರವಮುರ್ವೆ ಕಂಚುಕಿಗಳುಗ್ಗಡಿಸುತ್ತೆಸೆದರ್ ಸಭಾಂತದೊಳ್ || ೯೨ ||

ವ|| ಆ ಸಮನಂತರದೊಳ್—

ಚಂ|| ವರಮಣಿಕಂಕಣಕ್ವಣಿತಮುಣ್ಮೆ ....ಭಾ |
ಸುರತರಕರ್ಣಪತ್ರರುಚಿ ಬಿಂಬಿಸೆ ಗಲ್ಲದೊಳಾಸ್ಯಬಿಂಬದೊಳ್ ||
ಸ್ಫುರಿಸೆ ದರಸ್ಮಿತಂ ಗುರುಕುಚಂ ಮಿಗೆ ನರ್ತಿಸೆ ಚಿಮ್ಮುತಿರ್ದರಾ |
ದರದೊದವಿಂದೆ ಚಾಮರಮನೀಕ್ಷಿಸುತಿರ್ಕೆಲನಂ ಲತಾಂಗಿಯರ್ || ೯೩ ||

ಸ್ಫುರಿಪೆಳಮುತ್ತು ತೆತ್ತಿಸಿದ ನುಣ್ಮೊಲೆಗಟ್ಟು ಕಟ್ಟು ಕಟಿತಟೋಲ್ಲಸ |
ತ್ಸುರುಚಿರ ರತ್ನಕಾಂಚಿ ಪೊಸಗಾಸೆ ಪದಾರ್ಪಿತ ಪೊನ್ನಗೆಜ್ಜೆ ಬಂ ||
ಧುರಮಣಿಭೂಷಣಂ ಮಿಱುಪ ಭಾಳದ ಕತ್ತುರಿಬೊಟ್ಟು ರಾಜಿಸು |
ತ್ತಿರೆ ಮಿಗೆ ಮೋಹಿಸುತ್ತೆ ನವನರ್ತಕಿ ಬಂದಳದೊಂದುಲೀಲೆಯಿಂ || ೯೪ ||

ವ|| ಅಂತೆಯ್ತಂದು ನರ್ತಕಿ ಮಿಸುಪ ಮಿಸುನಿದೆರೆವಱಿಯೊಳ್ ಸೆಳೆಮಿಂಚಿನಲತೆಯಂತೆ ತೊಳಗಿ ಬೆಳಗುತ್ತೆ ಚೆಂದಿರಗಾವಿಯಿಂದಂದಂಬಡೆದ ಮೇಲ್ಪೊದಿಕೆಯಂ ಪೊದೆದು ಮುದದಿಂದೆ ನಿಂದು—

ಕಂ|| ಭರತಾದಿ ಸಕಲ ವಿದ್ಯಾ |
ಸುರಸಜ್ಞ ನಿಜಾಶ್ರಿತಾಳಿ ಮಂದಾರ ಸುವ ||
ಸ್ತ್ರ ರುಚಿರಚಿಕದೇವೋರ್ವೀ |
ವರುವೆ ಯ್ಯೊಲ್ದೀಕ್ಷಿಸೆಂಬ ಸಮಯದೊಳೊಲವಿಂ || ೯೫ ||

ಚಂ|| ಪೊಳೆದುರೆ ಮಿಂಚಿನಂತೆ ನೆಗೆದುಜ್ಜ್ವಳಕಂದುಕದಂತೆ ತೋಳಗು |
ಣ್ಪಳವಡೆ ಸೊಂಪು ಮಿಱೆ ಗಮಕಾಯತ ಕೋಪುಗಳಿಂಪುದೋಱೆ ಸಂ ||
ಗಳಿಸಿರೆ ಪಾದದಲ್ಲಿ ಗತಿ ಮೆಯ್ಸಿರಿಯೊಪ್ಪಿರೆ ದೇಸೆ ವಾಸಿ ಕಂ |
ಗೊಳಿಸೆ ಸಭಾಂತಮಂ ಪದೆದು ಮೋಹಿಸುತಾಡಿದಳಾಗಳುರ್ವಿತಂ || ೯೬ ||

ಅಲುಗೆ ಕುಚದ್ವಯಂ ಜಗುಳೆ ಸೋರ್ಮುಡಿಯಿಂದರಲಕ್ಷಿಕಾಂತಿ ಚಂ |
ಚಲಿಸೆ ಮುಖಾಬ್ಜದೊಳ್ ಮೊಳೆಯೆ ಘರ್ಮಪಯಃಕಣಮಿಂಪುಸೊಂಪಿನಿಂ ||
ಲಲಿತರಸ ಸ್ಫುಟಾಭಿನಯಮೊಪ್ಪೆ ನಿರೀಕ್ಷಿಪ ಸರ್ವರಂ ಮನೋ |
ಜಲಸಿತ ಬಾಣಕೀಡೆಸೆಗುತಾ ನಟಿ ಭೂಪನ ಕಣ್ಗೆ ತೋಱಿದಳ್ || ೯೭ ||

ಕಂ|| ಇಂತಭಿನವರಂಭೆವೊಲೋ |
ರಂತಾಡಿದ ನಟಿಗೆ ಪಸದನಂಗಳನಿತ್ತಂ ||
ಕಂತುಸಮರೂಪ ನುರ್ವೀ |
ಕಾಂತಂ ಚಿಕದೇವರಾಜ ನಿನಸಮತೇಜಂ || ೯೮ ||

—ಗದ್ಯಂ—

ಇದು ಸತತನತಶತಧೃತಿಶತಮಖ ಮುಖಸುರ ವಿತತಿವಿತತಕೋಟೀರಕೋಟಿತಟಘಟಿತ ಚಟುಲ
ಹರಿನೀಲಮಣಿಸ್ತೋಮಾಭಿರಾಮಧಾಮ ರೋಲಂಬಜಾಲಸೇವಿತಕಂದಳದರವಿಂದಾಮಂದ
ಸೌಂದರಸಮಂಗಳರಂಗನಾಥಚರಣಸುರುಚಿರ ನಖಮಯೂಖ ನಿಸ್ತಂದ್ರ ಸಾಂದ್ರ
ಚಂದ್ರಿಕಾಲೋಲಲೀಲಾಚಕೋರಯಶೋವಿಮಲ ಸಮುಚ್ಛ್ರಯ ಸುರಭಿತ
ಹರಿದಂತಾಪ್ರತಿಮ ಪ್ರತಾಪಪ್ರಚುರ ಪ್ರಭಾಪಲ್ಲವ ತಲ್ಲಜಸಮುಲ್ಲಸಿತ
ಸಕಲವಿಬುಧನಿಕರಸುಕರ ಮನೋರಥಫಲ ಲಲಿತ ಚಿಕ್ಕದೇವ
ರಾಜರಾಜಿತಾನಲ್ಪಕಲ್ಪತರು ಸಮಾಶ್ರಿತ ಲಕ್ಷ್ಮೀಪತಿ
ರಮ್ಯಾಭಿಧಾನಚಿಕ್ಕುಪಾಧ್ಯಾಯಾಮಾತ್ಯ
ಶಿಖಾಮಣಿ ವಿರಚಿತಮಪ್ಪ

ಕಾ ಮಂ ದ ಕ ನೀ ತಿ ಯೊ ಳ್

ಸಮುದ್ರಮೇರುದೇಶಚಿಕ್ಕದೇವಮಹಾರಾಯನವಂಶಾವಳ್ಯಾದಿ ವರ್ಣನಂ

— ಪ್ರ ಥ ಮಾ ಶ್ವಾ ಸಂ —

— ದ್ವಿ ತೀ ಯಾ ಶ್ವಾ ಸಂ —

[ಪ್ರಥಮಃಸ್ಸರ್ಗಃ]

ಕಂ|| ಶ್ರೀಮದಹೀಂದ್ರಫಣಾಮಣಿ |
ಧಾಮಪ್ರದ್ಯೋತಮಾನವದನಾಂಬುರುಹಂ ||
ಕಾಮಶತಕೋಟಿರೂಪಂ |
ಪ್ರೇಮದಿನೆಮಗೀಗೆ ರಂಗಧಾಮಂ ಮುದಮಂ || ೧ ||

ವ|| ಇಂತು ಸಭಾಮಂಟಪದೊಳಭಿನವಕಂದರ್ಪಾವತಾರಂ, ನೂತನಶೇಷೋಪಮ ವಾಕ್ಕೋವಿದಂ, ವಿಸ್ತೃತಯಶಃಪ್ರಭಾಧವಳಿತಸಕಲಭುವನಕಂ, ದಾನಗುಣರಾಧೇಯಂ, ಚಿಕ್ಕದೇವಮಹಾರಾಯಂ ನಾನಾವಿಧಕಾವ್ಯನಾಟಕಾಲಂಕಾರಸಂಜಾತಪ್ರಭೂತಸಾಹಿತ್ಯ ರುಚಿಯುಮಂ, ಕರ್ಣಾಮೃತಪ್ರವಾಹಸಾರಸಂಗೀತಮುಮಂ, ಬಹುವಿಧಶಾಸ್ತ್ರೇತಿಹಾಸಪುರಾಣ ಸ್ಮೃತಿಸಂಭೂತನೀತಿಯುಮಂ ಕೇಳ್ದು ಮತ್ತಾಮಾತ್ರ (ತ್ಯ ?) ವಿಜ್ಞಾನಮಪ್ಪಾನ್ವೀಕ್ಷಕೀನೀತಿ ಯುಮಂ, ಧರ್ಮಸಾಧನಮಪ್ಪ ತ್ರಯೀನೀತಿಯುಮಂ ಕೇಳ್ದುಮರ್ಥಸಾಧನಮಪ್ಪ ವಾರ್ತಾ ನೀತಿಯುಮಂ, ನಯಸಾಧನಮಪ್ಪ ರಾಜನೀತಿಯುಮಂ ಕೇಳ್ದಾನಂದಂಬೆತ್ತು ಮತ್ತಮನಂತರ ದೊಳ್—

ಕಂ|| ಸಕಲ ವಿದ್ವಾಂಸರಂ ಕರೆ |
ದಕಳಂಕಂ ಚಿಕ್ಕದೇವರಾಯಂ ಕಾಮಂ ||
ದಕನೀತಿಯುಮಂ ತಾಂ ಕೇ |
ಳ್ವ ಕುತೂಹಲಯುಕ್ತನಿಂತು ನುಡಿದಂ ಮುದದಿಂ || ೨ ||

ವ|| ಅದೆಂತೆನೆ—

ಮ|| ಎಲೆ ವಿದ್ವಾಂಸರಿರಾ ಕರಂ ತಿಳಿಪಿನಾಕಾಮಂದಕೀನೀತಿಯಂ |
ಸಲೆ ಕೇಳ್ವೀಪ್ಸಿತಮಾದುದಿಂದೆನಗೆ ನೀಮೊಲ್ದಾದಿಯೊಳ್ ಸಂಸ್ಕೃತೋ ||
ಜ್ಜ್ವಲ ಭಾಷಾಕೃತನೀತಿಯಂ ಪದೆದು ಸತ್ಕರ್ಣಾಟಕಾರೀತಿಯಂ |
ನಲವಿಂ ನೋಡಿ ಪ್ರಬಂಧದಂತೆಸಗಿ ಪೇಟಲ್ವೇಟ್ಕುಮೆಂಬುಕ್ತಿಯಂ || ೩ ||

ವ|| ಮನಂಗೊಳ್ವಿನಂ ಕೇಳ್ದು ಮುದಂಬೆತ್ತು ನಿಜಸ್ವಾಮಿಗೆ ಪದುಳಮುಂ ಹೃದಯ ಮಂತೆಯಂ ಪೂರ್ಣಮಪ್ಪಂತೆ ತತ್ಸಮಯದೊಳ್—

ಕಂ|| ಧರಣಿವಧೂಟೀ ವದನಾಂ |
ಬುರುಹದ ಚೆಲ್ವಿಕೆಯನಾಂತು ಸಕಲೈಶ್ವರ್ಯ ||
ಸ್ಫುರಿತಂ ತ್ರಿಕದಂಬಪುರಂ |
ಪರಿಣತ ಜನಕೋಶಮೆಸೆಗುಮಾ ಪುರವರದೊಳ್ || ೪ ||

ಕಂ|| ಪರಮಯಜುಃ ಶಾಖೆಯೊಳಂ |
ಸ್ಫುರಿಪ ಮಹಾ(ಪೌರುಷಪವುರುಕುತ್ಸ) ಗೋತ್ರಾಂಬುಧಿಯೊಳ್ ||
ಹರಿಣಾಂಕಂ ಹರಿಸೇವಾ |
ನಿರತಮನಂ ಪುಟ್ಟಿದಂ ಬೃಹಸ್ಪತಿ [ಯೆನಿಪಂ] || ೫ ||

ಶ್ರೀಮತೇ ರಾಮಾನುಜಾಯನಮಃ— ಶುಭಮಸ್ತು,

(ಇಂತು ಪೀಠಿಕಾ ಪ್ರಥಮಾಶ್ವಾಸಂ)

ವ || ಈ ಕಾಮಂದಕೀಯಶಾಸ್ತ್ರದೊಳ್ ಹದಿನಾಱುಸರ್ಗಂಗಳಿಂ ಪ್ರತಿಪಾದ್ಯದೊಳ್ ಅನುಕ್ರಮಣಿಕೆ—

ಪ್ರಥಮಸರ್ಗದೊಳ್ ಇಂದ್ರಿಯಜಯಂ, ವೃದ್ಧಸಂಸರ್ಗಂ. ದ್ವಿತೀಯಾಧ್ಯಾಯದೊಳ್ ವಿದ್ಯಾಸಮುದ್ದೇಶಂ, ವರ್ಣಾಶ್ರಮಧರ್ಮಂ ದಂಡಮಹಾತ್ಮ್ಯಂ. ತೃತೀಯದೊಳ್ ಆಚಾರವ್ಯವಸ್ಥಾನಂ. ತುರೀಯಸರ್ಗದೊಳ್ ಪ್ರಕೃತಿಸಂಪತ್ತಿನಿರೂಪಣಂ. ಪಂಚಮಸರ್ಗದೊಳ್ ಸ್ವಾಮಿಭೃತ್ಯವೃತ್ತಾಂತಂ. ಷಷ್ಠದೊಳ್ ಕಂಟಕಶೋಧನಂ. ಸಪ್ತಮದೊಳ್ ಆತ್ಮಪುತ್ರರಕ್ಷಣಯೋಗಂ, ಅಷ್ಟಮಸರ್ಗದೊಳ್ ಮಂಡಲಯೋನಿ. ನವಮದೊಳ್ ಸಂಧಿವಿಕಲ್ಪಂ. ದಶಮದೊಳ್ ವಿಗ್ರಹವಿಕಲ್ಪಂ. ಏಕಾದಶದೊಳ್ ಆಸನದ್ವೈಧೀಭಾವವಿಕಲ್ಪಂ. ದ್ವಾದಶದೊಳ್ ಮಂತ್ರವಿಕಲ್ಪಂ. ತ್ರಯೋದಶದೊಳ್ ದೂತಪ್ರಚಾರವಿಕಲ್ಪಂ. ಚತುರ್ದಶದೊಳ್ ಪ್ರಕೃತಿ ಕರ್ಮವ್ಯಸನಂ. ಪಂಚದಶದೊಳ್ ಸಪ್ತವ್ಯಸನವರ್ಗಂ, ಷೋಡಶಸರ್ಗದೊಳ್ ಯಾತ್ರಾಯೋಕ್ತ್ರ್ಯ ದರ್ಶನಂ—

ಯಸ್ಯೇತ್ಯಾದಿ ಶ್ಲೋಕಕ್ಕೆ— ಆದಿಯೊಳುಪನ್ಯಾಸಂ ವಿಘ್ನೋಪಶಮನಾರ್ಥಮಾಗಿ, ಆರಭ್ಯಮಾಣಶಾಸ್ತ್ರಂ ಪೂಜ್ಯಪೂಜಾಪೂರ್ವಕಮಾಮೇಲವಿಘ್ನಿತಪ್ರಸರಮೆಂಬುದು. ಅಲ್ಲಿ ಪ್ರಜಾಪಾಲನಾರ್ಥಮೀಶಾಸ್ತ್ರಂ, ಆ ಪಾಲನದೊಳಧಿಕಾರಿ ಅರಸು| ಆತಂ ಲೋಕಪಾಲಕನಪ್ಪು(ದ)ಱಿಂ ದೇವನೆಂದು ಪೂಜಾಸ್ಪದಂ | ಯಥಾಭೃಗುಃ| — "ಅಗ್ನಿವಾಯುಯಮಾರ್ಕಾಣಾಮಿಂದ್ರಸ್ಯ ವರುಣಸ್ಯಚ|| ಚಂದ್ರವಿತ್ತೇಶಯೋಶ್ಚೈವ ಮಾತ್ರಾನಿರ್ಹೃತ್ಯ ಶಾಶ್ವತಂ| ಯಸ್ಮಾದಿ ಹಸುರೇಂದ್ರಾಣಾಂ ಮಾತ್ರಾಭ್ಯೋಸರ್ಮಿತೋನೃಪಃ| ತಸ್ಮಾದಭಿಭವತ್ಯೇಷ ಸರ್ವಭೂತಾನಿ ತೇಜಸಾ||" ಇತಿ, ಅದಱಿಂ ದೃಷ್ಟಾದೃಷ್ಟವಿಘ್ನೋಪಶಮಹೇತುತ್ವದಿಂ ಆತಂಗೆ ಪೂಜೆಯಂ ಮಾಡಿದಂ| ಪ್ರಭುವಾಕ್–ಪ್ರಭುಶಕ್ತಿಯತ್ತಣಿಂ ಆದುದಂ ದಂಡಧಾರಣಾದಿನಾವಿರ್ಭವಿತುಂ| ಭುವನಂ ಚತುರ್ವರ್ಣಾಶ್ರಮಲಕ್ಷಣಮಪ್ಪ ಲೋಕಂ| ಶಾಶ್ವತೇ ಪಥಿ ಸ್ವಮಾರ್ಗದಲ್ಲಿ| ಸ್ವಕರ್ಮಾಭಿರತಸ್ತ್ರಿಷ್ಮತಿ ಉದಯಶ್ರೇಯಸಪ್ರಾಪಕಮಾದ ಸ್ವಮಾರ್ಗಮತಿಕ್ರಮಿಸದೆ ಇದ್ದೀತು ಎಂಬುದರ್ಥಂ| ದೇವನೆಂದು ಲೋಕಪಾಲಾಂಶಮಪ್ಪುದಱಿಂ ಪೂಜ್ಯತ್ವಂ ತೋಱಲ್ಪಟ್ಟುದು| ಶ್ರೀಮಾನಿತಿ ಸ್ವಾರ್ಥಸಂಪಾದಕತ್ವಮಂ ಪೇೞ್ದಪಂ| ತ್ರಿವರ್ಗಸುಖಂ ಶ್ರೀಮತ್ತಯಾ ಫಲಭೂತಯಾ, ಪ್ರಜಾಪಾಲನಕೃತ್ಯಂ ಯುಜ್ಯತೇ| ದಂಡಧಾರ ಇತಿಕರ್ಮಣ್ಯಾಣ್| ಇದಱಿಂ ಪ್ರಜಾಪಾಲನಮಾಚಷ್ಟೇ| ದಂಡೋಹಿ ದಮನಂ| ಯಥಾ-ಪ್ರಕೃತಯಾ ಬಿಭ್ರಾಣೋಲೋಕಂ ಸ್ವಮಾರ್ಗೆ ಸ್ಥಾಪಯತಿ| ಯಚ್ಚಚತುರ್ವರ್ಣಾಶ್ರಮೋ ಲೋಕೋರಾಜದಂಡೇನ ಪಾಲಿತಃ ಸ್ವಸ್ವಕರ್ಮಾಭಿರತೋವರ್ತತೇ| ಸ್ವೇಷುಕರ್ಮಸ್ವಿತಿ – ಯತ್ರಣೀತಾಚ್ಛಾಸ್ತ್ರಾದಿದಂ ಸಂಚಿಕ್ಷೇಪ– ಆವನಿಂ ನಿರ್ಮಿಸಲ್ಪಟ್ಟ ಶಾಸ್ತ್ರದಿಂದ ಇದಂ ಸಂಗ್ರಹಿಸಿದಂ| ಆ ಆಚಾರ್ಯಚಾಣಕ್ಯಂಗೆ ಕಲಾದಿಗುಣವರ್ಣನ ಪೂರ್ವಕಮಾಗಿ ಐದುಶ್ಲೋಕಂ

ಗಳಿಂ ನಮಸ್ಕಾರಮಂ ಮಾಡಿದಪಂ–ಋಷಿಗಳೋಪಾದಿ ಅಪ್ರತಿಗ್ರಾಹಕರ್ಕಳ ಆವ ವಂಶಮಾದುದು, ಆವಂಶಕ್ಕೆ ನಮಸ್ಕಾರಮೆಂದು ಸಂಬಂಧಂ | ವಿಶಾಲವಂಶಾನಾಮೆಂಬುದಱಿಂ ಆವವಂಶಕ್ಕೆ ಉತ್ಕೃಷ್ಟತೆ ಭೂಮಿಯೊಳ್ ಪ್ರಸಿದ್ಧವಾದುದೆಂದು ಯೋಜ್ಯಂ | ಆತನಿಂ ನೀತಿಶಾಸ್ತ್ರ ಪ್ರವೃತ್ತಿಯುಂ ತೋರುತ್ತಿದ್ಧಾನು| ಜಾತವೇದಾಃ ಅಗ್ನಿಯೋಪಾದಿಯಲ್ಲಿ ದೀಪ್ತಿಮಾನೆಂದು ಬ್ರಹ್ಮತೇಜಃ ಪ್ರಶಂಸೆ| ವೇದಾಂಶ್ಚಚತುರೋ ಧ್ಯೇತಿ-ಚಾತುರ್ಯಾತ್ ಪ್ರಜ್ಞಾಗುಣದಿಂ ನಾಲ್ಕುವೇದಂಗಳಂ ಒಂದು ವೇದದೋಪಾದಿ ಅಭ್ಯಾಸಮಂ ಮಾಡಿದಂ | ವೇದವಿದಾಂ ವರಾಯ ಎಂದು ಯೋಜ್ಯಂ, ಇದಱಿಂ ಅಧ್ಯ(ಯ)ನ ಮಾತ್ರದಿಂ ವೇದಾರ್ಥಜ್ಞಾನಮುತ್ಕೃಷ್ಟಮೆಂದು ತೋಱಲ್ಪಟ್ಟುದು | ಯಸ್ಯೇತಿ | ಅಭಿಚಾರವಜ್ರೇಣ – ಅಭಿಮುಖ್ಯದಿಂ ಸಾಧ್ಯಮಂ ಕುಱಿತು ಸಾಧಕಪ್ರಯುಕ್ತ ಮಂತ್ರಂಗಳ್ಗೆ ಸಾರಣೆಯಿಂದ ಯದಾ(ಥಾ)ಭಿಗಮನಮಭಿಚಾರ, ಅದೇ ವಜ್ರಂ, ತೇನ–ಆವವನಸಂಬಂಧಮಾದ, ವಜ್ರಜ್ವಲನ ತೇಜಸಾ–ವಜ್ರಜ್ವಲನಮೆನೆ ವೈದ್ಯುತಾಗ್ನಿಯೋಪಾದಿಯಲ್ಲಿ ತೇಜಸ್ಸನ್ನುಳ್ಳ ಆವ ವೈದ್ಯುತಾಗ್ನಿಯು ಪತಿಪಕ್ಷಮಾದ ಜಲಂಗಳಿಂ ಉಪಶಾಂತಮಾಗದೆಂತು ಅಂತು ಕೌಟಲ್ಯಕ್ರೋಧಾಗ್ನಿಯುಂ ನಂದಾದಿಗಳಿಂ ಬಿದ್ದುದು, ಮೂಲಬಂಧಮಾರಭ್ಯವಾಗಿ ನಂದನೆಂದು ನವನವತಿಸ್ವರ್ಣಕಾಧೀಶ್ವರಂ | ಪೃಥಿವೀಪತಿ – ಅದಱಿಂದವೆ, ಶ್ರೀಮರ್ಾ ಯಸ್ಯತಥಾಪಿ ಪಾತ ಆ ಪ್ರಕಾರವಿದ್ದುದು ಯಥಾನಸಮೂಲಃ ಪುನರುತ್ಥಾನಕ್ಕೋಸುಗ ಆವುದು ಪೇೞಲ್ಪಟ್ಟುದು ಅದನೆ ಸಾಧಿಸಿ ನುಡಿದಪಂ | ಏಕಾಕೀತಿ – ಪ್ರಭುಶಕ್ತಿಭಾವದಿಂದ ಕೋಶದಂಡತ್ವದಿಮೇಕಾಕೀ ಶರೀರಮಾತ್ರಪರಿಚ್ಛದಃ | ಮಂತ್ರಶಕ್ತ್ಯೇತಿ – ಪ್ರಜ್ಞಾತಿಶಯಾನುರೂಪದಿಂ ಉತ್ಸಾಹಶಕ್ತಿಯಿಂ ಶಕ್ತಿಧರೋಪಮಃ-ಕಾರ್ತಿಕೇಯಸಮಂ | ಆಜಹಾರ – ಆಹರಿಸಿದನು | ಮನುಷ್ಯರ ಮಧ್ಯದಲ್ಲಿ ಚಂದ್ರಗುಪ್ತಂಗೆ ಸೂರ್ಯಕುಲ ಪ್ರಸೂತಂಗೆ "ತಾದರ್ಥ್ಯೇಚತುರ್ಥೀ" ಮೇದಿನೀಂ ಪೃಥಿವಿಯನ್ನು | ಈ ಪ್ರಕಾರದಿಂ ಶಾಸ್ತ್ರಪ್ರಜ್ಞಾಗುಣಂಗಳ್ಗೆ ಪ್ರಾಧಾನ್ಯಂ ಖ್ಯಾಪಿತಂ | ಶುಕ್ರಬೃಹಸ್ಪತಿಗಳ್ಗೆ ತೃತೀಯನಾದ ಆತ್ಮಗುರು ಪ್ರಖ್ಯಾಪನಾರ್ಥಮಾಗಿ ದಂಡನೀತಿವಿಷಯದಲ್ಲಿ ಪ್ರಯೋಕ್ತೃತ್ವಮಂ ಪ್ರತಿಪಾದಿಸಿ ವಕ್ತೃತ್ವಮಂ ಪ್ರತಿಸಾದಿಸುತ್ತಿದ್ದಾನು | ನೀತಿಶಾಸ್ತ್ರೇತಿ | ಪ್ರತ್ಯಕ್ಷ ಪರೋಕ್ಷಾನುಮಾನ ಆಗಮಪ್ರಮಾಣನಿರ್ಣೀತಮಪ್ಪ ಫಲಸಿದ್ಧಿಯೊಳ್ ದೇಶಕಾಲಾನುಕೂಲ್ಯಮುಂಟಾಗೆ ಯಥಾಸಾಧ್ಯಮಪ್ಪಂತು ಉಪಾಯಸಾಧನ ವಿನಿಯೋಗಕ್ರಿಯಾದಿನೀತಿಃ ಅದರ್ಥಶಾಸ್ತ್ರಂಬಿಡಿದಾ (ನೀತಿ) ಶಾಸ್ತ್ರಂ ಕೌಟಲ್ಯಭಾಷ್ಯಮೆಂಬುದು| ತದಭ್ಯಾಸಾನ್ನರದೇವತ್ವಮಾಸಾದ್ಯತ ಎಂದು| ಶ್ರೀಮಾನೆಂದು ಬ್ರಹ್ಮತೇಜೋಯುಕ್ತಂ | ಅರ್ಥಶಾಸ್ತ್ರಮಹೋದಧಿ – ಅರ್ಥ್ಯಂ(ತೆ) ಇತ್ಯರ್ಥಾಃ – ಧರ್ಮಾರ್ಥಕಾಮಂಗಳ್ | ತತ್ಪ್ರತಿಪಾದಕಂ ಶಾಸ್ತ್ರಮರ್ಥಶಾಸ್ತ್ರಂ, ಪ್ರಾಜಾಪತ್ಯಂ – ತಥಾಚೋಕ್ತಂ ಕಾಮಸೂಕ್ತೇಽಸ್ಮದ್ಗುರುಣಾ ಪ್ರಜಾಪತಿನಾ | ಪ್ರಜಾಸ್ಸೃಷ್ಟ್ವಾ ತಾಸಾಂ ಸ್ಥಿತಿನಿಬಂಧನಂ ತ್ರಿವರ್ಗಸ್ಯ ಶಾಸನಂ ಆರ್ಯಾಯಾ(ಣಾ)ನಾಂ ಸಹಸ್ರೇಣ ಪ್ರೋವಾಚ| ತಸ್ಯೈಕದೇಶಂ ಸ್ವಯಂಭೂತಃ | ಸತು ಧರ್ಮಾಧಿಕಾರಿಕಂ ಪೃಥಕ್ಚಕಾರ | ಬೃಹಸ್ಪತಿರರ್ಥಾಧಿಕಾರಿಕಂ | ತದಪಿ ಲಕ್ಷಣಾರ್ಯಂ ಯಂ | ತೃತೀಯಂ ಶಾಂತೇನ ಕೌಟಲ್ಯಗ್ರಂಥವಿಸ್ತೃತಮಿತಿ ಸಂಭಾವ್ಯತೇ | ಏವಂಚ ಅರ್ಥಶಾಸ್ತ್ರವು ಗಾಂಭೀರ್ಯದಿಂ ಮಹಾಪ್ರಮಾಣತ್ವದಿಂ ಮಹೋದಧಿರಿವ, ತಸ್ಮಾದ್ಯ ಉದ್ದಧ್ರೇ–ಆಸಮುದ್ರ(ದಿ)ನಾವನುದ್ಧರಿಸಿದಂ, ಆ ವಿಷ್ಣುಗುಪ್ತಂಗೆ ನಮಃ| ವಿಷ್ಣುರುದಧೌಗುಪ್ತ| ಮನುಷ್ಯಾದಿನಃಚ್ಛಾದಿತನಾದದಱಿಂ ವಿಷ್ಣುವೂ ಮಹೋದಧಿಯತ್ತಣಿಂ ಅಮೃತಮನುದ್ಧರಿಸಿದಂ | ನೀತಿಕಲ್ಪನಾಶೇಷ ನಮಸ್ಕಾರಾನಂತರಂ ಮಹಾಕಾವ್ಯಸ್ವರೂಪಕ್ಕೆ ಸಂಬಂಧಾಭಿಧೇಯಪ್ರಯೋಜನಂಗಳಂ ಶ್ಲೋಕ

ದ್ವಯದಿಂ ಪೇಳ್ದಿಪಂ | ದರ್ಶನಾದಿತಿ – ತಸ್ಯಪರಮಗುರೋಃ ವಿಷ್ಣುಗುಪ್ತಸ್ಯ ದರ್ಶನಾತ್–ಜ್ಞಾನದೃಷ್ಟ್ಯಾ ಯದ್ದೃಷ್ಟಂ ತದೇವೋಪದೇಕ್ಷ್ಯಾಮಃ |

ತಥಾಚೋಕ್ತಂ— ಬ್ರಹ್ಮಾಧ್ಯಾಯಸಹಸ್ರಾಣಾಂ ಶತಂ ಚಾಣಕ್ಯ(ರು) ಉದ್ವಿಜಃ ||
ತನ್ನಾರದೇನ ಶುಕ್ರೇಣ ಗುರುಣಾ ಭಾರ್ಗವೇಣ ಚ ||
ಭಾರದ್ವಾಜ ವಿಶಾಲಾಕ್ಷ ಭೀಷ್ಮಪಾರಾಶರೈಸ್ತಥಾ ||
ಸಂಕ್ಷಿಪ್ತಂ ಮನುನಾ ಚೈವ ತಥಾಚಾನ್ಯೈರ್ಮಹರ್ಷಿಭಿಃ ||
ಪ್ರಜಾನಾಮಾಯುಷೋ ಹ್ರಾಸಂ ವಿಜ್ಞಾಯ ಚ ಮಹಾತ್ಮನಾ ||
ಸಂಕ್ಷಿಪ್ತಂ ವಿಷ್ಣುಗುಪ್ತೇನ ನೃಪಾಣಾಮರ್ಥಸಿದ್ಧಯೆ || ಇತಿ—

ಬ್ರಹ್ಮಾದಿಪ್ರಣೀತಸಂಗ್ರಹಮಪ್ಪುದಱಿನಸ್ಮತ್ಪ್ರಣೀತಪ್ರಬಂಧಮಪಿ ಪ್ರಮಾಣ(ಭೂತ)ಮೆಂದು ಭಾವಂ| ಸುದೃಶ ಇತಿ – ನಿರ್ಮಲಜ್ಞಾನಸ್ಯ ವಿದ್ಯಾನಾಂ ಪಾರದೃಶ್ವನ ಇತಿ | ಆನ್ವೀಕ್ಷಕೀತ್ರಯಿಯಾ ವಾರ್ತಾದಂಡನೀತಿಗಳ ಪಾರಮಂ ಕಂಡಾತಂ | ಅತಏವ ಸುದೃಕ್, ತಸ್ಯ– ಆತಂಗೆ ರಾಜವಿದ್ಯಾ ಪ್ರಿಯತಯಾ ರಾಜವಿದ್ಯೆಗಳಲ್ಲಿ ಪ್ರಿಯನಾಹತನದಿಂ ಯದುಪದೇಕ್ಷ್ಯಾಮಃ ಎಂದು ಸಂಬಂಧಂ | ರಾಜವಿದ್ಯೆಯೆಂಬುದು ಭೂಮಿಾಶ್ವರವ್ಯುತ್ಪಾದ್ಯ ರಕ್ಷಾದಿಗಳ್ ಜಗತ್ತಿಗೆ ಉಪಕಾರಮಪ್ಪುದಱಿಂ ಪುಣ್ಯಮಪ್ಪುದೆಂದು ಪ್ರಯೋಜನಂ. ಸಂಕ್ಷಿಪ್ತಗ್ರಂಥಮರ್ಥವತ್ಸಂಕ್ಷಿಪ್ತೋ ಗ್ರಂಥೋಯಸ್ಯಸಂಕ್ಷಿಪ್ತ ಗ್ರಂಥಂ | ಅರ್ಥಮಾದೊಡೆ ತಾವಾನೇವವಿದ್ಯತೆ ಅರ್ಥವಚನ ಸಾಮರ್ಥ್ಯದಿಂ ನೀತಿಸಾರವಿದೆ, ಉಪಾರ್ಜನಮಿತಿ | ಉಪಾರ್ಜನಂ ಲಾಭಃ | ಅದು ತ್ರಿವಿಧಂ | ಉಪಾರ್ಜನಂ–ಲಬ್ಧಪರಿಪಾಲನಂ ರಕ್ಷಿತವರ್ಧನಂ ಎಂದು | ಭೂಮೇರಿತಿ – ಭೂಮಿಾಶ್ವರನಂಕುಱಿತು ಯದುಪದೇಕ್ಷ್ಯಾಮಃ–ಸ್ವಲ್ಪೋಪದೇಶಮಂ ಕೊಟ್ಟಿವು–ರಾಜವಿದ್ಯಾವಿದಾಂ ಮತಂ–ಔಶಸನಾದ್ಯಭಿಮತಂ ! ವಿಷ್ಣುಗುಪ್ತ ಮತಮುಮನುಪುದೆಶಿಸಿವು | ಅನ್ಯಮತದತ್ತಣಿಂ ಭಿನ್ನವಿಷ್ಣುಗುಪ್ತಮತಂ– ತಥಾಚ– ಕೌಟಲ್ಯ ಭಾಷ್ಯೇ-ಉಪಧಾಶುದ್ಧಿಪ್ರಕರಣೇ ಅಧಾರ್ಮಿಕನೀ(ಶ)ತಂಗ ಕೊಂದು ಮತ್ತೊಂಬನಂ ಪ್ರತಿಪಾದಿಸುವ ಇತ್ಯಾದಿ. ಧರ್ಮೋಪಧಾ ಮ(ಅ)ರ್ಥೋಪಧಾಚ ಕಾಮೋಪಧಾಚ|"ಶೌಚಹೇತೋರಮಾತ್ಯಾನಾಂ ಕೃತ್ವಾಕಾರ್ಯೇ ಚತುರ್ವಿಧೇ || ಶೌಚಾಶೌಚಮಮಾತ್ಯಾನಾಂ ರಾಜಮಾರ್ಗೇ ತು ಮಂತ್ರಿಭಿ"ರಿತಿ–ಈ ಪ್ರಕಾರದಿಂ ವಿಷ್ಣುಗುಪ್ತದರ್ಶನಮಿತರಭಿನ್ನಂ—ಸೂತ್ರ–ರಾಜವೃತ್ತಮಿತಿ| ನ ಹ್ಯಸೂತ್ರಿತಮುಪದೇಕ್ಷ್ಯನ್ತಿ ವಿಷ್ಣುಗುಪ್ತ ಶಿಷ್ಯಾಃ|ಪ್ರಜಾರಂಜನದಿಂ [1]ರಾಜಾ; ತಸ್ಯ–ಆತನ| ವೃತ್ತ–ಮನುಷ್ಠಾನಂ ಉಪದಿಶ್ಯತೇ ಇತಿ ಸೂತ್ರಾರ್ಥಂ | ಸಂಬಂಧಮಾದೊಡೆ ಯಥಾಯೋಗ ಮಿತರಜನವೃತ್ತಮುಂ ಸಂಭಾವಿತಂ| ಆದೊಡಂ ಪ್ರಾಧಾನ್ಯದಿಂ ರಾಜವೃತ್ತಂ| ರಾಜಾಸ್ಯೇತಿ| ರಾಜಾ ವಿಜಿಗೀಷುರಸ್ಯ-ಜಗತಃ | ಚತುರ್ವರ್ಣಾಶ್ರಮಲಕ್ಷಣಮಪ್ಪ ಜಗತ್ತಿಗೆ, ಹೇತು–ಕಾರಣಂ| ವೃದ್ಧೇಃ–ಅಭ್ಯುದ(ಯ)ಕ್ಕೆ–ವಿದ್ಯಾವೃದ್ಧಿರಿತಿ ಸಂಮತಃ| ವಿದ್ಯಾಗ್ರಹಣದಿಂ ವಿದ್ಯೋ(ಕ್ತೋ)ಕ್ತಾನುಷ್ಠಾನದಿಂ ಗುರುಗಳ್ಗೆ ಹೃದ್ಯನಪ್ಪಂ| ನಯನಾನಂದಜನಕಃ| ಆನತ ನಯನಂಗಳ್ಗೆ ಸೌಮ್ಯತ್ವದಿಂ ದಾನಂದಮಂ ಪುಟ್ಟಿಪಂ | "ಶಶಾಂಕ ಇವ ತೋಯಧೇಃ" ಸಮುದ್ರಕ್ಕೆ ಚಂದ್ರನೋಪಾದಿಯಲ್ಲಿ–

(1) ರಾಜಾ ಪ್ರಕೃತಿರಂಜನಾತ್ [ರಘು – ಸ. ೧]

ಪ್ರಜೆಗೆ ಅರಸು ನಯನಾನಂದಹೇತು ಜಗದ್ವರ್ಧಕನೆಂದು ಭಾವಂ || ನೃಪತಿಗೆ ಅನ್ವಯದಿಂ ಜಗದ್ಧೇತುತ್ವಮಂ ನಿರೂಪಿಸಿ ವ್ಯತಿರೇಕದಿಂ ಪೇಳ್ವಪಂ | ಯದಿ ನಸ್ಯಾದಿತಿ | ನರಪತಿಯಿಲ್ಲದೊಡೆ ಪ್ರಜೆ ವಿಪ್ಲುತಮಪ್ಪುದೆಂದು ಸಂಬಂಧಂ |–ಸಮ್ಯಜ್ನೇತ್ರೇ ಹಿ ಸಂಪೃಚ್ಛ್ಯಾ ಪ್ರೋಕ್ತಸ್ಥಿತಿಯಿಂ ನೇತಾ – ನಾಯಕಃ, ನ್ಯಾಯಮಾರ್ಗದಿಂ ಪ್ರಜಾಂ ನಯತಿ | ಕರ್ಣಧಾರೋ ನಾವಮಿವ | ತತಃ ಪ್ರಜೇತಿ | ತದನಂತರಮೆ ಪ್ರಜೆ | ಚತುರ್ವರ್ಣಾಶ್ರಮಲೋಕಃ | ಅಕರ್ಣಧಾರೇತಿ | ಗಜಕ್ಕೆ ಅಂಕುಶದಂತೆ, ಕರ್ಣಂ – ನಾವೆಗೆ ನಿಯಾಮಕಕಾಷ್ಠವಿಶೇಷಮೆಂದು ಲೋಕಪ್ರಸಿದ್ಧಿ | ಅದಂ ಧರಿಪವಂ – ಕರ್ಣಧಾರಂ, ಆತನಿಲ್ಲದ ನಾವೆಯಂತೆ, ವಿಪ್ಲವತೆ – ವಿನಾಶಮನೆಯ್ದುಗುಂ| ಸನ್ನಾಯಕನಲ್ಲಿ – ರಾಜನ್ಯ– ಪ್ರಿಯಪ್ರಜೆಯಿಂದ – ಉತ್ಕಂಠೆಮಾಡಲ್ಪಡುಕ್ಕುದು. ಧಾರ್ಮಿಕಮಿತಿ– ಧರ್ಮಮೆಂಬುದು ಅರಸಿಗೆ ನೀತಿಶಾಸ್ತ್ರೋಕ್ತಮೆ |—ಅದೆಂತೆಂದೊಡೆ :—

"ರಾಜ್ಯಂ ಹಿ ವ್ರ(ತ)ಮುತ್ಥಾನಂ – ಯಜ್ಞಕಾರ್ಯಾನುಶಾಸನಂ ||
ದಕ್ಷಿಣಾಂ ವೃತ್ತಿಸಾಮ್ಯಂಚ – ದೀಕ್ಷಾ ತಸ್ಯಾಭಿಷೇಚನಂ ||"

ಗೃಹಸ್ಥಸಾಮಾನ್ಯಸ್ತು :— ಸರ್ವೇಷಾಂ ಅಹಿಂಸಾ ಸತ್ಯಂ ಶೌಚಮನಸೂಯಾನೃಶಂಸ್ಯಕ್ಷಮಾದೇವತಾತಿಥಿಪೂಜಾ ಭೂತೇಷುತ್ಯಾಗಃ– ಶೇಷಭಾಷಣಂ (ಭೋಜನಂ) ಚೇತ್ಯಾದಿಕಂ ಅದರಿಂ ಚರಿಸುವಾತಂ ಧಾರ್ಮಿಕಂ | ತಂ–ಪಾಲನಪರಂ, ಪ್ರಜಾಪಾಲನ ತತ್ಪರಂ ||—

ತಥಾಚೋಕ್ತಮಸ್ಮದ್ಗುರುಣಾ : —
'' ಪ್ರಜಾಸುಖೇ ಸುಖಂ ರಾಜ್ಞಃ ಪ್ರಜಾನಾಂ ಚ ಹಿತೇ ಹಿತಂ ||
ನಾತ್ಮಪ್ರಿಯಂ ಹಿತಂ ರಾಜ್ಞಃ ಪ್ರಜಾನಾಂ ಹಿ ಪ್ರಿಯಂ ಹಿತಂ ||''

ಸಮ್ಯಕ್ಪರಪುರಂಜಯಂ–ಯಥೋಕ್ತನೀತ್ಯನುಷ್ಠಾನದಿಂ ಪರರ ದುರ್ಗಂಗಳಂ ಘ(ತಿ)ಳಿಯಿಸುವಾತಂ ಪರಪುರಂಜಯಂ ! ಮಹಾಜಿಗೀಷು ಆತನನರಸೆಂದು ನಿಶ್ಚಯಿಪರ್ | ಪ್ರಜಾಪತಿಮಿವ ಸೃಷ್ಟಿಕರ್ತಾರಂ–ಯಥೋತ್ಪತ್ತಿಸ್ಥಿತಿಕಾರಣಂ–ಚತುರ್ವರ್ಣಾಶ್ರಮಂಗಳ್ ಪ್ರಜೆ| ನರಪತಿಯಿಲ್ಲದೊಡೆ ಪ್ರಜಾವಿಪ್ಲವದೊಳ್ ಯುಕ್ತಿಯಂ ಪೇಳ್ದಪಂ | ಆಯತ್ತಮಿತಿ–ಸ್ವಾಧೀನಂ | ರಕ್ಷಣಂ–ಕಂಟಕದತ್ತಣಿಂ ಪರಿತ್ರಾಣಂ | ರಾಜ್ಞಾದಂಡಧಾರಸ್ಯ ವಿಜಿಗೀಷೋ ರ್ವಾರ್ತೇತಿ | ವೃತ್ತಿಯೆ ವಾರ್ತೆ| ಪ್ರಜೆಗಳ್ಗೆ'ಕೃಷಿ ಪಾಶುಪಾಲ್ಯಂ ವಾಣಿಜ್ಯಂ ಚ ವಾರ್ತೇ'ತಿ ವಚನಾತ್| ಆ ವಾರ್ತೆಯು ರಕ್ಷಣಮನಾಶ್ರಯಿಸಿತು| ವಾರ್ತಾಚ್ಛೇದೇನ–ವಾರ್ತಾನಾಶದಿಂ| ಲೋಕೋSಯಂ–ಈ ಜಗತ್ತು | ಕೆಲವು ಕಾಲ ಬದುಕಿದರೂ ಬದುಕದು | ಇದು ತಾತ್ಪರ್ಯಂ–ನೃಪಾಭಾವದಿಂ ರಕ್ಷಣಾಭಾವಂ | ತದಭಾವದಿಂ ವಾರ್ತಾಭಾವಂ, ವಾರ್ತಾಭಾವದಿಂದ ಈ ಲೋಕಕ್ಕೆ ಅಭಾವ | ಜಗದ್ರಕ್ಷಣಾರ್ಥಂ ದಂಡಧಾರನಪ್ಪ ನೃಪನಿಂ ಭಾವ್ಯಂ | ಈ ಅರ್ಥಮನೆ ದೃಢಮಾಗಿ ಪೇಳ್ದಪಂ| ಪರ್ಜನ್ಯ ಇತಿ| ಪ್ರಾವೃಟ್ಕಾಲಂ ಆದಾವಪ್ರಕಾರ ಸಸ್ಯಾದ್ಯುದಕಪ್ರದಾನದಿಂ ಭೂತಂಗಳ್ಗೆಲ್ಲಾ ಜೀವನಹೇತುತ್ವದಿಮಾಧಾರಂ|| ಹಾಗೆ ದಂಡನಾಥ ಪೃಥ್ವೀಪತಿ ಲೋಕಾಧಾರಂ| ಪರ್ಜನ್ಯವೈಕಲ್ಯಮಾದೊಡಂ ವರ್ಷಾಕಾಲಂ ನಿವೃತ್ತಮಾದೊಡಂ ಜೀವನಮುಂಟು. ಕಂದಮೂಲಫಲಾಹಾರಾದಿಗಳಿಂ. ಶ್ರೂಯತೇ ಹಿ ದ್ವಾದಶವಾರ್ಷಿಕಮಾದ ಅನಾವೃಷ್ಟಿಯೊಳ್ ವನ್ಯಾಹಾರದಿಂ ಪ್ರಾಣಧಾರಣಮುಂ ಮಾಡಲ್ಪಟ್ಟುದೆಂಬು, ಭೂಮಿಪಾಲಕವೈಕಲ್ಯಮಾದೊಡೆ ದಂಡಧರಾಭಾವದಿಂ

"ಮಾತ್ಸ್ಯನ್ಯಾಯ" ದಿಂದ ಜೀವನಂ ಕೂಡದು. ಪ್ರಜಾಪಾರ್ಥಿವರ್ಗೆ ಪರಸ್ಪರೋಪಕಾರಮಂ ಪೇೞ್ದಪಂ | ಪ್ರಜಾಸಂರಕ್ಷಣೇತಿ| ಚತುರ್ವರ್ಣಾತ್ಮಕಮಾದ ಪ್ರಜೆಯಂ ಚೆಂನಾಗಿ ಪಾಲಿಸುತ್ತಿರ್ದ್ದಾನು| ದಂಡ್ಯ ದಂಡನದಿಂ ಸಾ ಪ್ರಜಾ ವರ್ಧಯತಿ| ಧಾನ್ಯಹಿರಣ್ಯಸಾಮಗ್ರ್ಯಾದಿಗಳಿಂ ಭೂಪಾಲಕನನಭಿವೃದ್ಧನಂಮಾೞ್ಪುದು, ವರ್ದ್ಧನದಿಂ ಸಂರಕ್ಷಣಂ ಕಂಡಿತದ(ರ)ತ್ತಣಿಂ ಪಾಲನಂ ಶ್ರೇಯಸ್ಕರಂ| ತನ್ನಾಶಮಾಗೆ ರಕ್ಷಣಮಿಲ್ಲದುದಱಿಂ ವರ್ಧನಮುಂಟಾದೊಡೆಯುಂ ಅಸತ್-ಅಶೋಭನಂ-ನರಕಹೇತುತ್ವಾತ್ | ಆವುದೊಂದುಯಿಾತಂಗೆ ಪ್ರಯಾಸದಿಂ ವರ್ಧನಂ ಮಾಡಲ್ಪಡುಗುಂ | ಪ್ರಜೆಯತ್ತಣಿಂ | ಅದಱಿಂ ಪರಿಶುದ್ಧಂ | ಪ್ರಮುಷ್ಟಕಿಲ್ಮಿಷಂ | ಪ್ರಜಾರಕ್ಷಕಂ ನೃಪನೆಂದು ಪೇೞಲ್ಪಟ್ಟುದು- ಆತನಾವ ಅನುಷ್ಠಾನದಿಂ ಪ್ರಜಾಪಾಲನಕ್ಷನುನಪ್ಪಂ | ಅದತೋೞ(ರಿ) ದಪಂ | ನ್ಯಾಯಪ್ರವೃತ್ತ ಇತಿ- ನೀತಿಶಾಸ್ತ್ರೋಕ್ತಾನುಷ್ಠಾನಂ ನ್ಯಾಯಂ ಅಲ್ಲಿ ಪ್ರವೃತ್ತಂ – ನ್ಯಾಯಪ್ರವೃತ್ತಂ| ನೃಪತಿ-ಮಹೀಪತಿ, ತನ್ನಂ ತ್ರಿವರ್ಗದಿಂ ಧರ್ಮಾರ್ಥಕಾಮಲಕ್ಷಣದಿಂ ಉಪಸಂಧತ್ತೆ-ಯೋಜಿಪಂ | ಅನಂತರಂ ಪ್ರಜೆಗಳಂ ತ್ರಿವರ್ಗದಿಂ ಯೋಜಿಪನೆಂದು ಸಮುಚ್ಚಯಂ | ತಥಾಚೋಕ್ತಂ ಕೌಟಲ್ಯೇನ—

ಸುವಿಜ್ಞಾತಪ್ರಣೀತದಂಡಂ ಪ್ರಜೆಗಳಂ ಧರ್ಮಾರ್ಥಕಾಮಂಗಳೊಡನೆ ಯೋಜಿಸುತುಂ, ಕಾಮಕ್ರೋಧಂಗಳಿನಜ್ಞಾನದಿ ನಾದೊಡಂ ಪ್ರಯುಕ್ತಮಾದ ದಂಡಂ ವಾನಪ್ರಸ್ಥಪರಿವ್ರಾಜಕರನಾದೊಡಂ ಕುಪಿತರಂ ಮಾೞ್ಕುಂ | ಗೃಹಸ್ಥರಾದೊಡೆ ಪೇೞ್ವುದೇಂ | ಅದಱಿಂ ಸಮ್ಯಗ್ದಂಡಪ್ರಣಯನಮೆ ರಾಜನ್ಯಾಯಂ, "ನಿಹನ್ತಿ ಧ್ರುವಮನ್ಯಥಾ" ಇತಿ- ಅನ್ಯಾಯಪ್ರವೃತ್ತನಾದೊಡೆ ನಿಶ್ಚಯಮಾಗಿ ತನ್ನಂ ಕಿಡಿಸಿ ಅನಂತರದೊಳು ಯಿಾತನ ಅನ್ಯಾಯದಿಂ ಪ್ರಜೆ ಕಿಡುಗುಂ | ಅದು ಕಾರಣಂ ಭೂಪತಿ ನ್ಯಾಯಪ್ರವೃತ್ತನಾಗಲೆ ವೇೞ್ಕುಂ| ಇದಕ್ಕೆ(ನೆ)ದೃಷ್ಟಾಂತಮಾದ ಕಥೆಗಳ(ಳಿ)ಂ ತೋಱಿದಪಂ | ಧರ್ಮಾದಿತಿ – ಶಾಸ್ತ್ರೋಕ್ತಮಾದ ಧರ್ಮದತ್ತಣಿಂ | ದ್ವಿಜಾವನಃ, ರಾಜಾ-ನೃಪಃ-ರಾಜಾನ್ವಯೋಽಪಿ | ಕ್ಷತ್ರಿಯನ್ನಪಂ | ಅನೇಕಕಾಲ ಭೂಮಿಯನಾಳ್ದಂ | ಇಲ್ಲಿ ಕಥಾ | ಸಾಗರಾನ್ವಯದೊಳ್ ಇಂದ್ರಸೇನನೆಂಬರಸು ರಜಸ್ವಲಾಸಂಗತನೆಂದು ರಾಕ್ಷಸಾಕ್ರಾನ್ತನಾಗಿ ರಾಕ್ಷಸನಿಂ ಪೇೞಲ್ಪಟ್ಟಂ, ಎಲೆ ಅರಸೇ ನೀನು ಅಧರ್ಮದಿಂ ಪ್ರಜೆಯಂ ಯೋಜಿಸಿದೆ | ಆದೊಡೆ ನಿನ್ನಂ ತಾನು ಭಕ್ಷಿಸೆನೆಂದು| ಅರಸು ಪ್ರಾಣಭಯದಿಂದ ಹಾಗೆ ಮಾಡಿದಂ| ಅಧರ್ಮದಿಂ ಶೀಘ್ರಮಾಗಿ ನಷ್ಟಮಾದಂ. | ತದನಂತರಂ ತದ್ವಂಶದವರ್ ರಾಕ್ಷಸವಚನದಿಂ ಅಧರ್ಮಪ್ರವೃತ್ತರಾಗಿ ಶೀಘ್ರಮಾಗಿ ನಾಶಮನೆಯ್ದುವರ್. ಅನಂತರದೊಳ್ ಆ ಸಂತತಿಯೊಳೆ ವೈಜವನನೆಂಬವಂ ಪುಟ್ಟಿದಂ | ಆತನಿಂ ರಾಕ್ಷಸವಚನಮನುಪೇಕ್ಷಿಸಿ ಭಯಮಂ ಬಿಟ್ಟು ಸಮಸ್ತಪ್ರಜೆಯುಂ ಧರ್ಮದೊಡನೆ ಯೋಜಿಸಲ್ಪಟ್ಟುದು. ತಾನುಂ ಧರ್ಮರತನಾದಂ. ಶಾಸ್ತ್ರವಿಹಿತಾನುಷ್ಠಾನದಿಂ ವೈಜವನಂ ಚಿರಕಾಲ ರಾಜ್ಯಮನಾಳಿದನೆಂಬುದಱಿಂ ನ್ಯಾಯಪ್ರವೃತ್ತಿಗೆ ಫಲಂ ತೋಱಲ್ಪಟ್ಟುದು— "ಅಧರ್ಮಾಚ್ಚೈವ ನಹುಷಃ" ಇತಿ-ನಹುಷನೆಂಬವಂ ಇಂದ್ರಪದಸ್ಥನಾದೊಡಂ ಶಚಿಯನಪೇಕ್ಷಿಸಿ ಯಾನವಾಹಕನಾದ ಅಗಸ್ತ್ಯನಿಂ ಶಪ್ತನಾಗಿ ಸರ್ಪನಾಗಿ ಶರೀರಸಹಿತ ರಸಾತಲ ನರಕಮನೆಯ್ದಿದಂ | ಈ ಪ್ರಕಾರದಿಂ ಧರ್ಮಾಧರ್ಮಂಗಳ್ಗೆ ಫಲಮಂ ತೋರಿಸಿ ಅನುಷ್ಠೇಯಪಕ್ಷಮಂ ತೋಱಿದಪಂ ಯಸ್ಮಾದಿತಿ – ಯಸ್ಮಾತ್ ವೈಜವನಂ ಭೂಮಿಪನನೇಕಕಾಲ ಆಳ್ದಂ | ನಹುಷಂ ರಸಾತಲಮನೆಯ್ದಿದಂ | ಅದಱಿಂ ನ್ಯಾಯ್ಯ ಧರ್ಮಾಧರ್ಮಮಂ ಪುರಸ್ಕರಿಸಿ ಪ್ರಧಾನಮಾಗಿ ಪ್ರಯತ್ನಮಂ ಮಾಡಬೇಕು | "ಅರ್ಥಾಯ ಭೂಮಾನ್ಯ" ಹ್ಯರ್ಥನಿಮಿತ್ತ ಭೂಪತಿಃ

ವಿಜಿಗೀಷುಃ | ಅದೆಂತು ಧರ್ಮೇಣ 'ಧರ್ಮೇಣ ವರ್ಧತೇ ರಾಜ್ಯಂ' ಇತಿ ಪುರಸ್ಸರಮಾದ ಧರ್ಮದಿಂದ ಉಪಾರ್ಜಿತಮಾದ ರಾಜ್ಯಮಭಿವರ್ಧಿಕುಂ. ರಾಜ್ಯೋಪಾರ್ಜನೆಯಿಂದೇನು ಫಲಮೆಂತೆಂದೊಡೆ ಆ ರಾಜ್ಯಕ್ಕೆ ಸ್ವಾದು ಫಲಂ ವಿಭೂತಿ | ಸತ್ಪಾತ್ರಪ್ರತಿಪಾದನದಿಂ ಧರ್ಮದಿಂ ರಾಜ್ಯಾಭಿವೃದ್ಧಿ ಪೇೞಲ್ಪಟ್ಟುದು | ಆ ರಾಜ್ಯಸ್ವರೂಪಮಂ ಪೇೞ್ದಪಂ–"ಸ್ವಾಮ್ಯಮಾತ್ಯಶ್ಚೇ"ತಿ ಸ್ವಾಮಿನೇತೃ, ಅಂಗಮಾದ ಅಮಾತ್ಯಾದಿಗಳ್ಗೆ ಈಶ್ವರಂ ಪ್ರಾಣಭೂತಂ, ಅಮಾ – ಅಮಾಶಬ್ದಂ ಸಹಾರ್ಥಂ, ಅಮಾ ಅರಸಿನೊಡನೆ ಸರ್ವಕಾರ್ಯೇಷು ಚರತಿ ಎಂದು ಅಮಾತ್ಯಂ| ರಾಷ್ಟ್ರಂ-ಜನಪದಂ| ದುಃಖೇನ ಗಮ್ಯತೇ ಇತಿ ದುರ್ಗಂ, ಪರ್ವತಾದಿ | ಕುಶ್ಯತೇ ಅರ್ಥಿಭಿರಾಹೂಯತ ಇತಿ ಕೋಶಂ| ಹಿರಣ್ಯಾದಿ| ಬಲಂ – ಹಸ್ತ್ಯಶ್ವರಥಪದಾತಿಸ್ವರೂಪಂ ಚತುರಂಗಂ| ಸುಹೃತ್ ಮಿತ್ರಂ| ಏತಾವದಿತಿ-ಇದು ಸಪ್ತಾಂಗಂರಾಜ್ಯಮಿತಿ ರಾಜ್ಞಃ ಅರಸಿನ ಭಾವಂ ರಾಜ್ಯಂ| ಅಮಾತ್ಯಾದಿ(ಗುಣಾ)ಗಳಿಂದರಾಜತ್ವಮಹುದು ಸತ್ವಮಿತಿ-ವ್ಯಸನೇಚಾಭ್ಯುದಯೇ ಚ ಶುಶ್ರೂಷಾದ್ಯಷ್ಟದಿಂ ಶುಭಾಪ್ರಜ್ಞಾ ಸತ್ವಮೆಂಬುದು ಪ್ರಾರಬ್ಧನಿರ್ವಾಹಕತ್ವಂ, ಸತ್ವಂ ಚ ಪ್ರಜ್ಞಾ ಚ | ಈ ಸತ್ವಪ್ರಜೆಗಳಿಗೆ ರಾಜ್ಯಕ್ಕೆ ಬಲವಂತಮಾದ ಅವಲಂಬಂ ಧರ್ಮಮಂ ಪುರಸ್ಕರಿಸಿ ಅರ್ಥೋಪಪತ್ತಿ | ತಚ್ಚ ಕಥಂ | ಆಲಭ್ಯ ಅವಷ್ಟಭ್ಯ – ಬಲವತ್ತಾದ ಸತ್ವಮನಾಶ್ರಯಿಸಿ |

ತಥಾಚ ಸುಭಾಷಿತಂ—

ಪ್ರಾರಭ್ಯತೇ [ನ ಖಲು] ವಿಘ್ನಭಯೇನ ನೀಚೈಃ |
ಪ್ರಾರಭ್ಯ ವಿಘ್ನನಿಹತಾ ವಿರಮನ್ತಿ ಮಧ್ಯಾಃ ||
ವಿಘ್ನೈಃ ಪುನಃಪುನರಪಿ ಪ್ರತಿಹನ್ಯಮಾನಾ |
ಪ್ರಾರಬ್ಧಮುತ್ತಮಗುಣಾ ನ ಪರಿತ್ಯಜನ್ತಿ ||

ಅದಱಿಂ ಸತ್ವಂ ಬಲವನ್ನು ಬುದ್ಧಿಯಿಂದಷ್ಟಗುಣಪ್ರಜ್ಞೆ | ಸಪ್ತಾಂಗಾಭ್ಯನ್ತರೋಕ್ತಮಪ್ಪ ರಾಜ್ಯಕ್ಕೆ ಲಾಭಾರ್ಥಮಾಗಿ ಯತೇತ – ಯತ್ನಮಂ ಮಾೞ್ಪುದು | ಸತತೋತ್ಥಿತ ಇತಿ | ನಿರಂತರೋದ್ಯುಕ್ತಂ | ಅರಸಿಗೆ ರಾಜ್ಯಲಾಭದತ್ತಣಿಂ ಗಮ್ಯಮಾದ ಲಾಭಮಿಲ್ಲ, ಎಲ್ಲೆ ಸ್ವಾಮಿಯೇ ಲಾಭಾರ್ಥಮಾಗಿ ಯತ್ನಮಂ ಮಾಡಿದೊಡೆ ಸಪ್ತಾಂಗತ್ವಂ ಕೂಡದು | ಕರ್ತೃವಿಗೆ ಕಾರ್ಯಂಗಳೊಳ್ ಅಂತರ್ಭಾವಮೆಲ್ಲಿಯುಂ ಕಾಣಲ್ಪಟ್ಟುದಿಲ್ಲ | ಸ್ವಾಮಿ ವ್ಯತಿರಿಕ್ತಮಾಗಿ ಕರ್ತೃತ್ವಮುಂ ವಿರುದ್ಧಮೆಂದೊಡೆಯಿಲ್ಲಿ ವಿರುದ್ಧಮಿಲ್ಲ | ಸ್ವಾಮಿಗೆ ಎರಡು ಅವಸ್ಥೆ ಕುಮಾರತ್ವಂ ಆತ್ಮಸಂಪನ್ನತೆ ಎಂದು | ಪ್ರಥಮದೊಳ್ ಆತ್ಮಲಾಭಾರ್ಥಯತ್ನಂ | ತದನಂತರಂ ಅಮಾತ್ಯಾದಿ ಪ್ರಕೃತಿಲಾಭಾರ್ಥಮೆಂದು ನ್ಯಾಯೇನೇತಿ – ಶಾಸ್ತ್ರೋಕ್ತನ್ಯಾಯದಿನಾರ್ಜನಂ | ಅರ್ಥಸ್ಯ ಭೂಮ್ಯಾದಿಗೆ | ಪಾಲನಂ – ವರ್ಧನಂ | ಲಬ್ಧಕ್ಕೆ ಉಪಚಯಂ| ಆ ಪ್ರಕಾರದಲ್ಲಿಯೆ ಸತ್ಪಾತ್ರ ಪ್ರತಿಪತ್ತಿಯೆಂದು | ಪಾತ್ರಂಗಳುಂ ತ್ರಿವಿಧಂ | ಧರ್ಮಪಾತ್ರಾಣಿ, ಅರ್ಥಪಾತ್ರಾಣಿ, ಕಾಮಪಾತ್ರಾಣಿ ಇತಿ | ಧರ್ಮಪಾತ್ರಂಗಳುಂ ಸದನುಷ್ಠಾನಮಂ ಮಾೞ್ಪ ಬ್ರಾಹ್ಮಣರುಂ ತಪಸ್ವಿಗಳುಂ | ಅರ್ಥಪಾತ್ರಂಗಳುಂ ಮಂತ್ರಿಪುರೋಹಿತಾದಿಗಳ್ | ವಾರ್ತಾಕರ್ತೃಗಳುಂ ಕಾಮಪಾತ್ರಂಗಳುಂ, ಕಾಮನೀಯಮಾದ ಸ್ತ್ರೀಯರುಂ ಅವರಲ್ಲಿ ಪ್ರತಿಪಾದನಮೆ ರಾಜವೃತ್ತಂ | ವಿಜಿಗೀಷ್ವನುಷ್ಠಾನಂ ಚತುರ್ವಿಧಮಾದೊಡಂ ರಾಜವೃತ್ತಂಗಳ್ ನ್ಯಾಯಮರ್ಥಾರ್ಜನಾಖ್ಯಮನುಷ್ಠಾನಮಭಿಧಾತುಮಾಹ | ನಯವಿಕ್ರಮೇತಿ | ನಯಂ ನೀತಿಶಾಸ್ತ್ರಪರಿಜ್ಞಾನಂ | ವಿಕ್ರಮಂ ಶೌರ್ಯಂ

ಅವೆರಡರಿಂ ಸಂಪನ್ನಂ| ವಿಕ್ರಮಮುಂಟಾದೊಡಂ ನಯಹೀನಂ ಶೋಭಿಸಂ| ನಯಮುಂಟಾದೊಡಂ ವಿಕ್ರಮಹೀನಂ ಪರರಿಂ ತಿರಸ್ಕರಿಸಲ್ಪಡುಗುಂ | ಅದಱಿಂ ನಯವಿಕ್ರಮಸಂಪನ್ನನಾಗಲೆವೇಳ್ಕುಂ. ಸೂತ್ಥಾನ ಇತಿ – ಶೋಭನಮಾದ, ಉತ್ಥಾನಂ - ಉದ್ಯೋಗಃ ಯಸ್ಯ ಉದ್ಯೋಗಕ್ಕೆ ಶೋಭನತ್ವಮುಂ – ಪ್ರಾರಂಭೋಪಾಯ ಪುರುಷದ್ರವ್ಯಸಂಪತ್ತಿಯುಂ ತತ್ಪ್ರತೀಕಾರಾನುಕೂಲ ದೇಶಕಾಲಾದಿನಿರ್ಣಯದುದ್ಯೋಗಂಮಾಡಲ್ತಕ್ಕುದು. ಚಿಂತಯೇತ್ರ್ಪಿಯಮಿತಿ ಹೀಗೆಹೇತುಕಾರಣಸಪ್ತಾಂಗ ರಾಜ್ಯಂ, ಆರಾಜ್ಯೋಪಾರ್ಜನೆಗೆ ಚಿಂತೆ ಮಾಡಲ್ತಕ್ಕುದೆಂಬುದರ್ಥಂ–ನಯಸ್ಯವಿನಯೋಮೂಲಕಮಿತಿ | ಆ ಶಾಸ್ತ್ರಪರಿಜ್ಞಾನಕ್ಕೆ ವಿನಯಃ ಸ್ವಾಭಾವಿಕೇಂದ್ರಿಯಜಯಂ | ಮೂಲಕಾರಣಂ | ಸ್ವಾಭಾವಿಕೇಂದ್ರಿಯಜಯಹೀನನಿಂ ಶಾಸ್ತ್ರಂ ತಿಳಿಯಲು ಶಕ್ಯಮಲ್ಲ ವಿಷಯಾಕ್ಷಿಪ್ತಚಿತ್ತನಪ್ಪುದಱಿಂ — ಇಲ್ಲಿ ದ್ವಿತೀಯವಿನಯಶಬ್ದಂ | ಶಾಸ್ತ್ರನಿಶ್ಚಯಪರಂ | ಅದೆ ನಯಕ್ಕೆ ಸ್ವಾಭಾವಿಕೇಂದ್ರಿಯ ಜಯಕ್ಕೆಕಾರಣಂ| ಅದು ಕಾರಣದಿ ವಿನಯಶಬ್ದಂ ಆವರ್ತದೊಳ್ ವರ್ತಿಕುಮೆಂದು ಸಂಶಯಮಾಗೆ ತದಪನೋದನಾರ್ಥಂ ಪೇಳ್ದಪಂ | ವಿನಯೋ ಹೀತಿ | ಆವುದಾನೊಂದು ಕಾರಣದಿ ವಿನಯವೊಂದೆ ಗ್ರಹಿಸಲ್ಪಟ್ಟುದು | ಇಂದ್ರಿಯ ಜಯಪ್ರಕರಣಮಪ್ಪುದಱಿಂ ಇಂದ್ರಿಯಜಯಪ್ರಕರಣಮೆ ವ್ಯಾಖ್ಯಾನಪ್ರಸ್ತುತಮಾದುದೆಂದು ವಿನಯಶಬ್ದಕ್ಕೆ ಇಂದ್ರಿಯ ಜಯಮೆ ಯುಕ್ತಂ| ಶಾಸ್ತ್ರಮಿತಿ| ಪ್ರಕೃತತ್ವಾನ್ನೀತಿಶಾಸ್ತ್ರಂ ಋಚ್ಛತಿಯೆಯ್ದುತಿದ್ದಾನು| ತನ್ನಿಷ್ಠಸ್ಯ ಹೀತಿ| ಇಂದ್ರಿಯ ಜಯ ತತ್ಪರಂಗೆ ಶಾಸ್ತ್ರಾರ್ಥಾಃ—ದುರವಬೋಧ ಶಾಸ್ತ್ರಾವಬೋಧಂಗಳುಂ| ಪ್ರಸೀದಂತಿ| ಆಗಮತ್ವೇನ ನಿರ್ಮಲಂಗಳಪ್ಪುವು | ಶ್ರೀಯುತ ಇತಿ–ತದನಂತರ ಸಂಪತ್ತುಗಳು ಪ್ರಸನ್ನಮಪ್ಪುವು| ಪ್ರಯೋಗ ಸ್ವಾತಂತ್ರ್ಯದಿಂ ಸಪ್ತಾಂಗ ಲಾಭಾರ್ಥಯತ್ನ ಮಾಡಲ್ತಕ್ಕುದೆಂದು ಪೇಳಲ್ಪಟ್ಟುದು | ಅಲ್ಲಿ ಆದ್ಯಾಂಗ ಆತ್ಮವಾನ್ಸಂಯತಃ | ಆದುದಱಿಂ ಸ್ವಾಮಿಯಪ್ಪಂ ಆ ಆತ್ಮಮನೆ ಹೊರತಾದೊಡೆ ಸ್ವಾಮ್ಯಭಾವದಿಂ ನಿರಾತ್ಮಕಶರೀರ ಸಮಾನತ್ವಮುಂ| ಸಂಪತ್ತಿಗೆ ಶ್ಲೋಕದ್ವಯದಿಂತೋಱುದಪಂ| ಶಾಸ್ತ್ರಮಿತಿ ಇದೇ ನೀತಿಪ್ರತಿಪಾದಕಂ | ಪ್ರಜ್ಞೇತಿ – ಅಷ್ಟಗುಣಮನುಳ್ಳ ಬುದ್ಧಿ | ಧೃತಿರಿತಿ| ಸಂತುಷ್ಟಚಿತ್ತನಪ್ಪುದಱಿಂ ನಿರಂತರಂ ವಿಷಾದಚಿಂತಾರಹಿತತೆ | ದಾಕ್ಷ್ಯಮಿತಿ – ದಕ್ಷಂ–ಕುಶಲಂ| ಪ್ರಾಗಲ್ಭ್ಯಮಿತಿ ಪ್ರಗಲ್ಭಃ ಅಪರಿಷದ್ಭಿರುಧಾಯಿಷ್ಣುತಾಅವಿಸ್ಮರಣಶೀಲತೆ| ಉತ್ಸಾಹಮೆಂದು ಶೌರ್ಯಸಾಮರ್ಥ್ಯದಾಕ್ಷ್ಯಂಗಳ್ ಉತ್ಸಾಹಗುಣಂಗಳೆಂದು ಕೌಟಿಲ್ಯಂ | ವಾಗ್ಮೀತಿ– ಪ್ರಶಸ್ತವಾಕ್ಕು–ಪ್ರಾಶಸ್ತ್ಯಮುಂ–ವಾಕ್ಕೌಶಲಂ | ದಾರ್ಢ್ಯಮಿತಿ ಪರಿಗ್ರಹೀತತಾ ಪರಿತ್ಯಾಗಃ | ಆಪತ್ಕ್ಲೇಶಸಹಿಷ್ಣುತೇತಿ | ಆಪತ್ತುಗಳ್ಗಂ ಆಪತ್ಸಂಪನ್ನಮಾದ ಕ್ಲೇಶಂಗಳ್ಗಂ ಕ್ಷುಧಾದಿಕೃತಂಗಳ್ಗೆ ಸಹಿಷ್ಣುತ್ವಂ | ಪ್ರಭಾವಃ| ಶುಚಿತೇತಿ–ದ್ವಿತೀಯ ಶ್ಲೋಕವ್ಯಾಖ್ಯಾನಂ ಪ್ರಭಾವ ಇತಿ-ಪುಣ್ಯೋಪರಮಾಣುಘಟಿತ ಶರೀರನಪ್ಪುದಱಿಂ ಕೋಶದಂಡನಾದೊಡಂ ತದ್ವಂತನೋಪಾದಿ ಕಾಣಲ್ಪಡುಗುಂ | ಸಮಾಹಿತಂಗಳೊಡಗೂಡುವಂ| ವಿಪತ್ತುಗಳಿಂ ತಿರಸ್ಕೃತನಾಗಂ. ಆವ ಗುಣದಿಂದವು ಪ್ರಭಾವಶುಚಿತೇತಿ ಸ್ವಚಿತ್ತದೊಳ್ ಪರಸ್ತ್ರೀದ್ರವ್ಯ ಹಿಂಸಾರಾಹಿತ್ಯಂ | ಮೈತ್ರೀ ಸರ್ವಸತ್ವಂಗಳೊಳ್ ಮಿತ್ರತ್ವಂ | ತ್ಯಾಗಮೆಂಬುದರ್ಥಂಗಳ್ಗೆ ಸತ್ಪಾತ್ರಪ್ರತಿಪಾದನಂ | ಅಸತ್ಯಮೆಂದು ಮೃಷಾವಾದಂ | ಕೃತಜ್ಞತೆಯೆಂದೊಡೆ- ಉಪಕಾರಕ್ಕೆ ಪ್ರತಿ – ಉಪಕಾರಕ್ಕೆ ಪ್ರತ್ಯುಪಕಾರಬುದ್ಧಿ | ಕುಲಮೆಂದೊಡೆ ಶುದ್ಧೋಭಯಪಕ್ಷತೆ, ಶೀಲಸಂ-ಸ್ವಭಾವತೆ| ದಮಶ್ಚೇತ್ಯುಪಶಮಃ| ಚಕಾರಮನುಕ್ತಂಗಾಮಿಕಗುಣಾರ್ಥಗುಣಾಸ್ಸಂಪತ್ತಿಹೇತವ ಇತಿ ‖ ಏತೇಗುಣಾಃ – ಈ ಗುಣಂಗಳ್ ಆತ್ಮಸಂಪತ್ತಿಗೆ ಕಾರಣಂಗಳ್ | ಈ ಗುಣಂಗಳಿಂ ಸಂಪನ್ನನಾದ ಅರಸು| ಆತ

ವಾನ್| ಆತಂರಾಜ್ಯಂಗೆ ಆದ್ಯಂಗೆ ಯೆತ್ತಲಾನುಂ ಸ್ವಾಭಾವಿಕ ವಿನಯಯೋಗಂ ಶಾಸ್ತ್ರನಿಶ್ಚಯದಿಂ ರಾಜ್ಯಮವಾಪ್ತಮಾದು| ಆದೊಡಂ ರಾಜ್ಯಸ್ಥನಾದ ಅರಸನಿಂದೆ ವಿನಯಾಭ್ಯಾಸಮೆ ಮಾಡಲ್ತಕ್ಕುದು. ಮಾನುಷ್ಯತ್ವಮನಿತ್ಯಮಾದಱಿಂ, ವಿಷಯಂಗಳತಿಮನೋಹರಂಗಳಾದುದಱಿಂ | ಆ ಅಭ್ಯಾಸಮನೆ ತೋಱುದಪಂ | ಆತ್ಮಾನಮಿತಿ| ಆತ್ಮಾನಂ–ತನ್ನನು, ವಿನಯೇಂದ್ರಿಯಜಯದೊಡನೆ ಸಂಪನ್ನನಂಮಾಳ್ಪುದು| ಅರಸು ಜಿತೇಂದ್ರಿಯನಾದೊಡೆ ಪ್ರಕೃತಿಗಳುಂ ಜಿತೇಂದ್ರಿಯಂಗಳಪ್ಪುವು| "ಸ ಯಚ್ಛೀಲಸ್ತಚ್ಛೀಲಾಃ ಪ್ರಕೃತಯೋಭವನ್ತೀ"ತಿ ಕೌಟಿಲ್ಯಃ—

ತಥಾಚೋಕ್ತಂ-"ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ"ಇತಿ| ತತೋಽಮಾತ್ಯಾದೀ–ಅಮಾತ್ಯಾದಿಗಳಂ | ದಂಡಧಾರನಾಗಿ ತದನನ್ತರಂ ಭೃತ್ಯರಂ ತದನನ್ತರಂ ಪುತ್ರರಂ| ಪುತ್ರರ್ಗೆ ಆದಿಯಲ್ಲಿ ವಿನೇಯತ್ವಂ ಪ್ರಾಪ್ತಮಾದೊಡೆ ಅಮಾತ್ಯಭೃತ್ಯರಕ್ಷಿತರಾದ ಪುತ್ರರುಂ ವಿನಯವಂತರಹರು ಎಂದುಭಾವಂ‖ ಆನನ್ತರಂ ಪ್ರಜೆಯಂ ಜಿತೇಂದ್ರಿಯಮಾಗಿ ಮಾಳ್ಪುದು| ವಿನಯೋಪಪಾದನಕ್ಕೆ ಫಲಮಂ ಪೇಳ್ದಪಂ | ಯಥಾನುರಕ್ತೇತಿ, ವಿನೀತಾತ್ಮನಾದ ನೃಪತಿ ಬಹು ಸಂಪತ್ತನನುಭವಿಪನೆಂದು ಸಂಬಂಧಂ| ಅನುರಕ್ತಪ್ರಕೃತಿರಿತಿ| ಆಭಿಗಾಮಿಕಗುಣಂಗಳಿಂ| ಅನುರಕ್ತಾಮಾತ್ಯಾದಿಕಂ | ಪ್ರಜಾಪಾಲನತತ್ಪರಃ–ಪ್ರಜಾಪಾಲನದಲ್ಲಿಯೇ ಪರಮತಾತ್ಪರ್ಯವಂತಂ| ಭೂಯಸೀಂ ಶ್ರಿಯ ಮಿತಿ| ಪೃಥ್ವೀಭೂಯಸ್ತ್ವದಿಂ ವಿನೀತಾತ್ಮನಪ್ಪ ನೃಪತಿ ಸಾರ್ವಭೌಮನಪ್ಪನೆಂಬುದರ್ಥಂ| ಇಂದ್ರಿಯಜಯೋಪದೇಶಕ್ಕೋಸುಗ ಇಂದ್ರಿಯಂಗಳ್ಗೆ [1]ದುರ್ಜಯತ್ವಮಂ ಪೇಳ್ದಪಂ| ಪ್ರಕೀರ್ಣೇತಿ – ವಿಷಯಶಬ್ದದಿಂ ಶಬ್ದರೂಪರಸಗಂಧಸ್ಪರ್ಶಂಗಳ್| ಅದಕ್ಕೆ ಪ್ರಕೀರ್ಣಕಂ, ಪ್ರತ್ಯೇಕ ಬಹುಭೇದಮನೋರಮ(ಹರ)ಮಪ್ಪುದಱಿಂ ವಿಷಯಂಗಳೆ ಅರಣ್ಯಂ| ತತ್ರ ಧಾವಂತಂ ರಿರಂಸೆಯಂ ವಿಶೇಷಮಾಗಿ ಮಾಡಿಪೆನೆಂಬ ಶೀಲಮನುಳ್ಳಂ | ಜ್ಞಾನಾಂಕುಶೇನೇತಿ–ವಕ್ಷ್ಯಮಾಣಮಾದುದಱಿಂ, ಕುರ್ವೀತ–ಮಾಡಬೇಕು | ವಶ್ಯಂ–ವಿಧೇಯಮಾಗಿ, ಇಂದ್ರಿಯಮೆಂಬ ದಂತಿಯಂ- ಯ ದುಕ್ತಂ–'ಜ್ಞಾನಾಂಕುಶೇನೇಂದ್ರಿಯದನ್ತಿನಂ ವಶಂ ಕುರ್ವೀತೇ'ತಿ – ತದೇವ–ಅದನೆ, ತೋಱುದಪಂ | ಆತ್ಮೇತಿ| "ಆತ್ಮಾಯಂ ಯಂತ್ರವಾಹಕಃ" ಪ್ರಯತ್ನಮೆಂಬ ಆತ್ಮಗುಣದಿಂ ಪ್ರೇರಿತನಾಗಿ–ಅರ್ಥಂಗಳತ್ತಣಿಂ ಇಂದ್ರಿಯಂಗಳತ್ತಣಿಂ ಶಬ್ದಸ್ಪರ್ಶಾದಿಗಳತ್ತಣಿಂ ಭೋಗಾರ್ಥಂ| ತಾದರ್ಥ್ಯೇ ಚತುರ್ಥೀ | ಮನ ಇತಿ| ವಕ್ಷ್ಯಮಾಣಮಪ್ಪಮನಸ್ಸಂ | ಅಧಿತಿಷ್ಠತಿ–ಆರೋಹಿಸುತು(ಮ)ಂ–ತದಾರೂಢ ಆತ್ಮಾ ಪ್ರವರ್ತಮಾನೋನಿವರ್ತತೇ| ಕರೋತೀತಿ ವಕ್ಷ್ಯತಿ| ಸಂಯೋಗಾದಾತ್ಮಮನಸೋರಿತಿ | ಪ್ರಯತ್ನದಿಂ ಪ್ರೇರಿತಂಗಳಾದ ಆತ್ಮಮನಂಗಳ್ಗೆ ಪ್ರವೃತ್ತಿಗತಿ| ವಿಷಯಂಗಳಂ ಕುಱಿತು ಜಾಯತೇ | ಪ್ರವೃತ್ತಿಗೆ ಕಾರಣಮಂ ಪೇಳ್ದಪಂ| ವಿಷಯಾಮಿಷೇತಿ | ವಿಷಯಂಗಳೆ [2]ಆಮಿಷಂ | ಅಭಿಲಷಣೀಯಮಾದ ಭಕ್ಷ್ಯಂ| ತಲ್ಲೋಭೇನ-ತದಭಿಲಾಷೆಯಿಂ | ಮನಃ-ಕರ್ತೃ| ಪ್ರೇರಯತಿ-ಇಂದ್ರಿಯವಿಷಯಾಃ| ವಿಷಯಮಂಕುಱಿತು ಪ್ರೇರಿಸುತಿದ್ದೀತು | ತನ್ನಿರುಂಧ್ಯಾತ್ ತತ – ಯೆಂದು ಮನಸ್ಸನೆ ತಡೆಯಬೇಕು| ಪ್ರಯತ್ನೇನ – ಮಹತ್ತಾದ ಯತ್ನದಿಂದ, ಜಿತೇ ತಸ್ಮಿನ್ - ಆ ಮನಸ್ಸು ಜಿತಮಾದೊಡೆ ಜಿತೇಂದ್ರಿಯನಪ್ಪಂ | ಎತ್ತಲಾನುಂಪ್ರಯತ್ನದಿಂ ಮನಸ್ಸಂಗದಿಂ ಪ್ರವೃತ್ತಿ ಆದೊಡೆ ಮನಸ್ಸೇ ಪ್ರಧಾನಂ | ವ್ಯವಹಾರಾರ್ಥಮಾಗಿ ತತ್ರಭೇದಂಗಳಂ ಪೇಳ್ದಪಂ | ವಿಜ್ಞಾನಮಿತಿ |

---

(1) ವಿಜಯತ್ವಮಂ (2) ಅಮಿಷಂ ಭೋಗ್ಯವಸ್ತುನಿ-(ಎಂದು ರಘುವಂಶದ ಮಲ್ಲಿನಾಥವ್ಯಾಖ್ಯಾ)

ವಿವಿಧಜ್ಞಾನಂಗಳುತ್ಪನ್ನಮಪ್ಪುದಱಿಂ, ಮನಸ್ಸು ವಿಜ್ಞಾನಂ| ಗೋಪ್ಯತ್ವಾದ್ವ್ಯವಹಿತಮಪ್ಪುದಱಿಂ
ಹೃದಯಂ| ಚೇತನಾಧಾರಮಪ್ಪುದಱಿಂ ಚಿತ್ತಂ| ಪದಾರ್ಥಂಗಳ್ಗೆ ಮನಸ್ಸಿನಿಂ ಆತ್ಮಾಧಾರ
ಮಪ್ಪುದಱಿಂ ಬುದ್ಧಿ| ತದೇತತ್ಸಮಮಿತಿ| ಈ ಸಂಜ್ಞಾಪಂಚಕಮುಂ, ಸಮಂ–ಸಮಾನಾರ್ಥಂ|
ಅನೇನೇತಿ–ಮನಸ್ಸಿನಿಂ ಆತ್ಮಾ–ಅಧಿಷ್ಠಾತೃ, ಕರೋತಿ–ಮಾಡುತಿದ್ದಾನು| ಇಹ–ಈ ಶರೀರದೊಳ್
ಪ್ರವರ್ತನ ನಿವರ್ತನೆ–ಕರ್ತವ್ಯಕರಣದೊಳ್ ತನ್ನಿಂತಿಳಿದು ಶಾಸ್ತ್ರವಿಹಿತಾನುಷ್ಠಾನದೊಳ್ ಮನ
ಸ್ಸಿಗೆ ಪ್ರವೃತ್ತಿ – ಅಂಗೀಕರ್ತವ್ಯಂ, ನಿಷಿದ್ಧೇತಿ| ನಿಷಿದ್ಧದೊಳ್ ನಿರೋದ್ಧವ್ಯಮೆ| ಆತ್ಮಾಸ್ತಿತ್ವ
ದೊಳನುಮಾನಮೇ ಪ್ರಮಾಣಮೆಂದು ಪೇಳ್ದಪಂ| ಧರ್ಮಾಧರ್ಮಾವಿತಿ| ಪ್ರವೃತ್ತಿಲಕ್ಷಣಮಾದ
ಸ್ವರ್ಗಾಪವರ್ಗಫಲಮನುಳ್ಳುದು ಧರ್ಮಂ| ತದ್ವಿಪರೀತಮಾದುದು ನರಕಹೇತು ಅಧರ್ಮಂ| ಸುಖ
ಮುಂ, ತದ್ವಿಪರೀತಮುಮಾದ ದುಃಖಮುಂ| ಇಚ್ಛಾ-ಕಾಮಮುಂ, ತದ್ವಿಪರೀತಮಾದ ದ್ವೇಷಮುಂ|
ಹಾಗೆ ಪ್ರಯತ್ನಮುಂ ಸಂಸ್ಕಾರವೆಂಬುದು| ಜನ್ಮಕರ್ಮಾಭ್ಯಾಸವರ್ಣವಾಸನೆ| ಸದ್ಯೋಜಾತಾದಿ
ಗಳಿಂ ಸ್ವಯಮೇವ ಉಪಾಸನಾದಿ| ಆವುದಱಿಂ ಪುಟ್ಟುಗುಂ| ಆತ್ಮಲಿಂಗಮುಪಾಹೃತಮಿತಿ, ಈ
ಗುಣಂಗಳ್ ಆತ್ಮಾಸ್ತಿತ್ವದೊಳ್ ಲಿಂಗಮೆಂದು ಆಚಾರ್ಯರಿಂ ಉಪದೇಶಿಸಲ್ಪಟ್ಟುದು| ಧೂಮದಿ
ನಗ್ನಿಯೋಪಾದಿಯಿಂ| ಆತ್ಮಾಸ್ತಿತ್ವಮುಂ ಲಿಂಗಗಳಿಂ ಪ್ರತೀತಮೆಂದು. ಮನಸ್ಸಿಗುಮಸ್ತಿತ್ವ
ದೊಳ್ ಲಿಂಗಮಂ ಪೇಳ್ದಪಂ| ಜ್ಞಾನಸ್ಯೇತಿ – ಜಾತ್ಯೈಕವಚನಂ| ಅಯ್ಗಾದ(ಜ) ಶ್ರೋತ್ರಾದಿ
ಬುದ್ಧೀದ್ರಿಯಂಗಳ್ಗೆ ಶಬ್ದಾದೀಂದ್ರಿಯಾರ್ಥಂಗಳೊಳ್ ಸರ್ವವ್ಯಾಪಿಯಾದ ಆತ್ಮಂಗೆ ಏಕಕಾಲ
ದೊಳೆ ಜ್ಞಾನೋತ್ಪತ್ತಿ ಪ್ರಾಪ್ತಮಾಗೆ ಭಿನ್ನಕಾಲಂಗಳೊಳ್ ಆದ ಜ್ಞಾನೋತ್ಪತ್ತಿ| ಅದೇ
ವ್ಯಾಪ್ತಿಯಾದ ಆತ್ಮಂಗೆ ಇಂದ್ರಿಯಂ ಮನೋಽಸ್ತಿತ್ವದೊಳ್ ಲಿಂಗಂ| ಒಂದು ಉಂಟು|
ಮನಸ್ಸಂಜ್ಞಕಂ ಸಮಸ್ತಮಾದ ಬುದ್ಧೀಂದ್ರಿಯಂಗಳ್ಗೆ ಶಬ್ದಾದೀಂದ್ರಿಯಾರ್ಥಂಗಳೊಳ್ ಸರ್ವ
ಆದ ಆತ್ಮಸಮವೇತವಾದ ಮನಸ್ಸಿನಿಂದ ಸಕಲ ಪದಾರ್ಥಜ್ಞಾನಂಗಳುಂ ಕ್ರಮದಿನನುಭ
ವಿಸಲ್ಪಡುವುದು| ತದಭಾವಮಾದೊಡೆ ಯುಗಪತ್ ಜ್ಞಾನೋತ್ಪತ್ತಿ ಪ್ರಾಪ್ತಮಪ್ಪುದು| ಹಾಗೆ
ಕಾಣಲ್ಪಡಲಿಲ್ಲ| ಅದಱಿಂ ಮನಸ್ಸು ಉಂಟು| ನಾನಾರ್ಥೇಷು ಚ ಸಂಕಲ್ಪಂ ಇತಿ– ನಾನಾ
ಭೂತಂಗಳಾದ ಸುಖದುಃಖೋತ್ಪಾದಕಂಗಳಾದ ಆವ ಪದಾರ್ಥಂಗಳು ಅವಱೊಳು ಸಂಕಲ್ಪ
ಮೆಂಬುದು ಸಮ್ಯಗ್ಭೂತಮಾದ ಕಲ್ಪನೆ| ಈ ಪದಾರ್ಥಂ ಸುಖಹೇತು ಅದಱಿನುಪಾದೇಯಂ|
ಹಾಗೆ ಇದು ದುಃಖಹೇತು ಅದಱಿನನುಪಾದೇಯಂ| ಇತ್ಯಾದಿ ಕಾರ್ಯದತ್ತಣಿಂ ಸದಾ ಸಂಕ
ಲ್ಪನೆ| ತದೇವ–ಅದೇ, ಅನ್ಯ ಕರ್ಮಪ್ರವರ್ತಿಸಲ್ಪಟ್ಟುದು ಆಚಾರ್ಯೈರಿತಿ(ವಿ)ಶೇಷಃ| ಆ ಮನ
ಸ್ಸ್ವರೂಪಮಂ ನಿರೂಪಿಸಿ| ಇಂದ್ರಿಯಂಗಳ್ಗಂ, ಇಂದ್ರಿಯಾರ್ಥಂಗಳ್ಗಂ ಸ್ವರೂಪಮಂ ಪೇಳ್ದಪಂ|
ತ್ವಕ್ಕೆಂದಾದ್ಯಶರೀರಧಾತು| ಚಕ್ಷುಃ-ದೃಗಿಂದ್ರಿಯಂ| ನಾಸಿಕಾ–ಘ್ರಾಣಂ| ಉಕ್ತಸಮುಚ್ಚ(ಯ)
ದೊಳ್ ಚಕಾರಂ| ಬುದ್ಧೀಂದ್ರಿಯಪರಿಸಮಾಪ್ತಿಯೊಳ್–ಪಂಚೇತಿ–ಪೃಥಗ್ವಿಷಯೋಪಯೋಗಿ
ಗಳ್| ಬುದ್ಧೀಂದ್ರಿಯಂಗಳ್ ಮನಸ್ಸು| ಆದೊಡೆ ಸ್ವರ್ಗಗಾಮಿತಿ–ಪಾಯುರ್ಮಲನಿರ್ಗಮನ
ರಂಧ್ರಂ| ಉಪಸ್ಥಮೆನೆ ಅದಱ ಸಮೀಪದೊಳಿರುವ ಆನಂದೇಂದ್ರಿಯಂ| ಹಸ್ತಂಗಳುಂ ಪಾದಂ
ಗಳುಂ ವಾಕ್ಚೇತಿ| ವಾಗಿಂದ್ರಿಯಂ| ಆವುದಱಿನಾಲೋಕಕ್ರಿಯೆಗಳ್, ಅನುಮಾಪಿಸಲ್ಪಡುತಿ
ದ್ಧಾವು| ಇತೀಂದ್ರಿಯಸಂಗ್ರಹ ಇತಿ| ಇಂತು ಅನ್ಯೂನಾಧಿಕ್ಯದಿಂ ಸರ್ವೇಂದ್ರಿಯಂಗಳುಂ ಸಂಗ್ರ
ಹಿಸಲ್ಪಟ್ಟುವು| ಶಬ್ದಮೆಂದು ವೀಣಾವೇಣ್ವಾದಿಧ್ವನಿ| ಸ್ಪರ್ಶಮೆಂದು ತ್ವಗಿಂದ್ರಿಯಸಂಬದ್ಧಂ|
ರೂಪಮೆನೆರಮಣೀಯವಸ್ತುಸನ್ನಿವೇಶಂ| ರಸ-ಮೆಂದು ಸ್ವಾದುವಸ್ತ್ವಾಸ್ವಾದಂ| ಗಂಧಮೆನೆ-

ಘ್ರಾಣೇಂದ್ರಿಯಾನಂದಸುರಭಿ| ಪಂಚಮಮೆಂದು ಪಂಚಸಂಖ್ಯಾಪೂರಣಂ| ಇದಱಿನಯ್ದು(ಜ)
ಬುದ್ಧೀಂದ್ರಿಯಂಗಳುಂ ಯಥಾಕ್ರಮದಿನುಪಭೋಜ್ಯಂಗಳಾದ ವಿಷಯಂಗಳ್| ಇಂದ್ರಿಯಾರ್ಥಂ
ಗಳುಂ. ಹಾಗೆ ಕರ್ಮೇಂದ್ರಿಯಂಗಳ ಕರ್ಮಂಗಳ್ ಪೇಟಲ್ಪಡುತ್ತಿದ್ದಾವು. ಉತ್ಸರ್ಗಾನಂದನಾದಾನ
ಗತ್ಯಾಲಾಪಾಶ್ಚ ತದ್ಗುಣಾ ಇತಿ| ಆವಾಗಾದಿಗಳ್ಗೆ ಅಯ್ದುಕರ್ಮ–ಕರ್ಮೇಂದ್ರಿಯಂಗಳ್ಗೆ ಉತ್ಸರ್ಗಾದಿ
ಗಳೈದೆ ಕ್ರಿಯೆಗಳ್| ಪಾಯೋಃ ಗುದಕ್ಕೆ ಮಲಪ್ರೇರಣೆ ಕ್ರಿಯೆ| ಉಪಸ್ಥಕ್ಕೆ-ಮಿಥುನಸಂಬಂಧಮಾದ
ಭಗಕ್ಕೆ ಆನಂದನಕ್ರಿಯೆ| ಹಸ್ತಂಗಳ್ಗೆ ಆದಾನಂ| ಪಾದಯೋರ್ಗತಿಃ| ವಾಗಿಂದ್ರಿಯಕ್ಕೆ ಆಲಾಪಂ.
ಆತ್ಮಮನೋಬುದ್ಧಿ ಕರ್ಮೇಂದ್ರಿಯಂಗಳ್ಗೆ ಲಕ್ಷಣಮಂ ಪೇಟ್ದು ಕರ ಆಗಮಂ ಪೇಳ್ದಪಂ. ಆತ್ಮಾ
ಮನಶ್ಚೇತಿ| ಆತ್ಮನುಂ ಮನಸ್ಸುಂ| ಅಭಿಹಿತಲಕ್ಷಣಂಗಳ್| ಆನವಿದ್ಯೆಯಿಂ ಪ್ರತಿಪಾದಿಸಲ್ಪಡು
ವುವು| ಅದು ನ್ಯಾಯವಿದ್ಯೆ ಕ್ಷಣದಾಕ್ಷೇಪಾದಿಗಳಿಂ| ಅಂತಃಕರಣಮೆಂದು ಪೇಟಲ್ಪಟ್ಟುದು|
ಆಖ್ಯಾಮಿತಾತ್ಮ ಮನಸ್ಸುಗಳೆರಡರಿಂ ಸಪ್ರಯತ್ನಾಭ್ಯಾಂ – ಪ್ರಯತ್ನಸಹಿತಂಗಳಿಂ| ಪ್ರವೃತ್ತಿ
ಪುಟ್ಟುಗುಂ| ಪ್ರವೃತ್ತಿಯಿಂದ್ರಿಯಮಂ ಕುಱಿತು ಪ್ರವರ್ತನಂ ಪುಟ್ಟುಗುಂ| ಪ್ರವೃತ್ತಿಯಿಂದ್ರಿಯ
ಮಂ ಕುಱಿತು, ಯಿದು ಅಂತಃಕರಣಂ| ಬಹಿಷ್ಕರಣಮಂ ಪೇಳ್ದಪಂ| ಆತ್ಮಾಬುದ್ಧೀತಿ| ಆತ್ಮಾ
ಉಕ್ತಲಕ್ಷಣಂ| ಬುದ್ಧಿ-ಮನಸ್ಸು| ಇಂದ್ರಿಯಂಗಳುಭಯರೂಪಂಗಳು| ಅರ್ಥಂಗಳ್ ಶಬ್ದಾದಿ
ಗಳ್| ಕರ್ಮೇಂದ್ರಿಯಂಗಳ್ಗೆ| ಅವು ಕೆಲವು ಔತ್ಸರ್ಗಿಕಾ ಅರ್ಥಾಃ–ಪ್ರಯೋಜನಂಗಳು| ಇವೆಲ್ಲವು
ಬಹಿಃಕರಣಂ| ಸಂಕಲ್ಪಾಧ್ಯವಸಾಯಾಭ್ಯಾಂ ಇತಿ| ಸಮ್ಯಗ್ಭೂತಕಲ್ಪನಂ| ಅಧ್ಯವಸಾಯಃ
ಪ್ರಯತ್ನಮೆ| ತಾಭ್ಯಾಂ ಸಿದ್ಧಿಃ| ಅವದಿತ್ಯಾದಿ – ಅಸ್ಯ. ಈ ಉಪಭೋಕ್ತೃವಾದ ಆತ್ಮಂಗೆ
ಪೇಟಲ್ಪಟ್ಟುದು| ತದ್ಯಥಾ ಅದೆಂತೆಂದೊಡೆ—ಆತ್ಮನುಂ ಪ್ರಯತ್ನಗುಣದಿಂ ಪ್ರೇರಿತನಾಗಿ ಮನಸ್ಸಿ
ನೊಡನೆ ಕೂಡುವಂ| ಆ ಮನಸ್ಸು ಇಂದ್ರಿಯದೊಡನೆ ಕೂಡುವುದು| ಮನೋಽಧಿಷ್ಠಿತಮಾದ
ಇಂದ್ರಿಯಂ ಆವಾಗ ಅಭಿಲಷಿತವಿಷಯದೊಡಗೂಡು(ಗು)ಂ| ಆಗ ಮನಸ್ಸಿಗೆ ವಿವಿಧ ಸಂಕಲ್ಪಂ
ಪುಟ್ಟುಗುಂ| ಅಭಿಲಷಿತವಿಾ ಸುಖಸಾಧನಂ ವಿಷಯಂ. ಇಂದ್ರಿಯಪ್ರಕಾರಮಾದ ಉಪಾಯಂ
ಗಳಿಂ ಸಂಕಲ್ಪಂ ಪುಟ್ಟುಗುಂ– ತದನಂತರಂ ಬಹಿಃಕರಣವಾದ ಕರ್ಮೇಂದ್ರಿಯವರ್ಗದೊಳ್ ವ್ಯವ
ಸಾಯಃ - ಪ್ರಯತ್ನವಿಶೇಷವು ಉತ್ಪನ್ನಮಪ್ಪುದು| ಅದಕ್ಕೆ ಗತ್ಯಾಲಾಪಾದಿಗಳಿಂ ವಿಷಯ
ಪ್ರಾಪ್ತಿ| ತದನನ್ತರಂ ಸುಖಾನುಭವಲಕ್ಷಣ ಸಿದ್ಧಿ ಆತ್ಮಂಗೆ ಪೇಟಲ್ಪಟ್ಟುದು| ಅದು ಕಾರಣಂ
ಯಿಾಪ್ರಕಾರಂ ಅಂತಃಕರಣಪ್ರವೃತ್ತಿ ಪ್ರಯತ್ನದತ್ತಣಿಂ ಅಧ್ಯವಸಾಯಸಂಜ್ಞಿಕಬಹಿಃಕರಣ
ಪ್ರವೃತ್ತಿಪ್ರಯತ್ನದಿಂದಲೆ ಯೆಂದು ತೋಱಲ್ಪಟ್ಟುದು| ಅದನೆ ಸಮರ್ಥಿಸುತ್ತೆ ಪೇಳ್ದಪಂ| ಉಭೆ
ಏತೇ ಇತಿ| ಏತೇ ಅನಂತರೋಕ್ತಂ ಆವುದೊಂದು ಕಾರಣದಿಂ ಅಂತಃಕರಣಬಹಿಃಕರಣ ಸಂಜ್ಞಿ
ಕಂಗಳ್ ಪ್ರಯತ್ನಾನಂತರಂ ಪ್ರವೃತ್ತಿಸಿದ್ದಾವು| ಪ್ರಯತ್ನಪ್ರೇರಣದಿಂದಲೆ ಎಂಬುದರ್ಥಂ|
ತಸ್ಮಾದಿತಿ| ಏನುಕಾರಣ ಹೀಗೆ ಆ ಕಾರಣದಿಂ ಪ್ರಯತ್ನಸಂರೋಧಾತ್| ಉಭಯಾತ್ಮಕಮಾದ
ಪ್ರಯತ್ನ ಸಂರೋಧಮಂ ಮಾಡಿ ಭಾವಯೇತ್-ಅಭ್ಯಾಸವಮಾಡಬೇಕು| ನಿರ್ಮನಸ್ಕತಾ ಯಾ
ವತ್ ಪ್ರಯತ್ನಮೆನಿರುದ್ಧಮಾದೊಡೆ| ಆಗ ಆತ್ಮ ಮನಸ್ಸಿನೊಡನೆ ಕೂಡನು| ಅದುಕಾರಣ
ಮನಸ್ಸು ವಿದ್ಯಮಾನಮಾದೊಡಮಿಲ್ಲದೆ ಮನಃಕಾರ್ಯಾಕಾರ್ಯದತ್ತಣಿಂ ಅತ್ಯಂತಾಕರಣಾದಂ
ತಃಕರಣ ವಿಶೇಷದತ್ತಣಿಂ ಪ್ರವೃತ್ತಿಯೆ ಪುಟ್ಟದು. ಅಂತಃಕರಣಪ್ರವೃತ್ತ್ಯಭಾವದಿಂ ಬಹಿಃಕರಣ
ವೃತ್ತ್ಯಭಾವಃ| ತದಭಾವದಿಂದ್ರಿಯಂಗಳ್ಗೆ ವಿಷಯಂಗಳೊಡನೆ ಸಂಬಂಧಮೆ ಆಗದು| ಅಧ್ಯವಸಾಯ
ಸಂಬಂಧಮೆತ್ತಣಮೆಂಬಿವು ಜಿತೇಂದ್ರಿಯನಪ್ಪಂ| ಕಥಂಚಿತ್| ಅಂತಃಕರಣವು| ಯಾವತ್ಪ್ರಾಪ್ತ

ಮಾದೊಡಂ ಅಂತಃಕರಣದೊಳಂ ಅಧ್ಯವಸಾಯಾಖ್ಯ ಪ್ರಯತ್ನನಿರೋಧದತ್ತಣಿಂ ಗತ್ಯಾಲಾಪಾದ್ಯಭಾವದಿನುಭಯೇಂದ್ರಿಯಂಗಳ್ಗೆ ವಿಷಯಂಗಳೊಡನೆ ಸಂಬಂಧಮೆ ಕೂಡದು| ಎಂದುದುರ್ಮನಸ್ಕನಿತ್ತಪಂ| ಏವಮಿತಿ ಉಕ್ತನ್ಯಾಯದಿಂ ಕರಣಂಗಳಂ ಸಂರೋಧದತ್ತಣಿಂ ನಿರೋಧಾತ್ ಸಮ್ಯಕ್ ನಿಯಮಿಸಿ| ನಿರುದ್ಧಚೇಷ್ಟನಾದ ತನ್ನ ಆತ್ಮನ್ಯೈವ ತನ್ನಿಂದವೆಮಾಡಿ| ನಾನ್ಯೇನ | ನಯಾಪನಯವಿದ್ರಾಜೇತಿ| ನಯೋ–ನೀತಿಶಾಸ್ತ್ರಪರಿಜ್ಞಾನಂ| ಅಪನಯಃ–ತದ್ವಿಪರೀತಂ| ತೌ ಜಾನಾತೀತಿ | ಅವೆರಡಂ ಬಲ್ಲ ಮಹೀಪತಿ | ಕುರ್ವೀತ–ಆತ್ಮನ ಇತಿ | ನಯಾನುಷ್ಠಾನಮೆ ತನಗೆ ಹಿತಮೆಂದು ಅನುಷ್ಠೇಯಂ| ಕರಣಸಂರೋಧಮಶಕ್ಯಮಾದೊಡೆ| ಅಭಿಮತಫಲಮುಂಎಯ್ದಲ್ಪಡದು| ಎಂದದಂ ತೋಱದಪಂ | ಏಕಸ್ಯೇತಿ | ಏಕಸ್ಯಾಪ್ಯಸಹಾಯಂಗೆ ಶಕ್ತಃ ಸಮರ್ಥನಲ್ಲದೊಡೆ| ಮನಃ ಚಿತ್ತಕ್ಕೆ| ಸಂನಿಬರ್ಹಣೇ ನಿಗ್ರಹಣದಲು ಮಹೀಂ ಸಾಗರಪರ್ಯಂತಮಾದ ಪೃಥ್ವಿಯಂ ಸಮುದ್ರಮೇಖಲೆಯಂ ಆ ಅರಸು | ಕಥ(ಂ)ಆವ ಪ್ರಕಾರದಿಂದ ವ್ಯಕ್ತಮಾಗಿ ಅವಚೇಷ್ಯತಿ | ವಶಮಂ ಮಾಳ್ಪಂ | ಬಹುನೀತಿಗಂತವ್ಯೈರಧಿಷ್ಠಿತತ್ವಾದಿತಿ| ತನ್ನಿಂದಲೆ ಅನಿಗೃಹೀತಮನಸ್ಕಂಗೆ ಪರಿಣಾಮಮಂ ತೋಱದಪಂ| ಕ್ರಿಯಾವಸಾನೇತಿ | ಕ್ರಿಯೆಯೆಂಬುದು ವಿಷಯೇಷ್ವನುಷ್ಠಾನಲಕ್ಷಣಂ | ಆ ಕ್ರಿಯೆಗೆ ಅವಸಾನದಲ್ಲಿ ವಿರಸಾಃ – ನಿರ್ಗತರಸಾಃ | ನಿಸ್ಸ್ವಾದುವೆಂಬುದರ್ಥಂ |

ತಥಾಚೋಕ್ತಂ:— "ಆಪಾತರಮ್ಯಾ ವಿಷಯಾಃ ಪರ್ಯಂತಪರಿತಾಪಿನಃ ||" ಇತಿ— ಈ ಪ್ರಕಾರಮಾದ ವಿಷಯೈಶ್ವರ್ಯಾದಿಗಳಿಂ – ಮನೋಹರಂಗಳಿಂ ಆಕ್ಷಿಪ್ತಹೃದಯನಾಗಿ ಪೋಪಂ | ಆಕ್ಷಿಪ್ತಹೃದಯಂ ಗೃಹೀತಹೃದಯಂ | ಕರಿಕರಿಣೀಸ್ಪರ್ಶದಿಂ ಕಲಗರ್ಜಿತಶಬ್ದದಿಂ ಭದ್ರಜಾತಿಯಪ್ಪುದಱಂ ಸುಗಂಧದಿಂ ಮನೋಹರರೂಪದಿನರ್ಥಜಗ್ಧಮಾಗಿ ಪ್ರೇಮದಿಂ ಸಮರ್ಪಿಸಲ್ಪಟ್ಟ ಸಲ್ಲಕೀಪಲ್ಲವಕಬಳದಿನೆಂದು| ವಿಷಯೈರಿತಿ ಬಹುವಚನಂ| ಹೀಗೆ ಕರಿಣಿಯೊಳು ಕೂಡುವುದು, ನೃಪತಿಃ ಭೂಪಾಲರಂ ಗ್ರಹಬಂಧನಮಂ ವತ್ಸರಾಜನೊಪ್ಪದಿ ಪಡೆಗುಂ| ನಕೇವಲಂ ಬರಿದೆ ವಿಷಯಾಕ್ಷಿಪ್ತ ಹೃದಯನಾದ ನೃಪಂ ಪಾರ್ಥಿವಂ ಬಂಧನಮನೊಂದನೆ ಎಯ್ದುವಂ ಉಗ್ರತಪದಿಂದ ಆಪತ್ತನುಂ ಪಡೆಗುಮೆಂದು ತೋಱದಪಂ | ಸಜ್ಜಮಾನಮಿತಿ | ಆಸಕ್ತಿಯನ್ನೈದುತುಂ– ಹಿ ಸ್ಫುಟಂ| ಅಕಾರ್ಯೇಷ್ವಿತಿ | ಪರಸ್ತ್ರೀಗಮನಾದಿಗಳೊಳು ವಿಷಯಾನ್ವೀಕ್ಷತೇಕ್ಷಣ ಇತಿ | ಸ್ಪರ್ಶಾದಿ ವಿಷಯಂಗಳಿಂ ಅನ್ವೀಕ್ಷತೆ| ಈಕ್ಷಣೇ ಶಾಸ್ತ್ರಮಯೇ ಚರ್ಮಮಯಮಾದ ಕಣ್ಗಳುಳ್ಳಾತನಾಗಿ| ಆವಶ್ಯಭಿಗೃಹ ಇತಿ—ಭಯದಾಂ ಆವಹತಿ ಗ್ರಹಿಪಂ| ಪರಿಗೃಹ್ಣಾತಿ–ಸಂಪಾದಿಸುತಿದ್ದಾನು| ಉಗ್ರಭಯದಾಂ – ಭೀಷಣಭಯದಮಪ್ಪ| ಸ್ವಯಮೇವ– ತನ್ನಿಂತಾನೆ| ಆಪದಂ– ವಿಪತ್ತನ್ನು| ನೃಪಃ – ಪಾರ್ಥಿವಂ| ಇನ್ನುಂ ವಿಷಯವೈಷಮ್ಯಮನೆ ಪೇೞ್ದಪಂ| ಶಬ್ದಸ್ಪರ್ಶೇತಿ | ಶಬ್ದಾದಿಗಳೈದುಂ ಕೃತಲಕ್ಷಣಂಗಳ್ | ಏಕೈಕಮಿತಿ | ದ್ವಂದ್ವೈಕವದ್ಭಾವದೊಳ್ ವಿಭಾಷಾಪಕ್ಷದಿಂ ನಪುಂಸಕಂ | ಅಲಂ—ಸಮರ್ಥಂಗಳ್ | ಮಧ್ಯದೊಳ್ ವಿನಾಶಪ್ರತಿಪತ್ತಿಗೋಸುಗ ಇದನೆ ತೋಱುತಗೇೞ್ದಪಂ| ಶುಚೇತಿ | ಶಷ್ಪಾಣಿ ಬಾಲತೃಣಂಗಳುಂ ಅವರ ಅಂಕುರಂಗಳುಂ ಆಹಾರಮಾಗಿ ಉಳ್ಳಶುಚಿತ್ವಮುಂ | ಅಪರ ಪರಿಗೃಹೀತಂ– ಪರಸ್ಪರಾನುಸ್ನೇಹದಿನೆಂದಿಂತು ಸದೋಷತೆ ಪರಿಗ್ರಹಿಸಲ್ಪಟ್ಟುದು| ವಿದೂರಕ್ರಮಣಕ್ಷಮಃ ಇತಿ–ವಿಶೇಷದಿಂ, ದೂರ–ಮತಿವ್ಯವಧಾನಂ, ತತ್ಕ್ರಮಣಂ- ಲಂಘನಂ, ತತ್ಕ್ಷಮಂ| ಇದಱಾನಾವೇಶಮಪ್ಪುದರಿಂದ ಅಸಾಧ್ಯತೆ ಪ್ರತಿಪಾದಿಸಲ್ಪಟ್ಟುದು| ಲುಬ್ಧಕಾದ್ಗೀತಲೋಭೇನ ಇತಿ - ವ್ಯಾಧನತ್ತಣಿಂ ಗಾನಲೋಲುಪತ್ವದಿಂದ ಮೃಗಃ– ಎರಳೆ, ಮೃಗಯುತೆ–ಆರಸುತಲಿದ್ದಿತು| ವಧಂ–ಮೃತ್ಯುವಂ| ಕೇವಲಶಬ್ದದತ್ತಣಿಂ ವಿನಾಶಮಂ

ತೋಱ [1]ಪರ್ವ(ತ)ಕ್ಕೆ ತೋಱುತ ಪೇೞ್ದಪಂ| ಗಿರೀಂದ್ರೇತಿ- ಗಿರೀಂದ್ರಂ–ಸುರಗಿರಿ| ಅದಱ ಶಿಖರದ ಹಾಗೆ ಯೆಂಬುದಱಂ ಮಹಾಕಾಯತೆ ಪ್ರತಿಪಾದಿಸಲ್ಪಟ್ಟುದು| [2]ಲೀಲಯೋನ್ಮೂಲಿತದ್ರುಮಃ ಇತಿ -ಅನಾಯಾಸದಿಂ ಕೀಳಲ್ಪಟ್ಟ ವೃಕ್ಷಮನುಳ್ಳ| ಇದಱಂ ಮಹಾಬಲವತ್ತೆ ಖ್ಯಾಪಿತಮಾದುದು| ಏವಂವಿಧೋಪಿ ಕರಿಣೀಸ್ಪರ್ಶಸಂಲೋಭಾದಿತಿ – ಸಹಚರೀವಿಶೇಷಸ್ಪರ್ಶಸಂಜಾತಮೂಢತ್ವದಿಂ – ಆಲಾನಂ – ಬಂಧನಮಂ, ಯಾತಿ- ಐದುತಿದ್ದೀತು| ವಾರಣಾ-ಮಹಾದ್ವಿಪಂ| ರೂಪಾಖ್ಯಾಪಿತ ವಿಶೇಷವಿಷಯದೊಳಂ ದೋಷಮಂ ತೋಱುತೆ ಪೇೞ್ದಪಂ| ಸ್ನಿಗ್ಧೇತಿ–ಸ್ನಿಗ್ಧಾಂ ಶ್ಲಕ್ಷ್ಣಮಾದ- ದರ್ಶನೀಯಮಾದ, ದೀಪಶಿಖೆಯಂ, ಆಲೋಕ–ಉದ್ಯೋತ| ಅದಱಂ ವಿಲೋಭಿತೇನ- ವಶೀಕೃತಮಾದ ವಿಲೋಚನಮನುಳ್ಳ – ಶಲಭಂ, ಮೃತ್ಯುಂ–ವಿನಾಶಮಂ, ಗಚ್ಛತಿ-ಐದುತಿದ್ದೀತು | ಸಂದೇಹಾತ್-ಅಸಂಶಯಂ | ಸಹಸಾ–ತತ್ಕ್ಷಣಾತ್ | ಪತಂಗಂ ತನ್ನಂ ಕ್ಷಿಪತಿ| ರಸದಲ್ಲಿಯುಂ ಹಾಗೆ ತೋರುತ್ತೆ ಪೇೞ್ದಪಂ| ದೂರೇ ವ್ಯವಧಾನಮುಂಟಾದೊಡಂ ಅಲಿ(ಲ)ವಾಸ(ಲ)ಮಂ ಮಾಡುವ ವರ್ತಮಾನೋದೃಷ್ಟಿ ದೃಗಿಂದ್ರಿಯಕ್ಕೆ| ಕಿಂತು| ದೃಷ್ಟವಸ್ತುಗಳೊಳ್ ಅಪಾಯಂಗಳು ಪ್ರಯೋಗಿಸಲ್ಪಡುತಿದ್ದಾವು | ತತ್ರ–ಆದರ್ಶನಮಿಲ್ಲದೆಯಿರ್ದೊಡಂ| ಅಗಾಧೇ ಮರವಗಾಹಮಾದ(ಸ)ಲಿಲೇ–ಜಲದುರ್ಗದಲ್ಲಿ, ಚರ್ರ--ವ್ಯವಹರಿಸುತ್ತ, ಮೀನಃ-ಪಾಠೀನಂ | ಸಾಮಿಷಂ ಸಮಾಂಸಮಾದ, ಲೋಹಂ–ಧೀವರಕರಚಾಲಿತಗಾಣಮಂ | ಪ್ರವೇಶಿ(ಸಿಅ)ಲ್ಲಿ ಮೃತ್ಯುಮೇತಿ— ವಿನಾಶಮನೈದುತಿದ್ದೀತು | ಗಂಧದೊಳಂ ಪೇೞ್ದಪಂ- ಗಂಧೇತಿ-ಗಂಧಲೋಲುಪೋ ಮದಾಮೋದಮದಿರಾಲೋಲುಪಮಾದ, ಮಧುಕರಂ|ಪಾನಾಸವಪಿಪಾಸಯಾ-ಮದ್ಯಪಾನೇಚ್ಛೆಯಿಂ, ಗಂಧಲೋಲುಪತಯೇತ್ಯರ್ಥಾದಾಪತಿತಂ| ಅಭ್ಯೇತಿ– ಅಯ್ದುತಿದ್ದೀತು | ಅಸುಖಸಂಚಾರಾಂ ಅತಿಕ್ಲೇಶದಿಂ ಸಂಚರಣಮಾದುದತ್ತಣಿಂ| ಗಜಕರ್ಣಝುಳಝ್ಝುಳಂ- ಝುಳಝ್ಝುಳ ಶಬ್ದೋನುಕರಣೋಪಲಕ್ಷಿತಮಾದ ಆನೆಯ ಕರ್ಣಗತಿ ಝುಳಝ್ಝುಳೆಯೆಂದು ಉಪಚರಿಸಲ್ಪಡುಗುಂ| ಅದಂ, ಅಯ್ದುತಿದ್ದೀತು| ಅಭ್ಯೇತಿ ಮೃತ್ಯುಂ - ಎಂದನುವರ್ತಿಸುತ್ತಿದ್ದೀತು| ಪ್ರಾಗುಕ್ತಮನುಪಸಂಹರಿಸುತ್ತುಂ ಪೇೞ್ದಪಂ| ಏಕೈಕಶೋಽಪಿ–ಏವಮುದಾಹೃತ ನ್ಯಾಯದಿಂ ಏಕೈಕಶೋಽಪಿ ಪ್ರತ್ಯೇಕಮಾದೊಡಂ, ವಿನಿಘ್ನಂತಿ– ನಿಶ್ಚಯದಿಂ ವಿನಾಶಮನೈದುತಿದ್ದಾವು | ವಿಷಯಾಃ - ಸ್ಪರ್ಶಾದಿಗಳುಂ, ವಿಷಸನ್ನಿಭಮಾರಣಾತ್ಮಕಮಪ್ಪುದಱಂ| ಕ್ಷೇಮೀ-ಕುಶಲಸಂತನು, ಸಃ-ಆತನು| ಕಥಮಿವಿತ್ರ್ತದೊಳು|? ಸ್ಯಾತ್-ಅಹನು| [3]ಆಗನೆ? ಯೆಂಬುದರ್ಥಂ| ಆವಪೃಥಿವೀಶಂ ಸಮಾಸೇನ ಗ್ರಹಣದಿಂ ಪಂಚವಿಷಯಂಗಳಂ ಆಗಳುಂ ಸೇವಿಸಲ್ ಸಕ್ತನಪ್ಪಂ| ಯಿಾಪ್ರಕಾರದಿಂ ಸರ್ವಥಾ ವಿಷಯನಿಷೇಧಂ ಪ್ರಾಪ್ತಮಾಗೆ ಯಿದು ನಿಯಮಮಲ್ಲ ಎಂದು ತೋಱಲ್ ಪೇೞ್ದಪಂ| ಸೇವೇತೇತಿ| ಸೇವೇತ–ಉಪಭೋಗಿಸಬೇಕು | ವಿಷಯಾ-ಶಬ್ದಾದಿಗಳಂ| ಕಾಲೆ–ತತ್ಸೇವಾವಸರದೊಳು |—

ತಥಾಚ ಕೌಟಲ್ಯೇ :—

ಧರ್ಮಾರ್ಥಾವಿರೋಧೇನ ಕಾಮಂ ಸೇವೇತ ನಿಸ್ಸುಖಂ| ಸ್ಯಾತ್ | ತಥಾ ಚ ಪಂಚಮೇ– ದಿವಸದ ಅಷ್ಟಭಾಗದೊಳ್ | ಸ್ವೈರವಿಹಾರಮೆಂದು ಶಬ್ದಾದಿವಿಷಯಸೇವೆ| ಅನುಮತಾ| ರಾತ್ರೇರಪಿ ತೃತೀಯೇ — ಅಷ್ಟಭಾಗೇ ತೂರ್ಯಘೋಷದಿಂ ಸಂವಿಷ್ಟ ಇತಿ| ಸಂವಿಶನಮುಂ ಸುತಲ(ಲ್ಪ?)ದೊಳು| ಅಭಿಧೀಯತೆ | ಯಿಾ ಪ್ರಕಾರದಿಂ ವಿಷಯಸೇವಾರ್ಥ|

---

(1) ಪಾರ್ಶಕ್ಕೆ (2) ಲುಬ್ಧಕಾದ್ಗೀತಲೋಭೇನೇತಿ ವ್ಯಾಧನತ್ತಣಿಂ ಲೀಲಯೋ (3) ಆಗಣನೆ–

ಮಾಗಿ ಏಕಯಾಮಂ ಅನುಮತಂ | ಆಕಾಲದೊಳ್, ಮುಕ್ತ್ವಾ-ಬಿಟ್ಟು| ಪರಿತ್ಯಜೇತ್-ತತ್ಪರತಾಂ| ತನ್ನಿಷ್ಠತ್ವಮುಂ| ಕಾಲದೊಳ್ ವಿಷಯಸೇವನೆಯಂ ಮಾಳ್ಪ ಅರಸು ಜಿತೇಂದ್ರಿಯನೆಂದೆ ಪೇಲಲ್ಪಡುತಿದ್ದಾನು| ಅದುಕಾರಣದಿಂ ಮತ್ತಂ ಮರಳಿ ಬಾಹ್ಯಬಾಧಾವಿಷಯತ್ವದೊಳ್ ಸೇವೆಯನುಮತಿಸಲ್ಪಟ್ಟುದೆಂದು ಪೇಲ್ದಪಂ | ಸುಖಮೆ ಫಲಂ ಅರ್ಥಕ್ಕೆ | ಆವುದಾನೊಂದು ಕಾರಣದಿಂ ಫಲಂ ಭೂಮ್ಯರ್ಥಕ್ಕೆ ಸುಖಂ| ತನ್ನಿರೋಧಮುಂಟಾಗೆ, ವೃಥಾಫಲಂಗಳು ಶ್ರಿಯೊ-ವಿಭೂತಿಗಳುಂ| ವಿಷಯಸೇವಾ ತತ್ಪರತ್ವದೊಳು ದೋಷಮಂ ತೋಱಲ್ ಪೇಲ್ದಪಂ | ನಿಕಾಮಮಿತಿ| ಅತ್ಯರ್ಥಂ ಸಕ್ತಮನಸಾಂ - ಸಂಶ್ಲಿಷ್ಟಚಿತ್ತರ್ಗೆ| ಕಾಂತಾಮುಖಾವಲೋಕನೆ, ಪ್ರಿಯತಮಾನನಪ್ರೇಕ್ಷಣದೊಳ್ | ಗಳಂತಿ-ಚ್ಯವಿಸುವುವು| ಗಳಿತಾಶ್ರೂಣಾಂ-ಚ್ಯುತನಯನ ಜಲಮುಳ್ಳವರ್ಗೆ| ಯೌವನದೊಡನೆ ಯುಕ್ತವಾದವರ್ಗೆ, ತೇನ ಸಮಂ| ಶ್ರಿಯಃ-ಸಂಪತ್ತುಗಳು| ಇಂತು ಪೇಲಲ್ಪಟ್ಟುದು| ಯಾವತ್ಕಾಂತಾಮುಖಾಸಕ್ತರ್ಗೆ, ತಾವದುದ್ಯೋಗಾಭಾವದಿಂ ಅರಿಗಳಿಂ ಅಪಹರಿಸಲ್ಪಡುವುವು| ರಾಜ್ಯದೊಳ್ ಕಾಂತೆಯೊಡನೆ ಯಿರುವವನ ಸಂಪತ್ತುಗಳೊಡನೆ ಯೌವನಂ, ಗಳತಿ - ಸಡಲುತ್ತಿದ್ದೀತು| ವಿಷಯಾಸಕ್ತಿಯೊಳು ದೋಷದತ್ತಣಿಂ ತ್ರಿವರ್ಗಕ್ಕೆ ಕಾರ್ಯಕಾರಣ [ಭಾವಮಂ ತೋಱಲು ಪೇಲ್ದಪಂ| ಧರ್ಮಾದರ್ಥ ಇತಿ| ಧರ್ಮಾಚ್ಛಾಸ್ತ್ರೋಕ್ತಲಕ್ಷಣಮಪ್ಪ ವಿಧಿನಿಷೇಧರೂಪ ಧರ್ಮದತ್ತಣಿಂ ಕಾರಣ] ವಿಭೂತರ್ಾ| ಅರ್ಥೋ-ಭೂಮಿಹಿರಣ್ಯಾದಿರೂಪಮಾದ ಕಾರ್ಯಭೂತಮಾದ ಅರ್ಥಂ ಭವತಿ | ಆಗುತಿದ್ದೀತು | ಎಂದು ಅರ್ಥಾಲ್ಲಬ್ಧಂ| ಅರ್ಥ್ಯತೇ ಇತ್ಯರ್ಥೋಽಪಿ ಕಾಮ ಏವ| ಅರ್ಥಿಸಲ್ಪಡುವುದಱಿಂದ ಕಾಮಮುಂ ಅರ್ಥಮೆ| ಅದಯ್ದು ವಿಧಮಾದೊಡಂ ಸಾಮಾನ್ಯಮೆಂದುಂ ವಿಶಿಷ್ಟಮೆಂದುಂ ಎರಡುತೆಱಂ| ವಿಷಯಂಗಳೊಳ್ [1] ಆನುಭಾವಿಕ ಸುಖಾನುವಿದ್ಧಮಾದ ಫಲವತ್ತಾದ ಅರ್ಥ-ಪ್ರತೀತಿಸಾಮಾನ್ಯಂ| ಪ್ರಧಾನಮಪ್ಪುದಱಿಂ| ಯಿನ್ನು ವಿಶಿಷ್ಟಂ ಕಾಮಂ| "ಕಾಮಾತ್ಸುಖಫಲೋದಯಂ" ಎಂಬ ಕಾಮದತ್ತಣಿಂ ಸುಖಫಲೋದಯಂ | ತ್ರಿವರ್ಗಕ್ಕೆ ಫಲಂ | ಆದಱಿಂದಯಮಾವಿರ್ಭಾವಂ | ಯಿಂತು ತತ್ಕಾರ್ಯಕಾರಣಭಾವಮಂ ತೋಱಿ ಅನ್ಯಕ್ಕಾದೊಡಮತ್ಯಾಸಕ್ತಿಯುಂಟಾದೊಡೆ ದೋಷಮಂ ತೋರ್ದಪಂ| ಅದು ದ್ವಿವಿಧಂ [2] ಸಾಮಾನ್ಯಂ ವಿಶಿಷ್ಟಮೆಂದುಂ |

ತಥಾಚೋಕ್ತಂ :— ಕಾಮಸೂತ್ರೇ- ಕೌಟಲ್ಯೇನೈವ—

ಶ್ರೋತ್ರತ್ವಕ್ ಜಿಹ್ವಾ ಘ್ರಾಣೇಂದ್ರಿಯಂಗಳ್ಗೆ ಆತ್ಮಮನಸ್ಸಂಯುಕ್ತಮಾದ ಮನಸ್ಸಿನಿಂದ ಅಧಿಷ್ಠಿತಮಾದುದರ್ಕ್ಕೆ ತಮ್ಮ ವಿಷಯಂಗಳಲ್ಲಿ ಆನುಕೂಲ್ಯದತ್ತಣಿಂ ಪ್ರವೃತ್ತಿಸಿ ಕಾಮಂ ತನ್ನಂ ಕೆಡಿಸುಗುಂ | ತತಃ ಕೆಡಿಸಿದ ಬೞಿಕ್ಕೆ ಧೀವರ್ಗಮಧ್ಯದೊಳು ಯಃ-ಆವುದೊಂದು| ಧರ್ಮಾರ್ಥಂ ಕಾಮಮಾದೊಡಂ| ಯಟಕ್ತ್ಯಾ-ಶಾಸ್ತ್ರೋಕ್ತ ಸೇವಾಕಾಲಮಾತ್ರ ಯುಕ್ತಿಯಿಂದ| ಸನಿಷ್ಷೇತೆ ಅನುಷ್ಠಿಸಲ್ಪಡಲಿಲ್ಲ| ಸಏವ-ಅದೇ| ತಾ-ವಿತರಂಗಳಂ, ಹತ್ವಾ-ಕೆಡಿಸಿ| ಆತ್ಮಾನಂ-ತನ್ನನ್ನು ಹಂತಿ ಕೆಡಿಸುಗುಂ | ಅದೆಂತೆಂದೊಡೆ — ಧರ್ಮಾತಿಸೇವೆಯೊಳ್ ಅರ್ಥಂ ಕ್ಷೀಣಮಹುದು| ತತ್ಕ್ಷಯದಿಂ ಕಾಮಾಭಾವಂ| ಕಾಮಃಮರ್ಥಮೂಲಮಪ್ಪುದಱಿಂ| ಅತ್ಯರ್ಥಾಭಾವದತ್ತಣಿಂ ಶರೀರದಂಡದಿಂ ಧರ್ಮಚಿಕೀರ್ಷು ಶರೀರಮಂ ಕ್ಷೀಣಮಾಗಿ ಮಾಡುವಂ | ತದನಂತರಂ ಸನ್ನಿಪಾತಾದಿಗಳಿಂ ಶರೀರನಾಶಮಾಗೆ ಧರ್ಮಮುಂ ಕೆಡುಗುಂ| ಯಿಾ ಪ್ರಕಾರದಲ್ಲಿಯೆ ಅರ್ಥಮುಂ ಅತಿಸೇವಿತ

---

(1) ಅಭಿಮಾನಿಕ (2) ಅನ್ಯಂ ವಿಶಿಷ್ಟಮೆಂದು ।

ಮಾಗೆ ಅರ್ಥಮೂಲಮಾದರ್ಥಮುಂ ಕೆಡುಗುಂ| ತತಶ್ಚ ಅತ್ಯುಪಚರಿತಮಾದರ್ಥಂ ಚೋರರಾಜಾದಿಗಳಿಂ ಅಪಹರಿಸಲ್ಪಡುಗುಂ |

ತಥಾ ಚ ಕೌಟಲ್ಯಃ—

ಏಕೋಽಭ್ಯಾಂತ್ಯಾತಿಸೇವಿತೋಧರ್ಮೋ ಅರ್ಥಕಾಮೌ ನಾತ್ಮಾನಮಿತಿ - ತಥಾ ಚ ಪೀಡಯತೀತ್ಯೇವ ದೋಷಃ ಇತಿ | ವಿಷಯಂಗಳ್ಗೆ ಅತಿಮನೋಹರತ್ವಮಂ ಇಂದ್ರಿಯಂಗಳ್ಗೆ ದುರ್ಜಯತ್ವಮಂ ತೋಱುತ್ತೆ ಪೇಲ್ದಪಂ—ಏವಮಿತಿ| ಹೀಗೆ ಸ್ಪರ್ಶವಿಷಯಂ ಅತಿಮನೋಹರತ್ವದಿಂ ತ್ವಗಿಂದ್ರಿಯಸ್ಪರ್ಶಮನುಳಿದು| ಶ್ರವಣಮಾತ್ರಮೆ ಸಂಹ್ಮಾ(ಹ್ಲಾ)ದಿ-ಸಮ್ಯಗಾಹ್ಲಾದ ಜನಕಮಾಗಿ ಮನೋವಿಕಾರಮಂ ಪುಟ್ಟಿಕುಂ| ಕಾಮಾತುರಮಂ ಮಾಡುವುವು| ಕಿಂಪುನರ್ದರ್ಶನಂ ತಸ್ಯಾಃ ಇತಿ- ಆಸ್ತ್ರೀಯದರ್ಶನಮಾದೊಡೆ ಪೇಱ್ವುದೇನು। ಕಾಮಾತುರಮಂ ಮಾಳ್ಪದೆ| ಎಂದಾಸ್ತ್ರೀಯಯೆಂದಡೆ| ವಿಲಾಸೋಲ್ಲಾಸಿತ ಭ್ರೂವಿಲಾಸದಿಂ-ವಿಭ್ರಮದಿಂ ಉಲ್ಲಸಿತಮಾದ ಹುಬ್ಬುಗಳನುಳ್ಳ ಸ್ತ್ರೀಯದರ್ಶನಂ ವಿಕಾರಮಂ ಪುಟ್ಟಿಪುದು| ಸ ಪುನಃ ಸಂಖ್ಯಾತುಮಪಿ ನ ಶಕ್ಯತೇ| ಇತಿ | ಪುನಶ್ಶಬ್ದಂ ವಿಸ್ಮಯದೊಳ್ ಪ್ರಯುಕ್ತಮಿತಿ| ವೀತರಾಗರ್ಗೆಯುಂ ಎಲ್ಲಿ ದರ್ಶನಮುಂಟು ಎಂದು ಶಂಕಿಸಿ ಪೇಲ್ದಪಂ| ರಹ ಇತಿ | ಪಂಚಾಲಮುನಿಪ್ರತಿಪಾದಿತ ಚತುಃಷಷ್ಟ್ಯನುಷ್ಠಾನ ಉಪಗೂಹನ ಚುಂಬನಾದಿಗಳೊಳಂ, ಕುಶಲಾ- ಪ್ರವೀಣೆ,ತದಾ ಮೃದ್ವಿತಿ| ಅಕೊ [1] ಉದರಮಪ್ಪಂತು? ಸಮನ್ಮಥಮಪ್ಪಂತು, ಸಂಭೋಗಶೀಲೆಯಪ್ಪ ಸ್ತ್ರೀ,ಕಂ-ಆವ ಶರೀರಿಯನ್ನು-[2] ನ(ರ)ಮಯತಿ ಕ್ರೀಡಾಸಕ್ತನಂ ಮಾಡದೆ ಯಿದ್ದಾಳು? ಸಮಸ್ತರನೂ ಕ್ರೀಡಾಸಕ್ತರಂ ಮಾಳ್ಪಳೆ| ಆವುದಾನೊಂದು ಕಾರಣದಿಂ ಆಹಾರಭಯ ನಿದ್ರಾಮೈಥುನಾಭಿಲಾಷಿಗಳ್ಗೆ ಶರೀರದಿಂದಲೆ ಉತ್ಪದ್ಯಮಾನರ್ಥ ಅದು ಕಾರಣದಿಂದಲೆ ಸದ್ಯೋಜಾತಶರೀರದಲ್ಲಿ ಅಸಂಕಲ್ಪಿತಮಾದ ಆ(ಇ)ಂದ್ರಿಯಕ್ಕೆ ಉತ್ಥಾನಂ ಕಾಣಲ್ಪಡುತಿದ್ದೀತು| ಶೂನ್ಯಾಭಿಲಾ (ದೋ) ಷ ನಿದ್ರಾಕಾಲಸಶಬ್ದಾದಿಗಳತ್ತಣಿಂ ಭಯಮುಂ ಕಾಣಲ್ಪಟ್ಟುದು। ಈ ಪ್ರಕಾರಮಾಗಿ| ಕಾಮಂ ಶರೀರಧರ್ಮಮಾದುದಱಿಂ| "ಕಂ ಪುರುಷಂ ನಾರೀ ನ ರಮಯತಿ" ಆ(ವ) ಪುರುಷನಂ ನಾರಿ ಕ್ರೀಡಾಸಕ್ತನಂ ಮಾಡಳು ? | ಸಮಸ್ತರಂ ಮಾಳ್ಪಳೆ| ಅನುರಕ್ತನಂ ಮಾಡಿ ಎಂದು ವಾಕ್ಯಶೇಷಂ| ರಕ್ತಾಂತಲೋಚನಾ—ರಕ್ತಾಂತಲೋಚನಂಗಳ್ಗೆ ಲಕ್ಷಣಂ ರಮ್ಯತ್ವಮುಂ| ಇದನೆ ತೋಱಲ್ ಪೇಲ್ದಪಂ| ಮುನೇರಪೀತಿ | ಮುಮುಕ್ಷುವಾದ ಮುನೇರಪಿ | ಮಹರ್ಷಿಯ ಮನಸ್ಸರಾಗಂ ಸಾಭಿಲಾಷಮಾಗಿ| ಜಿತೇಂದ್ರಿಯನಾದುದಱಿಂ ಅವಶ್ಯಂ ಅವಿಧೇಯಮಪಿ| ಕುರುತೇಽಂಗನಾ| ಅಥವಾ ಅವಶ್ಯಂ ನಿಶ್ಚಯದಿಂದ ಸರಾಗಂ ಕುರುತೇಽಂಗನಾ ಕಾಕಿ ಮಿವ ಯೇನೊನುಯೇತರೋಪಾದಿ ಯೆಂದೊಡೆ (ಸಂಶಿಶು)ಶಶಿಮಂಡಲಮಿವ| ಪ್ರಸನ್ನವಾದ ಮುಮುಕ್ಷುವ ಮನಸ್ಸಂ ಅರಿಷಡ್ವರ್ಗಪರಿತ್ಯಾಗದಿಂ ಕಾಂತಿಜನನಂ| ಸಮ್ಯಕ್ ಜ್ಞಾನೋದಯದತ್ತಣಿಂ[ಶಶಿಮಂಡಲಮುಂ ಪ್ರಸನ್ನಂ,ತಿರೋಧಾನಾದ್ಯಭಾವದತ್ತಣಿಂ| ಕಾಂತಿಹೀನನಂತೆ ತೇಜೋಮಯತ್ವದತ್ತಣಿಂ]ಅದುಕಾರಣಂ ಸ್ತ್ರೀ ಆವಪುರುಷನಂ ಕಾಮಾಸಕ್ತನಂ ಮಾಡಳು| ಯೆಂದುಸ್ಥಿತಂ| ಈ ಪ್ರಕಾರಮೆ ಇತರಂ(ರಾ)ಗದೊಳು ತೋಱುತೆ ಪೇಲ್ದಪಂ| ಮನ ಇತಿ | ಏವಂ ಏತೇ ವಿಷಯಂಗಳ್ ಮನೋಹರಂಗಳ್| ಇಂದ್ರಿಯಂಗಳುಮಂ ಸಕಲಮನಸ್ಸಂ(ಪ್ರ)ಹ್ಲಾದಯಂತೀಭಿಃ, ಆನಂದಹೇತುತ್ವದತ್ತಣಿಂ ಉದಕಂಗಳ್ಗಂ ಪ್ರಿಯರ್ಗಂ ಮಂದಂ

---

(1) ಅಕೊಪರಮಪ್ಪಂತು (2) ನೋನ್ಮಾದಯತಿ

ಯಾಂತೀಭಿಃ ಗಾಂಭೀರ್ಯದಿಂ ಉದಕಂಗಳ್ಗೆ- ಸ್ತನಜಘನಭಾರದಿಂ ಸ್ತ್ರೀಯರ್ಗೆ| ಜಲಮತ್ಯರ್ಥ
ಮಾಗಿ| ಮಹಾಂತೋಽಪಿ ಗುಣೈಃಪುರುಷಾಃ ಪ್ರಸಿದ್ಧಪುರುಷರಾದೊಡಂ ಪರಾಭಿದ್ಯಂತೆ| ಅಂತಃ
ಪ್ರದೆ(ವೇ)ಶದಿಂ ಸ್ವಾಧೀನರಾಗಿ ಮಾಡಲ್ಪಡುತಲಿಧಾರು| ಸ್ತ್ರೀಭಿರದ್ಭಿರಿವಾಚರೋಃ| ಈ ವಿಷಯಂ
ಗಳ್ ಅತಿ ಮನೋಹರಂಗಳ್| ಇಂದ್ರಿಯಂಗಳ್ ದುರ್ಜಯಂಗಳೆಂದು ಪ್ರತಿಪಾದಿಸಲ್ಪಟ್ಟುದು|
ಸ್ತ್ರೀವಿಷಯಾಸಕ್ತಿ ದುರ್ಜಯಂ| ಮಾತ್ರಾವಿನಾಶಾರ್ಥಮಪ್ಪುದು| ತಜ್ಜನ್ಯಮಾದ ಮೃಗಯಾದಿ
ವ್ಯಸನತ್ರಯಮಂ ತೋಱುತ ಪೇೞ್ದಪಂ| ಮೃಗಯೇತಿ—ಸ್ತ್ರೀಸೇವೆಯೊಳು ಬಲಾವಹಮಾದುದು
ಮಾಂಸಾಭಿಲಾಷೆ- ಮೃಗಯಾವ್ಯಸನಂ| ಸ್ತ್ರೀಯರೊಡನೆ ಪಾನಗೋಷ್ಠಿ-. ಪಾನವ್ಯಸನಂ|
(ಸ್ತ್ರೀಯರೊಡನೆ ಪಿಪಾವಣಷ್ಟಿಪಾನವ್ಯಸನಂ?)ಸ್ತ್ರೀಯರೊಡನೆ ವಿನೋದಾರ್ಥಮಾಗಿ ಅಕ್ಷಕ್ರೀಡಾ
ವ್ಯಸನಂ| ಅದು ಕಾಮಜಮಾದ ತ್ರಿವರ್ಗಂ| ಇದು ಈ ವ್ಯಸನಂಗಳರಸುಗಳ್ಗೆ ನಿಂದಿತಂಗಳ್|
ನಿಷಿದ್ಧಂಗಳಾಗಿವಿಜಿಗೀಷಾ ವಿಘ್ನವಿಧಾಯಿತ್ವದತ್ತಣಿಂ ವ್ಯಸನಂಗಳಿಂ ವಿಪತ್ತುಗಳ್ ಕಾಣಲ್ಪಟ್ಟವು|
ಅದೆಂತೆಂದೊಡೆ| ಪಾಂಡುಮೃಗಯಾಸಕ್ತನಾದತ್ತಣಿಂ ಮೃಗರೂಪಧಾರಿಯಾಗಿ ಕಾಮದಿಂ
ಮೃಗಿಯೊಡನೆ ಕೂಡಿರ್ದ ಮುನಿಯಂ ಮೃಗಮೆಂದು ಸಂಹರಿಸಿದಂ|ಜೀವಿತಶೇಷನಪ್ಪ ಆ ಮುನಿಯಿಂ
ಶಪ್ತನಾದಗಿ ಪಾಂಡುವುಂ ವಿಪನ್ನನಾದನೆಂದು| ಹಾಗೆ ನಿಷಧದೇಶಾಧಿಪತಿ ನಳನುಂ| ಅಕ್ಷ
ದ್ಯೂತದೊಳ್ ಕಷ್ಟಮಂ ಪಡೆದಂ| ಪಾನದೊಳ್ ವೃಷ್ಣ್ಯಂಧಕರುಂ—ಪಾನಗೋಷ್ಠಿಯಲ್ಲಿ ಪೂರ್ವ
ಶಾಪದಿಂ ಸುರಾಮದಶನದಿಂದ ಅನ್ಯೋನ್ಯ ಹತಮಾದರ್| ದೃಷ್ಟಾಸ್ತೇಭ್ಯೋಽಪಿ(ಹಿ) ವಿಪದಃ—
ಪಾಂಡುನಳವೃಷ್ಣಿಗಳೊಳ್ ಯಥಾಕ್ರಮದಿಂ ಮೃಗಯಾಕ್ಷದ್ಯೂತಪಾನಂಗಳಿಂ ವಿಪತ್ತು ಕಾಣಲ್ಪ
ಟ್ಟುದು| ಹೀಗೆ ಕಾಮಮತಿಪ್ರವೃದ್ಧಮಾದೊಡೆ ವಿನಾಶಹೇತುತ್ವದಿಂ ಅರಿದಾಗೆ ಕ್ರೋಧಾದಿಗಳು
ಮೆಂದರಿಷಡ್ವರ್ಗರ್ಮಂ ಪೇೞಲು ನುಡಿದಂ| ಕಾಮಕ್ರೋಧೇತಿ| ಕಾಮಃ- ಕಾಮಸೂತ್ರದೊಳ್
ಕೃತಲಕ್ಷಣಂ| ಅದು ಸ್ಪರ್ಶವಿಶೇಷವಿಷಯತ್ವಾಭಿಮಾನಿಕಸುಖಾನಿಷಿದ್ಧಮಾದ ಫಲವತ್ಯರ್ಥ
ಪ್ರತಿಪತ್ತಿಃ| ಕ್ರೋಧಃ-ಅವಿಮೃಶ್ಯಕಾರಿತೆಯಿಂ ಪ್ರಾಣಿಗಳೊಳ್ ದ್ರೋಹಬುದ್ಧಿ| ಲೋಭಂ—ಚಿತ್ತಂ
ಗಳೊಳ್ ಅತಿಲೋಲುಪತೆ| ದ(ತ)ರ್ಪಣ ಹರ್ಷಕಾರಣಮನುಳಿದು ಪ್ರಾಣಿಹಿಂಸಾಜನಿತಮಾದ
ಪರಿತೋಷಂ| ಮಾನಂ—ಮಾನಿಗಳೊಳೆ ಮಾನಬುದ್ಧಿ| ಮದಮೆನೆ—ಬಲಾವಲೇಪಜನಿತಮಾದ
ಉತ್ಸೇಕಂ| ಇತ್ಯಯಂ— ಇಂತಿದು| ಅರಿಷಡ್ವರ್ಗಂ. ಏನಂ ಷಡ್ವರ್ಗಮುತ್ಸೃಜೇತ್| ಪರಿತ್ಯಜಿಸ
ಬೇಕು| ತಸ್ಮಿಂಸ್ತ್ಯಕ್ತೇ ನೃಪಃ ಸುಖೀ ಭವತಿ| ವರ್ಜನೀಯತ್ಯಾಗದತ್ತಣಿಂ ಅರಿಷಡ್ವರ್ಗ ಪರಿತ್ಯಾ
ಗದೊಳ್ ದೋಷಮಂ ತೋಱುತ ಪೇೞ್ದಪಂ| ದಂಡಕಾಖ್ಯ ಇತಿ| ದಂಡಕವಿಷಯಾಧಿಪತಿ
ಬೃಹದಶ್ವನೆ ಬವಂ ಮೃಗಯಾಗತನಾಗಿ ಮಹರ್ಷಿಕನ್ಯೆಯಂ ಕಾಮದತ್ತಣಿಂ ದೂಷಿಸುತ್ತೆ
ಭೃಗುಶಾಪದತ್ತಣಿಂ ಸಬಂಧುರಾಷ್ಟ್ರಮಪ್ಪಂತು ವಿನಾಶಮನೆಯ್ದಿದಂ| ಕ್ರೋಧದಿಂ ಜನಮೇ
ಜಯನಶ್ವಮೇಧ ಕರ್ಮಾಸಕ್ತಂ ನಖಕ್ಷತೆಯಾದ ಪತ್ನಿಯಂ ಕಂಡು ಋತ್ವಿಕ್ಕುಗಳಿಂದಲೆ ಮಾಡ
ಲ್ಪಟ್ಟುದೆಂದು ಅವರೊಳ್ ವಿಕ್ರಾಂತನಾಗಿ ಅವರ ಶಾಪದಿಂದೆ ಹತನಾದ ಇಂತು ಲೋಭದತ್ತಣಿಂ
ಡೈಳನಾದ ಪುರೂರವಸ್ಸು ಚಾತುರ್ವರ್ಣ್ಯಸರ್ವಸ್ವಾಪಹಾರದಿಂ ಪರರಂ ಪೀಡಿಸುತ್ತೆ ಪ್ರಜೆಗಳಿಂದ
ನೇಕಲೊಷ್ಟವಿದದಿಂದೆ ಹತನಾದಂ| ವಾತಾಪಿರ್ಹಷಿತಃ| ಪುನರಪಿ ವಾತಾಪೀಲ್ವಲ ಸಂಜ್ಞಕ
[1]ರಾದ ಕಾಮರೂಪಿಗಳಾದ ಕೃತಕಗೃಹಸ್ಥರೂಪರಾದ ಮಹಾಅಸುರ (ರ್) ಮಹರ್ಷಿಗಳನಾ

(1) ಭಾವದ

ಮಂತ್ರಿಸಿ ಒರ್ವನಂ ಕೃತಕಪಶುರೂಪನಂ ಸೀೞ್ದು ಆ ಮಾಂಸದಿಂ ಮಹರ್ಷಿಗಳಂ ತುಷ್ಟಿವಡಿ
ಸುತುಂ| ಆ ಋಷಿಗಳ್ ಭುಕ್ತೋತ್ಥಿತರಾದ ಅನಂತರಂ ಸಂತೋಷಮಂ ಪಡೆ 'ಬಾಬಾ ಯಿಲ್ವಲ'
ಎಂದು ಮೃತಸಂಜೀವಿನೀವಿದ್ಯೆಯಿಂ ಉಜ್ಜೀವಿತನಾದಾ ಯಿಲ್ವಲಂ ಆ ಋಷಿಗಳ ಉದರಮಂ
ಸೀೞುತ್ತೆ ಹೊಱಡೆ ಆಋಷಿಯ ತಿಂದು ಯಿರ್ವರುಂ ಸಂತುಷ್ಟರಹರ್ ಎಂಬುದಂ ಕೇಳ್ದು ಬಂದ
ಅಗಸ್ತ್ಯಂಗಿರ್ವರುಂ ವಿಗತರಾದರೆಂದು ಉಕ್ತದೋಷಮಂ ದ್ವಿತೀಯ ಶ್ಲೋಕದಿಂ ವಿಸ್ತರಿಸಿದಪಂ|
ಪೌಲಸ್ತ್ಯನಾದ ರಾವಣನೆಂಬ ರಾಕ್ಷಸಂ ಮಾನ್ಯನಾದ ರಾಮನ ಇಚ್ಛೆಯಿಲ್ಲದ ಸೀತೆಯನುಪ
ಸರ್ಪಣಂಗೆಯ್ದು ನಾಶಮನೆಯ್ದಿದಂ| ಮದದತ್ತಣಿಂ ದಂಭೋದ್ಭವನೆಂಬ ಅಸುರನನೇಕವಾರಂ
ಜಿತತ್ರಿಭುವನನಾಗಿ ತನಗೆ ಸಮಾನನಾದ ಪ್ರತಿಮಲ್ಲನಿಲ್ಲೆಂದು ಸುರಾಮದದಿಂದಲು ಹೇಗೋ
ಹಾಗೆ ಪೌರುಷಮದೋನ್ಮತ್ತನಾಗಿ ನಾರದನಂ ಪ್ರಾರ್ಥಿಸಿದಂ| ತೋಱುಯೆನಗೆ ಪ್ರತಿಮಲ್ಲನ
ನೆಂದು| ತದನಂತರಂ ನಾರದ ಪ್ರದರ್ಶಿತನಾದ ಸಮಾಧಿಸ್ಥನಾದಮರಮುನಿಯಿಂದೆ ಇಷೀಕಾಸ್ತ್ರ
ಸಂಬದ್ಧನಾಗಿ ರಾಷ್ಟ್ರದತ್ತಣಿಂ ದಂಭೋದ್ಭವಂ ನಾಶಮನೆಯ್ದಿದಂ| "ಪ್ರಯಾತಾ ನಿಧನಂ ಹ್ಯೇತೇ"
ಶಾಂಡಿಲ್ಯಾದಿಗಳ್ ಷಡ್ವರ್ಗಮಾಶ್ರಿತಾಃ ಅರಿಷಡ್ವರ್ಗಸೇವಾಸಕ್ತರಾಗಿ, ಅದುಕಾರಣ ಶ್ರೇಯೋರ್ತ್ಥಿ
ಯಿಂದ ಶತ್ರುಷಡ್ವರ್ಗ ತ್ಯಾಗದಿನಿಂದ್ರಿಯಜಯಂ ಕರ್ತವ್ಯಂ|

— ಇಂತು ಇಂದ್ರಿಯ ಜಯಪ್ರಕಾರಂ —

ಇಂತು ಇಂದ್ರಿಯಜಯಕ್ಕೆ ಕಾರಣಮಾದ ವಿದ್ಯಾವೃದ್ಧಸಂಯೋಗಮಭಿಧಾತುಮಾಹ| ವರ್ಧ
ಯನ್ನಿಹ ಧರ್ಮಾರ್ಥಾವಿತಿ| ಪುರುಷನಿಂ ಪುರುಷಾರ್ಥದ್ವಯೋಪಾರ್ಜನಾರ್ಥಂ ಪ್ರತಿಪತ್ತವ್ಯ
ಮಿತಿ| ಸದಾಚಾರಪ್ರಾಮಾಣ್ಯದತ್ತಣಿಂ ಪುರುಷಾರ್ಥದ್ವಯಂ ಪೇೞಲ್ಪಡುತ್ತಿದ್ದೀತು| ಇನ್ನು
ಪುರುಷಾರ್ಥ ಚತುಷ್ಟಯಂ ಧರ್ಮಾರ್ಥಕಾಮಮೋಕ್ಷಂಗಳ್| ಧರ್ಮಪರಿಣಾಮೋ ಮೋಕ್ಷ ಇತಿ|
ಧರ್ಮಪರಿಣಾಮಮಾದ ಮೋಕ್ಷಮೆ ಧರ್ಮಮಪ್ಪುದು| ಅರ್ಥಸಾಧ್ಯತ್ವದತ್ತಣಿಂ ಕಾಮಮುಮ
ರ್ಥಮೆ| ಅದು ಕಾರಣಂ ಧರ್ಮಂಗಳೆ ಪ್ರಮಾಣಭೂತಂಗಳ್| ತೌ ವರ್ಧಯ್ಯ| ಅರ್ಥಾದುಪಾ
ರ್ಜನವಂ ಹರಿವೃದ್ಧಿಯ ನಯನದತ್ತಣಿಂ ಉಪಾರ್ಜಿತಕ್ಕೆ ವೃದ್ಧಿ| ಅದೆ ಉಪಾದೇಯಂ|
"ಸೇವಿತಾ ಸದ್ಭಿರಾದರಾತ್" ಅತಃ – ಅದುಕಾರಣಂ, ಧರ್ಮಂಗಳನಭಿವರ್ಧಿಸುತ್ತುಂ, ತದೇವ–
ಅದನೆ ಪೇೞ್ದಪಂ| ಹಿಮೇತಿ| ಹಿಮಾಂಶುಮಾಲೀ—ಶರಚ್ಚಂದ್ರನಹಾಗೆ ಉತ್ಫುಲ್ಲಪಂಕಜಮಾದ
ಸರಸ್ಸು ಯಿಾಯೆರಡುಂ ಹೇಗೆ ಮನಂಗಳಂ ಸಂತೋಷಪಡಿಸುಗುಂ| ಸಜ್ಜನಚೇಷ್ಟಿತಮುಂ ಹಾಗೆ|
ಸುಜನ ಸಂಗತಿಯೆ ಮಾಡಲ್ತಕ್ಕುದು| ದುರ್ಜನಸಂಗತಿಯಾದೊಡೆ ತ್ಯಾಜ್ಯಮೇ| ದೋಷದರ್ಶನ
ದತ್ತಣಿನೆಂದು ಪೇೞ್ದಪಂ| ಗ್ರೀಷ್ಮೇತಿ| ಗ್ರೀಷ್ಮದೊಳ್ ಸೂರ್ಯಾಂಶುಗಳುಂ ತೀವ್ರಂಗಳಪ್ಪುವು
ಅದಱಿಂ ಸಂತಪ್ತಮಾದುದಱಿಂ ಉದ್ವೇಜನಸಮಾಶ್ರಯಂ| ಮರುಸ್ಥಲದೊಳ್ ತರುಲತಾದ್ಯ
ಭಾವದಿಂ| ಪೀಡಿಸುತಿದ್ದೀತು, ದುರ್ಜನಸಂಗದೊಳ್ ಆಶ್ರಯಮಿಲ್ಲ ಸ್ಥಿತಿಯಿಲ್ಲದುದಱಿಂ|
ಉಗ್ರಮುಚ್ಚಮಾಗಿ| ಅಭಿಭವತಿ – ಪೀಡಿಸುತ್ತಿದ್ದೀತು| ಎಂದು ದುರ್ಜನಸಂಗಂ ತ್ಯಾಜ್ಯ
ಮೆಂದು ಸಂಬಂಧಂ|

ಕೌಟಲ್ಯೇ ಚಾಪ್ಯುಕ್ತಂ—"ಅನರ್ಥಂ ಜಾರ್ನ ಸಂಸರ್ಗಂ ತ್ಯಜೇ"ದಿತಿ | ದುರ್ಜನಸ್ಸ್ವರೂಪಮಭಿಧಾತುಂ ಆ ದುರ್ಜನಸ್ವರೂಪಮಂ ಪೇಲ್ದಪಂ| ಶ್ರುತೇತಿ| ಶ್ರುತಮಾನ್ವೀಕ್ಷಕ್ಯಾದಿವಿದ್ಯೆ| ಶೀಲಂ ಸ್ವಭಾವಂ| ತತ್ಸಂಪನ್ನರಾದ ಸುಜನರಂ ಅಕಸ್ಮಾದೇವ ಕಾರಣನುಳಿದೆ, ಅಂತಃಪ್ರವಿಶ್ಯ ರಸಪ್ರದರ್ಶನಾದಿನಾಪ್ತಭಾವವನೆಯ್ದಿ ಹೃದಯಮನೆಯ್ದಿ ದಹತೀತಿ(ಅ)ಪಕಾರಮಂ ಮಾಲ್ಪೆ(ಲ್ಪ)ನೆಂಬುದರ್ಥಂ| ಶುಷ್ಕಂ ವೃಕ್ಷಮನಗ್ನಿಯೋಪಾದಿ| ಆಶೀವಿಷಂಗಳತ್ತಣಿನತಿದೇಶಮಂ ಪೇಲ್ದಪಂ| ನಿಶ್ವಾಸೇತಿ| ನಿಶ್ವಾಸದೊಡನೆ ಉದ್ಗೀರ್ಣಮಾದ ವಿಷಾಗ್ನಿಧೂಮಧೂಮ್ರೀಕೃತಮಾದ ಆನನಂಗ(ಳು)ಳ್| ಇಲ್ಲಿಂದ ಮುಂದಣಪಜ್ಕ್ತಿ ಆರಭ್ಯವಾಗಿ ಕ್ರಮ || ? || ಗುರುಸೇವನಮುಂ ವಿದ್ಯಾವೃದ್ಧರಾ(ರಾ)ಧನಮುಂ ಕುರ್ವೀತ ಮಾಡಬೇಕು| ಅದೆಂತೆಂದೊಡೆ:- ನಿಗೃಹೀತೇಂದ್ರಿಯ ತನ್ನಾಯದಿಂ ಜಿತೇಂದ್ರಿಯನಾಗಿ ಬ್ರಹ್ಮಚರ್ಯಮನೆ ಗ್ರಹಿಸಿ ವಿದ್ಯಾಗ್ರಹಣಂ| ವಿದ್ಯಾನಾಂತು ಯಥಾಸ್ವಮಾಚಾರ್ಯಾತ್ಪ್ರಾಮಾಣ್ಯಾದ್ಧಿ ನಯೋಯಃ ದಮುಶ್ಚವಿನ(ನೇ)ಯ ನಿಯಮಂಗಳ್| ವಿನಯನಿಯಮಂಗಳ್| ನಿಯಮಂಗಳ್| ಪ್ರತ್ಯುತ್ಥಾನಾಭಿವಾದನನಾಮಶ್ರವಣ| ವಿದ್ಯಾನಾಂತು ಯಥಾಸ್ವಮಾಚಾರ್ಯಪ್ರಾಮಾಣ್ಯಾದಿಂ ವಿನ(ನೇ)ಯ ನಿಯಮಂಗಳ್| ಗುರುಸೇವೆ ಏನು ಕಾರಣಮೆನೆ ಪೇಲ್ದಪಂ| ಶಾಸ್ತ್ರಾಯೇತಿ| ಶಾಸ್ತ್ರಮಾನ್ವೀಕ್ಷಕ್ಯಾದಿ| ವಿದ್ಯಾನುಶಾಸನದತ್ತಣಿಂ ತ್ರಾಣಹೇತುತ್ವದತ್ತಣಿಂ ಶಾಸ್ತ್ರಂ| ಯೇನುಕಾರಣಮೆನೆ ಪೇಲ್ದಪಂ| ವಿನಯವೃದ್ಧಯೇ| ಇಂದ್ರಿಯಜಯಂ ಜಯ ವೃದ್ಧ್ಯರ್ಥಂ| ವೃದ್ಧಿಯೆಂಬುದು ಸದರ್ಥಕ್ಕೆ ಅಸದರ್ಥಕಲ್ತು| ಎತ್ತಣ(ಲಾ)ನು ಸ್ವಾಭಾವಿಕವಿನಯಬೀಜಮುಳ್ಳೊಡೆ ಆಗ ಶಾಸ್ತ್ರಂ ಅದಕ್ಕೆ ವೃದ್ಧ್ಯರ್ಥಮಪ್ಪುದು| ಆ ಸ್ವಾಭಾವಿಕ ವಿನಯಮುಂ ಜನ್ಮಾಂತರಾಭ್ಯಾಸವಾಸನಾಯಾತಂ| ಆದಱಿಂದಲೇ ಉಪಬೃಂಹಿತಮಾದ ಕೃತಕಮೆಂದು ವ್ಯವಹರಿಸಲ್ಪಡುಗುಂ| ವಿದ್ಯಾದಿನಿಯತ ಇತಿ— ಉಪಶಾಂತತ್ವಮುಂ ಕಾಣಲ್ಪಟ್ಟುದು| ಉಪಶಾಂತತ್ವದಿಂದಮೆ ವಿನಯಮುಂ—

ತಥಾಚೋಕ್ತಂ ಕೌಟಲ್ಯವ್ಯಾಕರಣೇ—"ಕೃತಕಮೆಂದುಂ ಸ್ವಾಭಾವಿಕಮೆಂದುಂ ವಿನಯಂ ದ್ವಿವಿಧಂ| ಕ್ರಿಯಾದ್ರವ್ಯಂ ವಿನಯತಿನಾ ದ್ರವ್ಯಮಿತ್ಯೇವಂ| ಶಾಸ್ತ್ರಂ ಸ್ವಾಭಾವಿಕ ವಿನಯವೃದ್ಧ್ಯರ್ಥಂ ಆಗುತ್ತಿದ್ದೀತು| ಅದೆ ಶಾಸ್ತ್ರದಿನುಪಬೃಂಹಿತಮಾಗಿ ಕೃತಕಮೆಂದು ವ್ಯವಹರಿಸಲ್ಪಡುಗುಂ| ವಿದ್ಯಾವಿನೀತ ಇತಿ| ವಿದ್ಯೋಪಬೃಂಹಿತೇಂದ್ರಿಯ ಜಯಂ ಕೃತಕವಿನಯಸಂಪನ್ನನಾದ ನೃಪಂ| ನ ಕೃಚ್ಛ್ರೇಷ್ವಪಿಮಜ್ಜತಿ! ತಜ್ಜನಿತಸುಖೇಷ್ವವಸೀದತಿ| ವಿಷಣ್ಣನಾಗಂ| ವಿಷಯಾನ್ನಪ್ರಾಣಾಪಾಯ ಇತಿ| ವೃದ್ಧಸಂಯೋಗದೊಳ್ ಉಪಹಾರಮುಂ ತೋಱುತ್ತ ಪೇಲ್ದಪಂ| ವೃದ್ಧೋಪಸೇವೀತಿ| ವಿದ್ಯಾಪ್ರವೃದ್ಧೋಪಸೇವೀ ಆದ ನೃಪತಿ| ಸತಾಂ–ಸತ್ಪುರುಷರ್ಗೆ| ಸಂಮತಃ| ಕಾರಣಬಹುತ್ವದಿಂ| ಶೌರ್ಯ ತ್ಯಾಗ ಕವಿತ್ವಾದಿ ಕಾರಣಾನಂತ್ಯದತ್ತಣಿಂ ಕೀರ್ತ್ಯಾದಿ ಕಾರ್ಯಬಾಹುಳ್ಯಂ| ವಶ್ಯತೇ ಎಂದು| ಪ್ರೇರ್ಯಮಾಣೋಽಪಿ| ಪ್ರೇರಿಸಲ್ಪಡುತ್ತಿರ್ದೊಡಂ| ಅಸತ್ಕೃೈ(ಲ್ಪೈ)ಃದುರ್ವಿನೀತಿ,ತಂ| ಅಕಾರ್ಯೇ–ಅಯಥಾರ್ಥಮೂಲಮಾದ ಕಾವ್ಯಂಗಳೊಳ್| ನ ಪ್ರವರ್ತತೆ– ಉದ್ಯೋಗಿಸನು| ವಿದ್ಯಾಗ್ರಹಣೋತ್ತರಕಾಲದೊಳು ಅವಶಿಷ್ಟಮಾದ ವಿದ್ಯಂಗಳುಂ ಗ್ರಾಹ್ಯಂಗಳೆಂದು ತೋಱುತ ಪೇಲ್ದಪಂ| ಆದದಾನ ಇತಿ! ವಿಜಿಗೀಷು ಪ್ರವೃತ್ತಿಸ್ಥನಾದೊಡಂ ಪ್ರತಿದಿನದಲ್ಲಿಯುಂ ಆದದಾನೋ–ಗೃಹ್ಣ, ಕಲಾಃ–ಚತುಷ್ಷಷ್ಟಿರೂಪಮಾದ ಶಾಸ್ತ್ರಾಲಂಕಾರಗೀತೋಪಗ್ರಹಣದಿಂ ಕಲೆಗಳಂ ಗ್ರಹಿಸುತ್ತೆ| ಸಮ್ಯಗಿತಿ– ಗೃಹೀತತತ್ವನಾದ ಮಹೀಪತಿಃ–ಅರಸು

ಶುಕ್ಲಪಕ್ಷದೊಳು ಸಂಚರಿಪ ಚಂದ್ರನಹಾಗೆ ವರ್ಧತೇ| ಸಕಲ ಕಲಾಕಲಾಪರಿಪೂರ್ಣನಪ್ಪನೆಂಬುದರ್ಥಂ| ಕೃತಕೇಂದ್ರಿಯಜಯ ಲಕ್ಷಣಮಪ್ಪ ಶಾಸ್ತ್ರವಿನಯಕ್ಕೆ ಫಲಮಂ ತೋಱಲು ಪೇಲ್ದಪಂ| ಜಿತೇಂದ್ರಿಯಸ್ಯೇತಿ| ಜಿತೇಂದ್ರಿಯಸ್ಯ ವಿನಯಸಂಪನ್ನನಾದ ವಿಜಿಗೀಷುವಾದ ನೃಪತಿಗೆ| ನೀತಿಮಾರ್ಗಾನುಸಾರಿಣಃ| ನೀತಿ–ಯಿಾಶಾಸ್ತ್ರ ಮೇತನ್ಮಾರ್ಗಾನುಸಾರಿ ಆದ ವಿನಯಸಂಪನ್ನಂಗೆ| ಭವಂತಿ| ಆಗುತಿದ್ದಾವು| ಜ್ವಲಿತಾಃ – ಭಾಸ್ವರಂಗಳಾದ| ಶ್ರಿಯಃ ಸಂಪತ್ತುಗಳುಂ| ಕೀರ್ತಿಗಳುಂ| ನಭಸ್ಸ್ಪೃಶೋಭವಂತಿ – ದಿಗಂತವ್ಯಾಪಿಗಳಪ್ಪವು| ಶ್ರೀಗಳ್ಗೆ ಬಹುವಚನಂ–ವಿನಯಶ್ರೀ, ವಿರಶ್ರೀ ಇತ್ಯಾದಿ ವ್ಯವಹಾರದರ್ಶನದತ್ತಣಿಂ| ಕೀರ್ತಿಗಳ್ಗಂ ಬಹುವಚನದತ್ತಣಿಂ ಇಂದ್ರಿಯಜಯ ವೃದ್ಧಸಂಯೋಗಾದಿಗಳಿಂ ಬಹುತ್ವಂ| ಉಪಸಂಹರಿಸುತ್ತೆ ಪೇಲ್ದಪಂ| ಇತಿ ಸ್ಮರಾಜೇತಿ| ಈ ಪೂರ್ವೋಕ್ತಕಾರಣದಿಂ ವಿನಯಮುಮಿಂದ್ರಿಯ ಜಯಮುಂ ಸ್ಫುಟಂ| ರಾಜಾ–ಪ್ರಜಾರಂಜನದತ್ತಣಿಂ ನಿಷೇವ್ಯಮಾಣಃ ಸೇವಿಸುತ್ತೆ ವೃದ್ಧಸಂಯೋಗೋಕ್ತಿಯಿಂ ಆವಾಗ ನಿರಸ್ತನಿರ್ಬಂಧಕಂ| ನರದೇವಸೇವಿತಮಿತಿ| ಷೋಡಶಮಹಾರಾಜಾಧ್ಯಾಸಿತಮಪ್ಪ ಶ್ರೀಯಃಪದಮಂ(ಸಮಾ)ಚಕ್ರವರ್ತಿಸ್ಥಾನಮಂ ಸಮಾಕ್ರಾಮತಿ| ಆಕ್ರಮಿಸುತಿದ್ದಾನು| ಭಾಸ್ವರಂ ದೀಪ್ತಾಕಾರಮಾದ ಶಿರೋ ಮಹಾರತ್ನಗಿರೇಃ| ಮಹಾಮೇರುಶಿಖರದಂತೆ ಇಂದ್ರತ್ವಮನೆಂಬುದರ್ಥಂ| ಉನ್ನತಮಕ್ಷತಪುಣ್ಯದಿಂ ಪ್ರಾಪ್ಯಮಾದ ಪರಮನೆಯ್ದುವನೆಂದು ಅರ್ಥಂ|ಆ ವಿಜಯಮುಮೇಕಾನುಕ್ರಮಾನುರೋಧನದಿಂದಲೆ ಯೆಂದು ತೋಱುತ್ತೆ ಪೇಲ್ದಪಂ| ಏವಮಿತಿ| ಆವುದಾನೊಂದು ಪಾರ್ಥಿವತಾ–ರಾಜತ್ವವು| ಅದು ಲೋಕವ್ಯತಿರೇಕವರ್ತಿ| ಲೋಕೋಽನ್ಯಥಾ ವರ್ತತೇ— ಅನ್ಯಥಾ ಪಾರ್ಥಿವತಾ| ಅದುಕಾರಣದಿಂ ಸ್ವಾಭಾವಿಕ ವಿನಯಾಭಾವದತ್ತಣಿಂ ಮೃದುತ್ವರಹಿತಂ ಬಲಾದಿತ್ಯಾಕ್ರಮ್ಯ ಗುರುರ್ವಿನಯೇನ ಯೋಜಯೇತ್ ಇತಿ| ಯತಃ ನಯಸ್ಯ–ಶಾಸ್ತ್ರಾನುಷ್ಠಾನಕ್ಕೆ, ಆವುದೊಂದು ಕಾರಣದಿಂ ಇಂದ್ರಿಯಜಯಂ ಪುರಸ್ಸರಃ| ಸಾಧಕಮೆಂಬುದರ್ಥಂ| ಬಲಾತ್ಕಾರದಿಂದ ಈತನಂ ವಿನಯಯುಕ್ತನಂ ಮಾಲ್ಪುದೇನುಕಾರಣಮೆಂದೊಡೆಯಿಲ್ಲಿ ಗುಣಮಂ ತೋಱುತೆ ಪೇಲ್ದಪಂ| ಪರಾಮಿತಿ ವಿನೀತವಾದ ಅರಸು| ಪರಾಂ–ಉತ್ಕೃಷ್ಟಮಾದ| ಸೇವ್ಯತ್ವಮಂ| ಪಡೆಗುಂ| ಬಹುಸತ್ಪುರುಷರಿಂ ಸೇವಿತನಾದವನೆ ಅರಸು ಅಹನು| ಮತ್ತಂ ವಿಶೇಷಮುಂಟು| ಮಹೀಪತಿಗಳ್ಗೆ ವಿನಯೋಭೂಷಣಂ ದುರ್ಲಭಮಪ್ಪುದಱಿಂ ವಿನಯಮೆ ಅಲಂಕಾರಂ| ಕರೀವ–ಭದ್ರೋರಾಜಾ ವಿನಯೇನ ಶೋಭತೇ| ವಿನಯದಿಂ ಭದ್ರಗಜಂ ಹೇಗೆ ಒಪ್ಪುಗುಂ| ಹಾಗೆ ವಿದ್ಯಾ(ಶ) ವೃದ್ಧಾಹಿತನಯನಾದ ಅರಸು| ಪ್ರವೃತ್ತದಾನಃ – ಪ್ರವೃತ್ತತ್ಯಾಗನಾಗಿ, ಇತರಮಾದೊಡೆ ಪ್ರವೃತ್ತ[1] ಮದಂ| ಮೃದುಸಂಚರತ್ಕರಂ–ಕೋಶಗೃಹಮಂ ಕುಱಿತು ಸಂಚರ್ರ–ಪ್ರವೇಶಿಸುತಿರ್ಪ ಕರಮುಳ್ಳವನಾಗಿ–ಪ್ರಜಾದಯಕಾರಣಂ| ವಿದ್ಯಾವೃದ್ಧಸಂಯೋಗಮಂ ಮಾಡಲ್ಪಡುಗುಂ ಎಂದು ತೋಱುತ್ತೆ ಪೇಲ್ದಪಂ| ಗುರಸ್ತ್ವೇತಿ| ಗುರು ವಿದ್ಯಾವೃದ್ಧ್ಯರ್ಥಂ–ವಿದ್ಯಾಧಿಗಮನಾರ್ಥಂ| ಆಭಿಹಿತನಾದಂ–ವಿದ್ಯಾಪರಿಣತಿಗೋಸುಗ ಸೇವ್ಯತೇ| ಸಾಚ–ಆವಿದ್ಯೆಯುಂ, ಶ್ರುತಮಾದೊಡೆ ಪ್ರಜ್ಞೆಗೋಸುಗ ಭವತಿ| ಆಗುತಿದ್ದೀತು| 'ಶ್ರುತಾದ್ಧಿಪ್ರಜ್ಞಾಪಿ ಜಾಯತೇ' ಇತಿ ವಚನಾತ್| ಮಹಾತ್ಮನಾಂ ವೇಧಸಾಂ–ಶಾಸ್ತ್ರಕಾರರ| ಆದರ್ಶನಂಗಳ್| ಅನುಪಪತ್ತಿ[ಪ್ರತೀತಮಾದ ಶ್ರುತಮನನುವರ್ತಿಪುವು| ಅವು ಅನುಷ್ಠೀಯಮಾನಂಗಳಾಗಿ ಭೂತದಯೆ ಸಂಪತ್ತಿ] ಗೋಸುಗಂ| ಆ ಸಂಶಯಂ–ಸಂಶಯ

(1) ಮದಂ| ಸಂಚರತ್ಕರಂ ಕೋಶ

ಮನುಳ್ಳುದು ನಭವಂತೀತಿ| ಅಪ್ಪುದೆಂದು ತಿಳಿದು ಸಂಯೋಗಜನಿತವನಯಂಗೆ ಪ್ರಯೋಜನಮಂ ತೋಱುತ್ತೆ ಪೇೞ್ದಪಂ| ಸುನಿಪುಣಂ ಇತಿ| ಶಾಸ್ತ್ರೋಕ್ತ ವಿನಯ-ನಿಯಮಾದಿಯಿಂ|ಉಪಸೇವ್ಯಸಮ್ಯಗಾರಾಧಿಸಿ| ಸದ್ಗುರುಮಿತಿ| ತದಾ ವ್ರತಕೃತ್ಯ್ವಯುಕ್ತಃ| ಶುಚಿರಿತಿ | ಬಾಹ್ಯಾಂತಃಕರಣ ಶೌಚಯುಕ್ತನಾಗಿ | ಅನುವೃತ್ತಿಪರಃ–ಶುಶ್ರೂಷಾತತ್ಪರನಾಗಿ | ವಿಭೂತಯೇ ಶ್ರೀಗೋಸುಗ | ಗುರುಮುಪಗಮ್ಯ ಸ್ವಾಭಾವಿಕ ವಿನಯಯುಕ್ತನಾದ ನೃಪತಿ ಪದಾಯ-ಚಕ್ರವರ್ತಿಸ್ಥಾನಕೋಸುಗ | ಕ್ಷಮಃ ಸಮರ್ಥನಾಗಿ| ತಥಾ ಶಮಾಯ–ಇಂದ್ರಿಯಜಯಕ್ಕೋಸುಗ ಎಂದು ಭಾವಂ| ಸ ಸಮ್ಯಕ್ ಗುರುಸೇವಾಜನಿತ ಶಾಸ್ತ್ರನಿಶ್ಚಯ ಜನಿತೇಂದ್ರಿಯಜಯಂ ತತ್ಪ್ರಾಪ್ತಿಗೋಸುಗ ಭವತಿ| ಇಂದ್ರಿಯಜಯವೃದ್ಧಸಂಯೋಗಂಗಳ ಅನನುಷ್ಠಾನದೊಳ್ ದೋಷಮಂ ಅನುಷ್ಠಾನದೊಳ್ ಗುಣಮಂ ತೋಱುತ್ತೆ ಪೇೞ್ದಪಂ | ಅವಿನ[1]ಯರತ ಇತಿ | ವಿನಯಂ-ಇಂದ್ರಿಯಜಯಂ, ಶಾಸ್ತ್ರನಿಶ್ಚಯಪ್ರಾಪ್ಯಂ| ತದ್ವಿರುದ್ಧಮವಿನಯಂ, ತಾದೃಗ್ವ್ಯಸನಾಸಕ್ತ ನೃಪಂಗೆ ಸಾಧ್ಯಮುಮಸಾಧ್ಯಮು ಮಪ್ಪುದು| ವಿದ್ವಿಷಃ ರಿಪುಗಳುಂ | ಶ್ರುತವಿನಯವಿಧಿಯನುಳ್ಳವರಿಂ ಸಮಾಶ್ರಯಿಪರ್ | ವಿನೀತಃ | ತನುರಪಿ ಕೃಶನಾದೊಡಂ ನೈತಿ ಪರಾಭವಂ — ಪರಾಭವಮಂ ಪಡೆಯಂ ಕ್ವಚಿದಪಿ ವಿನಯಯುಕ್ತನಪ್ಪುದಱಿಂ—

ಇತಿ ಕಾಮಂದಕೀಯನೀತಿಸಾರದೀಪಿಕಾಯಾಮುಪಾಧ್ಯಾಯ
ನಿರಪೇಕ್ಷಾಯಾಮಿಂದ್ರಿಯ ಜಯೋನಾಮ
ವೃದ್ಧಸಂಯೋಗಃ
— ಪ್ರಥಮಃ ಸ್ಸರ್ಗಃ —

---

(1) ಅವಿನಯಪರಂ (ಮುದ್ರಿತಮೂಲಪಾಠ)

— ದ್ವಿತೀಯಸ್ಸರ್ಗಃ —

ವಿದ್ಯಾಸಮುದ್ದೇಶ ಪ್ರಕರಣಂ

ವಿನಯ ನಯಂಗಳ ಅನುಷ್ಠಾನಂ | ಚಕ್ರವರ್ತಿ ಪದಪ್ರಾಪ್ತಿಗೋಸುಗ ಭವತಿ ಅನುತಿದ್ದೀತು | ಎಂದು ಭಾವಿಸುತಿದ್ದಂಥ್ಥಾನೀತಿಸಾರಗ್ರಂಥಕಾರನಿಂದೆ ಇಂದ್ರಿಯಜಯಪ್ರಕರಣಮಾದಿಯೊಳೆ ಪೇೞಲ್ಪಟ್ಟುದು | "ವಿನಯೋ ಹೀನ್ದ್ರಿಯಜಯ" ಇತಿ | ನಯೋದಂಡರೂಪನೀತಿಲಕ್ಷಣಂ ಪರಮಪ್ಪುದಱಿಂ ವಿದ್ಯಾಚತುಷ್ಟಯಮುಂ, ಕುತಃ-ಹೇಗೆ, ಅಹುದೆಂದು ಅನಂತರಂ ವೃದ್ಧಸಂಯೋಗಮುಂ ಪೇೞಲ್ಪಟ್ಟುದು| ಈಗ ಕ್ರಮಾಗತಮಾದ ವಿದ್ಯಾಸಮುದ್ದೇಶಂ ಪ್ರತಿಪಾದಿಸಲ್ಪಡುತಿದ್ದೀತು | ಎಂದು ಪ್ರಕರಣಸಂಬಂಧಂ—

ವಿದ್ಯೆಗಳ ಉದ್ದೇಶಮಂ ಪೇೞ್ದಪಂ| ಆನ್ವೀಕ್ಷಕೀತಿ | ಶಾಶ್ವತೀ – ಪ್ರತ್ಯೇಕಮವಿನಾಶಿಗಳುಂ| ಪ್ರಜೆಗಳ್ಗೆ ಶ್ರೇಷ್ಠಗಳಾದುದಱಿಂ ನಿರಂತರಂ| ಅನುಚ್ಛೇದ್ಯಂಗಳಾದ| ಅದು ಕಾರಣಮೆ | ಶಾಶ್ವತಮಾದ ಈ ನಾಲ್ಕು ವಿದ್ಯೆಗಳೆ ಮಾನ್ಯಂಗಳ್| ಕಾಂಚನ? ಲೋಕಸಂಸ್ಥಿತಿಹೇತವಃ| ಅದೆಂತೆಂದೊಡೆ— ಆನ್ವೀಕ್ಷಕೀ ಲೋಕಸಂಸ್ಥಿತಿಹೇತುರಿತಿ| ಆನ್ವೀಕ್ಷಕೀ ಲೋಕಸ್ಥಿತಿಹೇತುಯೆಂಬುದು ಸ್ವಯಮೇವ ವಕ್ಷ್ಯತಿ– ರಕ್ಷಮಾಣಸ್ತಧಾರತ್ವಂ | ಹರ್ಷಶೋಕೌ ವ್ಯುದಸ್ಯತಿ| ಹರ್ಷಶೋಕಂಗಳ್ ವಿನಾಶಹೇತುಗಳ್|ತದಭಾವದಿಂ ಲೋಕಸ್ಥಿತಿ, ಉಭೌ ಲೋಕಾವವಾಪ್ನೋತಿ| ತ್ರಯ್ಯಾಂ ತಿಷ್ಠನ್ನು ಭಾವಿತಿ ವಚನಾತ್ | ಆತ್ರಯಿಸಂಪನ್ನನಾಗಿ | ವಾರ್ತಾಕೃಷಿ ವಾಣಿಜ್ಯಸ್ವರೂಪವಾರ್ತೆಯಂ ಸಾಧಿಸಿ | ಸರ್ವಧಾನ್ಯಹಿರಣ್ಯರತ್ನಪಶುವಾಹನಾದಿ ಸಂಪನ್ನನಪ್ಪುದಱಿಂ ನಾನೃತೇ ಭಯಮೃಚ್ಛತೀತಿ ವಚನಾತ್ | ತತಶ್ಚಲೋಕಸ್ಯಸಂಸ್ಥಿತಿರಿತಿ | ದಂಡನೀತಿಸ್ತು–ದಂಡನೀತಿಯಾದೊಡೆ ಸುತರಾಂ ಲೋಕಸಂಸ್ಥಿತಿಹೇತುಃ ವಕ್ಷ್ಯತಿಚ| ತದಾತ್ಮಾನಂ ಶೇಷಾಂಶ್ಚ ಪ್ರತಿಯಾಯಾನ್ಮಹೀಪತಿರಿತಿ | ಹಿತಂ ಚಿಂತಯೇದ್ವಿನಯಾನ್ವಿತ ಇತಿ | ಇಂದ್ರಿಯಜಯ ಉಕ್ತಃ | ಇತಿ| ವಿದ್ಯಾಸಂಖ್ಯಾವಿಷಯದೊಳ್ ವಿಪ್ರತಿಪತ್ತಿಪೂರ್ವಕಮಾದ ಸಂಪ್ರತಿಪತ್ತಿಯಂ ತೋಱುತ್ತೆ ಪೇೞ್ದಪಂ| ತ್ರಯೀವಾರ್ತೇತಿ | ಈ ಮೂಱು ವಿದ್ಯೆಗಳನೆ ಮಾನವಾಃ ಮನುಷ್ಯರ್| ಮನ್ಯಂತೇ–ತಿಳುಯುತಿದ್ದಾರು | ಅದೇನುಕಾರಣಮೆಂದೊಡೆ— ಹಿ| ಆವುದೊಂದು ಕಾರಣದಿಂ ತ್ರಯೀವಿಶೇಷವೆ ಇವು, ಆನ್ವೀಕ್ಷಕೀತ್ರಯಮುಂ | ಅದಱ ವಿಶೇಷಂಗಳೆ ಇವೆಂದು ಪೇೞ್ದುದು| "ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾನ್ಯಾಯವಿಸ್ತರಃ||" ಇತಿ, ನ್ಯಾಯಸ್ಯವಿಸ್ತರೋ ನ್ಯಾಯದರ್ಶನಂ| ವೈಶೇಷಿಕನಿಂ ಪ್ರತಿಪಂಚಿತಮಾದುದಱಿಂ ಲೋಕಾಯತಮೆಂದು | ವಿಸ್ತರಮಿದು | ಈ ಪ್ರಕಾರಮಾದ | ಅದು ಆನ್ವೀಕ್ಷಕೀ| ಅದು ತ್ರಯೀವಿಶೇಷಮೆ| ಅಲ್ಲಿ ಆವುದು ತ್ರಯೀವಿರುದ್ಧಂ ಅದು ವೃದ್ಧಾದಿ ಪ್ರಬದ್ಧಮಾದ ಆನ್ವೀಕ್ಷಕಿಯೆ | ಆತ್ಮಾದಿವಿಭಾವನಾಭಾವದಿನೆಂದು ಮಾನವರ್ ಭಾವಿಸುವರ್ | ಬಾರ್ಹಸ್ಪತ್ಯರಾದೊಡೆ ವಿದ್ಯಾದ್ವಯಮನೆ ಭಾವಿಸುವರೆಂದು ಪೇೞ್ದಪಂ| ವಾರ್ತೇತಿ | ವಾರ್ತೆ ದಂಡನೀತಿಯೆಂದುವಕ್ಷ್ಯಮಾಣಲಕ್ಷಣಮಾದ ಎರಡೇಎಂದು ವ್ಯವಸ್ಥಿತರಾದರ್| ಕೃತನಿಶ್ಚಯರಾದರ್| ಕುತಃ ಹೇಗೆಯೆಂದೊಡೆ — ಅರ್ಥಪ್ರಧಾನತ್ವಾದಿತಿ | ಚಾತುರ್ವರ್ಣ್ಯಮಾದ ಲೋಕಕ್ಕೆ ಭೂಮ್ಯರ್ಥಮೆ ಪ್ರಧಾನಂ | (ನಿ)ವೃತ್ತಿಹೇತುವಪ್ಪುದಱಿಂ| ಆ ಅರ್ಥಮುಂ ವಾರ್ತೆಯಿಂ ಲಬ್ಧಮಾಗುತಿದ್ದೀತು | ದಂಡನೀತಿಯಿಂ ಪಾಲಿಸಲ್ಪಡುಗುಂ ಭೂಮ್ಯಾದಿ ಲೋಕಪಾಲನಮಿಷ್ಟಮಪ್ಪುದಱಿನಾದಂಡನೀತಿಯಿಂದಲೇ, ಹಾಗೆ | ಆನ್ವೀಕ್ಷಕೀ ತ್ರಯೀವಿಶೇಷಮಾದೊಡಂ ತ್ರಯೀಸಂಚರಣ

ಮಾತ್ರ ಪ್ರಯೋಜನಮೆ ಧರ್ಮರುಚಿರುಪಾಂಶುದಂಡಯೋದಿತಿವಚನಂ | ಅವರ ಮತದೊಳ್ ಧರ್ಮಾಧರ್ಮಂಗಳಿಲ್ಲಂ ಪರಲೋಕಾಭಾವದಿಂ | ಆದಱಿಂ ತ್ರಯೀನಿಷ್ಪ್ರಯೋಜನಂ | ಕೇವಲಂ ಆವಾಗ ಉಪಾಂಶು| ದಂಡಪ್ರಯೋಗಾರ್ಥಮೆ| ಖತ್ಥಯಿಸುವನಿಂ| ತತ್ರ ಅಲ್ಲಿ | ತ್ರಯೀಸಂಚರಣಾರ್ಹಮಂ ಪ್ರಯೋಗಿಪಲ್ಲಿ ಆಗ ತ್ರಯೀ ಅನುಷ್ಠಾನಸಂವೃತನಾಗಿ ಪರಂಗೆ ಶಂಕನೀಯನಾಗಂ| ಯಿಂತು ಯಿದೆ ಪ್ರಯೋಜನಂ ಬೇಱಿಲ್ಲವೆಂದು ಪೃಥಗ್ವಿದ್ಯೆಯಾಗಿ ತ್ರಯಿ ಗಣಿಸಲ್ಪಡಲಿಲ್ಲ ಯೆಂದು ಭಾವಂ| ಇತ್ಯೇವಂ ಸುರಪುರೋಧಸಃ-ಬೃಹಸ್ಪತಿಯ,ಶಿಷ್ಯಾಃ-ಅಂತೇವಾಸಿಗಳು, ಮನ್ಯನ್ತೇ ತಿಳಿಯುತ್ತಿದ್ದಾರು| ಶುಕ್ರಶಿಷ್ಯರಾದೊಡೆ ಒಂದೆ ವಿದ್ಯೆಯನೆ ಭಾವಿಪರೆಂದು ತೋಱುತ್ತೆ ಪೇೞ್ದಪಂ| ಏಕೈವೇತಿ| ದಂಡನೀತಿ ಯೀಶಾಸ್ತ್ರಮೆ | ಆವುದೊಂದು ಕಾರಣದಿಂ ಆ ದಂಡನೀತಿಯುಳ್ಳೊಡೆ ಸರ್ವವಿದ್ಯಾರಂಭಮುಂ, ದಂಡನೀತಿಯಿಲ್ಲದೊಡೆ ಮಾತ್ಸ್ಯನ್ಯಾಯಮುಂಟಾಗೆ ವಿದ್ಯಾರಂಭಂಗಳೆ ಆಗವು | ಹಾಗಲ್ಲದಿರ್ದೊಡೆ ಅರಂಭಶಬ್ದದಿಂದ ಸಮುದ್ದೇಶಾಃ-ಸಂಪ್ರತಿಷ್ಠಿತಾಃ ಅದೆಂತೆಂದೊಡೆ | ಆನ್ವೀಕ್ಷಕಿ, ಅಧ್ಯಾತ್ಮವಿದ್ಯೆ, ಋಗ್ಯಜುಃಸಾಮಂಗಳ್ | ಅತಃ-ಅದಱಿಂ | ಮೂಱುವೇದಂಗಳೆ ತ್ರಯೀ | ಪಾಶುಪಾಲ್ಯ ಕೃಷಿಪಣ್ಯಂಗಳೆ ವಾರ್ತೆ ದಮಮೆಂಬುದು(ಅದಱಿಡನೀತಿಯೆ)ದಂಡನೀತಿ | ಆ ದಂಡನೀತಿಯೊಳೆ ಸಮುದ್ದಿಷ್ಟಂಗಳಾದ ಕಾರಣ ದಂಡನೀತಿಗೆ ಶೇಷವಿದ್ಯೆಗಳ್ಅವಯವರೂಪಂಗಳ್ ಯೆಂಬು ಭಾವಂ |—

ತಥಾಚ—ಹಾಗೆ ಪೇೞಲ್ಪಟ್ಟುದು

ನೀತಿಸಾಗರನಿಷ್ಕ್ರಾಂತಾಃ ಕುಪ್ರಜಾಮಾರುತೇರಿತಾಃ ||
[1]ವಿಕ್ಷೇಪೇಣೇಹ ದೃಶ್ಯಂತೇ ನಾನಾಶಾಸ್ತ್ರಮಹೋರ್ಮಯಃ || ಇತಿ |

ಇಂತು ಪೂರ್ವಪಕ್ಷಮಂ ನುಡಿದು ಸಿದ್ಧಾಂತಮಂ ಪೇೞ್ದಪಂ | ವಿದ್ಯಾ ಇತಿ | ತಮಗೆ ಗುರುವಾದ ಕೌಟಲ್ಯದರ್ಶನಮಾದೊಡೆ— ವಿದ್ಯೆಗಳ್ ನಾಲ್ಕೆ|ನೂನಮುಮಲ್ಲಂ ಅಧಿಕಮುಮಲ್ಲಂ| ಆವುದಾನೊಂದು ಕಾರಣದಿಂ ಪ್ರತ್ಯೇಕಪ್ರತ್ಯೇಕ ಪ್ರಕೃಷ್ಟಸಿದ್ಧಿ| ತನ್ನಿಮಿತ್ತಂ| ಯಾಸು ಲೋಕೋ ವ್ಯವಸ್ಥಿತಃ| ಆನ್ವೀಕ್ಷಕಿಯೊಳ್ ಅತ್ಮಜ್ಞಾನಕ್ಕೆ ಅವಸಿದ್ಧಿ, ಅದು! ನೇತರಾಸು| ತ್ರಯ್ಯೊಳ್ ಧರ್ಮಾಧರ್ಮ ಪರಿಜ್ಞಾನಸಿದ್ಧಿ, ನೇತರಾಸು |ವಾರ್ತೆಯೊಳರ್ಥಸಿದ್ಧಿ, ನೇತರಾಸು | ಆ ಪ್ರಕಾರದಲ್ಲಿಯೆ ದಂಡನೀತಿಯೊಳ್ ನಯಾಪನಯ ಸಿದ್ಧಿ—ಹೀಗೆ ಪೃಥಕ್ಪೃಥಕ್ಭೂತಾರ್ಥಾನಾಂ ಸಿದ್ಧ್ಯರ್ಥಂ ವಾ ಯಾಸು ಲೋಕೋ ವ್ಯವಸ್ಥಿತಃ | ಅವು ಹೇಗೆ ಪರಸ್ಪರಾಂತರ್ಭಾವಮನೆಯ್ದುವುವು! ವಿದ್ಯೆಗಳಿಗೆ ಸ್ವರೂಪಭೇದಭಾವಮಂ ತೋಱುತ್ತೆ ಪೇೞ್ದಪಂ | ಅನ್ವೀಕ್ಷಕ್ಯಾಯಿತಿ | ಪ್ರತ್ಯಕ್ಷಪರೋಕ್ಷಂಗಳೀಕ್ಷಿತಮಾಗಿ, ಅನು-ಪಶ್ಚಾದೀಕ್ಷಣಂ | ಅನ್ವೀಕ್ಷ್ಯಾ ಅನಂತರೇಕ್ಷಣಂ | ಪ್ರಯೋಜನಮಾವುದರ್ಕೆ ಅದು | ಅನುಮಾನವಿದ್ಯೆ-ನ್ಯಾಯದರ್ಶನವೈಶೇಷಿಕಂಗಳ್ | ಅದು| ಆತ್ಮವಿಜ್ಞಾನಾತ್ | ಅತ್ಮನು ವಿಶೇಷದಿಂ ಜ್ಞಾಯತೆ—ತಿಳಿಯಲ್ಪಡುತಿದ್ದಾನು ಎಂದು ಆತ್ಮವಿಜ್ಞಾನದಿಂದ| ಉಭಯಲೋಕ ಸಿದ್ಧಿ | ಧರ್ಮಾಧರ್ಮೌತ್ರಯಿಾಸ್ಥಿತಾವಿತಿ | ಅಲ್ಲಿ ಧರ್ಮಾಧರ್ಮಂಗಳ್ ತಿಳಿಯಲ್ಪಡುತ್ತಾ ಇದ್ದಾವು | ತಥಾ ಅರ್ಥಾನರ್ಥೌ ವಾರ್ತಯಾ | ವಾರ್ತೆಯಿನರ್ಥಾನರ್ಥಂಗಳ್ | ದಂಡನೀತಿಯೊಳ್—ನಯಾಪನಯಂಗಳ್ | ವಕ್ಷ್ಯಮಾಣಂಗಳೆಂಬುದರ್ಥಂ | ದಂಡನೀತಿಮಾಹಾತ್ಮ್ಯಮಂ

(1) ವೃಕ್ಷೇಕೇನೇಹ

ತೋಱುತ್ತೆ ಪೇೞ್ದಪಂ | ಆನ್ವೀಕ್ಷಕೀಯಿತಿ | ಆನ್ವೀಕ್ಷಕೀತ್ರಯೀವಾರ್ತಾಸ್ತ್ರಿಸ್ರೋಽಪಿ ವಿದ್ಯಾಸ್ತತ್ಯಸ್ಸದ್ವಿದ್ಯಾಃ | ಧರ್ಮಾಧರ್ಮ ಸಂಸಾಧಕಾಃ | ಯಸ್ಮಾತ್ ಸತ್ಯೋಽಪಿ ಹಿನಸತ್ಯೋ ವಿಪ್ರಬ್ಧೋನ ಭವತಿ | ದಂಡನೀತಿರ್ನೀತಿಶಾಸ್ತ್ರಂ | ಸೋಽಪಿ | ಅನ್ಯಥೇತಿ— ಮಾತ್ಸ್ಯನ್ಯಾಯಸಂಭವಾದಿತಿ ಭಾವಃ | ತದೇವ ದರ್ಶಯನ್ನಾಹ –ದಂಡನೀತಿರಿತಿ | ಸಮ್ಯಙ್ನೇತಾರಂ | ಯಥೋಕ್ತಲಕ್ಷಣಂ – ವಿಜಿಗೀಷುಮಧಿತಿಷ್ಠತಿ | ಆವಾಗ ವಿಜಿಗೀಷುವಾತಂಸಮ್ಯಕ್ಕಾಗಿ ದಂಡನೀತಿಯನನುಸರಿಪಂ | ತದಾ ವಿದ್ಯಾವಿದಶ್ಯೇಷಾ ಇತಿ | ಆನ್ವೀಕ್ಷಕೀತ್ರಯೀವಾರ್ತಾವೇದಿಗಳ್ ತಾಂತಾಂ ವಿದ್ಯಾಂ ಸಮ್ಯಗುಪಾಸತೇ—ಪ್ರತಿಭಾಪ್ರಭಾವದಿಂ ಅಭ್ಯಾಸಮಂ ಮಾಡುತಿದ್ದಾರು | ವಿದ್ಯಾಲಕ್ಷಣಲಾಭಮಂ ತೋಱುತ್ತೆ ಪೇೞ್ದಪಂ | ವರ್ಣಾ ಇತಿ | ವರ್ಣಾಃ ಬ್ರಾಹ್ಮಣಕ್ಷತ್ರಿಯ ವೈಶ್ಯ ಶೂದ್ರರ್ | ಆಶ್ರಮಾಃ ಬ್ರಹ್ಮಚಾರಿ ಗೃಹಸ್ಥವಾನಪ್ರಸ್ಥಯತಿಗಳ್ ವಿದ್ಯಾಸು—ಆನ್ವೀಕ್ಷಕೀತ್ರಯೀ ವಾರ್ತಾದಂಡನೀತಿಗಳೊಳ್ ವಿದ್ಯಾಸಂಭವಪ್ರತಿಷ್ಠೆಯಂ ಪಡೆದರ್| ಅದೆಂತೆಂದೊಡೆ—ದಂಡನೀತಿಯೊಳ್ ಕ್ಷತ್ರಿಯರ್ | ತ್ರಯಿಯೊಳ್ ಬ್ರಾಹ್ಮಣರ್ | ವಾರ್ತೆಯೊಳ್ ವೈಶ್ಯರ್ | ಆನ್ವೀಕ್ಷಕಿಯೊಳ್ ಶೂದ್ರರ್ | ಬ್ರಹ್ಮಚಾರಿಗೃಹಸ್ಥವಾನಪ್ರಸ್ಥಯತಿಗಳುಂ | ಏವಂಚ ಆ ವಿದ್ಯೆಗಳಂ ರಕ್ಷಿಸಬೇಕು | ರಕ್ಷಣದಿಂ | ತದ್ಧರ್ಮಸ್ಯವರ್ಣಾಶ್ರಮೋಚಿತಸ್ಯಾಂಶಸ್ಯಭಾ(ಕ್) | ಷಷ್ಠಾಂಶಭೋಕ್ತಾನುತಿದ್ದಾನು | ವಿದ್ಯಾಜನಿತಮಾದ ಉಪಕಾರಮಂ ತೋಱುತ್ತೆ ಪೇೞ್ದಪಂ | ಆನ್ವೀಕ್ಷಕೀಲಕ್ಷಣ ಆತ್ಮವಿದ್ಯೆಯಿಂದೆ ಆತ್ಮಜ್ಞಾನಂ | ಆ ಆತ್ಮನುಂ ಧರ್ಮಾಧರ್ಮ ಸುಖದುಃಖಂಗಳೆಂಬ ಆತ್ಮಲಿಂಗಂಗಳಿಂ ಜ್ಞಾಯತೇ ಇತಿ | ವಿಶೇಷಣತ್ವೇನ ನಿರೂಪಣದಿಂ ಸುಖದುಃಖಂಗಳೆರಡುಂ ಕಾಯಂಗಳೊಳುಪಭೋಗದಿಂ ಕ್ಷಯಮನೆಯ್ದುಗುಂ|ಅನ್ಯಥಾವ(ದ?)ಮನಾದಿಪ್ರಮಾಣಂ| ತತ್ವವೀಕ್ಷಣಾತ್–ತತ್ತ್ವವಿಜ್ಞಾನದತ್ತಣಿಂ ವಿಜಿಗೀಷು ಹರ್ಷಶೋಕಂಗಳಂ ತ್ಯಜತಿ| ಸುಖದುಃಖಸಂಪನ್ನೇ ಸತಿ | ಉಪಭೋಗಮಕ್ಷೀಣಮಾಗೆ ಮರಳಿಯುಂ ಸುಖದುಃಖಭಾಗಿಯಪ್ಪನೆಂದು ತಿಳಿದು ಸುಖದುಃಖಂಗಳಂ ತ್ಯಜಿಸಿ ಅತಿಶೋಕಮಾದ ಪ್ರಾಣಾತ್ಯಯದೊಳ್ ರಕ್ಷಿತನಪ್ಪನೆಂದು| ಆನ್ವೀಕ್ಷಕೀಜನಿತಮಾದ ಉಪಕಾರಮಿದು | ತ್ರಯೀಸ್ವರೂಪಮಂ ತದುಪಕಾರಮಂ ಪೇೞ್ದಪಂ | ಋಗ್ಯಜುರಿತಿ ಋಗ್ಯಜುಸ್ಸಾಮಂಗಳ್ ಮೂಱುವೇದಂಗಳುಂ ತ್ರಯೀ | ಉಭೌಲೋಕೌ–ಇಹ (ಪರ) ಲೋಕಂಗಳನವಾಪ್ನೋತಿ | ತ್ರಯ್ಯಾಂ ತ್ರಯೀಸ್ವರೂಪಮಂ ಪೇೞ್ದಪಂ | ಅಂಗಾನೀತಿ | “ಶಿಕ್ಷಾಕಲ್ಪವ್ಯಾಕರಣಂ ನಿರುಕ್ತಂ ಛಂದೋಜ್ಯೋತಿಷಂ ಚೇ”ತಿ | ಎಂಬ ಆಱುಂ | ವೇದಾಂಗಂಗಳ್ | ವೇದಾಃ ಅಥರ್ವಣಸಹಿತಂ ನಾಲ್ಕು [ವೇದಂಗಳ್] ಮೀಮಾಂಸಾ—ವೇದಂಗಳ ಅರ್ಥಪ್ರತಿಬಂಧಮಾದ ಪ್ರಮಾಣಶಾಸ್ತ್ರಂ | ನ್ಯಾಯವಿಸ್ತರಮೆಂದು ನ್ಯಾಯದರ್ಶನಂ ವೈಶೇಷಿಕಾದಿ | ಧರ್ಮಶಾಸ್ತ್ರಂ-ಮನ್ವಾದಿ ಅಷ್ಟಾದಶವಿಧಂ | ಪುರಾಣಮುಂ ಹಾಗೆ ಪದಿನೆಂಟು | ಭಾರತರಾಮಾಯಣಾದಿಗಳುಂ ಪುರಾಣದೊಳೆ ಅಂತರ್ಭಾವಂ | ಕಥಾಸ್ವರೂಪದತ್ತಣಿಂ | ಈ ಸಮಸ್ತಮಾದ ಚತುರ್ದಶ ವಿದ್ಯಾಸ್ಥಾನರೂಪಂ ತ್ರಯೀ | ಏವಂ ತ್ರಯ್ಯಾಃ ಸ್ವರೂಪಮಿತಿ | ವಾರ್ತಾಸ್ವರೂಪಾಕಾರಮಂ ಪೇೞಲು ಪೇೞ್ದಪಂ| ಪಾಶುಪಾಲ್ಯಮಿತಿ| ಪಶುಗಳ್–ಹಸ್ತ್ಯಶ್ವಗೋಮಹಿಷ್ಯಾದಿಗಳ್, ಅವಂ ಪಾಲಿಸುವರ್ ಪಶುಪಾಲಕರ್ | ಸ್ತ್ಯಶ್ವಶಿಕ್ಷಾ ಶಾಲಿಹೋತ್ರಾದಿಯಾದೊಡಂ ತಚ್ಛಾಸ್ತ್ರಾನುಷ್ಠಾನಮೆ ಪಾಶುಪಾಲ್ಯಂ| ಕೃಷಿಯೆಂದು ಕರ್ಷಣಂ| ಪರಾಶರಾದಿ ಪ್ರೋಕ್ತ ಶಾಸ್ತ್ರಮುಂ, ತದನುಷ್ಠಾನಮುಂ| ಪಣ್ಯಮಿತಿ, ಪಣಮಂ ಕ್ರಯವಿಕ್ರಯಲಕ್ಷಣ ವ್ಯವಹಾರಮಂ ಅರ್ಹತಿಯೆಂದು ಪಣ್ಯಂ| ಪಣ್ಯಶಬ್ದದಿಂ ವಾಣಿಜ್ಯಂ ಪೇೞಲ್ಪಟ್ಟುದು ಯೀಮೂಱುಂ ವಾರ್ತೆ | ಜಗದ್ವೃದ್ಧಿ ಹೇತುತ್ವದಿಂ | ಆವಾ

ರ್ತೆಯಿಂ ಸಂಪನ್ನನಾದ ವಿಜಿಗೀಷು ಸಾಧುವಪ್ಪಂ—ತಾಭ್ಯೋದಂಡೋಮಹೀಪತೇಃ| ಅವೃತ್ತೇಃ-ಅವರ್ತನದಿಂ, ಭಯಮ್ಯೃಚ್ಛತಿ – ಭಯಮನೆಯ್ದುವಂ | ದಂಡನೀತಿಯ ಸ್ವರೂಪಾಕಾರಮಂ ಪೇಟ್ದಪಂ | ದಮೋದಂಡ ಇತಿ– "ದಮೋದಂಡ" ಇತಿಪ್ರಾಹುಃ– ಅದಱಿಂ ಮಹೀಪತಿಯಿಂದಲೆ ದಂಡ್ಯನಪ್ಪಂದು ದಂಡನಸ್ಯ ಶಾಸ್ತ್ರಮಿದಮೇವ| ಇದೆ ದಂಡಸೇತ್ಯಭಿಧಾನವಿದ್ಯಾ | ಇದಱಿಂ ದಂಡ್ಯನಂಕುಱಿತು ದಂಡಪ್ರಣಯನಂ ದಂಡನೀತಿ–ಇದು ಇಲ್ಲಿ ಪೇೞಲ್ಪಡುತಿದ್ದೀತು| ಅದಱ ವ್ಯಾಪಾರಮಂ ಪೇಟ್ದಪಂ |ತಯೇತಿ–ತಯಾ–ಆದಂಡನೀತಿಯಿನಾತ್ಮಾನಂ-ತನ್ನಂ, ಮಹೀಪತಿಃ| ಶೇಷಾಂಶ್ಚ| ಆನ್ವೀಕ್ಷಕೀತ್ರಯಮಂ, ಪಾಯಾತ್–ರಕ್ಷಿಸಬೇಕು| ಆ ವಿದ್ಯೆಗಳ್ ಲೋಕೋಪಕಾರಿಗಳ್ | ತದ್ರಕ್ಷಕಂ ಮಹೀಪತಿ | ವಿದ್ಯೆಗಳ್ಗೆ ಸ್ವರೂಪೋಪಕಾರಾದಿಗಳಿಂ ಭೇದಮಂ ತೋಱಿ ವಿಧಾನದಿಂ ತೋಱಲ್ ಪೇಟ್ದಪಂ | ವಿದ್ಯೇತಿ| ಚತುರ್ವರ್ಗ ಇತಿ | [1]ಧರ್ಮಾರ್ಥಕಾಮಮೋಕ್ಷಂಗಳ್ ಯಥಾಸಂಭವಂ ವಿಚಾರಿಸಲ್ಪಡುತಿರ್ದ್ದಾವು ಆವುದಱಿಂ ಅದಱಿಂ ಆನ್ವೀಕ್ಷಿಕಿಗೆ ವಿದ್ಯಾತ್ವಂ ವಿದ–ವಿಚಾರಣೆಯೆಂಬ ಧಾತುವಿನ ರೂಪಮಿದು| ಹಾಗೆ ಚತುರ್ವರ್ಗಮಾವುದಱಿನಱಿಯುತಿರ್ದ್ದಾನು ಅದಱಿಂದ ತ್ರಯಿಗೆ ವಿದ್ಯಾತ್ವಂ | ವಿದ-ಜ್ಞಾನೇ ಎಂಬುದರ ರೂಪಂ| ಆಹಾಂಗೆ ಚತುರ್ವರ್ಗಮನೆ ಏತಱಿಂ ಲಭತೇ ಅದುಕಾರಣದಿಂ ಪ್ರಾಪ್ತಿಗೆ ವಿದ್ಯಾತ್ವಂ| ವಿದಿಲೃ-ಲಾಭೇ ಎಂಬ ಧಾತುವಿನ ರೂಪಮಿದು | ಹಾಗೆ ಚತುರ್ವರ್ಗಮುಂ ಸ್ಥಿತಮನಾ(ದಾ)ದಂಡನೀತಿಯತ್ತಣಿಂ| ವಿದ-ಸತ್ತಾಯಾಮೆಂಬ ಧಾತುವಿನ ರೂಪಮಿದು | ಇಂತು ಅಭಿಧಾನದಿಂ ಪೃಥಗ್ಧಾತುಚತುಷ್ಟಯದತ್ತಣಿಂ ಬುಧ್ಯಾ ನೀತಾ ನಿರ್ಣಯಿಸಲ್ಪಟುದು | ಅದಱಿನಂತರ್ಭಾವನಿಯಮಮೆತ್ತಣದಿಂತೆಂಬಭಿಪ್ರಾಯಂ |

ಇಂತು ವಿದ್ಯಾ (ಸಮುದ್ದೇಶ) ಪ್ರಕರಣಂ

ವರ್ಣಾಶ್ರಮಧರ್ಮದಂಡನೀತಿನಿರೂಪಣ ಪ್ರಕರಣಂ

ವರ್ಣಾಶ್ರಮಧರ್ಮಂಗಳ್ ಚ್ಯುತಮಾದೊಡೆ | ದಂಡಪ್ರಣಯನಾರ್ಥಮಾಗಿ ಪೇಟ್ದಪಂ | ಇಜ್ಯೇತಿ–ಇಜ್ಯೆಯೆಂದೊಡೆ ಸ್ವಯಂಯಜನಂ | ಅಧ್ಯಯನಮೆಂಬುದು | ಸ್ವಶಾಖಾಪಠನಂ| ದಾನಮೆಂಬುದು ಧರ್ಮಾಭಿಸಂಧಿಯಿಂ ಪಾತ್ರಂಗಳಿಗೋಸುಗ ಧನೋತ್ಸರ್ಗಂ| ಯಥಾಶಾಸ್ತ್ರಂ ಯಥಾ [2]ನ್ಯಾಯಮಾಗಿ—ತಥಾಹಿ— ರಾಜಸೂಯಾಶ್ವಮೇಧಂಗಳ್ ಕ್ಷತ್ರಿಯಂಗೆ ನಿತ್ಯಮಾಗಿ ಪೇೞಲ್ಪಟ್ಟುದು | ತತ್ಪರಿಹಾರದಿಂದ | ಅನ್ಯಮಾದುದು ಕರ್ತವ್ಯಮೆಂದು ತೋಱಿದಪಂ| ಇವು ಮೂಱುಂ ಬ್ರಾಹ್ಮಣಕ್ಷತ್ರಿಯ ವೈಶ್ಯರ್ಗೆ ಸಾಮಾನ್ಯಧರ್ಮಂ | ವರ್ಣತ್ರಯಕ್ಕಂ ಪೇೞಲ್ಪಟ್ಟುದು | ಆ(ಅ)ಸಾಮಾನ್ಯಮಾದ ಬ್ರಾಹ್ಮಣಧರ್ಮಮಂ ಪೇಟ್ದಪಂ | ಯಾಜನೇತಿ– ಆತ್ಮಾರ್ಥಯಾಜನಮಧ್ಯಾಪನಂ ಚ ಶುದ್ಧಮಿತಿ| ಜಾತಿಚ್ಯುತಾದಿಗಳಿಂ ವಿಶುದ್ಧನತ್ತಣಿಂ ಪರಿಗ್ರಹಂ | ಈಯಾಜನಾದಿತ್ರಿತಯಮಂ ಜ್ಯೇಷ್ಠವರ್ಣಮನುಳ್ಳ ಬ್ರಾಹ್ಮಣಂಗೆ ಮನ್ವಾದಿಮುನಿಗಳ್ ನುಡಿದರ್, ಪೂರ್ವದಲ್ಲಿ| ಶಸ್ತ್ರೇಣೇತಿ | ರಾಜಂಗೆ ಕ್ಷತ್ರಿಯಂಗೆ ಕಂಟಕಂಗಳಂ ಶಸ್ತ್ರದಿಂ ಪರಿಹರಿಸಿ ಸೇವೆಯಿಂದಲಾದೊಡಂ| ಆಜೀವನಂ – ವೃತ್ತಿ, ಭೂತಾನಾಂ ಪ್ರಾಣಿಗಳ ರಕ್ಷಣಮಾದೊಡಂ| ಅರ್ಥಾರ್ಥಮಾದೊಡಂ ಧರ್ಮಾರ್ಥಮಾದೊಡಂ| ಪಾಶುಪಾಲ್ಯಂ, ಕೃಷಿ, ಪಣ್ಯಂ ಎಂಬಿವು ಮೂಱುಂ ವೈಶ್ಯಂಗೆ ಜೀವನ

(1) ಧರ್ಮಾಧರ್ಮಕಾಮ (2) ನಾಮ

ಮೆಂದು ಪೇೞಲ್ಪಟ್ಟುದು | ಬ್ರಹ್ಮಚಾರಿಯ ವಿಶೇಷಧರ್ಮಮಂ ಪೇಟ್ದಪಂ| ಸಮೇಖಲೀ ಇತಿ | ಗುರುಸಂಶ್ರಯಂ ಆವಿದ್ಯಾಗ್ರಹಣಂ — ವಿದ್ಯಾಸ್ವೀಕಾರಪರ್ಯನ್ತಂ| ಉಕ್ತವ್ರತಾದಿಪೂರ್ವಕಂ ವಿದ್ಯಾಗ್ರಹಣಮಂ ಮಾಡಬೇಕು| ಇಚ್ಛೆ ಇರ್ದೊಡೆ ಗೃಹಸ್ಥನಪ್ಪುದು | ಇಚ್ಛೆಯಿಲ್ಲದೊಡೆ ನೈಷ್ಠಿಕನಾಗಿ ಗೃಹಸ್ಥನಾಗದೆ ಇರ್ಪುದು| ಗೃಹಸ್ಥಧರ್ಮಮಂ ಪೇಟ್ದಪಂ | ಗೃಹಸ್ಥಂ ಚತುರ್ವಿಧಂ| ಬ್ರಾಹ್ಮಣಾಗ್ನಿಹೋಮೋಪಚರಣಂಗಳ್ ಯಥಾಸಂಭವಂ ಬ್ರಾಹ್ಮಣ ಕ್ಷತ್ರಿಯ ವೈಶ್ಯರ್ಗೆಯೆಂದು ತಿಳಿವುದು | ಜೀವನಮುಂ ಸ್ವಕರ್ಮದಿಂದೆ| ಬ್ರಾಹ್ಮಣಂಗೆ ಪ್ರತಿಗ್ರಹದಿಂ| ಕ್ಷತ್ರಿಯಂಗೆ ಶಸ್ತ್ರದಿಂ| ವೈಶ್ಯಂಗೆ ಕೃಷಿವಾಣಿಜ್ಯಪಾಶುಪಾಲ್ಯಾದಿ ಕರ್ಮಂಗಳಿಂ| ಶೂದ್ರಂಗೆ ಶುಶ್ರೂಷಾದಿ ಕರ್ಮಂಗಳಿಂ | ಯಿನಿಯಮಮುಂ| ಧರ್ಮಮಿದು| ಧರ್ಮದಾರಂಗಳೊಳ್ | ತದ್ದಾರೇಷ್ವಿತಿ | ವ್ಯಾಧಿರಹಿತಂಗಳೊಳ್ ಪೌರ್ಣಮಾಸ್ಯಾದಿ ಪರ್ವವರ್ಜಿತಮಾಗಿ ರತಿಕ್ರಿಯೆ| ಧರ್ಮಾರ್ಥಮಾಗಿಯುಂ ದಾರರಕ್ಷಣಾರ್ಥಮಾಗಿಯುಂ ದೇವಪಿತ್ರತಿಥಿಪೂಜನಂ, ದೀನಾನುಕಂಪನಮುಂ, ಅನುಪಾಲನಮುಂ| ವೃದ್ಧವ್ಯಾಧಿತರೊಳ್ ಶಕ್ತ್ಯಾನುಕಂಪನಮುಂ ದಾನಾದಿಗಳಿಂ| ಎಂದು ಶ್ರುತಿವಿದಃ | ಸ್ಮೃತಿ-ಮನ್ವಾದಿಶಾಸ್ತ್ರಂಗಳ್ | ಅವರ ಅರ್ಥಂ ತತ್ಸ್ವಾವಸ್ಥಿತಿ | ತದುಕ್ತಾನುಷ್ಠಾನತತ್ಪರನಂಗಲೆವೇೞ್ಕುಂ| ಯಿಾಧರ್ಮವು ನಾಲ್ಕುತೆಱನಾದ ಗೃಹದೊಳ್ ಮೇಧಾಬುದ್ಧಿ ವ್ಯವಸ್ಥಾನಮನುಳ್ಳ ಗೃಹಮೇಧಿಗೆ ಯಿಾ ಧರ್ಮಂ| ಶೂದ್ರಧರ್ಮಮಂ ಪೇಟ್ದಪಂ| ಶೂದ್ರಸ್ಯೇತಿ| ದ್ವಿಜರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರ ಶುಶ್ರೂಷೆ| ಪ್ರಣಾಮಾದಿಗಳಿನರ್ಚನಂ| ತ್ರಯೋದೀರ್ಣಾದ್ವಿಜಾತಯಃ ಇತಿ | ಆನುಪೂರ್ವಶಃ ಬ್ರಾಹ್ಮಣಾದಿಕ್ರಮದಿಂ| ಶುದ್ಧಾಚ ವೃತ್ತಿಸ್ತತ್ಸೇವಾಯಾ ವೃತ್ತಿಃ ಜೀವಿಕಾ | ತತ್ಸೇವೆಯೆಂಬ ಜೀವನಂ| ಅದು ಶುದ್ಧಾ | ಕಾರವಃ–ನರ್ತಕ್ಯಾದಿಗಳ್–ಚರಣಾರಂಗೋಪಜೀವಿಗಳ್ | ತತ್ಕರ್ಮಮುಂ ವೃದ್ಧ್ಯರ್ಥಮಾಗಿ| ಅಭಿಧೇಯಮೆ| ಆಶ್ರಮಂಗಳ ಸ್ವಧರ್ಮಮಂ ಪೇಟ್ದಪಂ| ಅಲ್ಲಿ ಬ್ರಹ್ಮಚಾರಿಧರ್ಮಮಂ ಶ್ಲೋಕದ್ವಯದಿಂ ಪೇಟ್ದಪಂ| ಗುರಾವಿತಿ ನೈಷ್ಠಿಕಬ್ರಹ್ಮಚಾರಿಗೆ, ಗುರೌ – ಉಪಾಧ್ಯಾಯನೊಳ್, ವಾಸಃ–ತತ್ಸಮಿಾಪಶಯನಂ| ಅಗ್ನಿಶುಶ್ರೂಷೆ-ವೈಶ್ವಾನರಾರಾಧನಂ| (ಸ್ವ)ಸ್ವಾಧ್ಯಾಯಃ–ಸ್ವಶಾಖಾಧ್ಯಯನಮುಂ| ವ್ರತಧಾರಣಮಿತಿ| ತದುಕ್ತಮಾದ ವ್ರತಂಗಳಂ ಅನುಷ್ಠಾನಮುಂ ತ್ರಿಕಾಲಸ್ನಾಯಿತಾ-ಸಂಧ್ಯಾತ್ರಯದೊಳಂ ಸ್ನಾನಂ| ಭೈಕ್ಷಂ-ಭಿಕ್ಷಾಸಮೂಹಮುಂ| ಏಕಭಿಕ್ಷಾನಿಷೇಧಾರ್ಥಂ| ಇವೆಲ್ಲಮುಂ ಬ್ರಹ್ಮಚಾರಿಗೆ ಮತಾ| ಪ್ರಾಣಾಂತಕೇಸ್ಥಿತಿರಿತಿ| ನೈಷ್ಠಿಕನಾಗಿ ಮುಮುಕ್ಷುವಾದವಂಗೆ ನಿಯಮಂ| ಪ್ರಾಣಾಂತಿಕಮಾದ ಸ್ಥಿತಿ ಗುರುವಿನೊಳೆ| ತದಭಾವೇ| ಗುರುಸುತ ಇತಿ–ಗುರುವಿಲ್ಲದೊಡೆ ಗುರುಸುತನೊಳಹಗೆ ಪ್ರಾಣಾಂತಿಕಮಾದ ಸ್ಥಿತಿರಿತಿ| ತಥಾ ಸಬ್ರಹ್ಮಚಾರಿಣಿ| ಸಮಾನಶಾಖಾಧ್ಯಾಯಿಯೊಳ್ ಪ್ರಾಣಾಂತಿಕೇಸ್ಥಿತಿರಿತಿ ಅನುವರ್ತಿಸುತಿರ್ದ್ದೀತು| ಕಾಮತೋವಾಽಶ್ರಮಾನ್ಯತ್ವಮಿತಿ| ಎತ್ತಲಾನುಂ ನೈಷ್ಠಿಕಂ ಉಪಾಕರ್ಮಮಂ ಮಾಡಿ ಆ ವಿದ್ಯಾಗ್ರಹಣಾನಂತರದೊಳ್ ಆಶ್ರಮಾನ್ಯತ್ವವು ಧರ್ಮಮಿದು| ಬ್ರಹ್ಮಚಾರಿಕೃತ್ಯಮುಪ್ಪುದಱಿಂ| ಗೃಹಸ್ಥಾದಿತಿ| ಈ ಧರ್ಮವು ಬ್ರಹ್ಮಚಾರಿಗೆ—

ವಾನಪ್ರಸ್ಥಧರ್ಮಮಂ ಪೇಟ್ದಪಂ| ಜಟಿತ್ವಮಿತಿ| ನಿಯಮೇನಜಟಾಧಾರಣಮುಂ| ಅಗ್ನಿಹೋತ್ರಪರಿಗ್ರಹಮಂ| ಭೂಶಯನಮುಂ, ಕೃಷ್ಣಾಜಿನಧಾರಣಮುಂ, ವಿಜನವನದೊಳ್ ವಾಸಮುಂ, ಪಾನೀಯಮೂಲ ನೀವಾರ ಫಲಂಗಳಿಂ ವೃತ್ತಿ| ಅಕೃಷ್ಟಪಚ್ಯಂಗಳಿಂ ಜೀವನಮೆಂಬುದರ್ಥಂ| ಪ್ರತಿಗ್ರಹಕ್ಕೆ-ದೀಯಮಾನ ಹಿರಣ್ಯಾದಿಗಳ್ಗೆ| ನಿವೃತ್ತಿರಗ್ರಹಣಂ| ತ್ರಿಕಾಲಸ್ನಾನಮುಂ ಸಂಧ್ಯಾತ್ರಯದೊಳಂ| ಬ್ರಹ್ಮಚಾರಿತೆ–ಸನ್ನಿಹಿತದಾರನಾದೊಡಂ ಬ್ರಹ್ಮಚರ್ಯಮ

ಕರ್ತವ್ಯಂ। ದೇವಾತಿಥಿಪೂಜೆಯುಂ ವಾನಪ್ರಸ್ಥಧರ್ಮಮಿದು। ಪರಿವ್ರಾಜಕಧರ್ಮಮಂ ಪೇಳ್ದಪಂ। ಸರ್ವೇತಿ। ಧರ್ಮಾದಿಪುರುಷಾರ್ಥಮಂ ಸಂಸಾರಧನಾರ್ಥಾರಂಭಮಿವರ ಪರಿತ್ಯಾಗಮುಂ ಪುಷ್ಪಸಮಿತ್ಕುಶಾದಿಗಳ್ಗೆಯುಂ ಗ್ರಹಣಮಿಲ್ಲದುದಱಿಂ। ಭಿಕ್ಷಾಸಮೂಹಂ ಭೈಕ್ಷಂ ತದಶಿತ್ವಮುಂ। ವೃಕ್ಷಮೂಲತಾ-ವೃಕ್ಷಮೂಲಮುಂ, ಅವು ಈತಂಗೆ ನಿವಾಸಾರ್ಥಂ ವಿಹಿತತದ್ಭಾವಂ ವೃಕ್ಷಮೂಲತೆ। ನಿಷ್ಪರಿಗ್ರಹತ್ವಮುಂ। ಪುಷ್ಪಾದಿಗಳಂ ದಕ್ರಾಭರಣಾದಿಗಾದೊಡಂ? ಪರಿಗ್ರಹಮಾಗದು। ಅದ್ರೋಹತಾ ಹಿಂಸಾಭಾವಂ। ಸಮತಾಸರ್ವಜಂತುಷು—ಉಪಕಾರ್ಯಪಕಾರಿಗಳೊಳ್ ಪ್ರಿಯಾಪ್ರಿಯಪರಿಷ್ವಂಗಃ। ಸುಖದುಃಖವಿಕಾರಿತಾ। ಬಾಹ್ಯಮಾಭ್ಯಂತರಂ ಶೌಚಂ ನಿಯಮೋ ವ್ರತಚಾರಿಣಃ॥ ಪ್ರಿಯಾಪ್ರಿಯಂಗಳೊಳನಾಸಕ್ತಿ। ಹರ್ಷಭೋಗಕೃತಮಾದ ಸುಖದುಃಖವಿಕಾರಮಿಲ್ಲದುದು। ಬಾಹ್ಯಮಾದ ಶೌಚಂ ಜಲಾದಿಗಳಿಂ। ಆಭ್ಯಂತರಮೆಂದೊಡೆ ಸಕಲಸತ್ವಾನುಗ್ರಹಬುದ್ಧಿಯಿಂ ಮೌನವ್ರತಂ। ಬ್ರಹ್ಮಚಾರಿತ್ವಾವಿಶೇಷದಿಂ। ಸರ್ವೇಂದ್ರಿಯೇತಿ — ತಮ್ಮ ತಮ್ಮ ವಿಷಯಂಗಳೊಳ್ ಪ್ರತಿಸಂಯತಮಾದ। ಇಂದ್ರಿಯಂಗಳ್ಗೆ ಸಮಾಹರಣಂ। ಆತ್ಮನ್ಯೇವಯೋಜನಮುಂ ಪರಂ ಯೋಗಶಾಸ್ತ್ರದೊಳ್ ಪ್ರತ್ಯಾಹಾರಮೆಂದು ಸ್ಮರಿಸಲ್ಪಟ್ಟುದು। ಧಾರಣೇತಿ ಅದರ್ಕೆ ಲಕ್ಷಣಂ। ಪ್ರದೇಶೇಧಾರ್ಯತೇ ವಾಯುಃ। ತಂ ಆವಾಯುವಂ ಪರಾ। ಸಂಧಾರಕಪ್ರಯತ್ನದಿಂ ಸಾ ಧಾರಣೆಯೆಂದು ಪೇಟಲ್ಪಡುಗುಂ। ಧ್ಯಾನಮಿತಿ। 'ಧ್ಯೈ ಚಿಂತಾಯಾಂ' ಚಿಂತನಂ, ಧ್ಯಾನಾಂ ತಸ್ಥವಿ(ವಿ)ಧ ಕಾಮ್ಯಫಲಾರ್ಥಂ। ಅಲ್ಲಿ ಕಾಮ್ಯಫಲಮದೆಂತೆನೆ:—

ಆತ್ಮೇಂದ್ರಿಯಮನೋ ಗತ್ವಾ ಸಾಧ್ವೇಂದ್ರಿಯಗಣಂ ವಿಶೇತ್।
ಐಕ್ಯಂ ಗತ್ವಾ ಸಮಂ ಗಚ್ಛೇತ್ ಇತಿ ಸಾಧ್ಯಃ ಪುನಃಪುನಃ॥
ಕರೋತಿ ಪುರುಷಂ ವಶ್ಯಂ ನಾರೀ ಚೇತ್ಯಾದಿಕಂ—

ಮೋಕ್ಷಾರ್ಥಮೆಂತೆಂದೊಡೆ

ಪರಮಾತ್ಮಮಯೇ ವಿಶ್ಯಾನ್ಮಂತ್ರಾತ್ಮಾನಂ ಪರಂ ನಯೇತ್॥
ತತಶ್ಚ ತನ್ಮಯೋ ಭೂತ್ವಾ ನ ಕಿಂಚಿದಪಿ ಚಿನ್ತಯೇತ್॥

ಚಿದಾಸ್ಪದಮಾದ ಚಿತ್ತಮಂ ಅಲ್ಲಿಯೆ ವಿಲಯುವನೆಯ್ದಿಸಬೇಕೆಂದು। ಈ ಪ್ರಕಾರಮಾದ ಧಾರಣಾನಿತ್ಯತೆ। ತದಭ್ಯಾಸದಿಂ ತತ್ಪರತೆ। ಭಾವಸಂಶುದ್ಧಿರಿತಿ। ಪ್ರಾಣಿಗಳೊಳ ದ್ರೋಹಬುದ್ಧಿ। ಯೆಂದಿಂತಿದು ಪರಿವ್ರಾಜಕ ಧರ್ಮಂ—ಪೇಟಲ್ಪಡುತಿದ್ದೀತು। ವರ್ಣಾಶ್ರಮಂಗಳ ಅಸಾಧಾರಣಧರ್ಮಮಂ ಪೇಟ್ದು ಸಾಧಾರಣಮಾದ ಧರ್ಮಮಂ ಪೇಳ್ದಪಂ। ಅಹಿಂಸೇತಿ—ವರ್ಣಾದಿಗಳಿಂ-ಆಶ್ರಮಾದಿಗಳಿಂ ಪರಮಾಣು ದ್ರವ್ಯಾದಿಗಳ। ಅಹಿಂಸೆ ಕರ್ತವ್ಯಂ। ಕರ್ತವ್ಯಮೆಂದು (ವಿ)ಶೇಷಂ। ಸೂನೃತಾವಾಣೀ। ಪ್ರಿಯಮುಂ ಸತ್ಯಮುಂ ಸೂನೃತಮಿತಿ। ವರ್ಣಂಗಳ್ಗಂ ಲಿಂಗಿಗಳ್ಗಂ ಸಾಮಾನ್ಯಧರ್ಮಮೆಂದು ಪೇಟಲ್ಪಟ್ಟುದು – ಸ್ವ(ಸ್ವ) ಧರ್ಮಾನುಷ್ಠಾನದೊಳ್ ಫಲಮಂ ಪೇಳ್ದಪಂ। ಸ್ವರ್ಗೇತಿ—ಯಿಾ ಉಕ್ತಲಕ್ಷಣಮಾದ ಧರ್ಮಮೆಲ್ಲಾ ವರ್ಣಾಶ್ರಮಂಗಳ್ಗಂ ಸ್ವರ್ಗಾನಂತ್ಯಕ್ಕೋಸುಗ ಭವತೀತಿ ಶೇಷಃ। ಈ ಧರ್ಮಕ್ಕೆ ವಿನಾಶಮಾದೊಡೆ ಅನನುಷ್ಠಾನದಿಂ ಚತುರ್ವರ್ಣಾಶ್ರಮಲಕ್ಷಣಮಾದ ಯಿಾ ಲೋಕಂ ಸಂಕರದಿಂ ವರ್ಣಸಂಕೀರ್ಣಮಪ್ಪುದಱಿಂ ಧರ್ಮಸಂಕರದಿಂದಲುಂ ನಾಶಮಾಪ್ನುಯಾತ್। ದುರನುಷ್ಠಾನಜನಿತೇನೈವ। ಪೀಡನದತ್ತಣಿಂ ನಾಶಮನೆಯ್ದುಗುಂ,

ಎಂಬುದರ್ಥಂ। ಹೀಗೆ ಧರ್ಮಾಭಾವದಿಂ ಲೋಕಂ ನಾಶಮನೆಯ್ದುಗುಂ ಅದು ಕಾರಣದಿಂ ಧರ್ಮಪ್ರವರ್ತಕದಂಡ ಧರ್ಮಧರಾಭಾವದೊಳ್ ಪ್ರೀತಿಯಂ ತೋಱುತ್ತೆ ಪೇಳ್ದಪಂ। [1] ಸರ್ವಸ್ಯೇತಿ। ಯಿಾ ಸಮಸ್ತಕ್ಕಂ। ಯಥಾನ್ಯಾಯಂ - ನ್ಯಾಯಮನತಿಕ್ರಮಿಸದೆ। ವಿಜಿಗೀಷುವಾದ ಭೂಪತಿ ಸಂಪ್ರವರ್ತಕಃ—ಸಮ್ಯಕ್ಪ್ರವರ್ತಯಿತಾ। ತಸ್ಯಾಭಾವೇ—ಭೂಪತಿಯಿಲ್ಲದುದಱಿಂ, ಧರ್ಮನಾಶಂ। ತದಭಾವಮಾಗೆ-ಜಗಚ್ಚ್ಯುತಿ। ಜಗತ್ತಿಗೇ ವಿನಾಶಮಪ್ಪುದೆಂದು ಭಾವಂ। ವರ್ಣಾಶ್ರಮಧರ್ಮಪ್ರಭಾವಮಂ ಪೇಳ್ದಪಂ। ವರ್ಣಾಶ್ರಮೇತಿ। ವರ್ಣೋಬ್ರಾಹ್ಮಣಾದಿ, ಆಶ್ರಮಂ ಬ್ರಹ್ಮಚರ್ಯಾದಿ ಅದಱ ಆಚಾರಂಗಳಿಂದ ಯುಕ್ತಮಾಗಿ। ಅಭಿಯುಕ್ತಂ ತತ್ಪರನಾಗಿ। ವರ್ಣಾಶ್ರಮಂಗಳ ವಿಭಾಗಮಂ ತಿಳಿದು। ತೇಷಾಂ ಚ ಪಾತಾ – ಇದಕ್ಕೆ ರಕ್ಷಕನೆಂದು ಉಕ್ತಲಕ್ಷಣಮನುಳ್ಳ ಪಾರ್ಥಿವಂ ಸ್ವರ್ಗಲೋಕಭಾಕ್ಕಪ್ಪನೆಂದು—

—ಇಂತು ವರ್ಣಾಶ್ರಮ ಧರ್ಮಂ—

ದಂಡಮಾಹಾತ್ಮ್ಯಮಂ ಪೇಳ್ದಪಂ:– ಇತೀತಿ। ಉಕ್ತಪ್ರಕಾರದಿಂ, ಅಸ್ಮಾತ್-ಈ ಕಾರಣದಿಂದ ಉಭೌಲೋಕೌ – ಇಹಲೋಕ ಪರಲೋಕಂಗಳಂ। ಧಾರಯತಿ – ಆತ್ಮಾಧೀನಮನಾಗಮಾಳ್ಕುಂ। ಕಿಂವಿಶಿಷ್ಟೋ ನೃಪಃ – ಆವನೃಪನೆಂದೊಡೆ – ಆತ್ಮವಾನ್ – ಉಪಹಿತಾತ್ಮನಾಗಿ, ಅಸ್ಮದುಕ್ತಗುಣಸಂಪನ್ನನಾದ ಜಿತೇಂದ್ರಿಯನಾದ ನೃಪಂ ನ ಕೇವಲಮಾತ್ಮಾನಂ। ಪ್ರಜೆಯುಮನುಭಯಲೋಕಮಂ ಧರಿಸುತಿದ್ದಾನು। ದಂಡಧಾರದತ್ತಣಿನೆಂದು ಭಾವಂ। ದಂಡಂ ದಂಡೀವ—ಯಮನೋಪಾದಿಯಲ್ಲಿ, ರಾಗದ್ವೇಷರಹಿತನಾಗಿ, ಧಾರಯೇತ್-ಧರಿಸಬೇಕು। ದಂಡಪ್ರಕಾರಮಂ ಪೇಳ್ದಪಂ। ಉದ್ವೇಜಯತೀತಿ। ತೀಕ್ಷ್ಣೇನ-ನ್ಯಾಯದಂಡಾಧಿಕ್ಯದಿಂ। ಉದ್ವೇಜಯತಿ-ಭಯಪಡಿಸುವನರಸು ಎಂಬುದರ್ಥಂ। ಮೃದುನಾ-ನ್ಯಾಯನ್ಯೂನೇನ, ಪರಿಭೂಯತೇ—ದಂಡಭಯಮಿಲ್ಲೆಂದು ಪರಿಭೂಯತೇ। [ದಂಡಭಯಮಿಲ್ಲೆಂದು ಪರಿಭೂಯತೆ] ತಿರಸ್ಕರಿಸಲ್ಪಡುಗುಂ। ದಂಡನ್ಯೂನಾಧಿಕ್ಯದಿಂ ದೋಷಂ ಪರಿಭವಮಪ್ಪುದೆಂದು। ಅದು ಕಾರಣದಿಂ ಯುಕ್ತದಂಡನಾದ ಭೂಪತಿಯುಂ ಪ್ರಶಸ್ಯತೇ। ಸುವಿಜ್ಞಾತ ಪ್ರಣಯನಾದಿತಿ। ಇದನೆ ದೃಢಮಾಗಿ ಪೇಳ್ದಪಂ। ತ್ರಿವರ್ಗಮಿತಿ। ತ್ರಿವರ್ಗಂ – ಧರ್ಮಾರ್ಥಕಾಮಂಗಳಂ, ವರ್ಧಯತಿ – ವೃದ್ಧಿಯನೆಯ್ದಿಸುಗುಂ। ರಾಜ್ಞೋದಂಡಃ—ಅರಸನ ದಂಡಂ, ಯಥಾವಿಧಿ—ಸುವಿಜ್ಞಾತಪ್ರಣೀತತ್ವಾತ್—ತಿಳಿದು ಪ್ರಯುಕ್ತಮಪ್ಪುದಱಿಂ। ದುಷ್ಪ್ರಣೀತೋ ಹಿ ದಂಡ್ಯೇಷು—ದಂಡಂ ದುಷ್ಪ್ರಣೀತಮಾದೊಡೆ, ಪತಿತೋಽಪಿ ಯಸ್ಮಾದ್ವನಸ್ಥಾನಪಿ ಲೋಕವ್ಯವಹಾರಬಾಹ್ಯರನಾದೊಡಂ ಕೋಪಯೇತ್—

ಉಕ್ತಂಚ—ಗುರುಣಾ :—

" ಸುವಿಜ್ಞಾತಪ್ರಣೀತೋ ಹಿ ದಂಡಃ ಪ್ರಜಾ ಧರ್ಮಾರ್ಥಕಾಮಮೋಕ್ಷೈಃ ಯೋಜಯತಿ। ದುಷ್ಪ್ರಣೀತೋಹಿ ಕಾಮಕ್ರೋಧಾಭ್ಯಾಂ ವಾನಪ್ರಸ್ಥ ಪರಿವ್ರಾಜಕಾನಪಿ ಕೋಪಯತಿ ಕಿಮಂಗ ಗೃಹಸ್ಥಾನ್? ಅಸಾಮಂಜಸ್ಯಾತ್। ರಾಗದ್ವೇಷಾಭ್ಯಾಂ-ರಾಗದ್ವೇಷಂಗಳಿಂ। ಸಾಮಂಜಸ್ಯಾಭಾವೇ, ಮಾನ್ಯಸ್ಥಾಭಾವಮೇವ ಅಸಾಮಂಜಸ್ಯಂ। ತಸ್ಮಾದ್ಯಸ್ಮಾದೇವಂ। ಲೋಕಶಾಸ್ತ್ರೇತಿ। ಲೋಕಂ—ವರ್ಣಾಶ್ರಮಾದಿ ಜನಪದಂ। ಶಾಸ್ತ್ರಂ—ಶ್ರುತಿಸ್ಮೃತ್ಯಾದಿ। ತದನುಗುಣಮಾದ ದಂಡನೆಯಂ। ದಂಡ್ಯನಂ ಕುಱಿತುಮಾಡಲ್ತಕ್ಕುದು। ಶಾಸ್ತ್ರಾನುಗನಾದೊಡಂ ಲೋಕಾನುಗನಾಗಂ।

---

(1) ಧರ್ಮಸ್ಯಾಸ್ಯೇತಿ – (ಮುದ್ರಿ. ಪಾ)

ಲೋಕಾನುಗನಾದೊಡಂ ಎತ್ತಲಾನುಂ ಶಾಸ್ತ್ರಾನುಗನಾಗಂ ಎಂದು ಮೂರುಪ್ರಕಾರಮಾದ ದಂಡಂ ಮಾಡಲ್ತಕ್ಕುದಲ್ಲ. ಉದ್ವೇಜನದಿಂದಧರ್ಮಮಪ್ಪುದು. ಅದುಕಾರಣ ಮಹಿಪತಿಗೆ ನಾಶಂಸಂಭವಿಕುಂ. ಜಗತ್ತಿಗಂ ನಾಶಕಾರಣಮಂ ಪೇಳ್ದಪಂ | ಪರಸ್ಪರೇತಿ | ಪರಸ್ಪರ ಮನ್ಯೋನ್ಯಮಾಮಿಷತಯಾ ಭಕ್ಷ್ಯಭಕ್ಷಕಭಾವದಿಂ, ಭಿನ್ನಧರ್ಮಮಾಪುದಱಿಂ ವರ್ಣಂಗಳ್ಗೆ ಭಿನ್ನಧರ್ಮತ್ವದಿಂ ದಂಡಾಭಾವ ಮಾದೊಡೆ ಮಾತ್ಸ್ಯನ್ಯಾಯಂ ಪ್ರವರ್ತಿಕುಮೆಂದು ಪೇಳ್ದಪಂ| ಜಗದಿತಿ| ಏತತ್-ಚತುರ್ವರ್ಣಾದಿ ಸ್ವರೂಪಾತ್ಮಕಮಾದ ಜಗತ್ತು ನಿರಾಲಂಬ-ಮಾಲಂಬನರಹಿತಮಾಗಿ | ಕಾಮಲೋಭಾದಿ ಭಿಃ— ಕಾಮಕ್ರೋಧ ಲೋಭ ಮಾನ ಮದ ಹರ್ಷಂಗಳಿಂ ನಿಮಜ್ಜಮಾನಂ ರಂಧ್ರದೊಳ್ ಬಲಾತ್ಬಲಾತ್ಕಾರದಿಂ ಪ್ರೇರ್ಯಮಾಣಮಾದ ನಿರಯೇ-ರೌರವಾದಿನರಕಂಗಳೊಳ್ ರಾಜ್ಞಾ-ವಿಜಿಗೀಷುವಿಂದ ದಂಡೇನ-ವಧಾದಿಯಿಂ, ಧಾರ್ಯತೇ — ಹೇಗೆ ಒಬ್ಬಾನೊಬ್ಬಂ ಅಗಾಧಮಾದ ಪಂಕದೊಳ್ ಬೀೞುತ್ತೆ ಯಷ್ಟ್ಯಾದಿದಂಡದಿಂ ಧರಿಸಲ್ಪಡುಗುಂ | ಎಂದು ಉಪಸಂಹರಿಸುತ್ತೆ ಪೇಳ್ದಪಂ | ಇದಮಿತಿ | ಪ್ರಕೃತ್ಯಾ-ಶಬ್ದಾದಿ ವಿಷಯಗಳಿಂ ವಶೀಕೃತಮಪ್ಪುದಱಿಂದಮೆ ಪರಸ್ಪರಸ್ತ್ರೀಧನಲೋಲುಪಮಾದ ಈ ಜಗತ್ತು | ದಂಡಭಯೋಪಪೀಡಿತಮಾಗಿ–ಸನಾತನೇ–ನಿತ್ಯಮಾದ ಪುಣ್ಯಮಾದ ಸ್ವರ್ಗಾऽನಂತ್ಯಗಾಮಿಯಾದ ಮಾರ್ಗದೊಳ್ | ಮತ್ತಂ ಸಾಧುಸೇವಿತಮಾದ ಮುಮುಕ್ಷುಗಳಿನ ಧ್ಯಾಸಿತಮಾದಮಾರ್ಗದೊಳ್| ಪ್ರತಿಷ್ಠತೇ-ಪ್ರಸ್ಥಾನಮನೆಯ್ದುತಿರ್ದಿತು| ದಂಡಭಯದಿನನ್ಯೋನ್ಯ ಭಯಪೀಡಿತಮಾಗಿ ಯೆಂದಾದೊಡಮಿದನೆ ದೃಢಮಾಗಿ ಪೇಳ್ದಪಂ| ನಿಯತೇತಿ, ನಿಯತಂ-ಶಾಸ್ತ್ರನಿಯಮಿತಂ ವಿಷಯಾನುಷ್ಠಾನಮಾರ್ಗಂ ಅಲ್ಲಿ ಪ್ರವರ್ತನಶೀಲನಾದವಂ | ಜಗತಿ – ಸಂಸಾರದೊಳ್| ದಂಡ ಭಯದತ್ತಣಿಂ ಯೋಗಿ ಹಾಗೆ ಭವತೀತಿಶೇಷಃ| ಪರವಶೇ-ಕಾಮಾದ್ಯರಿಷಡ್ವರ್ಗ ವಶಮಾದ, ಜಗತ್ತಿನೊಳ್-ದಂಡಮನುೞಿದು ದುರ್ಲಭಂ, ಸಾಧುವೃತ್ತಿ-ಶಾಸ್ತ್ರೋಕ್ತಾನುಷ್ಠಾನಂ | ಅದನೆ ತೋರ್ದಪಂ| ಕೃಶಂ-ಕ್ಷೀಣಮಾದ | ವಿಕಲಂ-ಸುರ(ತ)ಸುಖ ಪ್ರಯುಕ್ತಕಲಾರಹಿತನಾದ| ವ್ಯಾಧಿತಂ-ಕ್ಷಯಾದಿ ಯುಕ್ತನಾದ| ಅಧನಂ-ದರಿದ್ರನಾದ, ಯಾವಿಧಮಾದ, ಪತಿಂ-ಪಾಣಿಗ್ರಹಣ ಮಾಡಿದ ಪುರುಷನಂ | ಕುಲಸ್ತ್ರೀಯುಂ, ದಂಡಭೀತಿಯಿಂದಲೆ ಅನುಸರಿಪಳೆಂದು ವಿಜಿಗೀಷುಗೆ ಪ್ರಯೋಜನಮಂ ಪೇಳ್ದಪಂ | ಇತ್ಯೇವಮುಕ್ತನ್ಯಾಯದಿಂ ಪರಿಗಣಿತೋ – ವರ್ಣಿತಾರ್ಥನಾಗಿ ದಂಡಕ್ಕೆ ದೋಷಂಗಳಂ ತದನುರೂಪದಂಡಮನುಳ್ಳಂ, ಅದುಕಾರಣ| ಶಾಸ್ತ್ರಮಾರ್ಗಾನುಸಾರಿ ನಿಯಮಯತಿ-ಹೀಗೆ ಮಾಡಲ್ತಕ್ಕುದೆಂದು ನಿಯಮಮಾಡುತ್ತಿರ್ದ್ದಾನು, ಯತಾತ್ಮಾ-ಜಿತೇಂದ್ರಿಯನಾದ, ಸ್ವಯಂ ವಿಜಿಗೀಷುವಾದವಂ | ಪ್ರಜಾಃ-ಚತುರ್ವರ್ಣಂಗಳಂ | ದಂಡನೀತ್ಯಾ – ದಂಡ ಪ್ರಣಯನದಿಂ| ಸಮರ್ಥನಪ್ಪವಿಜಿಗೀಷುವಂ| ಸಂಪದಃ-ಸಂಪತ್ತುಗಳು,ಸರಿತಇವ-ನದಿಗಳೋಪಾದಿ, ಪುನರಪಗಮಾಯ-ಅಪುನರ್ನಿವರ್ತಿಗೋಸುಗಂ ಸಂಪತ್ತುಗಳು | ಸಮುದ್ರಮಿವ ವಿಶನ್ತಿ | ಹೇಗೆ ಸರಿತ್ತುಗಳು ಸಮುದ್ರದೊಳ್ ಪ್ರವೇಶಿಸಿ ಪುನರಾವೃತ್ತಿರಹಿತಂಗಳ್, ಹಾಗೆ ಸಂಪತ್ತುಗಳು ಯಥೋಕ್ತ ಗುಣನಾದ ವಿಜಿಗೀಷುವನೆಯ್ದುವುವು—

ಇತಿ ಕಾಮಂದಕೀನೀತಿಸಾರಶಾಸ್ತ್ರಟೀಕಾಯಾ ಮುಪಾಧ್ಯಾಯ ನಿರಪೇಕ್ಷಾಯಾಂ
ವಿದ್ಯಾಸಮುದ್ದೇಶೋ — ವರ್ಣಾಶ್ರಮ ಧರ್ಮೋ
ದಂಡಮಾಹಾತ್ಮ್ಯಂ ಚೇತಿ

— ದ್ವಿತೀಯಸ್ಸರ್ಗಃ [೨] —

— ತೃತೀಯಸ್ಸರ್ಗಃ —

ದಂಡಮಾಹಾತ್ಮ್ಯದತ್ತಣಿಂದಂಡಕ್ಕೆ ತೀಕ್ಷ್ಣತಾಪ್ರಾಪ್ತಿಯಾಗಬಾರದೆಂದುಸದಾಚಾರಸ್ಥಾಪನಮನನಂತರಸರ್ಗದಿಂ ಸಮುದ್ದೇಶಮಂ ತೋಱುತ್ತೆ ಪೇಳ್ದಪಂ| ದಂಡಂದಂಡೀವ-ಯಥೋಕ್ತಮಾದ ದಂಡಮಂ ದಂಡಮಂಡಿತ ಧರ್ಮರಾಜನಹಾಗ|ಭೂತೇಷು-ವರ್ಣಾಶ್ರಮಂಗಳೊಳ್| ಧಾರಯ್ಯ-ಧರಿಸುತ್ತೆ, ತುಲಾಧೃತಮಿವ–ನ್ಯೂನಾಧಿಕಾಭಾವದತ್ತಣಿಂ| ಧರಣಿಸಮಃ-ಕ್ಷಾಂತಿಯಿಂದೆ| ಪ್ರಜಾವರ್ಣಾಶ್ರಮಂಗಳಂ | ನೃಪಃ ಸಮನುಗೃಹ್ಣೀಯಾತ್–ವಿನಯೋಪಾದಾನೇನ ಪ್ರಜಾಪತಿರಿವ—

ತಥಾಚೋಕ್ತಂ:—

ಪ್ರಜಾಪತಿಃ ಪ್ರಜಾಃ ಸೃಷ್ಟ್ವಾ ತಾಸಾಂ ಸ್ಥಿತಿನಿಬಂಧನಂ|| ಎಂದು ಪ್ರಜಾನಾಂ ಸ್ಥಿತಿಮಕಲ್ಪಯತ್ | ಇತಿ ಅದುಕಾರಣದಿಂ ವಿಜಿಗೀಷುವು ತಾನೆ ಪ್ರಜೆಗಳನನುಗ್ರಹಿಸಬೇಕು | ಹೀಗೆ ದಂಡ್ಯರೊಳು ದಂಡಂಧರಿಸಲ್ತಕ್ಕುದು | ಯಾಪ್ರಕಾರಮೆ ಅನುಗ್ರಾಹ್ಯರೊಳ್ ಅನುಗ್ರಹಮಂ ಮಾಡಲ್ ತಕ್ಕುದು ಎಂದು ಪೇಳ್ದಪಂ | ಆವಿಷ್ಟ ಇತಿ| ದುಃಖಿತವ್ಯಾಧಿತ ಕ್ಷುಭಿತಾದಿಜನ್ಯಮಾದ ದುಃಖಮಂ ಸ್ವಕೀಯಮಾಗಿ ಭಾವಿಸಿ ಉತ್ಕೃಷ್ಟಮಾದ ಕೃಪೆಯಿಂದೆ ಯುಕ್ತನಾಗಿ ದೀನರನುದ್ಧರಿಸಬೇಕು | ಜೀಮೂತವಾಹನನೋಪಾದಿಯಲ್ಲಿ | ಅದನೆ ದೃಢಮಾಗಿ ಪೇಳ್ದಪಂ| ತೇಭ್ಯಇತಿ | ತೇಭ್ಯೋऽಭ್ಯಧಿಕಾಃ ಅನ್ಯೇ ನ ಸಂತಿಇಹಭೂತಲೇ 'ದುಃಖಪಂಕಾರ್ಣವೇ ಮಗ್ನಂ ದೀನಮಭ್ಯುದ್ಧರಂತಿ ಯೇ'| ಆದರೆ ಸಂತಃ ಸತ್ಪುರುಷರು| ಸತ್ಪುರುಷವ್ರತ ಇತಿ| ಸತ್ಪುರುಷವ್ರತಮಂ ಪೇಳ್ದಪಂ| ವಾಗ್ವಾಣೀ|ಸೂನೃತಪ್ರಿಯಂ ಸತ್ಯಮಿತಿ | ಸೂನೃತವಚನಾತ್| ದಯಾ-ಅನುಕಂಪೆ, ದಾನಂ, ಆಪನ್ನತ್ರಾಣಾರ್ಥಂ| ಯಿಲ್ಲಿ ಪರಿಗ್ರಾಹ್ಯರಂ ಪೇಳ್ದಪಂ | ಪರರಿಂದೆ ಅತಿಪೀಡ್ಯಮಾನರಾಗಿಯೆ ಆರುಕೆಲಬರು ಉಪಗತಾಶ್ಶರಣಾನುಗತರು| ತದ್ರಕ್ಷಣಂ|ಸತಾಂ ಸಂತರಾದವರ ಸಂಬಂಧಮಾದಯಿವು | ಸಾಧುಹಿತಂ-ಶುಭತರಂ|ಸತ್ಪುರುಷವ್ರತಂ| ಇದೆ ಉಭಯಲೋಕಸಾಧಕಮಾದುದಱಿಂ ವ್ರತಂ | ಮರಳಿಯುಂ | ದಿನೋದ್ಧರಣಪ್ರಕಾರಮಂ ಪೇಳ್ದಪಂ - ದಯಾಮಿತಿ| ಅನುಕಂಪೆಯಂ ಆಸ್ಥಾಯ–ಅಂಗೀಕರಿಸಿ, ಪರಮಾಂ-ನಿರ್ವ್ಯಾಜಮಪ್ಪ ಧರ್ಮದತ್ತಣಿನವಿಚರ್ಲ| ಸತ್ಕ್ರಿಯಾಧರ್ಮದತ್ತಣಿ ನಚಲಿತನಾಗಿ|ಯೆತ್ತಲಾನುಂಪರಮಾದದಯೆಯಿಂದಧಿಷ್ಠಿತಂ|ಹಾಗಾದೊಡಂಶತ್ರುವಿಷಯದೊಳ್ ದಾನಭೇದಾದಿ ಕರ್ತವ್ಯದೊಳ್ ಯೆತ್ತಲಾನುಂ ತದ್ದಯೆಯಂ ನ ಕರೋತಿ–ಮಾಡದೆಯಿದ್ದರೆ ಆಗ ವಿಜಿಗೀಷು ಧರ್ಮದತ್ತಣಿಂ ಚಲಿತನಪ್ಪಂ| ಏವಂಚದಯೆಯುಂ ಯುಕ್ತವಿಷಯವಿಭಾಗದಿಂ ಕರ್ತವ್ಯಮೆಂಬುದರ್ಥಂ | ಪೀಡಿತಾನಾಂ- ಚೋರಾದಿಪೀಡಿತರಪ್ಪ| ಅನಾಥಾನಾಂ–ದಾತೃಜನರಹಿತರಪ್ಪವರ್ಗೆ—"ಕುರ್ಯಾದಶ್ರು ಪ್ರಮಾರ್ಜನಂ" ಪೀಡಾಪನಯದತ್ತಣಿಂದಶ್ರುಗಳ್ ಪ್ರಮಾರ್ಜಿತಂಗಳಪ್ಪುವು | ವರ್ಣಾಶ್ರಮಸಾಧಾರಣಧರ್ಮಮಾದೊಡಂ ಮರಳಿ ಪೇೞಪಡುತಿರ್ದ್ದಿತು | ಆದರೆ ಪ್ರದರ್ಶನಾರ್ಥಮಾಗಿ | ಆ ನೃಶಂಸ್ಯಮಿತಿ | ನೃಶಂಸನೆ(ಮೆ)ನೆ ನಿಷ್ಠುರಂ| ಸನಭವತಿಯೆಂದು ಅನೃಶಂಸಂ| ಆತನ ಭಾವಮಾನೃಶಂಸ್ಯಂ | ಸರ್ವಪ್ರಾಣಭೃತಾಂ | ಸರ್ವಜಂತುಗಳಿಗುಂ | ಸಮ್ಮತಃ | ಪರೋಧರ್ಮಃ | ಅದುಕಾರಣ ಅರಸು ಕೃಪಣಜನಮನಾನೃಶಂಸ್ಯದಿಂ ಪಾಲಿಸಬೇಕು | ಕೃಪಣಪೀಡನದೊಳ್ ದೋಷಮಂ ಪೇಳ್ದಪಂ | ನೇತಿ, ನೃಪಃ–ಅರಸು ಸ್ವಸುಖಾಪೇಕ್ಷಿಯಾಗಿ ದೀನಜನಮಂ ಪೀಡಿಸಲಾಗದು | ಹೇಗೆ ಒಬ್ಬಾನೊಬ್ಬನು ವ್ಯಾಧ್ಯಾದ್ಯುಪಶಮದಿಂ ಸುಖಾಪೇಕ್ಷಿಯಾಗಿ ಮನುಷ್ಯೋಪಹಾರಮಂ ದೇವತೆಗಳಿಗೋಸುಗಂ ಪ್ರಯಚ್ಛತಿ |

ಕೊಡುತಿದ್ದಾನು| ಈ ಪ್ರಕಾರವಾದ ಅನೇಕ ಕಾರಣಂಗಳಿಂದಲಾದೊಡಂ ಕೃಪಣಜನಮಂ ಪೀಡಿಸಲಾಗದು | ಪೀಡಿತಮಾದ ಕೃಪಣಜನಂ| ಮನ್ಯುನಾ–ಪೀಡಾ ಜನಿತಮಾದ ಸಾಕ್ರೋಶರುದಿತದಿಂ | ಹಂತಿ – ವಿನಾಶಮನೆಯ್ದಿಸುತುಮಿದ್ದೀತು| ಪಾರ್ಥಿವಂ–ನೃಪನಂ, ಅದನೆ ದೃಢಮಾಗಿ ಪೇಲ್ದಪಂ | ಕ ಇತಿ—ಕೋಹಿನಾಮ–ಆವನಂ, ಸ್ಫುಟಂ-ವ್ಯಕ್ತಮಾಗಿ | ವಿಶುದ್ಧ ಕುಲದೊಳ್ಪುಟ್ಟಿದವಂ,ಸುಖಲೇಶೋಪಲೋಭಿತನಾಗಿ| ಅಲ್ಪಸಾರಾಃಣಿ-ದುರ್ಬಲಂಗಳಾದ, ಭೂತಾನಿ-ಪ್ರಾಣಿಗಳಂ, ಪೀಡಯೇತ್ – ಕ್ಲೇಶಮನೆಯ್ದಿಕುಂ | ಅವಿಚಾರರ್ಯ - ದೋಷವಿಚಾರಮಂ ಮಾಡದೆ ಯಸ್ತು ಪೀಡಯೇತ್ ಆವಮ ಪೀಡಿಪಂ | ಆತಂ,ಕುಲೀನನಲ್ಲಂ ಯೆಂದುಭಾವಂ| ಅದನೆ ದೃಢಮಾಗಿ ಪೇಲ್ದಪಂ | ಅತಿಥಿ–ಅತಿಥಿಗಳ್ | ಮನಃಪೀಡೆಗಳ್| ವ್ಯಾಧಿಗಳ್ — ಜ್ವರಾದಿಗಳ್| ಅದಱಿಂ ವ್ಯಾಪ್ತಮಾದ| ಇಂದುನಾಳೆ ವಿನಶ್ವರಮಾದ| ಶರೀರಾಯ ಶರೀರಸುಖಸಂಪಾದನಾರ್ಥಮಾಗಿ ಆವ ವಿವೇಕಿ ಧರ್ಮಾಪೇತಮಮಧರ್ಮಿಷ್ಠಮಂ | ಸಮಾಚರೇತ್ — ಅವಿವೇಕಿಯಾದೊಡೆ ಆಚರಿಪನೆಂಬುದರ್ಥಂ | ಮತ್ತಮಕಾರ್ಯನಿಷೇಧಕ್ಕೋಸುಗ ವೈರಾಗ್ಯಭಾವಮನುಪದೇಶಂಗೆಯ್ಯುತ್ತೆ ಪೇಲ್ದಪಂ| ಆಹಾರ್ಯೈರಿತಿ| ಆಹಾರ್ಯೈಃ — ಸುಗಂಧಲೇಪನವಸ್ತ್ರಾಲಂಕಾರಾದಿಗಳಿಂ| ಸ್ವಭಾವದಿಂ ಪೂತಿಗಂಧಾದಿಗಳಂ ಸ್ವೇದಾದ್ಯುಪೇತಮಾದೊಡಂ ಕ್ಷಣಂ, ದುಃಖೇನ – ಕ್ಲೇಶದಿಂ – ಹೃದ್ಯತ್ವಂ| ಮನೋಹರತ್ವಮಂ ನೀಯಮಾನಂ ಸ್ಫುಟಂ ಛಾಯಾಮಾತ್ರಕಮಿತಿ| ಶುಕಾದಿಚ್ಛಾಯಾಮಾತ್ರಾದಸ್ಥಿತಿಃ–ಚಿರಸ್ಥಾಯಿಯಲ್ಲಂ ಎಂಬುದರ್ಥಂ| ಉದಕಬಿಂದು ದಾನದೋಪಾದಿಯಲ್ಲಿ? ಕ್ಷಣಮಾತ್ರದಲ್ಲಿಯೆ ಅದರ್ಶನಮನೆಯ್ದುತಿದ್ದೀತು| ವಿಷಯಂಗಳ್ಗೆಯುಂ ನಿಸ್ಸಾರತ್ವಮಂ ಪೇಲ್ದಪಂ| ಮಹಾವಾತೇತಿ | ಮಹಾವಾತಾಹತಿಯಿಂ ಭ್ರಾಂತಮಾದ ಮೇಘಮಾಲೆ ಖಂಡಮಾಗಿಮಾಡುಗುಂ—ಅದರೋಪಾದಿಯಲ್ಲಿ | ಪೇಲವೈಃ–ನಸ್ಸಾರಮಾದ ಶಾಲ್ಮಲಿವೃಕ್ಷದೋಪಾದಿಯಲ್ಲಿಯೆಂಬುದರ್ಥಂ—ಕಥಂನಾಮ-ಆಶ್ಚರ್ಯಂ| ಮಹಾತ್ಮನೋಽಪಿ ವಿವೇಕಿಗಳಾದೊಡಂ, ಹ್ರಿಯಂತೇ-ವಶಮಾಗಿಮಾಡಲ್ಪಡುತಿದ್ದಾರು | ವಿಷಯಾದಿಭಿಃ-ಸ್ಪರ್ಶಾದಿವಿಷಯಂಗಳಿಂ| ವಿಷಯಾಯೇವ-ವಿಷಯಂಗಳೆ | ಅಹಿತಕಾರಿಗಳಪ್ಪುದಱಿಂ ಶತ್ರುಗಳ್ | ಎಂದು ಮತ್ತವನಿತ್ಯತ್ವಮಂಪೇಲ್ದಪಂ | ಜಲೇತಿ–ಜಲಾಂತಃಪ್ರತಿಬಿಂಬಿತಮಾದ ಚಂದ್ರಪ್ರತಿಬಿಂಬದ ಹಾಗೆ | ಚಪಲಂ ಅಸ್ಥಿರಂ | ದೇಹಿನಾಂ-ದೇಹಿಗಳ | ಜೀವನವು ಆಪ್ರಕಾರವಾಗಿ ಅನಿತ್ಯಂ ಎಂದು ಚೆನ್ನಾಗಿ ತಿಳಿದು| ಕ್ಷಣಭಂಗುರಂ–ಶೀಘ್ರವಿನಾಶಿಯೆಂದು | ಅಲ್ಲಿ ಸುಜನೈಃ ಸತ್ಪುರುಷರೊಡನೆ ವಿದ್ಯಾವೃದ್ಧರೊಡನೆ ಎಂಬುದರ್ಥಂ | ಸಂಗತಂ-ಸಮಾಗಮಮಂ| ಕುರ್ಯಾತ್-ಮಾಡಬೇಕು | ಸಮಾಗಮಂ, ಧರ್ಮಾರ್ಥಮುಂ| ಸುಜನಸಂಗದಿಂ ವಿನೀತನಪ್ಪಂ | ವಿನೀತಂಗೆ ಸುಖಂ ವ್ಯಸನಾಭಾವ ದತ್ತಣಿನೆಂದು | ಸುಜನಸಂಗತಿಗೆ ಫಲಮಂ ಪೇಲ್ದಪಂ| ಸುಜನೈರಿತಿ | ಸುಜನೈಃ ಉಕ್ತಲಕ್ಷಣಮಾದ ಸುಜನರಿಂ ಸೇವ್ಯಮಾನಮಾದ ಮಹತ್ತಾದ ವಿಜಿಗೀಷು ಅತ್ಯಂತಮಾಗಿ, ವಿರಾಜತೇ – ಶೋಭಿಸುತ್ತಿದ್ದಾನು| ಸುಧಾಧವಳಿತಮಾದ ಮಹತ್ತಾದ ಪ್ರಾಸಾದಂ ಚಂದ್ರರಶ್ಮಿಗಳಿಂದೆ ಹೇಗೆ| ಹಾಗೆ ಸದಾಚಾರದಿಂ ಶುದ್ಧಂ | ಸುಜನರಿಂ, ತದೇವ – ಅದನೆ | ಪೇಲ್ದಪಂ | ಹಿಮೇತಿ | ಹಿಮಾಂಶುಮಾಲೀ – ಶರಚ್ಚಂದ್ರಂ| ಹಾಗೆ ಉತ್ಫುಲ್ಲ ಪಂಕಜಮಾದ ಸರಸ್ಸಂ| ಯಿ ಯೆರಡುಂ ಹೇಗೆ ಮನಂಗಳಂ ಸಂತೋಷಂಪಡಿಸುಗುಂ | ಸಜ್ಜನಚೇಷ್ಟಿತಮುಂ ಹಾಗೆ| ಸುಜನ ಸಂಗತಿಯುಂ ಮಾಡಲ್ತಕ್ಕುದು| ದುರ್ಜನಸಂಗತಿಯಾದೊಡೆ ತ್ಯಾಜ್ಯಮೆ| ದೋಷದರ್ಶನದತ್ತಣಿಮೆಂದು ಪೇಲ್ದಪಂ| ಗ್ರೀಷ್ಮೇತಿ |

ಗ್ರೀಷ್ಮದೊಳ್ ಸೂರ್ಯಾಂಶುಗಳ್ ತೀವ್ರಂಗಳಪ್ಪುವು| ಅದಱಿಂ ಸಂತಪ್ತಮಾದುದಱಿಂ ಉದ್ವೇಜನಮಾಶ್ರಯಂ| ಮರುಸ್ಥಲದೊಳ್ ತರುಲತಾದ್ಯಭಾವದಿಂ| ದುರ್ಜನಸಂಗದೊಳಂ ಆಶ್ರಯವಿಲ್ಲ - ಸ್ಥಿತಿಯಲ್ಲದುದಱಿಂ ಉಗ್ರಂ - ಉಚ್ಚಮಾಗಿ, ಅಭಿಭವತಿ - ಪೀಡಿಸುತಿದ್ದೀತೆಂದು ದುರ್ಜನಸಂಗಂ ತ್ಯಾಜ್ಯಮೆಂದು ಸಂಬಂಧಂ |

ಕೌಟಲ್ಯೇನಾಪ್ಯುಕ್ತಂ— “ ಅನರ್ಥಂ ಜಾನನ್ ಸಂಸರ್ಗಂ ತ್ಯಜೇದಿತಿ ” ದುರ್ಜನಸ್ವರೂಪಮಭಿಧಾತುಂ-ಆ ದುರ್ಜನರಸ್ವರೂಪಮಂ ಪೇಲ್ದಪಂ| ಶ್ರುತೇತಿ| ಶ್ರುತಮಾನ್ವೀಕ್ಷಕ್ಯಾದಿವಿದ್ಯೆಗಳ್ ಶೀಲಂ-ಸ್ವಭಾವಂ,ತತ್ಸಂಪನ್ನರಾದ ಸುಜನರಂ,ಅಕಸ್ಮಾದೇವ-ಕಾರಣಮನುಱಿದೆ.ಅಂತಃಪ್ರವಿಶ್ಯ-ರಸಸ್ಪರ್ಶನಾದಿನಾಪ್ತಭಾವಮನೆಯ್ದಿ - ಹೃದಯಮಂ ತೋಱಿ | ದಹತಿ - ಅಪಕಾರಮಂಮಾಳ್ಪನೆಂಬುದರ್ಥಂ| ಶುಷ್ಕವೃಕ್ಷಮನಗ್ನಿಯೋಪಾದಿ| ಆಶೀವಿಷಂಗಳತ್ತಣಿನತಿದೇಶಮಂ ಪೇಲ್ದಪಂ | ವಿಶ್ವಾಸೇತಿ | ವಿಶ್ವಾ(ಸ)ಮೊಡನೆ ಉದ್ಗೀರ್ಣಮಾದ ವಿಷಾಗ್ನಿ ಧೂಮಧೂಮ್ರೀಕೃತಮಾದ ಆನನಂಗಳನುಳ್ಳ ಆಶೀವಿಷಂಗಳೊಡನೆ| ಸಮಾಗಮಮಾದೊಡಂ, ವರಂ - ಶ್ರೇಷ್ಠಮಾದಸಮಾಗಮಮಂ | ಕುರ್ಯಾತ್-ಮಾಡಬಹುದು | ದುರ್ಜನರೊಡನೆ ಸಮಾಗಮಮೆ ಯೋಗ್ಯಮಲ್ಲಂ | ಸರ್ಪಂಗಳಾದೊಡಂ ಉಪಕಾರಗೃಹೀತಂಗಳಾದೊಡೆ ವ್ಯಭಿಚರಿಸವು| ದುರ್ಜನನಾದೊಡೆ ವ್ಯಭಿಚರಿಪಂ| ಉಪಕಾರಿಗಮಪಕಾರಿ ದುರ್ಜನನೆಂದು ಪೇಲ್ದಪಂ| ದೀಯತೇ ಇತಿ | ಸ್ವಚ್ಛಹೃದಯೈಃ - ಅಕಲುಷಹೃದಯರಿಂ ಸುಜನರಿಂ ಶುಭದ್ವಾರಮಯಮಾವ ಹಸ್ತದಿಂ ಆಹಸ್ತಮನೆ ದುರ್ವೃತ್ತನಾದ ದುರ್ಜನಂ ಮಾರ್ಜಾರನಹಾಂಗೆ ದ್ವೇಷ್ಯವಾಗಿ ವಿಲುಂಪತಿ| ಅಸಾಧ್ಯ ಇತಿ | ದುರ್ಜನನೆಂಬ ಪನ್ನಗಂ ದ್ವಿಜಿಹ್ವಮಾದ ವದನಮಂ ಧತ್ತೇ| ಮುಂದೆ ವೊಂದುಜಿಹ್ವೆ ಹಿಂದೆ ಒಂದು ಜಿಹ್ವೆಯೆಂದು ದುರ್ಜನಂಗೆ ದ್ವಿಜಿಹ್ವಂ - ವದನಂ| ಸರ್ಪಕ್ಕೆ ಸದಾದ್ವಿಜಿಹ್ವೆಯೆಂದು ದುರ್ಜನಂಗೆ ದ್ವಿಜಿಹ್ವಂ ವದನಂ| ಸರ್ಪಕ್ಕೆ ಸದಾದ್ವಿಜಿಹ್ವಂ ವದನಂ| ವಿಷಮುತ್ಸೃಜತಿ | ವಾಗ್ವಿಷಮಂ ಕಾರುತ್ತುಂ | ಸರ್ಪವಿಷಂ ಸಾಧುಮಂತ್ರಾಣಾಂ-ಗಾರುಡೋಕ್ತಮಾದ ಮಂತ್ರಂಗಳ್ಗಂ ಸಾಧ್ಯಂ | ಅನ್ಯಪನ್ನಗವಿಷಮಾದೊಡೆ ಸ್ವಸ್ಥರಾಗಿರ್ದ ಪಂಚಾಂಗಮಂತ್ರಮನುಳ್ಳವರ್ಗಮಸಾಧ್ಯಮೆಂದು ದೌಷ್ಟ್ಯದಿಂದೆ| ಯಿವಿಧಮಾದ ದುರ್ಜನಪನ್ನಗಂ ದೂರದೊಳ್ ಪರಿತ್ಯಾಜ್ಯಮೆಂದು ಭಾವಂ | ಪ್ರಸಂಗಾಗತಮಾದ ದುರ್ಜನನೊಳ್ ವಿಧೇಯತ್ವಮಂ ಪೇಲ್ದಪಂ| ಕ್ರಿಯತ ಇತಿ| ಅಭ್ಯರ್ಹಣೀಯನಾದಸುಜನಂಗೆ ಹೇಗೆಹೇಗೆ ಅಂಜಲಿಮಾಡಲ್ಪಡುಗುಂ ಅದುಕಾರಣ ವಿಶೇಷವಿನಯಯುಕ್ತನಾದವನಿಂ ದುರ್ಜನಂಗೆ ಅಂಜಲಿ ಮಾಡಲ್ತಕ್ಕುದು, ಕಾರ್ಯಾರ್ಥಿಯಾದ ಪುರುಷನಿಂ | ಆರಾಧನದತ್ತಣಿಂ ಅಪಕಾರಬುದ್ಧಿಯುಳ್ಳವನಾದೊಡಂ ಅನ್ಯನಾಗಲಿಯೆಂದು ಜನಾನುರಾಗಮಾಗಿ ಸದಾಚಾರವಿಶೇಷಮಂ ಪೇಲ್ದಪಂ | ಹ್ಲಾದಿನೀಮಿತಿ | ಆನಂದಕಾರಿಯಾದ ಮಧುರಮೆಂಬುದರ್ಥಂ |—

ತಥಾಚದಂಡೀ :—

“ಮಧುರಂರಸವದ್ವಾಚಿವಸ್ತುನ್ಯಪಿ ರಸಸ್ಥಿತಿಃ |
ಯೇನ ಮಾದ್ಯನ್ತಿ ಧೀಮಂತೋ ಮಧುನೇವ ಮಧುವ್ರತಾಃ ||” ಇತಿ—

ಏವಂ | ಯಿಪ್ರಕಾರ ಸಮಸ್ತಪ್ರಾಣಿಗಳ್ಗಂ ಆನಂದಕರಮಾದ ವಾಕ್ಯಂ ವಿಸೃಜೇತ್ | ಕೊಡಬೇಕು| ಎಂಬುದರ್ಥಂ| ಸಮ್ಯಗಿತಿ| ಸೂಕ್ತಮು ಉಹತದಿಂ(?) | ಜನಜಿಹೀರ್ಷಯಾ ಜನ

ಚಿತ್ತಾಪಹಾರಾರ್ಥಮಾಗಿ| ಪರಮನ್ಮೈತ್ರಿಯಂ ಯೆಲ್ಲದರಲ್ಲಿಯುಂ ಭಾವಿಸುತ್ತೆ ವಿಸೃಜೇತ್| ಲೌಕಿಕೀಂ ಗಿರಮಿತಿ| ಲೋಕವ್ಯವಹಾರಮಾದ ಗಿರಂ ವಾಕ್ಕಂ| ದುಷ್ಟವಾಕ್ಯದೊಳ್ ದೋಷಮಂ ಪೇಳ್ದಪಂ| ನಿತ್ಯಮಿತಿ| ನಿರಂತರವು ಮನಅಪಹಾರಿಯಾದ ವಾಕ್ಕಿನಿಂದ| ಪ್ರಹ್ಲಾದಯೇತ್–ಜನಮಂ ಆನಂದಪಡಿಸಬೇಕು| ಕ್ರೂರವಾಕ್ಕಾದ ಪುರುಷಂ ಉದ್ವೇಜ(ಕ)ನಪ್ಪಂ| ಅರ್ಥತೋಪೀಡನಮಂ ಕೊಡುತಿರ್ದೊಡಂ| ಕ್ರೂರವಾಙ್ನಿಷಿದ್ಧಾರ್ಥಮಾಗಿ ಪೇಳ್ದಪಂ| ಹೃದಿತಿ| ಹೃದಯದೊಳ್ ವಿದ್ಧನಾದ ನರನಹಾಂಗೆ ಅನರ್ಥಘಟಕಮಾದ ಆವವಾಕ್ಕಿನಿಂ ಜನಂ ಸಂತಪ್ತನಕ್ಕುಂ| ಆವಾಕ್ಕಂ, ಪೀಡಿತನಾದೊಡಂ, ಮೇಧಾವೀ-ಬುದ್ಧಿವಂತನು| ನೋದೀರಯೇತ್-ನುಡಿಯಲಾಗದು ಕ್ರೂರವಾಕ್ಕುಗಳ ಸ್ವರೂಪಮಂ ಪೇಳ್ದಪಂ| ತೀವ್ರಾಣೀತಿ| ದುಸ್ಸಹಂಗಳಾಗಿ ಉದ್ವೇಗಕಾರೀಣಿ–ಸಂತಾಪ ಜನಕಂಗಳಾದ| ವಿಸ್ಪಷ್ಟಾನಿ–ಉದೀರಿತಂಗಳಾದ–ಅಶಮಾತ್ಮಕೈಃ ಉಪಶಮರಹಿತದಿಂ| ಕೃಂತಂತಿ - ದೇಹಿಗಳಮರ್ಮಮಂ ಭೇದಿಸುತ್ತಿರ್ದ್ದಂಥಾ| ಶಸ್ತ್ರಾಣಿ – ತತ್ಸಮಾನಗುಣಮಾದ ವಚಾಂಸಿ— ಇತಿ ವಾಕ್ಕುಗಳುಯೆಂದು| ಪ್ರಿಯವಾಕ್ಕುಗಳ ಗುಣಮಂ ಪೇಳ್ದಪಂ| ಪ್ರಿಯಮಿತಿ| ಶ್ರುತಿಸುಖಮಾದುದೆ ಪೇಲಲ್ತಕ್ಕುದು| ಸುಹೃತ್ಸು-ಸುಹೃತ್ತುಗಳೊಳು, ನಿತ್ಯಂ, ದ್ವಿಷತ್ಸು ಶತ್ರುಗಳೊಳಂ, ಶಿಖೀವ-ಮಯೂರದಹಾಗೆ| ಕೇಕಾಭಿಃ-ಕೇಕಾರವಂಗಳಿಂ| ಮಧುರಂ-ರಮಣೀಯಮಾದಪ್ರಿಯವಚನಂ, ಕಸ್ಯ ನ ಪ್ರಿಯಂ| ಸಮಸ್ತರಿಗೂ ಪ್ರಿಯಮೆಂಬುರ್ಥಂ| ಶಿಖಿನಃ-ಮಯೂರದತ್ರಣಿಂ, ಕಲಸ್ವರಮನುಳ್ಳ ಮದರಕ್ತಮಾದ ಕೇಕಾರವದಿಂ| ತದ್ವಾಕ್ಕು ಹೇಗೆ ಮಧುರವಾಕ್ಕಾಗುತಿರ್ದ್ದೀತು| ಹಾಗೆ ಮಧುರಮಾದ| ವಿಪಶ್ಚಿತಃ-ವಿವೇಕಿಯ| ವಾಕ್ಕಿನಿಂ| ಅಲಂಕ್ರಿಯತೆ| ವಿವೇಕಿಗಳ ಮಧುರವಾಕ್ಕು ನಯಾಲಂಕಾರಮಪ್ಪುದು| ತಥಾಮದರಕ್ತ ಇತಿ| ಮದದಿಂ ರಕ್ತಮಾದ ರಾಗಮಂ ಪುಟ್ಟಿಪ ಹಂಸದಹಾಗೆ| ಕೋಕಿಲದ ನವಿಲುಗಳ ಧ್ವನಿಗಳ್ ಚಿತ್ತಮನಪಹರಿಪುವು ಎಂಬುದು ವಾಕ್ಯ ಶೇಷಃ| ವಾಚಃ-ಕೂಜಿತವಾಕ್ಕುಗಳು ಹೇಗೆ, ಹ್ಲಾದಿಗಳ್ ಹಾಗೆ ವಿವೇಕಿವಾಕ್ಕುಗಳ್ ಎಂಬುದಱಿಂ ವಿವೇಕಿಗೆ ಮಧುರವಾಕ್ಕು ಆವಶ್ಯಕಮೆಂದು ಉಪದೇಶಿಸಲ್ಪಟ್ಟುದು| ಗೃಹಸ್ಥಾಚಾರಮಂ ಪೇಳ್ದಪಂ| ಶುಚಿಃ| ಬಾಹ್ಯಾಭ್ಯಂತರಕೃತಶೌಚಂ-ಬಾಹ್ಯಶೌಚಂ-ಮೃಜ್ಜಲಾದಿಗಳಿಂ, ಅಭ್ಯಂತರಂ – ಸರ್ವಸತ್ವಾನುಗ್ರಹಬುದ್ಧಿಯಿಂ| ಆಸ್ತಿಕ್ಯಂ ವೇದೋಕ್ತಮಾದ ಸಮಸ್ತಮುಂ ಉಂಟೆಂದು ಆವಂ ತಿಳಿಯುತಿದ್ದಾನು ಅವಂ ಆಸ್ತಿಕಂ| ಅವನ ಭಾವಮಾಸ್ತಿಕ್ಯಂ| ಅದಱಿಂ ಪೂತಾತ್ಮನಾಗಿ| ಪೂಜಯೇತ್ - ಇಷ್ಟದೇವತೆಗಳಂ ನಿರಂತರಂ ಪೂಜಿಸಬೇಕು| ದೇವತಾಪೂಜೆಯಹಾಗೆ ಗುರುಪೂಜನಮುಂ| ಮಾತಾಪಿತೃ ಉಪಾಧ್ಯಾಯಾದಿಗಳ್ ಗುರುಗಳ್| ಆತ್ಮವಚ್ಚ ಸುಹೃಜ್ಜನಂ – ಬಂಧುಜನಮನಾತ್ಮಸಮನಾಗಿ ಮಾಡಿ ಪೂಜಿಸಬೇಕು| ಪ್ರತ್ಯೇಕಮಾರಾಧನಕ್ರಮಮಂ ಪೇಳ್ದಪಂ| ಪ್ರಣಿಪಾತೇತಿ-ಗುರುಗಳಂ ಪ್ರಣಾಮದಿಂದೆ| ಸತ್ಪುರುಷರಂ ಶಿಷ್ಟಾಚಾರಂಗಳಿಂ| ಇಷ್ಟದೇವತಾವಿಶೇಷಂಗಳಂಪುಣ್ಯಾನುಷ್ಠಾನದಿಂ ಅಭಿಮುಖವಾಗಿಮಾಡಬೇಕು| ದೇವತೆಗಳ್ ಸುಕೃತಕರ್ಮದಿಂದಲೆ ಅಭಿಮುಖರಪ್ಪರ್| ಪ್ರಣಾಮಮಾತ್ರದಿಂದಲೇ ಅಭಿಮುಖರಾಗರೆಂದು ಭಾವಂ| ಸುಜನರಾರಾಧನಮಂ ಪೇಳ್ದಪಂ| ಸದ್ಭಾವೇನ-ಪರಮಾರ್ಥಸ್ನೇಹದಿಂ| ಹರೇತ್-ಆರಾಧಿಸಬೇಕು| ಮಿತ್ರತ್ವಮನೆಯ್ದಿ| ಸದ್ಭಾವದಿಂ–ಸದ್ಭಾವದಿಂದಲೆ, ಬಾಂಧವರ ಆರಾಧಿಸಬೇಕು| ಸ್ತ್ರೀಭೃತ್ಯಭಾರ್ಯಾದಿಜೀವಿಗಳಂ ಸ್ನೇಹದಾನಂಗಳಿಂ "ನ ಪ್ರೇಮ ದಾನರಹಿತಂ ದಾನಂ ಪ್ರೇಮವಿವರ್ಜಿತಂ ||" ಎಂಬನ್ಯಾಯದಿಂ ಪ್ರೇಮದಾನಂಗಳಿಂದೆ, ತೇ-ಸ್ತ್ರೀಭೃತ್ಯಾದಿಗಳನಾರಾಧಿಸೂದು| ದಾಕ್ಷಿಣ್ಯೇನ–ಸ್ನಿಗ್ಧಭಾವದಿಂ, ಉಕ್ತಾನ್ಯಜನಮನಾರಾಧಿಪುದು| ದಾನಕ್ರಮಮಂ ಪೇಳ್ದಪಂ—

ಗುಣಾನುಗುಣಮಿತಿ—ಗುಣದಿಂದಲೆ ಧನಮಂ ಕೊಡಬೇಕು| ನಾನ್ಯಥಾ-ಪ್ರಕಾರಾಂತರದಿಂದಸ್ಥಿತಿವಂತನಾಗನು| ಆರಿಗೆ ಎಷ್ಟು ಪ್ರತಿಜ್ಞೆಮಾಡಲ್ಪಟ್ಟುದು, ತದನತಿಕ್ರಮದಿಂದ| ಶ್ರದ್ದಧಾನಃ-ದಾನದಿಂದ ನಿಶ್ಚಿತಮಾಗಿ ಪುಣ್ಯಮುಂಟುಯೆಂಬ ವಿಶ್ವಾಸಮನುಳ್ಳವನಾಗಿ| ದಯಾನ್ವಿತಃ-ದೀನಾರ್ಥಿಗಳಲ್ಲಿಯುಂ ಕಾರುಣ್ಯದಿಂ ಪ್ರವೃತ್ತದಾನನಾಗಿ| ಕನಕಮಂ ಧರ್ಮಾರ್ಥಮಾಗಿ ವಿಸೃಜೇತ್-ಕೊಡುವುದು| ಪ್ರಿಯಾದಿವಾಚಮುದೀರಯೇತ್ - ಪ್ರಿಯವಾಕ್ಯಮಂ ನುಡಿಯುತ್ತೆ-

ಉಕ್ತಂಚ: —

ಉದ್ವೇಜನೀಯೋಭವತಿ ಕ್ರೂರವಾಗರ್ಥತೋಽಪಿ ಸ೯| ಇತಿ— ದಾನಂ ಪ್ರಿಯವಾಕ್ಯಂ ಹಿತಮೇತತ್ಕರ್ತವ್ಯಮಿತಿ| ಈಯರ್ಥಕ್ಕೆ ಪ್ರಶಂಸಾರ್ಥಮಾಗಿ ಪೇಳ್ದಪಂ| ಯೇ ಇತಿ| ಯೇ ಆವ ಶ್ರೀಮಂತರ್| ಪ್ರಿಯಮಂ ನುಡಿಯುತ್ತಿದ್ದಾರು| ಕೊಡುತಲುಯಿದ್ದಾರು| ಸುಕೃತಂ ಸತ್ಕಾರಸಹಿತಮಪ್ಪಂತು| ಕೆಲವರ್ ವಂದ್ಯಚರಿತಮನುಳ್ಳಪುರುಷಶರೀರರಾದ ದೇವತೆಗಳೆಯೆಂದು| ಯಿದನೆ ದೃಢಮಾಗಿ ಪೇಳ್ದಪಂ| ಅನಿಂದೇತಿ| ಪರವೃತ್ತಿಷು ಭಿನ್ನದರ್ಶನಾದ್ಯನುಷ್ಠಾನಂಗಳೊಳ್ ನಿಂದೆ ಮಾಡಲ್ತಕ್ಕುದಲ್ಲ| ಸ್ವಧರ್ಮಪರಿಪಾಲನಂ — ಶಾಸ್ತ್ರೋಕ್ತಮಾದ ಸ್ವಕರ್ಮದ ಅನುಷ್ಠಾನಂ| ಕೃಪಣೇಷು ದೀನಾವನತರೊಳ್ ದಯಾಳುತ್ವಮುಂ| ಸರ್ವತ್ರ-ಯೆಲ್ಲಾ ಜನರಲ್ಲಿಯುಂ, ಮಧುರಮಾದವಾಕ್ಕುಗಳ್ ನಿಯಮದಿಂ ಮಾಡಲ್ತಕ್ಕುವು ಯೆಂದು ವಾಕ್ಯಶೇಷಂ| ತದಾ ಪ್ರಾಣದಾನೈರಿತಿ| ಸ್ವಪ್ರಾಣದಾನದಿಂದಲಾದೊಡವುಪಕಾರಿತ್ವವು ಮಿತ್ರಗೋಸುಗ| ಅವ್ಯಭಿಚಾರಿಗೋಸುಗಯುಕ್ತಂ ಯೆಂಬು ವಾಕ್ಯಶೇಷಂ| ಗೃಹಾಗತಮಾದಜನದೊಳ್ ಪರಿಷ್ವಂಗಃ–ಸರ್ವದಾಸ್ನೇಹಮಂ ಮಾಡಲ್ತಕ್ಕುದು| "ಸರ್ವಸ್ಯಾಭ್ಯಾಗತೋ ಗುರು" ರಿತಿ ವಚನಾತ್| ಶಕ್ತ್ಯಾ-ಸ್ವಸಾಮರ್ಥ್ಯದಿಂ ದಾನಂ- ದಾನಮುಂ| ಸಹಿಷ್ಣುತಾ - ಪರಿಗ್ರಹಭಾಗಭಾಕ್ಕಾದವಂ ವಾಕ್ಪಾರುಷ್ಯಮಾಡಿದೊಡನಾಗಲುಂ ಸೈರಣೆಯೆ ಕಾರ್ಯಮೆಂದು ವಾಕ್ಯಶೇಷಂ| ಸ್ವಸಮೃದ್ಧಿಷ್ವಿತಿ - ಸ್ವಸಮೃದ್ಧಿಗಳೊಳ್| ಅನುತ್ಸೇಕಂ–ದರ್ಪರಹಿತತ್ವಮುಂ| ಪರವೃದ್ಧಿಷ್ವಮತ್ಸರಃ - ಅನ್ಯವೃದ್ಧಿಯೊಳ್ ಮಾತ್ಸರ್ಯರಹಿತತ್ವಮುಂ| ಪರೋಪತಾಪಿವಚನೇ-ಪರಸಂತಾಪಕಾರಿಯಾದ ವಚನವಿಷಯದೊಳ್| ಮೌನವ್ರತಚರಿಷ್ಣುತಾ.- ಮೌನವ್ರತಾಚಾರಶೀಲತ್ವಮುಂ ಮಾಡಲ್ತಕ್ಕುದೆಂದು ಶೇಷಂ| ಉಪಸಂಹಾರಿಸುತ್ತೆ ಪೇಳ್ದಪಂ| ಬಂಧುಭಿಃ–ಬಂಧುಗಳೊಡನೆ| ಬದ್ಧಸಂಯೋಗಃ – ಸುಘಟಿತಸಂಬಂಧಮುಂ ಸುಜನೇ-ಸತ್ಪುರುಷ ಜನದೊಳ್| ಚಕ(ತು)ರಶ್ರತಾ—ಮನೋವಾಕ್ಕಾಯಕರ್ಮಂಗಳಿಂ ತದಾರಾಧನತತ್ಪರತ್ವಮುಂ| ಸಚ್ಚಿತ್ತಾನುಸಾರಿತ್ವಮುಂ-ಸುಜನಚಿತ್ತದ, ಅನು-ಅನಂತರದೊಳೆ, ಅನುಷ್ಠಾಯಿತ್ವಮುಂ| ಏವಂ ಯಿಾಪ್ರಕಾರಮುಕ್ತಮನುಷ್ಠಾನಂ—ಮಹಾತ್ಮನಾಂ–ಮಹಾಪುರುಷ ವ್ರತಾನುಷ್ಠಾನದಿಂ ಮಹತ್ತಾದ ಅರ್ಥಮಂ ತೋಱುತ್ತೆ ಸರ್ಗಾಂತದೊಳ್ ಭಿನ್ನವೃತ್ತಮಂ ಪೇಳ್ದಪಂ| ಸನಾತನೇ-ಶಾಶ್ವತಮಾದ| ವರ್ತ್ಮನಿ–ಮಾರ್ಗದೊಳ್ ಸಾಧುಸಪ್ಪಂತು, ತಿಷ್ಠತಾಂ| ಅವಸ್ಥಿತರಾದ ಯುಧಿಷ್ಠಿರಾದಿಗಳ| ಅಯಂ–ಈ ಉಕ್ತಲಕ್ಷಣಮಾದ| ಪನ್ಥಾಃ-ಅನುಷ್ಠಾನಮಾರ್ಗವು| ಮತಃ— ಉಪದಿಷ್ಟಮಾದುದು, ಮನ್ವಾದಿಗಳಿಂ| ಅನೇನ — ಈ ಮಾರ್ಗದಿಂ|ಗಚ್ಛ(ೞ–) ಅಯ್ದುವ, ಅನ್ಯೋಽಪಿ – ಮತ್ತಾವನಾದೊಡಂ| ನಿಯತಂ-ನಿಶ್ಚಯದಿಂದೆ| ಯಿಹಲೋಕಪರಲೋಕಮಂ ವಿಂದತಿ-ಪಡೆಯುತಿದ್ದಾನುಯೆಂಬುದರ್ಥಂ| ಸನಾತನಮಾದಮಾರ್ಗದೊಳ್ ತಿಷ್ಠತಾಂ ಇರುತ್ತಿರ್ದ್ದವರಿಗೆ| ಸರ್ವಾತ್ಮನಾ ಉಪಕಾರಮಂ ಪೇಳ್ದಪಂ–ಇತೀತಿ– ಯಿಾಪ್ರಕಾರದಿಂ ಸಾಧುಸೇವಿತ

ಮಾದ। ಪಥಿ–ಮಾರ್ಗದೊಳ್ | ನಿವೇಶಿತಾತ್ಮನಃ—ನ್ಯಸ್ತಾನ್ತಃಕರಣಂಗೆ | ರಿಪುರಪಿ-ಶತ್ರುವಾದೊಡಂ| ಗಚ್ಛತಿ ಸಾಧು ಮಿತ್ರತಾಂ - ಮಿತ್ರತ್ವಮನೆಯ್ದುತಿದ್ದಾನು | ವಿನಯಗುಣೇನ – ಜಿತೇಂದ್ರಿಯತ್ವದಿಂ | ಜಗತ್—ಲೋಕಮಂ, ವಶಮನೆಯ್ದಿಸಬೇಕು| ಸದಾಚಾರಸ್ಥಾಪನಮಧ್ಯದೊಳ್ ಮಧು(ರ)ವಚನಪ್ರಶಂಸೆ ಮಾಡಲ್ಪಟ್ಟೊಡಂ ಮರಳಿ ಪೇಟಪಡುತಿದ್ದೀತು — ಸರ್ವಮಾಧುರ್ಯಂಗಳ್ಗೆ,ಯೆನತ್ರಾವಸ್ಥಿತಿದುಗ್ಘಂಮಪ್ಪುದಱಿಂ(?) ಗರ್ವಮಂ ಬಿಟ್ಟು ವಾಕ್ಕುಗಳ ಮಾಧುರ್ಯಮೆ ಮಾಡಲ್ತಕ್ಕುದೆಂದು ಪೇೞ್ದಪಂ। ಕ್ವೇತಿ | ಲೋಕಾಭ್ಯಾಧಾನದೊಳ್ - ಸಂಗ್ರಹದೊಳ್| ಅರಸುಗಳ್ಗೆ ರಾಗತ್ವಂ—ಅನುರಾಗವತ್ವಂ | ಅನ್ಯಥಾ ಹಾಗಲ್ಲದೊಡೆ | ಆಗಾಮಿಕಗುಣಾನಾಂ ಯಿಪ್ಪತ್ತೊಂದು ಸಂಖ್ಯೆಯನುಳ್ಳ ಕುಲಶೀಲಾದಿಗಳ್ಗೆ! ಉಪಾದಾನಂ-ಸ್ವೀಕಾರವು, ಅನರ್ಥಕಮಪ್ಪುದು| ಮಧುರವಚನಂಗಳೆ ಪಾಶಂಗಳ್ | ದೀರ್ಘಮಾದ ಪಾಶಂಗಳಿಂ | ಧಾರಿತಃ—ಸುಬದ್ಧನಾಗಿ | ಅಭಿಹಿತಲೋಕಸಂಸ್ಥಿತನಾದ ಮಾರ್ಗಾವಸ್ಥಿತನಿಂ | ಭೇದಂ-ವ್ಯಭಿಚಾರಮಂ | ನೈತಿ – ಅಯ್ದದೆ ಇದ್ದಾನು | ನ್ಯಾಯದಂಡ ಸಾಧುಸಾಹಾಯ್ಯಕಾರ್ಯಂ ತತ್ಸಾಧಕನಾಗುತ್ತೆಯಿದ್ದಾನುಯೆಂದು ಭಾವಂ। —

ಇತಿ ಕಾಮಂದಕಟೀಕಾಯಾಮುಪಾಧ್ಯಾಯ
ನಿರಪೇಕ್ಷಾಯಾಮಾಚಾರವ್ಯವಸ್ಥಾಪನಂನಾಮ
— ತೃತೀಯಸ್ಸರ್ಗಃ [೩] —

— ಚತುರ್ಥಸ್ಸರ್ಗಃ —

ಜಿತೇಂದ್ರಿಯಂ | ವಿದ್ಯಾವೃದ್ಧರೊಡನೆ ಕೂಡಿ ವರ್ಣಾಶ್ರಮಾಚಾರಸ್ಥಾಪನಾನನ್ತರಂ ರಾಜ್ಯಮಂ ಪ್ರಕೃತೀನಾಮಪಿ ಗುಣಸಮೂಹಕೃತಾಂ - ಸಪ್ತಾಂಗಂಗಳ ಗುಣಸಮೂಹದಿಂ ಮಾಡಲ್ಪಟ್ಟ ಸಂಪತ್ತಂ | ದರ್ಶಯಿತುಂ - ತೋಱಲ್, ಪ್ರಕೃತಿಗಳನೆ ಮೊದಲಂ ಪೇೞ್ದಪಂ | ಸ್ವಾಮೀತಿ | ಸ್ವಾಮೀ-ವಿಜಿಗೀಷು | ಅಮಾತ್ಯಃ–ಮಂತ್ರಿಯು| * [ಸುಹೃತ್ — ಮಿತ್ರನುಂ, ಕೋಶಂ— ಬೊಕ್ಕಸಮುಂ] (ಜಾತ್ಯೇಕವಚನಂ) ರಾಷ್ಟ್ರಂ — ಜನಪದಮುಂ | ದುರ್ಗಂ-ಸ್ಥಾನೀಯಾದಿ | ಬಲಂ - ಚತುರಂಗಮುಂ | ಪರಸ್ಪರೋಪಕಾರಮಿದು | ಸ್ವಾಮಿಯು ಅಮಾತ್ಯೋತ್ಪಾದಕನಪ್ಪುದಱಿನಮಾತ್ಯೋಪಕಾರಿ | ಅಮಾತ್ಯನು ಸ್ವಾಮಿಗೆ ಬುದ್ಧ್ಯಾದಿ ಸಹಾಯನಪ್ಪುದಱಿಂ| ತೌ-ಅವರಿರ್ವರುಂ, ರಾಷ್ಟ್ರಕ್ಕೆ ರಕ್ಷಾದಿಗಳಿಂ ಉಪಕಾರಕರ್| ರಾಷ್ಟ್ರವು ಕೋಶಾದಿಸಂಪಾದನದಿಂ ಹಾಗೆ। ದುರ್ಗಮುಂ ರಕ್ಷಾದಿಧಾನ್ಯಾದಿಗಳಿಂ ಪೂರ್ವೋಕ್ತಂಗಳ್ಗೆ | ತೇಽಪಿ ಆ ಪೂರ್ವೋಕ್ತಂಗಳುಂ, ಸತ್ಕಾರಾದಿಸಂಪಾದನದಿಂ ದುರ್ಗಕ್ಕೆ | ಕೋಶಮುಂ ಭೃತ್ಯುಪಕರಣಸಂಪಾದನದಿಂ | ತೇಷಾಂ-ಅದಕ್ಕೆ ರಕ್ಷಣಂ ವರ್ಧನಂ-ತೀರ್ಥಪ್ರತಿಪಾದನಾದಿಗಳಿಂ| ತೇಽಪಿ - ಅವುಂ ಕೋಶಕ್ಕೆ | ಬಲಂ-ಚತುರಂಗಮುಂ, ಅಸಾಧ್ಯಸಾಧನಾದಿಗಳಿನುಪಕಾರಿ, ಪೂರ್ವೋಕ್ತಂಗಳ್ಗೆ| ತೇಽಪಿ–ಆ ಪೂರ್ವೋಕ್ತಂಗಳುಂ ಭರಣಾದಿಗಳಿಂ ಬಲಕ್ಕೆ| ಮಿತ್ರಂ ಸಾಹಾಯ್ಯದಾನಾದಿಗಳಿನನಂತರೋಕ್ತಂಗಳುಂ | ತೇಽಪಿ–ಅವುಂ | ಹಾಗೆ ಮಿತ್ರಂಗೆಯೆಂದು ಪರಸ್ಪರೋಪಕಾರಿಯಾಗಿ ಸಪ್ತಾಂಗಮುಂ ರಾಜ್ಯಮೆಂದು ಪೇೞಲ್ಪಡುತಿದ್ದೀತು| ನ್ಯೂನಾಂಗಸ್ಯ ಚಾವ್ಯಪದೇಶಃ, ಇತಿ | ಇದನೆ ದೃಢಮಾಗಿ ಪೇೞ್ದಪಂ | ಏಕೇತಿ | ಏಕಾಂಗದಿನಾದೊಡಂ ವಿಕಲಮಾದೊಡೆ, ಸಾಧುವಪ್ಪಂತು ವರ್ತಿಸದು | ರಥವತ್ - ರಥಮೆಂತು ಚಕ್ರಾಶ್ವಸಾರಥಿರಥಿಗಳ ಮಧ್ಯದೊಳೊಂದಱಿಂದೆ ಹೊರತಾದೊಡಂ|ನ ವರ್ತತೇ-ಇರಲರಿಯದು ತದ್ವದ್ರಾಜ್ಯಂ| [1] ಸಾಮಂಗ್ರ್ಯಂ-ಸಪೂರ್ಣತೆಯನಿಚ್ಛೈಸುತ ಕುರ್ವೀತ – ಮಾಡಬೇಕು | ಆಶು–ಶೀಘ್ರಮಾಗಿ | ಪರೀಕ್ಷಣಂ–ಅನ್ವೇಷಣಮಂ | ಆವಲಿಂಗಕ್ಕೆಯೇನುಗುಣಮೆಂದು | ಅಲ್ಲಿ ನೃಪಗುಣಂಗಳ್ಗೆಯುಂ ಪರೀಕ್ಷಣಂ ಮಾಡಲ್ತಕ್ಕುದು–ಸ್ವಾಮಿಸಂಪತ್ತಿ | ಸಾಮರ್ಥ್ಯದಿಂ ಪೇೞ್ದಪಂ | ಲೋಕೇತಿ | ರಾಜ್ಯಶ್ರೀಗಳು ಆಪ ಇವ–ಪಾನೀಯಂಗಳ ಹಾಗೆ | ದುರಾಪಾಃ - ದುಃಖೇನ-ಅನಾನುಕೂಲ್ಯದಿಂ| ಪ್ರಾಪ್ಯಂತೇ–ಐದಲ್ಪಡುತಿದ್ದಾವು| ದುಷ್ಪರಿಗ್ರಹಾಃ-ದೃಢತರಮಾದ ಸತ್ವಾದಿಗಳಿಂ, (ನ)ಪರಿಗೃಹ್ಯನ್ತೇ-ಪರಿಗ್ರಹಿಸಲ್ಪಡವು | ತಥಾ-ಹಾಗೆ | ಶ್ರಿಯೋಽಪಿ-ರಾಜಸಂಪತ್ತುಗಳುಂ | ದುರಾಪಾಃ-ದುಷ್ಪರಿಗ್ರಹಂಗಳ್ ಆಪ ಇವ – ಉದಕಂಗಳ್ ಹೇಗೆ ಹಾಗೆ ಸಂಸ್ಥಿತಾಃ – ಭೂಮಿಯೊಳ್ ಇರುತಿದ್ದಾವು | ಹಾಗೆ ಗುಣಸಂಸ್ಕೃತಮಾದ, ಆತ್ಮನಿಂ ತನ್ನಂ ಗುಣಸಂಪನ್ನನಾಗಿ| ತದನಂತರದೊಳ್ ದೋಷಪರೀಕ್ಷಣಂ| ಅಮಾತ್ಯಾದಿ ಪ್ರಕೃತಿಗಳತ್ತಣಿಂ ಮೊದಲು ತನ್ನ ಸ್ವರೂಪಮನೆ ವಕ್ಷ್ಯಮಾಣಗುಣೋಪೇತಮಾಗಿ | ಇಚ್ಛೇತ್–ಇಚ್ಛೈಪುದು | ವಕ್ಷ್ಯಮಾಣ ಗುಣಂಗಳ್ ಅತ್ಮ ಸಂಪದುಕ್ತಂಗಳುಂ, ಆಭಿಗಾಮಿಕಂಗಳುಮಾದಿ ಗುಣಂಗಳುಂ | ಏತೇ ಸಮುದಿಂತಂಗಳುಂ | ಏಕತ್ರ-ಸ್ವಾಮಿಪ್ರಕೃತಿ |

---

* ಸುಹೃತ್ತುಂಕೋಶಂ–ಎರಡನ್ನು ಇಲ್ಲಿ ಹೇಳಿಲ್ಲ, ಮುಂದೆ ಇವುಗಳ ಪರಸ್ಪರೋಪಕಾರತ್ವವನ್ನು ಹೇಳುವಾಗ ಕೋಶಮುಂ, ಮಿತ್ರಂ, ಎಂದು ಎರಡನ್ನೂ ಹೇಳಿದೆ.

(1) ಸಾಮಂತಸಮ

ಎಂದು ಪೇಟಲ್ಪಡುತಿದ್ದೀತು | ಕ್ಷತ್ರಿಯಕುಮಾರಶರೀರಮೆ ಅಲ್ತು | ಅದುಕಾರಣಂ ಇದು ಕೂಡುವುದು | ಸಪ್ತಾಂಗಸ್ಯಲಾಭಾಯ ಯತೇತೇತಿ | ರಾಜಾನ್ವಯ ಕುಮಾರನೊಳ್ ಆತ್ಮ ಸಂಪದಾದಿ ಗುಣಮಯನಾದ ಆವಸ್ವಾಮಿ ಪ್ರಕೃತಿ ಅದಱಿಂ ರಾಜ್ಯಕ್ಕೆ ಸಪ್ತಾಂಗತೆ| ತನ್ಮಯೇನೇತಿ| ಕುರ್ವೀತ ಗುಣ ಸಂಯುಕ್ತಃ| ಇತಿ ಲಬ್ಧಾತ್ಮಭಾವನಾಗಿ ತದನಂತರಂ ಶೇಷಪರೀಕ್ಷಣಂ | ಅವಶಿಷ್ಟವಾದ ಪ್ರಕೃತಿಗಳ | ಪರೀಕ್ಷಣಂ–ನಿರೂಪಣಮಂ, ಕುರ್ಯಾತ್–ಸಂಪಾದನಾರ್ಥಮಿತಿ–ಇದನೆ ಸಮರ್ಥಿಸುತ್ತೆ ಪೇೞ್ದಪಂ | ಸಾಧ್ವಿತಿ | ಶೋಭನತರಮಾದ ಭೂತಲದೇವತ್ವಂ ಪರವೈಶ್ವರ್ಯಂ | ಕಿಂತು ವಿಶೇಷಮುಂಟು | [1]ದುರ್ಧಾರ್ಯಂ - ದುರ್ವಹವು | ಅಕೃತಾತ್ಮಭಿಃ–ಗುಣಗಳಿನಸಂಸ್ಕೃತಾತ್ಮರಿಂ | "ಆತ್ಮಸಂಸ್ಕಾರಸಂಪನ್ನೋ ರಾಜಾ ಭವಿತುಮರ್ಹತಿ ||" ಆತ್ಮಸಂಸ್ಕಾರ(ರ)ಹಿತನಾದೊಡೆ ಅರಸಲ್ತು ಎಂದು ಭಾವಂ| ಆತ್ಮನಾವಱಿಂ ಸಂಸ್ಕರಿಸಲ್ಪಡುವಂ ಆ ಆಭಿಗಾಮಿತಗುಣಂಗಳಂ ಪೇೞ್ದಪಂ | ಕುಲಮಿತಿ | ಕುಲಮುಭಯಕುಲಶುದ್ಧಿ, ಆಭಿಜಾತ್ಯಂ| ಶೀಲಂ - ದುಃಖಸಂಭಾವಿತ್ವಂ| ವಯೋ-ಯೌವನಂ| ಸತ್ವಂ-ವ್ಯಸನದೊಳಂ ಅಭ್ಯುದಯದೊಳಂ ಆದ ಅಧಿಕಾರಿತ್ವಂ| ಅನ್ವಯುವು ಇಲ್ಲಿ ಗ್ರಹಿಸಲ್ಪಡುತಿದ್ದೀತು| ದಾಕ್ಷಿಣ್ಯಂ–ಎಲ್ಲಾ ಕಡೆಯಲ್ಲಿಯುಂ ಸಾನುಕಂಪತ್ವಮುಂ | ಕ್ಷಿಪ್ರಕಾರಿತಾ–ಅದೀರ್ಘಸೂತ್ರತ್ವಮುಂ ! ಅವಿಸಂವಾದಿ–ವಾಕ್ಛಲದಿಂ ವಿರುದ್ಧ ಸಂವಾದ ರಹಿತತ್ವಂ| ಯಥಾ ಸುವರ್ಣಂ ದಾಸ್ಯಾಮಿತಿ ಷೋಡಶಮಾಷ ಕಲ್ಪಿತಮಾದ ಸುವರ್ಣಾಖ್ಯಪ್ರತಿಮೆಯುಂ | ಸುವರ್ಣಮಂ ನ ದದಾತಿ | ವಾಕ್ಛಲದಿಂ ಸುವರ್ಣಜಾತಿಮಾತ್ರಂ ದದಾಮಿತಿ ತಾದೃಶಮಾದಭೂಯೋಭಾವಂ | ಸತ್ಯಂ–ಮೃಷಾಭಾವಮುಂ | ವೃದ್ಧಸೇವಾ-ವಿದ್ಯಾವೃದ್ಧಾರಾಧನಾ ತತ್ಪರತೆ| ಕೃತಜ್ಞತಾ – ಕೃತಕ್ಕೆ ಪ್ರತ್ಯುಪಕಾರಪರತೆ ! "ದೈವಸಂಪನ್ನತಾ ಬುದ್ಧಿರಕ್ಷುದ್ರಪರಿವಾರತಾ— [2]"ವಶ್ಯಸಾಮಂತತಾ ಚೈವ ತಥಾಚ ದೃಢಭಕ್ತಿತಾ | "

ಆವಾವುದನಿಚ್ಛೈಸುತಿದ್ದಾನು, ಅದು ಏತರಿಂದ ಅಹುದು ಅದು ದೈವಸಂಪನ್ನತೆ| ಬುದ್ಧಿ–ಅಷ್ಟಗುಣಮನುಳ್ಳುದು ಪ್ರಜ್ಞೆ | ಅಕ್ಷುದ್ರಪರಿವಾರತಾ—ಅದುರ್ಜನಪರಿವಾರತ್ವಮುಂ | ಶಕ್ಯಸಾಮಂತತಾ–ಶಕ್ಯೇ-ವಶದೊಳ್ ಕರ್ತುಂ-ಮಾಡಲ್, ಸಾಮಂತತಾ-ಮಂಡಲಮರ್ಯಾದಾಭೂಮ್ಯನಂತರಾನಂತರದೊಳ್ ಆರ್ಗೆ | ತದ್ಭಾವಂ | ದೃಢಭಕ್ತಿತಾ–ಸ್ಥಿರಾನುರಾಗಿತ್ವಮುಂ–ಪ್ರತಿಪನ್ನನಿಯಮದಿಂ | ದೀರ್ಘೇತಿ – ದೀರ್ಘದರ್ಶನಂ – ಕಾಲದಿಂ ವ್ಯವಹಿತಮಾದೊಡಂ ಪ್ರಜ್ಞಾಚಕ್ಷುಸ್ಸಿನಿಂ ನೋಡುವ ಶೀಲಮುಂ | ಉತ್ಸಾಹಮುಂ – ಶೌರ್ಯಾದಿಗುಣಯುಕ್ತತೆ | ಶುಚಿತಾ – ಪರದಾರಾದ್ಯನಿಚ್ಛತೆ | ದಿಕ್ಕುಗಳೊಳ್ ಸ್ಥೂಲಮಾದ ಲಕ್ಷ್ಯಮೆ—ಸಸ್ಯಾದಿಗಳಿಂ ಮಾಡುವಣ | ಸ್ವಲ್ಪಮಲ್ತು | ತದ್ಭಾವಂ | ವಿನೀತತಾ–ಸಪ್ರಶ್ರಯತ್ವಮುಂ | ಧಾರ್ಮಿಕತಾ–ವಿಜಿಗೀಷುಧರ್ಮತತ್ಪರತೆ | ಗುಣಾಃ ಈ ಯಿಪ್ಪತ್ತೊಂಪು | ಆಭಿಗಾಮಿಕ—ಆಶ್ರಯಣೀಯಕಾರಕತ್ವಂಗಳ್ — ಈ ಗುಣಂಗಳಿನಾಶ್ರಯಿಸಲ್ಪಟ್ಟವನರಸನಪ್ಪನೆಂದು ಭಾವಂ | ಇದನೆ ತೋಱುತ್ತೆ ಪೇೞ್ದಪಂ | ಗುಣೈರಿತಿ | ಯಿಾಪೂರ್ವೋಕ್ತಮಾದ ಗುಣಂಗಳಿಂ| ಉಪೇತಃ-ಅನ್ವಿತಂ| ಸುವ್ಯಕ್ತಂ – ನಿಶ್ಚಯದಿಂ | ಪರಿಜನಂಗಳಿಂದ ಅನುಸರಿಸಲ್ಪಡುತಿದ್ದಾನು | ಹಾಗೆ ಮಾೞ್ಪುದು ಹೇಗೆ ಲೋಕಾಭಿಗಮ್ಯನಪ್ಪಂ ! ಲೋಕೈರಭಿಗತೋರಾಜಾ, ನಾನ್ಯಥೇತಿ | ಆಭಿಗಾಮಿಕಂಗಳಾದ ಗುಣಂಗಳಿನಭಿಗತನಾದೊಡಂ ಪರಿವಾರಮಿಾಪ್ರಕಾರಮೆ ಮಾಡಲ್ತಕ್ಕುದು| ನಾನ್ಯಥೇತಿ–ಪ್ರಕಾರಾ

(1) ದುಷ್ಪ್ರಾಪಂ (ಮು–ಪಾ.) (2) ಶಕ್ಯಸಾಮಂತ (ಮು–ಪಾ.)

ನ್ತರಮಾಗದೆಂದು ಪೇೞ್ದಪಂ| ಪ್ರಖ್ಯಾತೇತಿ–ಪ್ರಖ್ಯಾತಮಾದ ವಂಶಂ–ಸೋಮಸೂರ್ಯೋದಿತಂ | ಅಕ್ರೂರಂ-ಹಿಂಸಕಮಲ್ಲದ| ಲೋಕಸಂಗ್ರಾಹಿಣಂ ಸುಜನಂ – ಸ್ವರ್ಗಾದಿ ಪರಲೋಕ ಸಂಗ್ರಹಣಶೀಲನಾದ | ಶುಚಿಂ – ಅಮಲವಾದ, ಅಸ್ನೇಹಮಾದ(?)ಯಿಾಪ್ರಕಾರಮಾದ ಪರಿವಾರಮಂ ಮಾೞ್ಪುದು ಮಹೀಪತಿ | ಆತ್ಮಹಿತಕಾಂಕ್ಷಿಯಾದೊಡೆ| ಆಪವಂ ವಿಪರೀತಮಂ ಮಾಡುತಿದ್ದಾನು ಆತಂ ತನಗೆ ಹಿತಮಲ್ಲಂ ಎಂದು ಭಾವಂ – ಗುಣವತ್ತಾದ ಅನುಗುಣಮಾದ ಪರಿವಾರದೊಳು ಗುಣಂಗಳಂ ದೋಷಂಗಳಂ ಪೇೞ್ದಪಂ| ದುಷ್ಟ ಇತಿ | ದುಷ್ಟನಾದೊಡಂ ನೃಪಂ | ಹಂಸಸಮಪರಿವಾರಗುಣಂಗಳಿಂ| ಭೋಗ್ಯತಾಂ-ಆಶ್ರಯಣೀಯತ್ವಮಂ| ಏತಿ–ಐದುತಿದ್ದಾನು| ಸ(ಕ್ರೂರ)ದುಷ್ಟಪರಿವಾರಸ್ತು – ಗೃಧ್ರಸಮಪರಿವಾರನಾದೊಡೆ ವಾಸವಸಮನಾದೊಡಂ | ವ್ಯಾಳಾಕ್ರಾಂತಮಾದ–ಪನ್ನಗವೇಷ್ಟಿತಮಾದ | ಚಂದನದ್ರುಮದೋಪಾದಿಯಲ್ಲಿ ಆಶ್ರಯಣೀಯತ್ವಮನ್ನೈದಂ | ತಸ್ಮಾದದುಕಾರಣಂ ಸುಪರಿವಾರನಾಗಬೇಕು ಅರಸು | ಇದನೆ ಸಮರ್ಥಿಸುತೆ ಪೇೞ್ದಪಂ | ನಿರುದ್ಧೇ ಇತಿ | ಸತಾಂ-ಸತ್ಪುರುಷರ್ಕಳಾದ ವಿಜಿಗೀಷುವನಾಶ್ರಯಿಪವರ | ಮಾರ್ಗಂ-ಸೇನಾದ್ವಾರಾಂತಮಂ| ಅಪವಾರ್ಯ-ತಡೆದು| ನಿರುನ್ಧೇ-ಪ್ರತಿಬಂಧಕನಪ್ಪಂ ಮಹೀಪತಿ| ಮತಿವ್ಯುತ್ಪಾದಕ ಸತ್ಪುರುಷಶೂನ್ಯಮಾದ ಮಹೀಪತಿಯ ಸಮುದಾಯಂ–ಲೋಕಮುಮಂ ಭಕ್ಷಯಂತಿ | ಸಮುದಾಯಭಕ್ಷಣದಿಂ ಮಹೀಪತಿಯುಂ ಶೀಘ್ರಮಾಗಿ ಭಕ್ಷಿಸಲ್ಪಡುಗುಂ | ದುಷ್ಟಾತ್ಮಾನಸ್ತು | ದುಷ್ಟಸಚಿವಮೆಂಬುದಱಿಂ ಕರ್ಮಾಮಾತ್ಯಾದಿಗಳ್| ಇದು ಕಾರಣದಿಂ ಸುಸಚಿವಂ ವಕ್ಷ್ಯತೇ ವಿಭೂತೀರಿತಿ | ಪ್ರಕೃತಿಮಧ್ಯದೊಳ್ ಪ್ರಧಾನಮಾದ ಆತ್ಮಪರೀಕ್ಷಣಮಂ ಪೇೞ್ವ ಪ್ರಸ್ತುತಮಾದ ಅಮಾತ್ಯ ಸಂಪದಮಂ ಪೇೞ್ದಪಂ | ವಾಗ್ಮೀತಿ – ವಾಗ್ಮೀ-ಪ್ರಶಸ್ತವಾಕ್ | ಪ್ರಾಗಲ್ಭ್ಯಂ-ವಾಕ್ಕುಗಳಿಗೆ ಲಲಿತಮಧುರಸ್ವರಾವರ್ಣಿತಾ | ನಿವಿಜ್ಞಾತಪ್ರಣಯಿತ್ವ ನಿಪುಣಮಪ್ಪಂತು | ಕೃತಶಿಲ್ಪನಂ–ಅಭ್ಯಸ್ತಸಮಸ್ತಕಲನುಂ| ಸುವಿಗ್ರಹಃ – ಸುಖೇನೈವ ಅನತಿಪ್ರವೃತ್ತಂ ನಿಷಿದ್ಧಿಸಲ್ಪಡುತಿದ್ದಾನು| ಪರಾಭಿಯೋಗಪ್ರಸಹಃ - ಪರೈಃ ಶತ್ರುಗಳಿಂದ ಕೃತಮಾದ, ಅಭಿಯೋಗ ಪ್ರಸಹಃ | ಸರ್ವತ್ರ ದೃಷ್ಟಪ್ರತಿಕ್ರಿಯಂ | ಪರಚ್ಛಿದ್ರಾನ್ವೇಷೀ – ಶತ್ರುಚ್ಛಿದ್ರಾನ್ವೇಷಣಶೀಲಂ | ಸಂಧಿವಿಗ್ರಹ(ತ)ತ್ವವಿತ್-ಷಾಡ್ಗುಣ್ಯಪ್ರಯೋಗಜ್ಞಂ | ಷಡ್ಗುಣಂಗಳುಂ ಗ್ರಹಿಸಲ್ಪಟ್ಟುವು | ಗೂಢಮಂತ್ರಪ್ರಚಾರಶ್ಚ—ಗೂಢಃ – ಅತಿಗುಪ್ತಮಾದಮಂತ್ರಃ | ಪಂಚಾಂಗಂ—ಕರ್ಮಣಾಮಾರಂಭೋಪಾಯಃ ಪುರುಷದ್ರವ್ಯಸಂಪತ್, ದೇಶಕಾಲವಿಭಾಗಃ, ವಿನಿಪಾತಪ್ರತೀಕಾರಃ- ಕಾರ್ಯಸಿದ್ಧಿರಿತ್ಯುಕ್ತಲಕ್ಷಣಮಾದ ಮಂತ್ರಂ| ಗೂಢಪ್ರಚಾರಃ-ಅನ್ಯಾವಿದಿತಪ್ರಚಾರಮಾದೊಡೆ ಪರರಿಗೆ ಆಸಾಧ್ಯಮಪ್ಪುದು| ದೇಶಕಾಲವಿಭಾಗವಿದಿತಿ–ದೇಶಕಾಲ ವಿಭಾಗಮನೆ - ಶೌರ್ಯಸ್ಯಾಸ್ಮಾಕಂ, ತಮ್ಮ ಯುದ್ಧಾಸನಸ್ಥಾನಾದಿಗಳ್ಗೆ ದೇಶಮುಂ ಕಾಲಮುಂ ಅನುಕೂಲಮೆಂದುಂ, ಶತ್ರುವಿಗೆ ಅವೆರಡುಂ ಪ್ರತಿಕೂಲಮೆಂದುಂ| ವಿಭಾಗಂ-ಜ್ಞಾನಾತಿಶಯಂ| ಆದಾತಾ-ಸಮ್ಯಗಾದದಾನಃ-ಪ್ರಜಾದಿಗಳತ್ತಣಿಂ ಶಾಸ್ತ್ರೋಕ್ತನ್ಯಾಯದಿಂ | ತಥಾವಿನಿಯೋಕ್ತಾ—ಇದಕ್ಕೆ ವೃದ್ಧಿಕರಣದಿಂ| ಪಾತ್ರವಿದಿತಿ| ಅರ್ಥವಿನಿಯೋಗದೊಳ್ ಪುರುಷತ್ರಯಾದಿಸಂಪತ್ತಿನಿಂ ಪಾತ್ರಂಗಳ್ ಮೂಱುತೆಱಂ — ಕರ್ಮಾಭಿಸಂಧಿಯಿಂ ಮಹಾಗುಣರಾದ ಬ್ರಾಹ್ಮಣರುಂ | ಅರ್ಥಾಭಿಸಂಧಿಯಿಂ ಮಂತ್ರಿಪುರೋಹಿತಾದ್ಯರ್ಥೋತ್ಪಾದಕರುಂ | ಕಾಮಾಭಿಸಂಧಿಯಿಂ ಮನೋಹರರಾದ ಸ್ತ್ರೀಯರುಂ- ಎಂದು | ಹೀಗೆ ಗುಣವತ್ತ್ವದಿಂ ಪಾತ್ರಂಗಳಂ ತಿಳಿದಂಥಾ | ಕ್ರೋಧ ಇತ್ಯಾದಿ ಪ್ರತೀತಂ, ಪರೋಪತಾಪ—ಅನೃತಾತಿಗಇತಿ ಪರೋಪತಾಪಾದಿಗಳಂಅವಮತಿಗಚ್ಛತಿಯೆಂದು | ಅನೃತಾದಿಗಳಿಂ ಅಯುಕ್ತಂ | ವೃದ್ಧಇತಿ-ನಿರಂ

ತರ ವೃದ್ಧೋಪದೇಶಸಂಪನ್ನನಾಗಿ-ವೃದ್ಧೋಪದೇಶದಿಂದ ಅನುಷ್ಠಾನಜ್ಞಾನಸಂಪತ್ತಿ| ಶ್ಲಕ್ಷ್ಣ ಇತಿ-
ಉತ್ಸಾಹಾದಿಶಕ್ತಿಗಳಿಂ ಸಮರ್ಥಂ | ಮಧುರದರ್ಶನಃ | ರಮಣೀಯಾಕೃತಿತ್ವದಿಂ | ಗುಣಾನು
ರಾಗಿ — ಗುಣವಂತರೊಳ್ ಕೃತಾನುರಾಗಂ | ಸ್ಮಿತವಾಗಿತಿ — ಯಿಾಷದ್ದಂತೋಪಲಕ್ಷಿತವಾ
ಣಿಯುಂ | ಯಿಾಪ್ರಕಾರದಿಂದ ತ್ರಿವಿಧಗುಣಪರಿಕಲ್ಪಿತಮಾದ ಗುಣಸಂಖ್ಯೆ | ಆತ್ಮಸಂಪತ್ಪ್ರಕರ್ಷ
ದೊಳ್ ಪೂರ್ವಾಚಾರ್ಯರಿಂ ಪೇಟಲ್ಪಟ್ಟುದು ಎಂದು | ಆತ್ಮಸಂಪತ್ತಿನ ಮಾಹಾತ್ಮ್ಯಮಂ
ಪೇಟ್ದಪಂ | ಇತ್ಯಾದೀತಿ - ಲೋಕಯಾತ್ರಾ- ಲೌಕಿಕವ್ಯವಹಾರಂ | ತಂ ಜಾನತೀತಿ – ಅದಂ
ತಿಳಿದ | ಸ್ಥಿರೇ-ಅಚಲನಾದ, ನೃಪನೊಳ್ | ನಿರ್ವೃತಃ — ಸುಖಿತಮಾದ ಸಕಲೋಪತಾಪ
ಚ್ಛೇದಿ | ಪಿತರೀವ-ತಂದೆಯೊಳ್ ಹೇಗೋಹಾಗೆ | ಆಸ್ತೇ - ಸ್ಥಿತಿಯಂ ಮಾಡುತಿದ್ದೀತು | ಪುತ್ರ
ನೋಪಾದಿ| ಯತ್ರ—ಆವನೃಪನೊಳ್-ಲೋಕಃ-ಜನಪದಂ | ಸರ್ವಾ(ದ್ವಾ)ವೋ ನಾನ್ಯಥೇತಿ |
ಯಿಾಅರ್ಥಮನೆ ಪೇಟ್ದಪಂ | ಆತ್ಮೇತಿ | ಪ್ರಾಪ್ಯಲೋಕೋಜನಪದಂ ವಿಶೇಷೇಣ ವರ್ಧಯತಿ-
ತ ಇತಿ - ಆಭಿಗಾಮಿಕಗುಣಮಧ್ಯದೊಳ್ ಅಪೇಕ್ಷಿತಮಾವ ಬುದ್ಧ್ಯೈಕಸಹಾಯಮಾದ ಗುಣಾಂ
ತರಂಗಳಂ ಪೇಟ್ದಪಂ | ಶುಶ್ರೂಷೇತಿ – ಜನ್ಮಾಂತರವಾಸನಯೈವ ವಿದ್ಯಾಂ ಶ್ರೋತುಮಿಚ್ಛಾ |
ಶ್ರವಣೇಚ್ಛೆ! ತದನಂತರಂ ಶ್ರವಣಮಂ ಮಾಡುತಿದ್ದಾನು | ಶ್ರುತವತ್ಯರ್ಥಗ್ರಹಣಂ | ಶ್ರುತಕ್ರಮ
ದಿಂದಲೇ ವ್ಯಾಖ್ಯಾತದ ಸ್ವೀಕಾರಂ | ಧಾರಣಂ – ಅವಧಾರಣೆ – ಮನಸ್ಸಿನೊಳ್ ತತ್ತ್ವಾಭಿ
ನಿವೇಶಂ| ಪರಮಾರ್ಥಜ್ಞನಿಂದ | ಅಭಿನಿವೇಶಂ | ಚಿತ್ತತಆಸ್ಥಾಪನಂ | ಊಹಂ-ವಿತರ್ಕಂ | ಇದು
ಈ ಪ್ರಕಾರವೋ ಬೇಱೆವೊಂದುವಿಧವೋ ಎಂಬ | ಸಂದೇಹ ವಿಪರ್ಯಾಸಾದ್ಭೂತಸ್ಯವಿಪರೀತ
ತ್ಯಾಗೋಽಪೋಹಃ | ಅರ್ಥವಿಜ್ಞಾನಂ-ವಿವಿಧಮಾದ ಜ್ಞಾನಂ | ಸದಸದ್ರೂಪಂ | ಸತ್ತಿಗೆ ಅರ್ಥ
ವಿಜ್ಞಾನಂ | ಅಜ್ಞಾನಾದಿ ಕ್ರಮದೊಳ್ ನೋತ್ಪದ್ಯತೇ-ಉತ್ಪನ್ನಮಾಗದು | ಅಲ್ಲಿ ಅವುದಂತರಂಗಂ
ತದ್ವೃತ್ತಮೆ ಗುಣಾಧಿಕತ್ವಂ |

ತಥಾಚಕೌಟಲ್ಯಃ — 'ಶುಶ್ರೂಷಾಶ್ರವಣೇ ಗ್ರಹಣಧಾರಣ ವಿಜ್ಞಾನೋಹಾಸ್ತತ್ವಾಭಿನಿ
ವೇಶಾಃ ಇತಿ| ದಾಕ್ಷ್ಯಯಿತಿ|ದಾಕ್ಷ್ಯಂ-ಕೌಶಲಂ|ಶೈಘ್ರ್ಯಂ-ಕ್ಷಿಪ್ರಕಾರಿತೆ| ಅಮರ್ಷಃ-ಅಪರಾಧಂಗಳ
ಅಮತ್ಸರದಿಂದಲೆ ಸಹಿಸುವಣವುಂ | ಶೌರ್ಯಮತಿತ್ವಮೆಂಬ ಉತ್ಸಾಹಲಕ್ಷಣಗುಣತ್ರಯದಿಂದ
ಉತ್ಸಾಹಂ—ಲಕ್ಷ್ಯಂ, ಗುಣೈರೇತೈರಿತ್ಯಾದಿ—ಗುಣೈಃ ಆಭಿಗಾಮಿಕಗುಣಂಗಳಿಂ ಉತ್ಸಾಹಸಂಪ
ದ್ಯುಕ್ತನಾದ | ಅನಂತರೋಕ್ತಮಾದ ಬುಧ್ಯುತ್ಸಾಹಗುಣಂಗಳಿಂದ ಯುಕ್ತನಾದವಂ | ರಾಜಾ
ಭವಿತುಮರ್ಹತಿ—ರಾಜಾನ್ವಯಯುಕ್ತನಪ್ಪಂ | ಈ ಗುಣಂಗಳೊಳ್ ಆಧೇಯಗುಣತ್ರಯಕ್ಕೆ
ಪ್ರಾಧಾನ್ಯಮಂ ಪೇಟ್ದಪಂ| ತ್ಯಾಗ ಇತಿ-ಸ್ಥೂಲಲಕ್ಷತಾಲಕ್ಷಣಂ ತ್ಯಾಗಂ| ಸತ್ಯಮುಂ ಶೌರ್ಯಮುಂ
ಯಥೋಕ್ತಂ 'ತ್ರಯ ಏತೇ ಮಹಾಗುಣಾಃ' ಮಹಾಗುಣಂಗಳಿಂ ಫಲಸಂಪಾದಕತ್ವದಿಂದೀ
ಮೂಱುಗುಣಂಗಳೊಡನೆ ಕೂಡಿದವಂ ಸರ್ವಾಪ್ರಾಪ್ನೋತಿ [ತ್ಯಾಗದಿಂವಿಕ್ರಮಾದಿತ್ಯಂ]| ಶೌರ್ಯದಿಂ
ಶೂದ್ರಕಂ | ಸತ್ಯದಿಂದೆ ಯುಧಿಷ್ಠಿರಂ - ರಾಜ್ಯಮಂ ಪಡೆದರೆಂದು, ಶ್ರೂಯತೇ | ಸ್ವಾಮಿಗುಣ
ಸಂಪತ್ತಂ ಪೇಟ್ದು ಅಮಾತ್ಯಗುಣ ಸಂಪದಮಂ ಪೇಟ್ದಪ | ಕುಲೀನಾ ಇತಿ-ಶುದ್ಧೋಭಯಕುಲ
ಸಂಪನ್ನರುಂ | ಶುಚಯಃ –ಸ್ವಭಾವದಿಂದಲೇ ಶೌಚಪರರುಂ | ಶೂರಾಃ-ಅಭೀರುಗಳುಂ |
ಶ್ರುತವನ್ತಃ - ಆನ್ವೀಕ್ಷಕ್ಯಾದಿಶ್ರುತಂ | ಅನುರಾಗಿಣಃ - ಸ್ವಾಮಿಯೊಳ್ ಅನುರಾಗವಂತರುಂ |
ದಂಡನೀತಿ ಪ್ರಯೋಕ್ತಾರಃ — ನೀತಿಶಾಸ್ತ್ರ ಪ್ರಯೋಗ ಕುಶಲರುಂ | ಸಚಿವಾಃ–ಅಮಾತ್ಯರ್ |
ಸ್ಯುಃ–ಆಹರು, ಮಹೀಪತೇಃ | "ಅಭಿಜನಪ್ರಜ್ಞಾ ಶೌಯಾನುರಕ್ತಾ ಅಮಾತ್ಯಾ ಕುರ್ವೀತ"

ಎಂದು ಕೌಟಲ್ಯಂ | ಶುಚಿಗಳಾದೊಡಂ ಉಪಧಾಶೋಧನಮಂ ಸೂಚಿಸುತ್ತೆ ಪೇಟ್ದಪಂ |
ಉಪಧೇತಿ–ಉಪಧಾ–ಧರ್ಮೋಪಧೆಯುಂ, ಅರ್ಥೋಪಧೆಯುಂ, ಕಾಮೋಪಧೆಯುಂ ಇದಱಿಂದ
ಶೋಧಿಸಲ್ಪಟ್ಟವರ್ ಜ್ಞಾತಶೌಚರ್| ಕೌಟಲ್ಯೋಕ್ತಪ್ರಕಾರದಿಂ | ಅದೆಂತೆಂದೊಡೆ – ಅಧಾರ್ಮಿ
ಕೋಽಯಂರಾಜಾ—ಧರ್ಮಮುಪಪಾದಯಾಮಃ ಪ್ರತ್ಯಾಖ್ಯಾನೇ ಶುಚಿರಿತಿ ಧರ್ಮೋಪಧಾ |
ಅಸತ್ಯೋಽಯಂ ರಾಜಾ ಅಭಿಲಷಿತಂ ದಾಸ್ಯಾಮಃ ಪ್ರತ್ಯಾಖ್ಯಾನೇ ಶುಚಿರಿತ್ಯರ್ಥೋಪದಾ |
ರಾಜಮಹಿಷೀ ತ್ವಾಂ ಕಾಮಯತೇ ಕ್ರಿಯತಾಂಸಮಾಗಮೋಪಾಯಃ—ಪ್ರತ್ಯಾಖ್ಯಾನೇ ಶುಚಿರಿತಿ
ಕಾಮೋಪಧಾ | ಏಕೋಽಮಾತ್ಯಃ ಸರ್ವಾಅಪಾಹರೇತ್ | ತೇನೋದ್ವೇಗೇನಕಿಲ ರಾಜಾ
ತಾನವರುಂಧ್ಯಾತ್ ಕಾಪಟಿಕಶ್ಚಾನು ಪೂರ್ವಾವರುದ್ಧಃ | ತೇಷಾಮೇಕೈಕಮಮಾತ್ಯಂ ಭಯ
ದರ್ಶನೇನ ರಾಜಾ ವಧಾರ್ಥಮುಪಜಾಪೇತ್ ಪ್ರತ್ಯಾಖ್ಯಾನೇ ಶುಚಿರಿತಿ ಭಯೋಪಧಾ | ತತ್ರ
ಕೌಟಲ್ಯಮತಂ-ನಚ್ಛೈವ ಕುರ್ಯಾದಾತ್ಮಾನಂ ದೇವಿಂ ವಾ ಲಕ್ಷ್ಯಮಿಾಶ್ವರಃ|| ಶೌಚಹೇತೋರಮಾ
ತ್ಯಾನಾಮೇತತ್ಕೌಟಲ್ಯದರ್ಶನಮಿತ್ಯೇವಮುಪಧಾಶೋಧಿತಾಃ ಸಮ್ಯಗೀಹಮಾನಾ ಫಲೋದಯಂ-
ಅಸ್ಯೇತಿ-ಸ್ವಾಮಿಯ ಸರ್ವತಂತ್ರೋಪಗತಕಾರ್ಯಮ. ಪರೀಕ್ಷಿಸಬೇಕು | ನಿರುಪಧರೊಳ್ ಅನು
ರಾಗಯುಕ್ತರಾಗಿ ಕೃತದಾನಮಾನರಪ್ಪುದಱಿಂ ಅನುರಾಗಯುಕ್ತಂ-ಏನುಮಾಡಲ್ಪಟ್ಟುದು| ಏನು
ಮಾಡಲ್ಪಡಲಿಲ್ಲ ಎಂದು| ಉಪಧಾಶಬ್ದದ ನಿರುಕ್ತಮಂ ಪೇಟ್ದಪಂ | ಉಪಧೇತಿ | ಉಪ ಎಂದೊಡೆ
ಸಮಿಾಪಂ, ಧೀಯತೇ ಯಸ್ಮಾದಿತಿ ಉಪಧಾ, ಇತಿ | ಕುತಃ | ಉಪಧಾಶುದ್ಧರಂ ಪರೀಕ್ಷಿಪುದು |
ಸಾಮಾನ್ಯಮಾದ ಅಮಾತ್ಯರ ಗುಣಸಂಪದಮಂನುಡಿದು ಮಂತ್ರಿಗಳಗುಣಸಂಪದಮಂ ಪೇಟ್ದಪಂ|
ಸ್ವವ ಇತಿ – ಉನ್ಮಾರ್ಗಪ್ರವೃತ್ತರಾದ ಅಮಾತ್ಯರನಾವವರ್ ನಿಗ್ರಹಿಸುತಿದ್ದರು ಬಂಧುಪ್ರಭೃ
ತಿಗಳ್ ಅವರವಗ್ರಹರ್, ಅವರನುಳ್ಳವಂ ಸ್ವವಗ್ರಹಂ–ಶೋಭನಕರ ಬಂಧುಮಂತನೆಂಬುದರ್ಥಂ |
ಏತದ್ವಿನಾಶಭಯದಿಂದ ಹಾಗೆ ಮಾಡಲ್ತಕ್ಕುದೆಂದು ಪ್ರವೃತ್ತಿಸುತ್ತಿದ್ದಾರು | ವಿಜಿಗೀಷು ಜನಪದ
ಭರದೊಳ್ | ಆತಂ ಜನ್ಮಭೂಮಿವಾತ್ಸಲ್ಯದಿಂದ ತದ್ವಿಕತ್ಥನಮಂ ಮಾಡುತಿದ್ದಾನು | ಕುಲಮಾಭಿ
ಜಾತ್ಯಂ | ಶೀಲಂ ಸ್ವಭಾವಂ | ಬಲಂ ಕಾಯಬಲಂ | ಇದಱಿಂದ ಗೂಡಿದ | ವಾಗ್ಮೀ-ಪ್ರಶಸ್ತ
ವಾಕ್ | ವಾಕ್ಕಿಗೆ ಪ್ರಾಶಸ್ತ್ಯಮುಂ ಅಲ್ಪಾಕಾರಂಗಳಿಂ ಮನೋಹರಮಾದ ಅಲ್ಪಾರ್ಥಂಗಳಿಂ |
ಪ್ರಗಲ್ಭತೇ | ಚಕ್ಷುಷ್ಮಾ-ಶಾಸ್ತ್ರಚಕ್ಷುಸ್ಸನಿಂ ದರ್ಶನಶೀಲಂ | ಉತ್ಸಾಹೀತಿ ಇಲ್ಲಿ ಉತ್ಸಾಹಶಕ್ತಿ
ಯೊಡಗೂಡಿದಂ—

ತಥಾಚಕೌಟಲ್ಯಃ— "ಶೌರ್ಯಂ ಮರ್ಷಾದಶಕ್ಯಂ ಚೋತ್ಸಾಹಗುಣ" ಇತಿ| ಪ್ರತಿಪತ್ತಿಃ–
ಅತ್ಯಂತ ಪ್ರತಿಭೆ, ಆದರೊಡಗೂಡಿದಂ | ಸ್ತಂಭ ಇತಿ, ಸ್ತಂಭಂ–ಸ್ತಬ್ಧತೇ | ಚಾಪಲಮಪ್ರತಿಷ್ಠಿ
ತತ್ವಂ ಅದರಿಂದೆ ಹೀನಮಾದವಂ | ಮಿತ್ರನೆಂದು | ಕ್ಲೇಶಸಹಃ – ಕ್ಷುತ್ತೃಡಾದಿ ಕ್ಲೇಶಂಗಳಂ
ಸಹಿಸುವಂ | ಶುಚಿಃ–ಉಪಧಾಶುದ್ಧಂ | ಸತ್ಯಂ – ವ್ಯಸನಮೊಳಂ ಅಭ್ಯುದಯದೊಳಂ ಆವ ಅಧಿ
ಕಾರಿಸತ್ಯಮಮೃಷಾವಾದಮುಂ| ಸ್ಥೈರ್ಯಂ–ಸ್ಥಿತಿಯತ್ತಣಿಂದವಿಚಲತ್ವಂ| ಪ್ರಭಾವಂ–ಪ್ರಭುತೆ|
ಆರೋಗ್ಯಂ – ನೀರೋಗತೆ ಇವರೊಡಗೂಡಿದಂ | ಕೃತಶಿಲ್ಪಃ – ಅಭ್ಯಸ್ತಸಕಲಕಲಾಕಲಾಪಂ |
ದಕ್ಷಃ – ಕ್ಷಿಪ್ರಕಾರಿ | ಪ್ರಜ್ಞಾವಾ – ಅಷ್ಟಗುಣಬುದ್ಧಿಯುಕ್ತಂ | ಪರೇಣಾವಿಸ್ಮರಣಂ ಧಾರಣಂ
ತದನ್ವಿತಂ | ದೃಢಭಕ್ತಿರವಿಚಾರಾ(ಚಲಾ)ನುರಾಗಃ | ಅಕರ್ತಾ ವೈರಾಣಾಮಿತಿ | ಸ್ವಾಮಿಕೃತ
ಮಾದ ವೈರಂಗಳ ಪ್ರಶಮನಶೀಲಂ | ಸಚಿವಃ – ಮಂತ್ರಿಯು, ಭವೇತ್ | ಇನ್ನು ಮಾನ್ಯಮಾದ
ಮಂತ್ರಿಗುಣಂಗಳಂ ಪೇಟ್ದಪಂ| ಸ್ಮೃತಿಸ್ತತ್ಪರತೇತಿ| ಸ್ಮೃತಿರ್ಧಾರಣೇ ತದನ್ವಿತಂ| ಉಕ್ತಮಾದ

ಗುಣಮೆ ಆದರಾರ್ಥಮಾಗಿ ಮರಳಿ ಪೇೞಲ್ಪಡುತಿದ್ದೀತು| ತತ್ಪರತಾ, ಅರ್ಥೇಷು-ರತ್ನಾದಿಗಳೊಳ್| ಅತ್ಯಂತತರ್ಕಂವಿತರ್ಕಂ| ಗುಣಮಧ್ಯಪಠಿತಮಾದೊಡಮೂಹಮತಿವಿಚಾರಜ್ಞಾನ ಪ್ರದರ್ಶನಾರ್ಥಮಾಗಿ ಪುನಃ ಪ್ರವರ್ತನಂ | ಮಂತ್ರಗುಪ್ತಿಃ - ಪಂಚಾಂಗಮಂತ್ರಗೋಪನಂ | ಎಂದು ಮಂತ್ರಿಸಂಪತ್ತು ಪ್ರಕೀರ್ತಿತಮಾದುದು | ಅಮಾತ್ಯವಿಶೇಷದಿಂದಧಿಕತರತ್ವಂ| ಪುರೋಹಿತನಂ ಪೇೞ್ದಪಂ ತ್ರಯ್ಯಾಂಚೇತಿ | ಮಂತ್ರಿಸಂಪದುಕ್ತ ಗುಣಂಗಳಮೇಲೆ ಉಕ್ತಲಕ್ಷಣಮಾದ ತ್ರಯಿಯೊಳ್ | ದಂಡನೀತ್ಯಾಂ ಈ ಶಾಸ್ತ್ರದೊಳೆ | ಕುಶಲಃ-ಪ್ರವೀಣನಾಗಬೇಕು | ಪುರೋಹಿತಂ | ಶಾಂತಿಸಹಮಾದ ಧರ್ಮಮಂ ಪೌಷ್ಟಿಕಮಾದ ಕರ್ಮಮಂ | ಕುರ್ಯಾತ್—

ತಥಾಚ – ಕೌಟಲ್ಯೇ— ಪುರೋಹಿತಃ ಉದಿತೋದಿತಕುಶಲೀ ಷಡಂಗವೇದ ದೈವಾದಿನಿಮಿತ್ತೇ ವಿನೀತ್ವಾಂಚಾಭಿವಿನೀತಪದಂ (?) ದೈವಮಾನುಷಾಣಾಂ ಅಥರ್ವವಿದ್ಭಿರುಪಾಯೈಃ ಪ್ರತಿಕರ್ತಾ, ಆಚಾರ್ಯಶಿಷ್ಯಪಿತೃಪುತ್ರಭೃತ್ಯಸ್ವಾಮಿವಾಕ್ ಪ್ರವರ್ತೇತೇತಿ ಪುರೋಹಿತಲಕ್ಷಣಂ ದ್ರಷ್ಟವ್ಯಮಿತಿ | ಅಮಾತ್ಯಗುಣ ಪರೀಕ್ಷೆಯಂ ಪೇೞ್ದಪಂ | ಸಾಧ್ವಿತಿ | ತೇಷಾಮಿತಿ | ಅನಂತರೋಕ್ತಮಾದ ಸಚಿವರ ಕರ್ಮಾಮಾತ್ಯ ಬುದ್ಧ್ಯಾಮಾತ್ಯಾದಿಗಳ| ಸಾಧುವಪ್ಪಂತು ತದ್ವಿದ್ಯೈರಿತಿ ಸ್ತೈವ ವಿದ್ಯಾ-ಪರೀಕ್ಷಿಸಲು ಮಾರ್ಗಮಾದ ವಿದ್ಯೆಯುಳ್ಳವರು-ತದ್ವಿದರು | ಅದರೊಡನೆ ಸ್ವಾಮಿಯ ಬುದ್ಧಿಮಾನುಷ್ಯಗುಣಯುಕ್ತಂ| ಚಕ್ಷುಷ್ಮತಾ-ಶಾಸ್ತ್ರಮಯಚಕ್ಷುಸ್ಸುವುಂಟೋ ಇಲ್ಲವೋ ಎಂದು| ಶಿಲ್ಪಂ-ಚಿತ್ರಾದಿಕೌಶಲಮುಂ ಈ ಗುಣದ್ವಯಮಂ | ಪರೀಕ್ಷೇತ-ತಿಳಿಯಬೇಕು | ಸ್ವಜನರಿಂ ತಿಳಿಯಬೇಕು| ಕುಲಮಾಭಿಜಾತ್ಯಮಂ | ಆಸಪ್ತಮಾದಾಸಪ್ತಮಂ ಜನ್ಮ| ಜನಪದಮಂ | ಅವಗ್ರಹಂ—ನಿಯಾಮಕಮಾದ ಬಂಧುವರ್ಗಮಂ | ಯಿಾ ಗುಣತ್ರಯಮಂ | ಹಾಗೆ ಪರಿಕರ್ಮಾದಿಕರಣಂಗಳೊಳ್ ದಾಕ್ಷ್ಯಂ-ಕೌಶಲಮಂ| ವಿಜ್ಞಾನಂ-ವಿವಿಧಜ್ಞಾನಮುಂ | ಧಾರಯಿಷ್ಣುತಾಂ-ಅವಧಾರಣಶೀಲತ್ವಮಂ | ಯಿಾ ಗುಣತ್ರಯಮಂ ಪರೀಕ್ಷಿಸಬೇಕು | ತಥಾ-ಹಾಂಗೆ ಯಥಾ(ಕಷ್ಟಾ)ಯೋಗಂಗಳೊಳ್ ಸ್ವಾಮಿಯಿಂ, ಪೃಷ್ಟಂಗಳಾಗೆ | ಪ್ರಾಗಲ್ಭ್ಯಮಂ ಪರಿಷದ್ಭಿರುತೇ | ಪ್ರತಿಭಾ—ಉತ್ಪನ್ನಮತಿಯುಂ| ವಾಗ್ಮಿತ್ವಂ—ವಚನಕೌಶಲಮುಂ| ಸತ್ಯಂ-ಸತ್ಯವಾದಿತ್ವಮುಂ,ಈಗುಣಚತುಷ್ಟಯಮಂ ಯಥಾಯೋಗಂಗಳೊಳ್ ತಿಳಿಯಬೇಕು| ಗುಣಷಟ್ಕಂ ಚಾವೇಕ್ಷ್ಯಮಾಪದಿ ಲಕ್ಷಯೇತ್ | ಆತ್ಮಪಕ್ಷದ ಗುಣಷಟ್ಕಮುಂ ಆಪತ್ತಿನೊಳ್ ಕಾಣ್ಬುದು—

ತದ್ಯಥಾ:— ಉತ್ಸಾಹಂ – ಶೌರ್ಯಾದಿಯುಕ್ತಮಾದ ಉತ್ಸಾಹಂ| ಪ್ರಭಾವಂ | ಸ್ವಪ್ರಭಾವದತ್ತಣಿಂ| ಕ್ಲೇಶಸಹಿಷ್ಣುತಾಂ—ಪೀಡಾಸಹತ್ವಮುಂ| ಧೃತಿಂ-ಅವಿಷಣ್ಣತ್ವಮುಂ| ಅನುರಾಗಂ| ಸ್ವಾಮಿಯೊಳ್ ಕ್ಲೇಶೇ—ಕ್ಲೇಶದೊಳಂ| ಆಪದಿ-ದುರ್ಭಿಕ್ಷಾದಿ ಕ್ಷಯಕಾಲದೊಳಂ| ಲಕ್ಷಯೇತ್—ಕಾಣ್ಬುದು| ಭಕ್ತಿಮಿತಿ | ಭಕ್ತಿಯಂ—ಸ್ವಾಮಿಯೊಳಂ ಮೈತ್ರಿಯಂ| ವ್ಯವಹಾರತಃ—ವ್ಯವಹಾರಣದೊಳೊರ್ವಂ ದರ್ಪ – ಅಹಂಕಾರಮುಂ| ಹಾಗೆ ಶತ್ರುವಪ್ಪಂ| ಅರ್ಥ-ಧರ್ಮವಿಷಯಮಾದ ಶೌಚಮಂ ವ್ಯವಹಾರದಿಂದಲೆ ತಿಳಿವುದು! [1] ಸಂವಾಸೇಭ್ಯ ಇತಿ| ಸದ್ಯಕ್ಕಾಗಿ ಸಹವಾಸಂಗಳಿಂದಲುಂ ಬಲಮಂ, ಸತ್ವಮಂ, ಆರೋಗ್ಯಮಂ, ಶೀಲಮಂ ತಿಳಿವುದು | ಪ್ರತೀತ ಸ್ವಜನೇಭ್ಯೋ ವಿಜಾನೀಯಾತ್ | ಇತಿ ಅಸ್ತಬ್ಧ ಇತಿ | ಪರೋಕ್ಷಂ ಪರೋದ್ದಿಷ್ಟಮಪ್ಪುದಱಿಂ| ಪ್ರತ್ಯಕ್ಷತೋ ವಿಜಾನೀ

(1) ಸಂಗ್ರಾಮೇಭ್ಯಃ (ಮು-ಪಾ.)

ಯಾತ್ | ಭದ್ರತಾಮಿತ್ಯಾದಿ | ಪ್ರತ್ಯಕ್ಷಕ್ಕೆ ಹೇಗೆ ಪ್ರಮಾಣದ್ವಯದಿಂ ಪರೀಕ್ಷೆಯಂ ಪೇೞ್ದು ಅನುಮಾನದಿಂದಲುಂ ಪೇೞ್ದಪಂ | ಕರ್ಮೇತಿ—ಪರೋಕ್ಷಾಪರೋಕ್ಷಯೋರ್ಗುಣಸ್ಯ ರಾಮಣೀಯಕಸ್ಯ | ಯೇನೇದಂ ಕೇಯೂರಾದ್ಯಾಭರಣ ಸಾಮಾನ್ಯಮಪಿ ರಮಣೀಯಂ ಕರೋತ್ಯನುಮೇಯೇತ | ಇತಿ| ಕರ್ತಾಅನುಮೇಯಃ – ಪರೋಕ್ಷಗುಣವತ್ತತಃ | ಯೇನುಕಾರಣ ಹೀಗೆಂದು ಕಾರಣದಿಂ ಪರೋಕ್ಷಕರ್ಮಂ ವಿಭಾಷಿಸಲ್ಪಡುತಿದ್ದೀತು |

ತಥಾ ಕೌಟಲ್ಯಃ — “ ಪ್ರತ್ಯಕ್ಷಪರೋಕ್ಷಾನುಮೇಯಿಾ ಹಿ ರಾಜ್ಯವೃತ್ತಿಃ ” — ಅಲ್ಲಿಂ ಸ್ವಯಂ ದೃಷ್ಟಂ ಪ್ರತ್ಯಕ್ಷಂ | ಪರೋಕ್ಷದೃಷ್ಟಂ—ಪರೋಕ್ಷಂ| ಕರ್ಮಮುಂ ಕೃತದಿಂದ ಅನುಕೂಲೇಕ್ಷಣಮನುಮೇಯಮೆಂಬುದರಿಂ ಪ್ರಮಾಣತ್ರಯದಿಂ ಸರ್ವಮುಂ ಪರೀಕ್ಷ್ಯಮೆಂದು ಭಾವಂ| ಮಂತ್ರಿಗಳುಂ ಸ್ವಾಮಿಗಳುಂ ವಿಧೇಯಮಂ ಪೇೞ್ದಪಂ | ಸಜ್ಜ ಇತಿ| ಅಕಾರ್ಯೇಷು-ಶಾಸ್ತ್ರನಿಷಿದ್ಧವ್ಯಸನಾದಿಗಳೊಳ್ | ಸಜ್ಜಮಾನಂ - ಆಶೆಯನೆಯ್ದುತಿದ್ದಾತನಂ | ನಿರುಂಧ್ಯಾತ್ – ಪ್ರತಿಷೇಧಿಸಬೇಕು | ಪರಾಕ್ರಮದಿಂ ಮಂತ್ರಿಗಳ್ ನೃಪನಂ| ಮಂತ್ರಿಗಳ ವಚನಂ ಗುರೂಣಾಮಿವ ಇಹಲೋಕಪರಲೋಕಾದಪಿ| ಜನತಾ ಶ್ರೀಲೋಕನಾಚಾರ್ಯಾಣಾಂ ಯಿಾಮಂತ್ರಿಗಳ ವಾಕ್ಯಮಂ ಕೇಳಬೇಕು| ಶ್ರವಣ ಶ್ರವಣಮಾತ್ರಾ ಜನಗಣ ವಿನಾಶಾಭ್ಯುದಯಯೋರ್ನಶ್ವರವಿಜಯಾಭ್ಯುದಯಯೋರ್ಹೇತುರಿತಿ ದರ್ಶಯನ್ನಾಹ | ನರೇಶ್ವರೇತಿ—ಸೂರ್ಯೋದಯದೊಳ್ ಅಂಭೋಜನುಂ ಹೇಗೆ | ಹಾಗೆ | ತತ್ಪ್ರಬೋಧೇ – ನರೇಶ್ವರಾಭ್ಯುದಯದೊಳ್, ಪ್ರಬುಧ್ಯತೇ—ವಿಸ್ತಾರಮಂನೆಯ್ದುತಿದ್ದೀತು| ತತ್‌ತಸ್ಮಾತ್ ಅದುಕಾರಣದತ್ತಣಿಂ | ಪ್ರಬೋಧಯೇತ್-ಅಭ್ಯುದಯಮನ್ನೈದಿಸಬೇಕು | ಅಮಾತ್ಯಾದಿಜನವು | ಆವಪ್ರಕಾರಭವನೇಶ್ವರನಿಂ ಸ್ವಾಮಿಯಿಂ| ಅಭ್ಯುದಿತಮಾಗುತಿದ್ದೀತು | ಆ ಪ್ರಕಾರದಿಂದಲೇ(ವೇಧಿ)ಸತ್ಪ್ರೋದ್ಯೋಗ ಸಂಪನ್ನರಾದ ಪುರುಷರಿಂ | ರಾಜಾ—ಅರಸು ! ಬಾಧಿಸಲ್ಪಡುತಿದ್ದಾನು | ತತ್ತತ್ಕಾರ್ಯಮಂ | ಅಲ್ಲಿ ಗತಾಗತಕಾರ್ಯಮಂ ಕರಣಭೂತಸೇವಕಜನರಿಂ ಮಂತ್ರಿ ಮಾಡಿಸಬೇಕು | ಜಗತ್ತಿನೊಳ್ ಅಕಾರ್ಯಬಾಧಕರ ಪ್ರಶಂಸೆಯಂ ಪೇೞ್ದಪಂ| ನೃಪ ಇತಿ | ನೃಪಸ್ಯ-ಜಗನ್ನಾಥಂಗೆ | ತೇ-ಮಂತ್ರ್ಯಾದಿಗಳು ಸುಹೃದೋ-ಬಾಂಧವಾ ಸ್ತಏವ-ಅವರೇ, ಗುರವೋಹ್ಯಭರ್ವ—ಆಚಾರ್ಯತ್ವಮನೆಯ್ದಿದರ್ | ಯಏನಂ-ಆರುಕೆಲವರು| ಉತ್ಪಥಗತನಾದ - ಶಾಸ್ತ್ರನಿಷಿದ್ಧ ಮಾರ್ಗಗತನಾದ| ಅರಸಂ| ಯೆ-ಆರು ಕೆಲವರು, ನಿವಾರಯಂತಿ ಪ್ರತಿಬೋಧಿಸುತಿದ್ದಾರು | ಅವಾರಿತಾಃ - ಯೇನ ಕೇನಾಪಿ ಅನಿಷಿದ್ಧರಾದ | ಇದನೆ ದೃಢಮಾಗಿ ಪೇೞ್ದಪಂ | ಸಜ್ಜ ಇತಿ | ಅಕಾರ್ಯೇಷು-ನಿಷಿದ್ಧಾಚರಣಂಗಳೊಳ್| ಸಜ್ಜಮಾನಂ-ಆಸಕ್ತನನು| ಸುಹೃದಃ-ಶುದ್ಧ ಹೃದಯರ್, ಅನುರಕ್ತಹೃದಯರಾದೊಡಂ | ವಾರಯನ್ತಿ – ನಿಷೇಧಿಪರು | ಆರುಕೆಲಬರು, ಸತ್ಯಂ—ಯಥಾರ್ಥಮಾಗಿ ಸುಹೃದೋಭವನ್ತಿ | ಸುಹೃತ್ತುಗಳುಂ ಗುರುಗಳುಂ ಆಗುತಿದ್ದಾರು | ಆಚಾರ್ಯರು | ಸಾಮಾನ್ಯ ಗುರುಗಳೋ ಎಂದೊಡೆ ಮಹಾಂತಃ | ಮರಳಿಯು ವಿನಯಯುಕ್ತನಾದವನು ಹೇಗೆ ಅಕಾರ್ಯಾಸಕ್ತನಹನುಯೆಂದು | ಶಂಕಿಸಿ ಪೇೞ್ದಪಂ | ಕೃತಇತಿ | ಕೃತವಿದ್ಯೋಪಿ-ಅಭ್ಯಸ್ತ ಸಕಲವಿದ್ಯನಾದೊಡಂ| ಸ್ಪಷ್ಟಂ-ವ್ಯಕ್ತತರಮಾಗಿ ಬಲವತ್ತಾಗಿದ್ದಂತಾ ವಿಷಯಾನುರಾಗದಿಂ ತನ್ಮಯನಪ್ಪಂ| ಉಪರಕ್ತನೆಂದಾದೊಡಂ ಪಾಠಂ| ಪ್ರಾಕ್ಕು ಅನನುರಕ್ತನಾದೊಡಂ ರಾಗವಿರಕ್ತನಪ್ಪಂ| ರಾತಿಪ? ರಕ್ತಚಿತ್ತಂ| ತತ್ಕಿಂನಾಮನಕುರ್ಯಾತ್-ಯೇನಮಾಡಂ ಮತ್ತ್ರೋಯೆಂದೊಡೆ ಸಮಸ್ತಮಾದ | ಅಯುಕ್ತಮಂ ಶಾಸ್ತ್ರನಿಷಿದ್ಧಮೆಂದು ಭೂಪರ ಅಕೃತ್ಯಮಂ ಸಹಾಯಸಾಮರ್ಥ್ಯಮಂ ತೋರುತ್ತೆ ಪೇೞ್ದಪಂ | ಪಶ್ಯನ್ನಿತಿ | ಪುರುಷಂ ರೂಪಾದಿಗಳಂ ಕಣ್ಗಳಿಂ

ನೋಡುತ್ತೆಯಿರ್ದೊಡಂ ಅಂಧನಾಗುತ್ತಿದ್ದಾನು | ಲೋಕದ್ವಯವಿರುದ್ಧಮಾದ ಕಾರ್ಯಂಗಳ ಅದರ್ಶನದತ್ತಣಿಂ | ಅದು ಕಾರಣದಿಂದ ಈ ಅಂಧ್ಯವು ನೀಲಿ ಸಂಜ್ಞಕಾಂಧ್ಯದೊಡನೆ | ಸಮಾನಂ | ಸುಹೃದಃ–ಸ್ನಿಗ್ಧಹೃದಯರಾದ ಸಚಿವರು ಆಚಾರ್ಯರೆ | ವೈದ್ಯಾಃ–ಚಿಕಿತ್ಸಕರು | ಚಿಕಿತ್ಸಂತಿ-ಆಂಧ್ಯಮಂ ಪೋಗಲಾಡಿಸುತಿದ್ದಾರು| ನಿರ್ಮಲಮಾದ ವಿನಯಾಂಜನದಿಂ–ಇಂದ್ರಿಯ ಜಯೋಪದೇಶಾಂಜನಂಗಳಿಂದ | ಇತಿ-ಇದನೆ | ಸಮರ್ಥಿಸುತ್ತಿದ್ದಾನು | ರಾಗ ಇತಿ | ರಾಗಮೆನೆ | ವಿಷಯಾನುರಕ್ತತೆ | ಮಾನ-ಮಾತ್ಮಸಂತಾಪಂ| ಮದಂ-ಯೌವನ ತೊ ಯಾದೆ ತ್ಪತಂತ್ತರವರಸ್ಯ ಕಾರ್ಯಮಂ ಶಾಲೊ ಸಂತಾಪ? | ಮದಂ-ಯೌವನ ಶೌರ್ಯಾದಿಕೃತಂ | ತೈಃ ಅದರಿನಂಧಸ್ಯ ಕಾರ್ಯಮಂ ಕಾಣದಿರ್ಪಾತನ | ಅದುಕಾರಣ ಸ್ಖಲನತ್ವಮೆಂಬ ಹಳ್ಳದಲ್ಲಿ ಪತತಃ–ಬೀಳುತ್ತಿದ್ದಾತಂಗೆ | ನೃಪತಿಃ–ಹಸ್ತಾವಲಂಬಃ | ಭವತಿ - ಎಡಹುತ್ತಿದ್ದಾತಂಗೆ ಹಸ್ತಾವ (ಲಂಬ) ಹೇಗೆ ಧಾರಕವೋ ಹಾಗೆ ಸುಹೃತ್ಸಚಿವಚೇಷ್ಟಿತಂ | ಅದರಿಂದ ಎಡಹುತಿಹಸ್ವಾಮಿಯು ತಡೆಯಲ್ಪಡುತಿದ್ದಾನು ಎಂಬುದರ್ಥಂ | ಆರು ಕೆಲವರು ಸ್ವಾಮಿ ವಿಸ್ಖ(ಲಿ)ತವನುಪೇಕ್ಷಿಪರ್ ಅವರಿಗೆ ದೋಷಮಂ ಪೇಳ್ದಪಂ | ಮದ ಇತಿ | ಉಕ್ತಲಕ್ಷಣಮಾದ ಮದದಿಂ ಉದ್ಧತನಾದ | ಅವಿನೀತ ನೃಪತಿಗೆ| ಸಂಕೀರ್ಣಮಾದದಂತಿಗಂ ಶುದ್ಧಜಾತಿಯಾದೊಡಂ ವಿನಯಮಾಗುತ್ತಿದ್ದೀತು| ಅನ್ಯಾಯ ವೃತ್ತಸ್ಯ-ಶಾಸ್ತ್ರವೃತ್ತರಹಿತನಾದ ನೃಪತಿಗೆ ನೇತ್ರಗಳಾದ ಮಂತ್ರಿಗುಣಮೆಂದು ತಿಳಿಯಲ್ತಕ್ಕುದು| ಏವಂಸ್ಪಷ್ಟತ್ರಿಗುಣವತ್ಸಂಪೂರ್ಣಂ ಭವತೀತಿ ಭಾವಃ |—

ಸ್ವಾಮಿಪ್ರಕೃತಿಗಂ ಅಮಾತ್ಯಪ್ರಕೃತಿಗಂ ಗುಣಸಂಪದಮಂ ಪ್ರತಿಪಾದಿಸಿ ರಾಷ್ಟ್ರಪ್ರಕೃತಿಯ ಗುಣಮಂ ಪೇಳ್ದಪಂ | ರಾಷ್ಟ್ರಂ ದ್ವಿವಿಧಂ | ಅವಸ್ಥಿತ ಭೂಮಿಜನ ಪದಮೆಂದು | ಅಲ್ಲಿ ಗುಣಸಂಪನ್ನಮಪ್ಪ ಭೂಮಿಯ ಸಾಮರ್ಥ್ಯಮಂ ಪೇಳ್ದಪಂ | ಪ್ರ(ಭೂ)ಗುಣೇತಿ | ನೃಪಸ್ಯ ಭೂಶುದ್ಧರಿತಿ–ತನ್ಮೌದದುಕಾರಣದತ್ತಣಿಂ ಗುಣವತ್ತಾದ ಭೂಮಿಯಂ| ಭೂತ್ಯೈ – ಐಶ್ವರ್ಯಕ್ಕೋಸುಗ | ಆವಿಶೇದಿತಿ ಪ್ರತೀತಂ | ಭೂಮಿಯ ಗುಣಂಗಳನೆ ಪೇಳ್ದಪಂ | ಸಸ್ಯೇತಿ | ವಕ್ಷ್ಯಮಾಣಮಾದ ಭೂಗುಣಂಗಳಿಂ ಜನಪದಂ ವರ್ಧಿಕ್ಕುಂ | ಹಾಗೆ ಸುಜನಸಂಪದ್ವೃದ್ಧಿಯಿಂ ನೃಪವೃದ್ಧಿ | ರಾಷ್ಟ್ರದಲ್ಲಿಯುಂ ಕೋಶವೃದ್ಧಿ | ಕೋಶವೃದ್ಧಿಯಿಂ ಸೇನಾವೃದ್ಧಿ | ಅದಱಿಂದ ಮಂಡಲಾಂತರ ಗ್ರಹಣದತ್ತಣಿಂ| ಸಸ್ಯಾದೃಷ್ಟಾದಶಾಭಿವೃದ್ಧಿ| ಆಕರಾಸ್ಸುವರ್ಣಾದ್ಯುತ್ಪತ್ತಿಸ್ಥಾನಂಗಳ್ | ಪಣ್ಯಾನಿ-ಕುಂಕುಮಾಗುರು ಜೀರಕಾದಿಗಳ್ | ಖನಯಃ-ವಜ್ರಮಣಿ ಮುಕ್ತಾದ್ಯುತ್ಪತ್ತಿ ಸ್ಥಾನಂಗಳ್ | ದ್ರವ್ಯಂ-ಧನಂಗಳ್| ಸಾಲಮಿತಿ-ಸಾಲಾದಿ, ದುರ್ಗಾದ್ಯುಪಯೋಗಿ ವೃಕ್ಷವನಂಗಳ್ | ಇವಱಿಂದ ಅನ್ವಿತಮಾದ| ಗೋಹಿತಾ-ಗೋವುಗಳ ಕ್ಷೀರವೃದ್ಧಿಕರಮಾದ | ಭೂರಿ ಜಲಾ-ಪ್ರಭೂತ ಜಲಮಾದ | ಪುಣ್ಯೈರ್ಧಾರ್ಮಿಕಮಾದ | ಜಾನಪದೈಃ–ವರ್ಣಾಶ್ರಮಗಳಿಂದ ಯುಕ್ತಮಾದ | ರಮ್ಯಸಸ್ಯಾಳಿನಂದನವನಾದಿಗಳಿಂದ ರಮಣೀಯಮಾದ| ಸಕುಂಜರಾ–ಹಸ್ತಿವನೋಪೇತಮಾದ | ವಾರಿಸ್ಥಲಪಥಂಗಳಿಂದ ಯುಕ್ತಮಾದ | ಅದೇವಮಾತೃಕಾ–ದೇವಃ–ಪರ್ಜನ್ಯನೆ ಮಾತಾ ಯಸ್ಯಾಸ್ಸಾ–ದೇವಮಾತೃಕಾ-ಪರ್ಜನ್ಯಜನ್ಯ ಸಸ್ಯೇತ್ಯರ್ಥಃ | ತದ್ವಿಪರೀತಮಾದುದು-ಅದೇವಮಾತೃಕಂ | ಭೂರಿಸಲಿಲಮುಪ್ಪುದಱಿಂ ಸರಿತ್ ಸರಿತ್ಸಂಕುಲತ್ವದಿಂ ಸುವ್ಯಕ್ತಂ ಎಂಬುದರ್ಥಂ | ಇತಿ-ಈ ಪ್ರಕಾರಮಾದ ಭೂಮಿ| ಶಸ್ಯತೇ-ಭೂತಿ ಸಂಪತ್ತಿಗೆ ಭವತಿ | ಎಂಬುದರ್ಥಂ | ಭೂದೋಷಂಗಳಂ ಪೇಳ್ದಪಂ | ಸಶರ್ಕರ ಇತಿ | ಶರ್ಕರೆಗಳ್ ಶಿಲಾಶಕಲಂಗಳ್| ಊಷರಾಃ-ಚೌಳುಭೂಮಿಗಳ್ | ಪಾಷಾಣಂಗಳ್-ಶಿಲಾ ಸಮೂಹಂಗಳ್ | ಅದಱೊಡಗೂಡಿದ |

ಅಡವಿಯೊಳ್ ಸಂಚರಿಪಚೋರರಿಂದ ಯುಕ್ತಮಾದ ಭೂಮಿ ಪರಿತ್ಯಾಜ್ಯಂ | ಜನಪದಗುಣಂಗಳಂ ಪೇಳ್ದಪಂ | ಸಾವಾಜತಿ| ಸ್ತ್ರೀ ಗುಣೇನ ಶಸ್ಯತೇ ಭೂಗುಣಂ-ಅನೂಪಾ ಭೂಃ | ಸಜಲಭೂಮಿಯುಂ, ಇಕ್ಷುಶಾಲಾದಿ ಪ್ರಭವವಶದಿಂ ಪರ್ವತಾಶ್ರಯ ಇತಿ–ತೃಣಕಾಷ್ಠಾದಿಸೌಕರ್ಯ ಪ್ರತಿಪಾದನದಿಂ | ಶೂದ್ರಕಾರುವಣಿಕ್ಪ್ರಾಯ ಇತಿ | ವಿಧಿಯತ್ನಾದ್ಯಶೇಷನಾಶ್ಯಮುಪ್ಪುದು | ಮಹಾರಂಭಾಃ-ಮಹಾಂತಃ ಕೃಷ್ಯಾರಂಭಾಃ| ಕೃಷೀವಲಾ - ಕರ್ಷಕರ ಉದ್ಯೋಗದೊಡಗೂಡಿದ ಸಾನುರಾಗಾ-ಸ್ವಾಮಿಯೊಳ್ ಅನುರಾಗಯುಕ್ತಮಾದ| ರಿಪುದ್ವೇಷೀ-ಶತ್ರುವಿನೊಳ್ದ್ವೇಷಮುಳ್ಳ| ಪೀಡಾಸಹಮಾದ | ನಾನಾದೇಶ್ಯೈಃ-ಸಕಲದಿಶಾಗತರಾದ ವಣಿಗ್ಜನಂಗಳಿಂ ವ್ಯಾಪ್ತಮಾದ| ಪಣ್ಯಪ್ರಾಚುರ್ಯದಿಂ | ತತ್ತಸ್ಮಾತ್ | ಸರ್ವಂಪ್ರಜಾಯತೇ| ತಾದೃಗಿತ್ಯಭಿಹಿತಃ-ಆ ಪ್ರಕಾರಮಾಗಿ ನುಡಿಯಲ್ಪಟ್ಟ | ಜನಪದಃ-ರಾಷ್ಟ್ರಂ | ಶಸ್ತಂ-ಸತ್ಪುರುಷರಿಂ ಸಂತ್ಕೃತಂ| ಮೂರ್ಖರಹಿತನಾದ, ಅವ್ಯಸನಿ - ಅತಿಯಾದ ಅವಿಷಯಾಸಕ್ತನಾದ | ಪ್ರಜೆಯನೆ ಮುಖಮಾಗುಳ್ಳ | ನಾಯಕಃ-ಅರಸು | ಅತಿಸಂಧಾನಪರನಾಗಿ ಸ್ವಾಶ್ರಿತಮಾದ ಜನಪದಮಂ| ವರ್ಧಯೇತ್-ವೃದ್ಧಿಯನೆಯ್ದಿಸಬೇಕು.

ರಾಷ್ಟ್ರ ಪ್ರಕೃತಿಯ ಗುಣಸಂಪದಮಂ ಪ್ರತಿಪಾದಿಸಿ ದುರ್ಗಪ್ರಕೃತಿಯ ಗುಣಸಂಪದಮಂ ಪೇಳ್ದಪಂ | ಪೃಥ್ವಿತಿ-ಪೃಥುಸೀಮಂ-ವಿಸ್ತೀರ್ಣ ಬಹಿರ್ಭಾಗಮನುಳ್ಳ | ಮಹಾಖಾತಮಿತಿ | ಮಹತ್ತಾದ ಅಗುಳುಳ್ಳ |

ತಥಾಚ ಕೌಟಲ್ಯಃ—"ತಸ್ಯಪರಿಖಾತೇಸ್ತಿರ್ಯಗ್ಗರ್ಧಾಂತರಾಶ್ಚತುರ್ದಶ ವಾ ವಿಸ್ತೀರ್ಣಾ" ಇತಿ | ಉಚ್ಚ ಪ್ರಾಕಾರ ಗೋಪುರಮಿತಿ | ಪ್ರಾಕಾರಮೆನೆ ಕೋಂಟೆ | ಉಪಲಕ್ಷಣಾರ್ಥಂ ಅಥವಾಗ?| ಅಥ ಗುರುವಪ್ರೋಪರಿ ಪ್ರಾಕಾರಂ ಸಿಷ್ಟಂ| ತದ್ದ್ವಿಗುಣೋತ್ಸೇಧಂ ಅಟ್ಟಂ| ದ್ವಾದಶ ಹಸ್ತದಮೇಲೆ ಆಯಾಮಮೊಡಂ | ಆ ಚತುರ್ವಿಂಶತಿಹಸ್ತಾವಿತ್ಯಾದಿ | ಯೀಪ್ರಕಾರಮಾದ ಪ್ರಾಕಾರಗೋಪುರಮೆನೆ ಪ್ರತೋಳಿಕಾದ್ವಾರಮನುಳ್ಳ ಪುರಂ-ಸಮುದಾಯಸ್ಥಾನಂ-ಸ್ಥಾನೀಯಮಂ ರಾಜಾ ಸಮಾವಸೇತ್| ಶೈಲ ಸರಿ ನ್ಮರುವನಾಶ್ರಯಮಿತಿ| ಪಾರ್ವತೌದಕಧಾನ್ವವನದುರ್ಗಾಶ್ರಯಂ| ಜಲವದಿತಿ| ಪ್ರಚುರಜಲಮನುಳ್ಳ| ಧಾನ್ಯವದಿತಿ–ಧಾನ್ಯಂಗಳ್ ಪದಿನೆಂಟು| ಧನಂ–ಸುವರ್ಣಾದಿ| ತತ್ಸಂಪನ್ನಮಾದ ದುರ್ಗಂ| ಕಾಲಸಹಂ-ನಿಚಯಸಂಪನ್ನಮುಪ್ಪುದಱಿಂ ಅತಿ ವಿಸ್ತೀರ್ಣಂ| ದುರ್ಗಹೀನನಾದ ನರಪತಿ ವಾತಾಹತಮಾದ ಅಭ್ರಾವಯವಗಳಂತೆ ಲಬ್ಧಾವಸ್ಥಾನನೆಂಬುದರ್ಥಂ| ಶೈಲಸರಿನ್ಮರು ವನದುರ್ಗಾಶ್ರಯಮೆಂದು ಪೇಟಲ್ಪಟ್ಟುದು | ತದೇವ-ಅದನೆ | ವ್ಯಾಖ್ಯಾನಮಂ ಪೇಳ್ವಪಂ | ಔದ್ದ ಇತಿ | ಉದಕದಿಂ ದುರ್ಗಮೌದಕಂ ಅದೆ—

ಕೌಟಲ್ಯನಿಂದುಕ್ತಂ:— ಯುಕ್ತ ದ್ವೀಪಸ್ಥಲಂ ವಾ ನಿಮ್ನೋಪರುದ್ಧಮೌದಕಮಿಶಿ | ಪಾರ್ವತಂ-ಪರ್ವತದಿಂದುರ್ಗಂ-ಪ್ರಾಪ್ತಗುಹಂ ಪರ್ವತಮೆಂದುಂ ದ್ವಿಪ್ರಾಕಾರಮಾಗಿ ಪೇಟಲ್ಪಟ್ಟುದು | ವೃಕ್ಷಂಗಳಿಂ ದುರ್ಗಂ | ಅದುಂ ಸೋದಕಮೆಂದುಂ ಸ್ತಂಬಗಹನಮೆಂದುಂ ದ್ವಿವಿಧಂ | ವನದುರ್ಗಂ | ಐರಿಣಮಿತಿ | ಇರಿಣೇ-ನಿರ್ಜಲಪ್ರದೇಶದೊಳ್ | ಪುಟ್ಟಿದದುರ್ಗಂ- ಐರಣಂ | ನಿಸ್ತೃಣಸ್ತಂಬೋಪೇತಜಲದೇಶಂ ಧಾನ್ವಂ | ಅಲ್ಲಿ ಪುಟ್ಟಿದ ದುರ್ಗಂ ಧಾನ್ವನಂ | ಯೆಂದು ದ್ವಿಮತಂ | ಈ ಪ್ರಕಾರದಿಂ ಗುರುಮತದೊಳ್ ಎಂಟು ದುರ್ಗಂಗಳ್ | ಏತನ್ಮತದೊಳ್ ಅಯ್ದು ಪ್ರಶಸ್ತಂ ಅನುಶಿಷ್ಟಮಾದುದು | ಶಸ್ತಮತಿಭಿಃ-ಶುಭಮತಿಗಳಿಂದ | ದುರ್ಗಂ - ದುರ್ಗೋಪಚಿಂತಕರಾದ ಆಚಾರ್ಯರಿಂ ದುರ್ಗ ದುರ್ಗಂಗಳಂ ಪೇಳ್ದಪಂ | ಜಲಮಿತಿ-ಜಲಪ್ರಚುರಮಾಗಿ | ಆಯು

ಧಾನಿ- ಧನುರಾದಿಗಳ್ | ಯಂತ್ರಾಣಿ-ಸರ್ವತೋಭದ್ರ ಜಾಮದಗ್ನ್ಯಾದಿಗಳ್ - ತೈಃ-ಅದಱಿಂ| ಆಢ್ಯಂ-ಸಂಪನ್ನಮಾಪವೀರ ಯೋಧೈಃ-ಕೌಶಲಸಂಪನ್ನರಿಂ | ಸ್ವಧಿಷ್ಠಿತಮಾದ| ಕೃತರಕ್ಷಂ-ಗುಪ್ತಿ ಪ್ರಧಾನಮಾದ, ರಕ್ಷೆಯೆ ಪ್ರಧಾನಮಪ್ಪುದಱಿಂ| ದುರ್ಗಕ್ಕೆ ಆಚಾರ್ಯಾಃ - ಶುಕ್ರಗುರುಪ್ರಭೃತಿಗಳ್ | ದುರ್ಗಂ ಸಮನುಮೇನಿರೇ - ದುರ್ಗವಿಷಯದೊಳ್ ಸಮ್ಯಕ್ಕಾಗಿ ಅನುಮತಿಯಂ ಮಾಡಿದರ್ | ಸಾಪ ಇತಿ - ಸಾಪಸಾರಾಣಿ-ಅಪಸಾರಸ್ಥಾನಯುತಮಾದ | ಆಪತ್ತಿದೊಳ್ ಅಪಸಾರ ಭೂಮಿಗಳ್ |ಸಾನೂಪಜಾಂಗಲಂಗಳ್ - ನಿವಾಸಾರ್ಥಮಾಗಿ ಪ್ರಶಸ್ತಂಗಳ್ | ಪ್ರಕೃತ್ಯವಸ್ಥಿತಿ ಜಲಭೂಸ್ಥಲಲೋಭಾತ್ | ಭೂಭುಜಾಂ ವಿಭೂತಿಮಿಚ್ಛತಾ ಮಿತಿ ಪ್ರತೀತಂ |

ಕೋಶಪ್ರಕೃತಿಯ ಗುಣಸಂಪದಮಂ ಪೇೞ್ದಪಂ | ಬಹ್ವಾದಾನಮಿತಿ - ಬಹುಳಮಾದ ಆದಾಯ|ವ್ಯಯಸ್ಯಾಲ್ಪ ನಿಸ್ರಾವಃ-ಅಲ್ಪವ್ಯಯಮೆಂಬುದರ್ಥಂ|ನ್ಯಾಯೇನೈವೇತಿ ಭಾವಃ|ಖ್ಯಾತಇತಿ ನಿಶ್ಶೇಷವಿಷಯೇ ವ್ಯವಹಾರಾರ್ಹಃ | ಪೂಜಿತಾನಿ-ಜನಾರ್ದನಾದಿ ದೈವತಂಗಳ್ ಯಸ್ಮಿಂತತ್ತಥಾ ಪೂಜೆಯಿಂದ ಅಕ್ಷಯಮಪ್ಪುದೆಂದು ಭಾವಂ| ಈಪ್ಸಿತ ದ್ರವ್ಯಸಂಪನ್ನಯಿತಿ | ಸುವರ್ಣಯಾಪ್ಸಿತ ದ್ರವ್ಯಸಂಪನ್ನ ಇತಿ | ಹೃದ್ಯಮೆಂದು ಮನೋಹರಂ | ಮಹಾಲಂಕಾರಸಂಪನ್ನಮಪ್ಪುದಱಿಂ ಸ್ವಾಪ್ತೈರಧಿಷ್ಠಿತಂ— ಸುಷ್ಠು ಆಪ್ತಾಃ ಶುದ್ಧರಪ್ಪುದಱಿಂ ಆರುಕೆಲವರು | ಆಪ್ತಾಃ-ವಿಶ್ವಾಸಿಗಳ್ | ಆದುಕಾರಣದಿಂ | ಅವರಿಂದ ಅಧಿಷ್ಠಿತಂ—ರಕ್ಷಿತಂ | ಮುಕ್ತೇತಿ | ಮುಕ್ತಾಕನಕರತ್ನಾಢ್ಯ ಎಂದು ಮರಳಿ ಪೇೞಲ್ಪಡುತಿದ್ದೀತು | ಆದರಪ್ರದರ್ಶನಮಾರ್ಥಮಾಗಿ | ಪಿತೃಪೈತಾಮಹೋಚಿತಃ – ನ್ಯಾಯೋಪಾರ್ಜಿತಮಪ್ಪುದಱಿಂ | ಉಚಿತಃ | ವಿಜಿಗೀಷುವಿಗೆ | ಧರ್ಮಾರ್ಜಿತಃ– ನ್ಯಾಯಾರ್ಜಿತಃ | ವ್ಯಯ ಸಹ ಇತಿ—ಪ್ರಾಚುರ್ಯದತ್ತಣಿಂ ವ್ಯಯಮಂ ಸಹಿಪುದು | ಕ್ಷೀಣಮಾಗದೆಂಬುದರ್ಥಂ | ಈ ಪ್ರಕಾರಮಾದ ಕೋಶಂ | ಕೋಶಜ್ಞಸಮ್ಮತಂ | ಅನುಮತಂ | ಕೋಶವಿನಿಯೋಗಮಂ ಪೇೞ್ದಪಂ | ಧರ್ಮ ಇತಿ – ಕೋಶಾರ್ಜನಂ ಧರ್ಮನಿಮಿತ್ತಂ | ಹಾಗೆ ಅರ್ಥನಿಮಿತ್ತಂ| ಭೃತ್ಯರ ಭರಣಾರ್ಥಮುಂ| "ಆಪದರ್ಥಂ ಸಂರಕ್ಷ್ಯಃ| ಕೋಶವತಾಸದಾ"ಇತಿ ಪ್ರತೀತಂ|

ದಂಡಗುಣಸಂಪದಮಂ ಪೇೞ್ದಪಂ:- ಪಿತೃ ಇತಿ-ಪಿತೃಪೈತಾಮಹ ಇತಿ|ಕ್ರಮಾಯಾತಮಾದ| ವಶ್ಯಮೆಂದು ವಿಧೇಯಂ | ಸಂಮತಮೆಂದು ಅಭಿಮತಂ | ದತ್ತವೇತನಮೆಂದು ಕೃತಭರಣಂ| ವಿಖ್ಯಾತಪೌರುಷೋರ್ಜಿತಃ ಇತಿ(ವಿಖ್ಯಾತ)ವಿಶೇಷದಿಂ-ಖ್ಯಾತನಾದ ಪ್ರಸಿದ್ಧಿಯೈದಿದ| ಪೌರುಷೋರ್ಜಿತ್ಯಃ-ಪೌರುಷದ.ಬಲವತ್ತ್ವಮುಂ| 'ಊರ್ಜ ಬಲಪ್ರಾಣನಯೋಃ'ಎಂಬ ಪಾಠದತ್ತಣಿಂಪೌರುಷ ಬಲವತ್ತರುಂ ಪ್ರಖ್ಯಾತಮಾಗಿರೋಣ | ಆತಂ ಕುಶಲಃ ಸರ್ವಾಯುಧಕುಶಲಂ| ಕುಶಲರಾದ ಅಧಿಷ್ಠಾತೃಗಳಿಂದ| ಪರಿವೃತಃ-ಅನುಗತನಾದ| ನಾನೇತಿ—ನಾನಾಪ್ರಹರಣೋಪೇತನಾದ–ಧೇನುಕುಂತಾಸಿಚಕ್ರಗದಾದ್ಯಾಯುಧಸಮೇತನಾದ| ನಾನಾ ಯುದ್ಧ ವಿಶಾರದಃ-ಇತಿ – ಜಲಸ್ಥಲವನಾಕಾಶ ಯುದ್ಧಾದಿ ಪಂಡಿತನುಂ, ನಾನಾಯೋಧಸಮಾಕೀರ್ಣಃ ಇ—ಜಲಸ್ಥಲಯೋಃ ಪ್ರಸಂಕೀರ್ಣಂ | ನೀರಾಜಿತಹಯದ್ವಿಪಃ—

*ತಥಾ............ವಲ್ಯಾ—
ನೀರಾಜನಮಾಶ್ವಯುಜೇ ಕಾರಯೇನ್ನವಮೇಽಹನಿ ||
ಯತ್ರಾದಾವವಸಾನೇ ವಾ ಪ್ರಾಶಾಂತಿಕರಃ (ಸ್ಮೃತಿಃ) || ಇತಿ—

---

* ಈ ಪದ್ಯವು ಮುದ್ರಿತ ತೆಲುಗು ಲಿಪಿಯ ಪ್ರತಿಯಲ್ಲಿ ಮುಂದುಗಡೆ ಇದೆ.

ಈ ಪ್ರಕಾರ ನೀರಾಜಿತಹಯದ್ವಿಪಂ | ಪ್ರವಾಸೇತಿ – ಯಯಾನ್ನಾನ್ಯಥೇತಿ |

ಮಿತ್ರ ಪ್ರಕೃತೇರ್ಗುಣಸಂಪದಂ ಮಿತ್ರಪ್ರಕೃತಿಯಗುಣಸಂಪದಮುಂ ಪೇೞ್ದಪಂ| ಕ್ಷತ್ರಿಯಪ್ರಾಯ ಇತಿ| ಕ್ಷತ್ರಿಯರುಂ ಸ್ವಭಾವದಿಂದಲೇ ಮಹಾಸತ್ವರಪ್ಪರ್| ದಂಡಂ-ಚತುರಂಗ ಬಲದಂಡಃ ಸ ಏವಂ ವಿಧೊದಂಡೋ ದಂಡವತಾಂ ಮತಃ | ತ್ಯಾಗೇತಿ-ತ್ಯಾಗಮೆಂದು ಅಲುಬ್ಧತೆ| ವಿಜ್ಞಾನಂ-ಸರ್ವಶಾಸ್ತ್ರಪ್ರವೀಣತೆ | ಸತ್ವಂ—ವ್ಯಸನದೊಳಮಭ್ಯುದಯದೊಳಮವಿಕಾರಿತೆ | ಮಹಾಪಕ್ಷಃ–ಬಹುಬಂಧ್ವಾದಿವರ್ಗಂ | ಪ್ರಿಯಂವದಃ–ಹಿತವಾದಿಯುಂ | ಆಯತಿಕ್ಷಮಂ–ಆಗಾಮಿ ಕಾಲದೊಳಂ ವಿಚಾರಿತಕ್ಷಮನಾದಂ ದ್ವೈವಿಧ್ಯರಹಿತನಪ್ಪ ಮಿತ್ರವಿಧೇಯನಂ ಮಾೞ್ಪುದು | ಸತ್ಕುಲಂ— ಉಭಯಕುಲಪರಿಶುದ್ಧರಂ | ಸತ್ಕುಲಕ್ಕೆ ಗುಣಮಂ ಪೇೞ್ದಪಂ | ಸಮುದಿತಿ–ಕೃಚ್ಛ್ರೇಷು– ಅತ್ಯಾಪತ್ತುಗಳೊಳ್ ದಾರುಣೇಷು–ಅಪ್ರತಿವಿಧೇಯಂಗಳೊಳ್ ಅಚ್ಚಹೃದಯನಾದ ಸುಜನಂ ಮಿತ್ರತ್ವನೆಯ್ದಿ ಚತುರಶ್ರಮಂ ತೋಱುತಿದ್ದಾನು | ಹೃದಯಾನುಗಾ ಇತಿ – ಹೃದಯಹಾರಿತ್ವಭಾವಾದೇವ | ಮಹದಿತಿ-ಪ್ರಕಾರತ್ರಯೋಪಚಿತಮಾಗಿ ಜಿಗೀಷು ಕಾರ್ಯಮಂ ಕುಱಿತು | ಶೀಘ್ರಮುತ್ತಿಷ್ಠತೀತಿ | ಮಿತ್ರಂ ಬಂದೊಡೆ | ಆಗಲೆ ಅಭಿಮುಖಗಮನಮುಂ | ಸ್ಪಷ್ಟಾರ್ಥಂ ಹೃದಯಾನುಗವಾಗಿತಿ-ಸ್ಪಷ್ಟಾರ್ಥಮಾಗಿ ಹೃದಯಾನುಗಮವಾದವಾಕ್ಕು ಪ್ರಯೋಗಿಸಲ್ತಕ್ಕುದು ಎಂದು ಶೇಷಂ | ಸತ್ಕೃತ್ಯ ಸತ್ಕಾರಮುಂಮಾಡಿ ದೇಯವಸ್ತುಪ್ರದಾನಮೆಂದುಂ ಮಿತ್ರಸಂಗ್ರಹಮುಂ| ಅನೇನ—ಯಿ ಪೂರ್ವೋಕ್ತತ್ರಿತಯದಿಂ ಮಿತ್ರರಪ್ಪುದೆಂಬುದರ್ಥಂ | ಮಿತ್ರನತ್ತಣಿಂ ಫಲಮಂ ಪೇೞ್ದಪಂ | ಧರ್ಮ ಇತಿ | ಧರ್ಮಾರ್ಥಕಾಮಸಂಯೋಗ ಇತಿ | ಧರ್ಮಮುಂ ಅರ್ಥಮುಂ ಕಾಮಮುಂ ಅನಮಿತ್ರನಿಂ ಸಂಯುಜ್ಯತೆ-ಪಡೆಯಲ್ಪಡುತಿದ್ದೀತು | ಇದು ಮಿತ್ರನಿಂದ ತ್ರಿವಿಧಫಲಂ| ಆವನನೊಳ್ ಈ ಮೂಱುಫಲಮುಂ ಸಿದ್ಧಿಸದು ಆ ಮಿತ್ರನಂ ಸೇವಿಸಲಾರರು ಪಂಡಿತಃ-ವಿವೇಕಿ | ಮೈತ್ರಿಯ ಸ್ವರೂಪಮಂ ಪೇೞ್ದಪಂ | ಆದಾವಿತಿ—ಆದಿಯೊಳ್ | ತನ್ವ್ಯಃ-ಸೂಕ್ಷ್ಮಂಗಳ್ | ಜಲಪ್ರವಾಹಮಾದಿಯೊಳಲ್ಪಮಪ್ಪುದಱಿಂ | ಬೃಹನ್ಮಧ್ಯಾ–ಮಧ್ಯಪ್ರದೇಶದೊಳ್ ಬಹುಜಲ ಪ್ರದೇಶಂಗಳಪ್ಪುದಱಿಂ | ವಿಸ್ತಾರಿಣ್ಯಃ-ಪದೇಪದೇ ತತ್ತಸ್ಥಾನದೊಳ್ ವಿಸ್ತಾರ ಯುಕ್ತಂಗಳ್ | ಯಾಮಿನ್ಯ ಇತಿ – ನಿರ್ವಹಣಶೀಲಂಗಳ್ – ನಿರ್ವರ್ತನ ಶೀಲಂಗಳಿಂದೆ | ನಿವಹಂತಿ – ಪ್ರವಹಿಸುತಿದ್ದಾವು | ಏವಂ ಹೀಗೆ ಸಜ್ಜನಮೈತ್ರಿಗಳ್ ಸರಿತ್ಸಮಂಗಳ್ | ಪ್ರಾರಂಭದೊಳ್ ಸ್ವಲ್ಪಂಗಳ್ | ಪ್ರತಿಪದಮುಪಕಾರ ಪ್ರತ್ಯುಪಕಾರಂಗಳ ಪ್ರವರ್ಧನದತ್ತಣಿಂ ಬ್ರಹನ್ಮಧ್ಯಂಗಳಾಗುತಿದ್ದಾವು | ಹಾಗೆ ವಿಸ್ತಾರಮುಳ್ಳುವಾಗಿ ಪದೇಪದೇ ಯಾಯಿನ್ಯಃ—ನಿರ್ವಹಣಶೀಲಂಗಳಾಗಿ—ಪ್ರತಿಪನ್ನನಿರ್ವಹಣಶೀಲಂಗಳಾಗಿ ಪ್ರತಿಪನ್ನ ನಿರ್ವಹಣಶೀಲತ್ವದತ್ತಣಿಂ | ಸತ್ಪುರುಷರ್ಗೆ-ಯಿಪ್ರಕಾರಮಾದ ಮೈತ್ರಿಗಳು ಆವನನೊಳ್ ಆತನೆ ಮಿತ್ರನೆಂದು | ಕಾರಣಂಗಳಿಂ ಮಿತ್ರಭೇದಮಂ ಪೇೞ್ದಪಂ| ಔರ ಇತಿ-ಔರಸಮೆಂದು ಸೋದರ್ಯಂ-ಭೂತ್ವಾ ಆಗಿ ಸ್ವಭಾವತ ಏವ ಸ್ನಿಗ್ಧಂ| ಸೋದರರಾದೊಡೆ ಸ್ನಿಗ್ಧರುಂ ಶತ್ರುಗಳುಮಾಗಿ| ದೃಶ್ಯನ್ತೇ–ಕಾಣಲ್ಪಡುತಿದ್ದಾರು | ಅತಃ–ಇದು ಕಾರಣದಿಂದ ಸ್ನಿಗ್ಧಮಾಗಿರ್ದ ಔರಸಂ ಮಿತ್ರಂ ಮಿತ್ರನಾಗುತಿದ್ದಾನು| ಎಂದು| [1] ತತ್ರಸಂಬಂಧಮಿತಿ-ತತ್ರಸ್ವಮಂಡಲದೊಳ್-ತೇನ-ಅದಱಿಂ | ಕೃತಸಂಬಂಧಂ-ಭೂಮ್ಯೇಕಾಂತರಂ ಮಿತ್ರಮೆಂದು | ತಥಾ-ಹಾಗೆ ವಂಶಕ್ರಮಾಗತಂ-ಪಿತೃಪೈತಾಮಹಮೆಂಬುದರ್ಥಂ | ರಕ್ಷಿತಂವ್ಯಸನೇಭ್ಯಃ-ಆಪತ್ತುಗಳತ್ತಣಿಂ |

---

(1) ಮಾತೃಸಂಬಂಧಂ (ಮು. ಪಾ)

ಮಿತ್ರಮೇವಂ ಚತುರ್ವಿಧಂ-ಕಾರಣಚತುಷ್ಟಯದಿಂ ಮಿತ್ರನಾಗುತ್ತಿದ್ದಾನು—| ಮರಳಿಯುಂ
ಮಿತ್ರಗುಣಮಂ ಪೇಳ್ದಪಂ | ಶುಚಿತೇತಿ | ಶುಚಿತಾ-ಶುಚಿತ್ವಮುಂ| ಅರ್ಥವಿಷಯದೊಳ್ ತ್ಯಾಗ
ತ್ವಮುಂ| ಸಂವ್ಯವಹಾರದೊಳಲುಬ್ಧತ್ವಮುಂ| ಶೌರ್ಯಂ ವಿಜಿಗೀಷು ಸಾಹಾಯ್ಯದಿಂಅಭೀರುತ್ವ
ಮುಂ | ಸಮಾನಸುಖದುಃಖತ್ವಮುಂ ವಿಜಿಗೀಷುವೊಡನೆ | ಸತ್ಯವಾಚಃ-ಅಮೃಷಾವಾದಿತ್ವಮುಂ
ಇವು ಸುಹೃದ್ಗುಣಂಗಳ್ | ಈ ಗುಣಸಂಯುಕ್ತಂ ಸುಹೃದನಪ್ಪನೆಂದು ವಿಸ್ತರದಿಂ ಮಿತ್ರಸಂ(ಪ)
ದಮಂ ಪೇಳ್ದು ಸಂಕ್ಷೇಪದಿಂ ಪೇಳ್ದಪಂ| ತದರ್ಥೇಷು-ವಿಜಿಗೀಷುನಿಮಿತ್ತಮಾದ ಈಹಾಚೇಷ್ಟೆ
ಯತ್ಕಿಂಚಿದ್ದೀಯತೇ-ಏನೊಂದು ಕೊಡಲ್ಪಟ್ಟೊಡಂ ಅದಷ್ಟು ವಿಜಿಗೀಷುಹಿತಾರ್ಥಮೆ | ಎಂದು |
ಅನುರಾಗಮುಂ-ತತ್ತದ್ವಿಷಯಂಗಳೊಳ್ ವಾಙ್ಮನಃ ಕರ್ಮಂಗಳಿಂ ವಿಜಿಗೀಷು ಹಿತಾರ್ಥಮೆಂಬು
ದರ್ಥಂ | ಏತತ್-ಇದು | ಸಂಕ್ಷೇಪಮಾದಮಿತ್ರಲಕ್ಷಣಂ| ಗುಣದ್ರವ್ಯಂಗಳಹಾಗೆ ಮಿತ್ರತ್ವಮಿದು|
ಆವಮಿತ್ರನಲ್ಲಿ ಈ ಗುಣದ್ವಯಮುಮುಂಟು ಆತನೆ ಮಿತ್ರಂ | ತತ್ರ-ಆತನಲ್ಲಿ| ಆತ್ಮಾನಂ-ತನ್ನಂ|
ನಿಕ್ಷಿಪೇತ್-ಸಮರ್ಪಿಸಬೇಕು | ಇತ್ಯೇವಂ-ಯಿಾ ಅಭಿಹಿತಪ್ರಕಾರದಿಂ | ರಾಜ್ಯಂ-ಸಪ್ತಾಂಗವು |
ಸಮಿಾರಿತಂ-ವ್ಯಾಖ್ಯಾತಮಾದದು| ಅಸ್ಯರಾಜ್ಯಕ್ಕೆಈ ಪರಾಉತ್ಕೃಷ್ಟಮಾದಪ್ರತಿಷ್ಠಾ-ಸ್ಥಿತಿಹೇತು |
ಧನಂ-ಕೋಶವು | ಸಾಧನಂ-ಚತುರಂಗದಂಡವು | ತೇನಸಹ ಅದಱೊಡನೆ-ರಾಜ್ಯಪ್ರತಿಷ್ಠೆ ಹೇತು |
ಎಂದು ಸಂಬಂಧಂ | ಗೃಹೀತಂಪ್ರಗೃಹೀತಮಾದ ರಾಜ್ಯಂಮಂತ್ರಿಯಿಂ | ತ್ರಿವರ್ಗ ನಿಷ್ಪತ್ತಿಯಂ |
ಶಾಶ್ವತೀಮನಶ್ವರಮಾದ | ಹೇಗೆ ರಾಜ್ಯಕ್ಕೆ ಧನಸಾಧನವು ಪರಾಪ್ರತಿಷ್ಠಾ | ನಿಪುಣನಾದ
ಮಂತ್ರಿಯಿಂ ಪ್ರತಿಷ್ಠಿತಮಾದ ರಾಜ್ಯಂ ತ್ರಿವರ್ಗನಿಷ್ಪತ್ತಿಯಂ ಪಡೆಯುತಿದ್ದೀತು | ತಥಾಚ
ಅಂತರಾತ್ಮಸಮೇನ ಸ್ವಾಮಿಯಿನಧಿಷ್ಠಿತಮಾದ ರಾಜ್ಯಂ ಕಾರ್ಯಕರಂ ಎಂದು ಪೇಳ್ದಪಂ |
ಯಥೇತಿ || ಯಥಾ—ಹೇಗೆ ಪರಮಾತ್ಮ(ಂ) –ಪ್ರಕೃತಿ ಆತ್ಮತತ್ವ ವ್ಯತಿರಿಕ್ತಂ|ಶರೀರಪ್ರಕೃತಿಗಳ
ನಧಿಷ್ಠಿಸಿ — ವ್ಯಾಪಿಸಿ ಇರುತ ಚರಾಚರಮಾದ ಸ್ಥಾವರಜಂಗಮಾತ್ಮಕಮಾದ ಜಗತ್ತಂ |
ಸಮಶ್ನುತೇ-ವ್ಯಾಪಿಸುತ್ತಿದ್ದಾನು | ತಥಾ-ಹಾಗೆ | ನರೇಂದ್ರಃ| ಪ್ರಕೃತೀಃಅಮಾತ್ಯಾದಿಗಳನಧಿಷ್ಠಿಸಿ
ವ್ಯಾಪಿಸುತ್ತೆ ಚರಾಚರಮಾದ ಈ ವಿಶ್ವಮಂ| ಸಮಶ್ನುತೇ-ವ್ಯಾಪಿಸಿ ಇರುತಿದ್ದಾನು|-ಪ್ರಕೃತಿಭಿರಿತಿ-
ಏಕಚ್ಛತ್ರಪೃಥಿವೀಪತಿತ್ವಂ|| ಪ್ರಾಪ್ನೋತಿ-ಐದುತ್ತಿದ್ದಾನು|| ಎಂಬುದರ್ಥಂ | ಅದನೆ ತೋಱುತ್ತೆ
ಪೇಳ್ದಪಂ | ಪ್ರಕೃತೀತಿ-ಪ್ರಕೃತಿಗುಣ ಪ್ರಕೃತಿ ತತ್ಸಂಪತ್ಕರುಣೋಕ್ತ ಗುಣಮನುಳ್ಳ ಕುಶಲಾದಿ
ಸಮನ್ವಿತನಪ್ಪ ಸುಧೀಃ ಸುತ್ರಜ್ಞಾಂ ಪರಾಂ—ಉತ್ಕೃಷ್ಟಮಾದ ಸ್ಪೃಹಣೀಯತಾಂ ಆಶ್ರಯ
ಣೀಯತ್ವಂ ವ್ರಜತಿ-ಯ್ದೈದುತಿದ್ದಾನು | ಸತ್ಪುರುಷರಿನಾಶ್ರಯಿಸಲ್ಪಡುವುದಱಿಂ| ಅನಂತರಂ |
ಆ ನೃಪಂ-ರಣೇಷು-ಯುದ್ಧಂಗಳಲ್ಲಿ | ಶತ್ರುಗಳಿಗೆ | ಪ್ರಬಲ ಇವ-ಪ್ರಚುರತರದ | ಶ್ವಸನೋ—
ಮಹಾವಾತಂ | ಪಯೋಮುಚಾಂ-ಮೇಘಂಗಳ್ಗೆ | ಹೇಗೆ ಪ್ರಚಂಡಪವನನಿಂ ಮೇಘಂಗಳ್ |
ಖಂಡಿಸಲ್ಪಡುತಿದ್ದಾವು ||

ಇತಿ ಕಾಮಂದಕೀಯಟೀಕಾಯಾಮುಪಾಧ್ಯಾಯನಿರಪೇಕ್ಷಾಯಾಂ
ಪ್ರಕೃತಿಸಂಪದೋಕ್ತಂನಾಮ
— ಚತುರ್ಥಸ್ಸರ್ಗಃ —

— ಪಂಚಮಸ್ಸರ್ಗಃ —

ಅನಂತರಂ ಸ್ವಾಮಿಯ ಅನುಜೀವಿವೃತ್ತಂ ವ್ಯಾಖ್ಯಾಯತೇ – ಎಂದು ಸಂಬಂಧಂ –
ವೃತ್ತಂ-ರಾಜಾನುಷ್ಠಾನಂ| ವಿಜಿಗೀಷು, ವೃತ್ತಂ-ಪೃಥಿವೀಲಾಭಪಾಲನಾದಿ ಕಂ–ತತ್ರ ತಿಷ್ಠತೀತಿ
ವೃತ್ತಸ್ಥಂ – ತಂ-ಅತನಂ ಸಹಾನುಜೀವಿಭಿಪರ್ಥಾಭವತಿ | ವೃತ್ತಿಸಂಪನ್ನಂ – ವೃತ್ತಿಹೇತುತ್ವ
ದತ್ತಣಿಂ | ಕೋಶಮೆ ವೃತ್ತಂ–ಅದು ಕಾರಣದಿಂ ಸಂಪನ್ನಾರ್ಥಕೋಶರಹಿತನಾದೊಡೆ ಏನಂ
ಕೊಡಲಾಪನೆಂದು ಭಾವಂ | ಕಲ್ಪವೃಕ್ಷೋಪಮಂ - ಈಪ್ಸಿತಫಲ(ಪ್ರ)ದನಶಕ್ತಿಯುಕ್ತನೆಂಬು
ದರ್ಥಂ – ಅಭಿಗಾಮಿಕಮಾದ ಕುಲಶೀಲಾದಿ ಪೂರ್ವೋಕ್ತಗುಣಾನ್ವಿತನಾದ ಸ್ವಾಮಿಯಂ |
ಸೇವೇರ್ರ-ಸೇವಕತ್ವದಿನುಪತಿಷ್ಠೇರ್ರ| ಭೃತ್ಯಾ ಇತಿ | ದ್ರವ್ಯ(ಇತಿ) | ತದಾತ್ವೇ – ಆ ಸಮಯ
ದೊಳಕೋಶನಾದೊಡಂ | ಅಭಿಗಾಮಿಕಗುಣಯೋಗದತ್ತಣಿಂ ಶೀಘ್ರಮಾಗಿ ಕೋಶದಂಡನಪ್ಪ
ನೆಂದು | ಕಾಲಾಂತರದೊಳಾದೊಡಮಾತನಿಂ ಜೀವನಮುಪ್ಪದೆಯೆಂದು| ಅಸೇವ್ಯನಂ ಪೇಳ್ದಪಂ|
ಅಪಿಸ್ಥಾಣುಃವತ್ ಛಿನ್ನಶಾಖತರುಃ ಅದರಹಾಗೆ | ಶುಷ್ಯ-ಶೋಷಮನೆಯ್ದುತ್ತೆ | ಕ್ಷುಧೆಯಿಂ
ಪರಿಗತನಾಗಿ | ಆಸೀತ–ಇರ್ಪುದೆ | ಬಂದು ಬಾರಿಯು ಅನಾತ್ಮಸಂಪನ್ನನತ್ತಣಿಂ| ಅನಂತರೋಕ್ತ
ಮಾದ ಅನಾತ್ಮಸಂಪನ್ನನತ್ತಣಿಂ ವಿವೇಕಿಯಾದವಂ ಜೀವನಮನಪೇಕ್ಷಿಸಲಾಗದು | ಇದನೆ ಸಮ
ರ್ಥಿಸುತೆ ಪೇಳ್ದಪಂ | ಅನಾತ್ಮವಾ೯-ಆತ್ಮಸಂಪದ್ಗುಣರಹಿತಂ | ನಯದ್ವೇಷಿಯಾಗಿ - ವರ್ಧಯ
ನ್ನರಿಸಂಪದ ಇತಿ | ಅನಾತ್ಮವತ್ತೆಯಿಂದವೆ ಅತಿಸಂಪದಮನಭಿವೃದ್ಧಿಸುತಿರ್ಪಾತಂ ಕಾಕತಾಳೀ
ಯನ್ಯಾಯದಿಂದಂ ಮಹೈಶ್ವರ್ಯಮಂ ಪಡೆದುಂ ವಿಪತ್ತನೆಯ್ದುವನೆಂದು | ಅದು ಕಾರಣಂ-
ಅನಾತ್ಮ ವಂತಂ ಸೇವ್ಯನೆ ಅಲ್ಲು ಎಂದು ಭಾವಂ | ಇದನೆ ಸಮರ್ಥಿಸುತೆ ಪೇಳ್ದಪಂ | ಲಬ್ಧಾವ
ಕಾಶಃ—ಸಂಪ್ರಾಪ್ತಸೇವಾಸರಂ ನಿಪುಣಮಪ್ಪಂತು ಆತ್ಮವಂತನಾದ ಸ್ವಾಮಿಯೊಳ್ | ಅವಿಕಾರ
ವಾ೯ ಇತಿ ಶರೀರಶೀಷಾ(೯)ದಿ ವಿಕಾರರಹಿತಂ | ಸ್ಥಾನೇ-ಸಚಿವಾದಿಪದದೊಳ್ | ಸ್ಥೈರ್ಯಂ-
ಸ್ಥಿರತ್ವಮಂ | ಅಪಾಪ್ನೋತಿ - ಬುದ್ಧಿಸಾಧ್ಯಮಾದ ಅನುಷ್ಠಾನಂಗಳೊಳ್ | ನಿಶ್ಚಿತಃ-ಕೃತನಿಶ್ಚ
ಯನೆಂದು ಸಂಕ್ಷಿಪ್ತಂ | ಇದಂ–ಯಿಾ ಅನುಜೀವಿವೃತ್ತಂ – ಅನುಜೀವಿಯಿಂದ ಉಭಯಲೋಕಾ
ವಿರುದ್ಧನಾದ ಜೀವನಮನಪೇಕ್ಷಿಸಲ್ತಕ್ಕುದು | ಎಂದು ಪೇಳ್ದಪಂ | ಆಯತ್ಯಾಂ-ಆಗಾಮಿಕಾಲ
ದೊಳ್ - ತದಾತ್ವೇ - ವರ್ತಮಾನಕಾಲದೊಳಂ | ಆವುದೊಂದು ಆಸ್ವಾದಪೇಶಲಂ-ಆಸ್ವಾದ ರಮ
ಣೀಯವು | ತತ್-ಅದಂ | ಆಚರೇತ್—ಆಚರಿಸಬೇಕು | ಅರ್ಥಾಧಿಕಾರಿವಿಷಯಮಿಾ ಉಪ
ದೇಶಂ | ಯುದ್ಯರ್ಥಾಧಿಕಾರಿ-ಅರ್ಥಾಧಿಕಾರಿಯಾದೊಡೆ | ತದಾತ್ವದೊಳ್ ಅರ್ಥಲೋಲುಪನಾಗಿ
ಭಕ್ಷಿಪಂ | ಅದು ತದಾತ್ವದೊಳ್-ಜಗತ್ತಿಗೆ ಅಪೇಶಲಮಪ್ಪುದು | ಕಿಂತು ಆಯತ್ಯಾಂ ಲೇಖ್ಯ
ದಾನಕಾಲದೊಳಂ ಧನಧಾನ್ಯಾದಿಗಳಿಂ ಕಟುಕಾಸ್ವಾದಮಪ್ಪುದು| ಆವುದೊಂದು ಸ್ವಾಮ್ಯನುಮತ
ಮಾಗಿ ಭಕ್ಷಿಸಲ್ಪಡುತಿದ್ದೀತು | ಅದು ಆಯತಿಯೊಳಂ ತದಾತ್ವದೊಳಂ | ಸ್ವಾದು-ಪೇಶಲಂ,
ಅಪ್ಪುದು | ತದೇವ-ಅದನೆ ಕ್ಲಿಶ್ಯನ್ನಪಿ-ಕ್ಷುಧಾ ಇತಿ ಶೇಷಃ| ಕುರ್ವೀತ ಎಂದು ಅರ್ಥಾಧಿಕಾರೀತ್ಯ
ರ್ಥಾದಾಪಾದ್ಯತೇ | ಲೋಕವಿದ್ವಿಷ್ಟಮಂ | ನಾಚರೇತ್-ಆಚರಿಸಲಾಗದು| ಸ್ವಾಮ್ಯತಿಕ್ರಮಣದಿ
ನರ್ಥಭಕ್ಷಣದೊಳ್ ಲೋಕದ್ವಯವಿರೋಧಿಯಪ್ಪನೆಂಬುದರ್ಥಂ | ಕೋಶವಂತನಾಗಿ ಕಲ್ಪವೃ
ಕ್ಷೋಪಮನಾಗಿರ್ದೊಡಂ ಅಶುಭಾತ್ಮಕಮ್ಲೇಚ್ಛಾದಿಯುಂ ಸೇವಿಸಲ್ತಕ್ಕುದಲ್ಲವೆಂದು ಪೇಳ್ದಪಂ |
ತಿಲ(ಇತಿ)ತಿಲಂ ಮಧ್ಯಸ್ಯಸ್ತನಾಗಚಂಪಕ ಪುಷ್ಪಮುಪ್ಪುದಱಿಂ ತದಧಿವಾಸನೆಯಿಂದ ತದ್ಗಂಧವತ್ತ್ವ

ಮನೆಯ್ದುತ್ತಿದ್ದೀತು | ಅನಂತರಂ (ಅ) ತಿಲಂಪಿಡಿ(ಬಿ)ಸಲ್ಪಡಲಾಗಿ ಚಂಪಕತೈಲವಾಗುತ್ತಿದ್ದೀತು |
ಎಂದಿಂತು ಸಂಸರ್ಗಮಾದ ಗುಣಂ| ಅರ್ಥಭಕ್ಷಪುರುಷಸಂಗದಿಂ ಸಂಸರ್ಗಮಾದದೋಷಂ |
ಏವಂ ಚ ಸರ್ವೆಗುಣಾ ಇತಿ| ಪುರುಷಧರ್ಮಂಗಳ್ ಸಾಂಕ್ರಾಮಿಕಂಗಳ್ - ಸಂಕ್ರಮಣಶೀಲಂಗಳ್
ತಸ್ಮಾದದುಕಾರಣದತ್ತಣಿಂ | ಅವಿಶುದ್ಧಸಂಗಂ ಪರಿತ್ಯಾಜ್ಯಂ | ಇದನೆ ಸಮರ್ಥಿಸುತ್ತೆ ಪೇೞ್ದಪಂ
ಅಪಾಂ-ಜಲಂಗಳಪ್ರವಾಹಂ | ಗಾಂಗೋಪ್ಯಮೃತಸಮಮಾದೊಡಂ | ಕ್ಷಾರಮಾದ ಸಮುದ್ರಮ
ನೆಯ್ದಿ | ತದ್ರಸಃ— ಕ್ಷಾರಮಾಗುತ್ತಿದ್ದೀತು ಎಂದು | ಅವಶ್ಯಂ-ನಿಸ್ಸಂ ದೇಹಮಪ್ಪಂತು| ಅದಱಿಂ
ವಿದ್ವಾನ್-ಪಂಡಿತಂ, ನಾಶ್ರಯೇತ್-ಆಶ್ರಯಿಸಲಾಗದು | ಅಶುಭಾತ್ಮಕಮಾಗಿರ್ದ ಅಕುಲೀನಮಾದ
ಮ್ಲೇಚ್ಛಾದಿಯಿಂ ತತ್ಸಂಗದಿಂ ಸಏವ ಭವತಿ | ಆತನ ಸಂಗದಿನಾತನೆ ಆಗುತ್ತಿದ್ದಾನು ಎಂದು |
ಇದನೆ ದೃಢಮಾಗಿ ಪೇೞ್ದಪಂ | ಕ್ಲೈಶ್ಯ-ದೌರ್ಗತ್ಯದಿಂ, ಬುಭುಕ್ಷಣಾದಿಗಳಿಂದ ಅತಿಕ್ಲೇಶಮ
ನೆಯ್ದುತ್ತಿರ್ದೊಡಂ| ಶುದ್ಧಂ-ಆರ್ಯಮಾದ | ಜೀವನಮಂ ಆಚರಿಸಬೇಕು | ಶುದ್ಧಮಾದ ಜೀವನ
ಪ್ರಾಪ್ತಿಸಂಪನ್ನಃ ಸ್ವಾಮಿಯಿಂದ ಯಥೋಕ್ತಸಂಪತ್ತು ಧರ್ಮಾನುಗತಮಪ್ಪುದಱಿಂ
ಇಹಲೋಕಶ್ಲಾಘ್ಯತಾಂ - ಸ್ಪೃಹಣೀಯತ್ವಮಂ | ಏತಿ-ಅಯ್ದುತ್ತಿದ್ದೀತು | ಲೋಕೇಭ್ಯಶ್ಚೇತಿ |
ಇಹಲೋಕಪರಲೋಕ ಬಂಧುಲೋಕದತ್ತಣಿಂ| ನಹೀಯತೇ-ಚ್ಯುತನಾಗಂ| ಸೇವೇತೇತಿ ಸ್ವಾಮಿ
ಸ್ವರೂಪಮಂ ಪೇೞ್ದಪಂ | ಅಭಿವಿಂಧ್ಯಮಿವೇಶ್ವರಂ - ಸೇವೇತೇತಿ ಸಂಬಂಧಃ | ಅಭಿಲಷ್ಯಂ–
ದೂರದತ್ತಣಿಂ ಉನ್ನತತ್ವದಿಂ ಲಕ್ಷ್ಯತೇ-ಕಾಣಲ್ಪಡುತಿದ್ದೀತು ವಿಂಧ್ಯಪರ್ವತಂ | ಯಿಾ ಪ್ರಕಾರ
ದಲ್ಲಿ ಈಶ್ವರನುಂ ಬಹುಮಂದಿಯ ಮಧ್ಯದೊಳ್ ತ್ಯಾಗಶೌರ್ಯಾದಿಗಳಿಂದ ಅವಾಪ್ತ ಕೀರ್ತಿತ್ವ
ದತ್ತಣಿಂ ದೂರದಿಂದಲೇ ಕಾಣಲ್ಪಡುತಿದ್ದಾನು | ಸ್ಥಿರಮಿತಿ ವಿಂಧ್ಯಮುಂ ಅಚಲತ್ವದಿಂ ಸ್ಥಿರಂ |
ಈಶ್ವರನುಂ ಸ್ಥಿತಿಯತ್ತಣಿಂ ನಚಲತೀತಿ | ಪುಣ್ಯಮಿತಿ-ಪವಿತ್ರಂ ವಿಂಧ್ಯಂ | ಈಶ್ವರನುಂ ಪುಣ್ಯ
ಯೋಗದತ್ತಣಿಂ ಮಹಾಕುಲೋತ್ಪನ್ನನಪ್ಪುದಱಿಂ ಪುಣ್ಯಂ | ಖ್ಯಾತಮಿತಿ- ವಿಂಧ್ಯಂ ಜಗದ್ವಿ
ಖ್ಯಾತಂ | ಈಶ್ವರನುಂ ಸತ್ಪುರುಷಸೇವಿತಂ| ಏವಂ–ಈ ಪ್ರಕಾರದಿಂ ವಿಂಧ್ಯಸಮನಾದ ಈಶ್ವರನಂ|
ಸೇವೇತ–ಸೇವಿಸಬೇಕು | ಸಿದ್ಧಿಮನ್ವಿಚ್ಛನ್ ಇತಿ - ವಿಂಧ್ಯಮನಷ್ಟಮಹಾಸಿದ್ಧಿಗಳೊಳಭಿಲಷಿತ
ಮಾದ ಸಿದ್ಧಿಯನಪೇಕ್ಷಿಸಿ| ಈಶ್ವರನಂ ಲೋಕದ್ವಯೇಚ್ಛೆಯಿಂದ| ಶ್ಲಾಘ್ಯಂ–ಸ್ಪೃಹಣೀಯಮಾದ|
ವಿಂಧ್ಯಮಂ ಹೇಗೆ ಹಾಗೆ ಅಭಿಹಿತಗುಣನಾದ ಸ್ವಾಮಿಯು ಯೆಲ್ಲಿಯೆಯ್ದಲ್ಪಡುತಿದ್ದಾನು ಯೆಂದು
ಶಂಕಿಸಿ ಪೇೞ್ದಪಂ | ದುರಾಪಂ - ದುಷ್ಪ್ರಾಪಕನಾದೊಡಂ,| ಲೋಕೇ–ಯಿಾ ಜಗತ್ತಿನೊಳ್ |
ಉದ್ಯಮಿಾ ಪುರುಷಃ - ಉದ್ಯೋಗ(ಶೀಲನಾದ)ಪುರುಷಂ | ಯದ್ಯದ್ವಸ್ತು - ಆವಾವಧರ್ಮಾರ್ಥ
ಕಾಮಮೋಕ್ಷಾದಿಕಮಂ | ಅಭಿವಾಂಛತಿ - ಆಪೇಕ್ಷಿಸುತಿದ್ದಾನು ಬುದ್ಧಿಶಾಲಿ| ತತ್ತದಾಪ್ನೋತಿ-
ಆ(ದ) ದನೆ ಪಡೆದಪಂ | ಅದು ಕಾರಣದಿಂ ಪ್ರಾಜ್ಞಂ - ಆಭಿಗಾಮಿಕ ಗುಣೋಪೇತನಾದ
ಸ್ವಾಮಿ ಪ್ರಾಪ್ತ್ಯರ್ಥಮಾಗಿ ಉದ್ಯೋಗಿಪುದು| ಸ್ವಾಮಿಗುಣಂಗಳಂ ಪೇೞ್ದು ಅನುಜೀವಿಗುಣಂ
ಗಳಂ ಪೇೞ್ದಪಂ| ಆರಾಧಯಿಷುಃ| ಆರಾಧಿಸಲಿಚ್ಛಿಸುತ್ತೆ | ಸಮ್ಯಗಿತಿ–ನಿರುಪಚರಿತತ್ವದಿಂದ
ಅನುಜೀವಿ - ಸೇವಕಂ | ಮಹೀಪತಿಂ-ಸೇವ್ಯನೃಪನಂ ಮಾೞ್ಪುದು| ಇದನೆ ಸ್ಪಷ್ಟಮಾಗಿಪೇೞ್ದಪಂ
ಕುಲಂಆಭಿಜಾತ್ಯಮುಂ | ವಿದ್ಯಾನಾಮನನ್ತರೋಕ್ತ ವಿದ್ಯೆಗಳುಂ ಶ್ರುತಮುಂ ವಿದ್ಯಾವ್ಯತಿರಿಕ್ತಶ್ರುತ
ಮಲ್ಲುತ್ತ | ಸಮ್ಯಕ್ - ಜ್ಞಾನಪರ್ಯಂತಂಮಿಲ್ಲಿ ಗ್ರಾಹ್ಯಂ | ಔದಾರ್ಯಮುಬ್ಬುತ್ವಮುಂ,
ಶಿಲ್ಪಂ ಕಲಾಕೌಶಲಮುಂ, ವಿಕ್ರಮಃ — ವಿವಿಧಮಾಗಿ ಪ್ರತಿಪಕ್ಷಾಕ್ರಮಣ
ಧೈರ್ಯಮುಂ | — ಕಶ್ಚಿದ್ಧೀರೋಽಪ್ಯವಿಕ್ರಾಂತ್ಯಾ ಭವತೀತಿ ಭೇದಃ | ಏಭಿರನ್ವಿತವಪುಃ |

ತಚ್ಚಲಮಂ ಯಥೋಕ್ತಪ್ರಮಾಣಮೆ ಗ್ರಾಹ್ಯಂ | ಸತ್ವಂ – ವ್ಯಸನದೊಳಂ ಅಭ್ಯುದಯದೊಳಂ
ಅವಿಕಾರಿತ್ವಂ | ಬಲಂ–ಮಹಾಪ್ರಾಣತೆ | ಆರೋಗ್ಯಂ- ನಿರೋಗತ್ವಮುಂ | ಸ್ಥೈರ್ಯಂ–ಪ್ರತಿಷ್ಠಿ
ತತ್ತ್ವಮುಂ | ಶೌಚಮುಪಧಾಶುದ್ಧಿಯುಂ — ಯಥಾ ಶೌರ್ಯಭಾವಃ | ಏಭೀರನ್ವಿತಃ—
ಸಂಯುಕ್ತಂ | ಪೈಶುನ್ಯಂ | ಪಿಶುನತೆ| ದ್ರೋಹಂ–ವಿಶ್ವಾಸಘಾತುಕತ್ವಮುಂ | ಸಂಭೇದಃ – ನಿರಂ
ತರಮುಂ ಭೇದಶೀಲತೆ | ಶಾಠ್ಯಂ–ವಂಚಕತ್ವಮುಂ | ಲೌಲ್ಯಮಾಹಾರಾದಿಲೋಲುಪತ್ವಮುಂ |
ಅನೃತಂ–ಅಸತ್ಯಮುಂ | ತಾನ್ಯತೀತ್ಯಗಚ್ಛತೀತಿ | ಅವಱಿಂದರಹಿತನೆಂಬುದರ್ಥಂ | ಸ್ತಂಭಂ–
ಸ್ತಂಭತಾ, ಚಾಪಲಮಪ್ರತಿಷ್ಠಿತತ್ವಮುಂ | ಉಭಾಭ್ಯಾಂಽಹೀನಃ ಯಿಾಯೆರಡರಿಂ ಹೀನಂ |
ಚಕಾರದಿಂದ ಉಕ್ತಗುಣಂಗಳಿಂದ ಯುಕ್ತನಾದ ಆವಸೇವಕಂ – ಯಿಾ ದೋಷರಹಿತಂ | ಆತಂ
ಸೇವನಮಂ ಮಾಡಲು ಯೋಗ್ಯನಾಗುತಿದ್ದಾನು | ಸೇವಾಫಲಸಂಯೋಗದತ್ತಣಿಂ ಇತರನಾದೊಡೆ
ಯೋಗ್ಯನಲ್ಲುತ್ತ, ಫಲಪ್ರಯಾಸಮಪ್ಪುದಱಿಂ | ಅಲಂಕಾರಭೂತಮಾದ ಸೇವಕಗುಣಂಗಳಂ
ಪೇೞ್ದಪಂ | ದಕ್ಷತಾ–ಕೌಶಲಕಾರಿತ್ವಮುಂ | ಭದ್ರತಾ–ಭದ್ರಕಾರಿತ್ವಮುಂ | ದಾರ್ಢ್ಯಂ – ಸ್ಥಿರ
ಸ್ನೇಹಮುಂ | ಕ್ಷಾಂತಿಃ–ಕ್ಷಮೆಯುಂ | ಕ್ಲೇಶಸಹಿಷ್ಣುತಾ–ಕ್ಷುಧಾವಾತಾತಪಾದಿ ಸಹಿಷ್ಣುತೆ |
ಸಂತೋಷಃ-ಅವಿಷಾದಿತ್ವಮುಂ| ಶೀಲಂ-ಸ್ವಭಾವಮುಂ| ಉತ್ಸಾಹಃ, ಶೌರ್ಯಮಂ| ಅಮರ್ಷಂ–
ದಾರ್ಢ್ಯಮೆಂದು, ಏತೇ ಕೌಟಲ್ಯಕೃತಲಕ್ಷಣಂಗಳ್ | ಏತೇ–ಗುಣಂಗಳ್| ಮಂಡಯತಿ–ಅನುಜೀ
ವಿಯನಲಂಕರಿಸುತಿದ್ದಾವು | ಗುಣಂಗ(ಳೊ)ಳ್ ಇವು ಪ್ರಧಾನಂಗಳ್ | ಅದಱಿಂ ಸಂಪಾದಿಸಲ್ತ
ಕ್ಕುವು | ಪ್ರಧಾನಾನನ್ತರಗುಣಮಂ ಪೇೞ್ದಪಂ | ಅಥಾರ್ಥಾಜೀವಲೋಕಮಂ ದುಷ್ಕರಮಾದ
ಅರ್ಥಶೌಚಂ ಚ ಇವರಿಂ ಅವ್ಯತಿರಿಕ್ತಮಾದೊಡೆ ವಿಶ್ವಾಸಮುಂ ಪುಟ್ಟದು ಎಂಬುದರ್ಥಂ | ಅರ್ಥ
ಶೌಚಪರೋನಿತ್ಯಂ ಅರ್ಥಶೌಚಪರನಾಗಿ ನಿತ್ಯಮುಂ ಅನಂತರೋಕ್ತಗುಣಂಗಳಿಂದ ಸಮನ್ವಿತ
ನಾಗಿ | ಭೂತಯೇ-ಭೂತ್ಯರ್ಥಮಾಗಿ | ಭೂತಿಸಂಪನ್ನಂ ಪ್ರಚುರಕೋಶಪ್ರಕೃತಿಯುಂ ಸಾಧುವ
ಹಣ ಹೇಗೋ ಹಾಗೆ | ವಿಶ್ವಾಸಯೇತ್-ತನ್ನೊಳ್ ವಿಶ್ವಸ್ತನಂ ಮಾೞ್ಪುದು | ವಿಶ್ವಸ್ತನತ್ತಣಿಂ
ಸೇವಾಫಲಮಪ್ಪುದೆಂದು ಭಾವಂ | ಅನುಜೀವಿವೃತ್ತಮಂ ಪೇೞ್ದು ಸೇವಾಧರ್ಮವಿಷಯಮಂ
ಪೇೞ್ದಪಂ | ಪ್ರವಿಷ್ಟ (ಇತಿ) ಸಹಿತದ್ವಾರದಿಂ ರಾಜಸಭೆಯಂ ಪ್ರವೇಶಿಸಿ,| ಸಮ್ಯಗಿತಿ - ಪ್ರತಿ
ಹಾರನಿರ್ದಿಷ್ಟಸ್ಥಾನದೊಳ್ ತಿಷ್ಠೇ-ವಕ್ಷ್ಯಮಾಣನ್ಯಾಯದಿಂ! ಸುವೇಷವಾಗಿತಿ-ನಿರ್ಮಲಾನುದ್ಧತ
ನೈಪಥ್ಯಮನುಳ್ಳವನಾಗಿ | ಯಥಾಕಾಲಂ-ಉಪಾಸನಾಕಾಲಾನತಿಕ್ರಮದಿಂ | ಉಪಾಸೀತ–ಸೇವಿ
ಸಬೇಕು | ರಾಜಾನಂ ವಿನಯಾನ್ವಿತನಾಗಿ | ಪ್ರಶ್ರಯವಾನಿತಿ. ತತ್ರಚ-ಆತನೊಳ್ ಯತ್-ಆವು
ದೊಂದು ನ ಕರ್ತವ್ಯಂ-ಮಾಡಲ್ತಕ್ಕುದಲ್ಲ! ತತ್ ಅದಂ ಪೇೞ್ದಪಂ| ಪರಸ್ಯ ಅನ್ಯಸೇವಕಸ್ಥಾನಮಂ|
ಪ್ರದೇಶನುಂ | ಕ್ರೂರಭಾವಮಂ ಔದ್ಧತ್ಯಮಂ–ಅಸಹ್ಯವೇಷತ್ವಮಂ | ಮತ್ಸರವಿದ್ಯಾಶೌರ್ಯಾದ್ಯ
ಸಹನತ್ವಮುಂ | ಅನುಜೀವಿ ತ್ಯಜಿಸಬೇಕು | ವಿಗೃಹ್ಯ–ವಿಗ್ರಹಮಂ ಮಾಡಿ | ಜ್ಯಾಯಸಾ ಅಧಿಕ
ನೊಡನೆ | ಕಥಂ–ಹೇಗೆ | ರಾಜಸಭಾ ಪ್ರವಿಶೇತ್ | ಯಸ್ಮಾತ್ ಸ್ಮಯತ್? ವಿಗ್ರಹೀತಃ ಸೇವಾ
ವಿಘಾತಮಂ ಮಾೞ್ಪಂ – ವಿಪ್ರಲಂಭಃಜನವಂಚನಮಂ ಮಾಯೆಯಂ | ಸ್ತೇಯಂ – ತೃಣಾದಿ
ಚೌರ್ಯಮಾದೊಡಂ | ದಂಭಂ–ಕೂಟಾದಿಯಿಂ ವ್ಯವಹಾರಮಂ ವರ್ಜಿಯೇತ್ | ತಥಾ ಆ
ಪ್ರಕಾರಮಾಗಿ | ಜ್ಞಾತಂ–ತಿಳಿಯಲ್ಪಟ್ಟ | ತಂ – ಆ ಸೇವಕನಂ | ಸ್ವಾಮಿಯುಂ ವಿಶ್ವಸಿಪಂ |
ತಥಾ–ಹಾಗೆ | ಪುತ್ರೇಭ್ಯಶ್ಚ – ಸ್ವಾಮಿಪುತ್ರರಿಗೊಸ್ಕರಲುಂ, ಸ್ವಾಮಿವಲ್ಲಭ(ರಿ)ಗೋಸ್ಕರಲುಂ |
ನಮಸ್ಕುರ್ಯಾತ್ – ನಮಸ್ಕರಿಸಬೇಕು | ತೇಽಪಿ – ಅವರುಂ | ವಿನಯದಿನಾರಾಧಿಸಲ್ಪಟ್ಟು

ಸ್ವಾಮಿಯನನುಕೂಲಮಾಡುತಿದ್ದಾರು | ನ ನರ್ಮ ಸಚಿವೈರಿತಿ–ನರ್ಮಸಚಿವರ್-ವಿದೂಷಕಾದಿ
ಗಳ್ | ಆರೊಡನೆ ಸ್ವಾಮಿ ನರ್ಮಾಲಾಪಮಂ ಮಾಳ್ಪಂ । ತೈಸ್ಸಹ-ಅವರೊಡನೆ ಕಿಂಚಿತ್ತಾ
ದೊಡಂ ಅಪ್ರಿಯಮಂ ನವದೇತ್ – ನುಡಿಯಲಾಗದು| ಹಿಯಸ್ಮಾತ್, ಆವುದಾನೊಂದು ಕಾರ
ಣದತ್ತಣಿಂ | ತೇऽಪಿ-ಅವರುಂ ಪ್ರಿಯವಾದಿಗಳಾಗಿ ರಾಜಸಭೆಯೊಳ್ ಪ್ರಹಾಸದಿಂದಲೆ ಮರ್ಮ
ಭೇದಕರಾಗುತಿದ್ದಾರು-ಭರ್ತುರನ್ವಿತಿ ಭರ್ತುಃ–ಸ್ವಾಮಿಯ| ಅಶ್ವಾಸನೆ–ಆಸನ ಸಮೀಪದೊಳ್
ಸ್ಥಿತಃ–ಇರುತ್ತೆ | ದೃಷ್ಟಿಂವಾನ್ಯತ್ರನಿಕ್ಷಿಪೇತ್ | ದೃಷ್ಟಿಯವಿಡಬಾರದು | ಬ್ರೂಯಾತ್–ಕಿಮಿದಂ
ಸ್ವಾಮಿಾತಿ | ಏನುಸ್ವಾಮಿಯೆಂದು ಅಡಿಗಡಿಗೆ ಸ್ವಾಮಿಯ ಮುಖಮಂ ನೋಡುತ್ತೆ ತಿಷ್ಠೇತ್–
ಇರಬೇಕು, ಸಾವಧಾನತ್ವ ಪ್ರತಿಪಾದನಾರ್ಥಮಾಗಿ ಎಂದು| ಕೋऽತ್ರತ್ರ್ಯಹಮಿತಿ| ಬ್ರೂಯಾತ್-
ಸಮ್ಯಗಾಜ್ಞಾಪಯೇತ್ ಇತಿ – ಆಜ್ಞಾಂಚಾವಿತಥಾಂ ಕುರ್ಯಾತ್-ಯಥಾಶಕ್ತ್ಯವಿಲಂಬಿತಂ |
ಸ್ವಾಮಿನಾ-ಸ್ವಾಮಿಯಂ|ಕೋತ್ರೆತಿಪೃಷ್ಟೇ-ಇಲ್ಲಿಯಾರೆಂದುಕೇಳಲ್ಪಡುವಾತನು-ಇಲ್ಲಿಯಿದೇನೆಂದು
ಬ್ರೂಯಾತ್-ನುಡಿಯಬೇಕು| ಆಜ್ಞೆಯಂ ಸತ್ಯಮಾಗಿ ಮಾಡಬೇಕು| ಯಥಾಶಕ್ತಿ-ಶಕ್ತ್ಯನತಿಕ್ರಮ
ದಿಂದ ವಿಲಂಬಮಂ ಮಾಡದೆ ಮರಳಿಯುಂ ವರ್ಜನೀಯಮನೆ ಪೇಳ್ದಪಂ| ಉಚ್ಚೈಃ-ಸಭೆಗಳೊಳ್
ಅಕಾರಣಮಾಗಿ ಅತಿಹಾಸಮಂ ಮಾಡಲಾಗದು | ಉಚ್ಚೈಷ್ಠೀವನಂ – ಶ್ಲೇಷ್ಮೋತ್ಕ್ಷೇಪಮಂ
ಕುತ್ಸಿತಮಾದ ಅನ್ಯಮಾದ ಅನ್ನಪಾನಾದಿಗಳಿಂ ತಥಾಜೃಂಭಣಂ ಆಕಳಿಕೆಯಂ ಗಾತ್ರಭಂಗಮಂ-
ಪರ್ವಸ್ಫೋಟನಮಂ ವರ್ಜಯೇದಿತಿ ಪ್ರತೀತಂ | ಸೇವಾವಸರದೊಳ್ ಹೇಗೆ ಅಭಿಲಾಷೆ ಹಾಂಗೆ
ಪೇಳ್ದಪಂ | ಪ್ರವಿಶ್ಯೇತಿ | ಸಾನುರಾಗನಾದ ಸ್ವಾಮಿಯ ಚಿತ್ತಮಂ ಪ್ರವೇಶಿಸಿ ಮಿಕ್ಕ ಸ್ವಾಮಿ
ಚಿತ್ತಜ್ಞರಿಗೆ ಸಮ್ಮತನಾಗಿ ಸ್ವಾಮಿಚಿತ್ತಜ್ಞತ್ವದಿಂ| ಸಮರ್ಥಯಚ್ಚ ತತ್ಪಕ್ಷಮಿತಿ| ಸ್ವಾಮಿಪಕ್ಷಮನೆ|
ಸಾಧುಭಾಷೇತ | ಪಕ್ಷಾಂತರಮಂ ಪೇಳ್ದಪಂ | ತನ್ನಿಯೋಗೇನ ಸ್ವಾಮಿನಿಯೋಗದಿಂ ಸುನಿರ್ವಿ
ತಾರ್ಥಮನೆ ಬ್ರೂಯಾತ್ | ಸುಖಪ್ರಬಂಧಗೋಷ್ಠಿಗಳೊಳ್ ಅಥವಾ ಶಾಸ್ತ್ರೋಕ್ತಲಕ್ಷಣಂಗಳಾದ
ವಾದಂಗಳಿಂದ ದೇವಾದಿಗಳ ಮಧ್ಯದೊಳ್ ತತ್ಸಮತಮನೆ ಬ್ರೂಯಾತ್ | ಎಂದು ಆ ಭಾಷ
ಣೀಯಮಂ ಪೇಳ್ದಪಂ ಜಾನನ್ನಪೀತಿ–ವಿಶೇಷಮಾಗಿ ತಿಳಿದೊಡಂ ಆಪಹವಾಕ್ಕಿನಿಂದ ಸ್ವಾಮಿ
ನಿರುತ್ತರನಪ್ಪಂತರ್ | ಅದಂ ನಬ್ರೂಯಾತ್ | ಪ್ರವೀಣೋऽಪಿ–ಅಭಿಭಾಷಣಕುಶಲನಾದೊಡಂ |
ಮೇಧಾವೀ–ಪ್ರಾಜ್ಞನಾದೊಡಂ | ವರ್ಜಿಪುದು | ಸ್ವಾಮಿವಿಷಯಾಭಿಮಾನದಿಂ ಸ್ವಾಮಿನಿರುತ್ತರ
ನಾಗಿ ಮಾಡಲ್ತಕ್ಕವಂ| ಎಂದು ಭಾವಂ | ವಿದ್ಯಾಶಿಲ್ಪವಿಷಯದೊಳ್ ಸ್ಪಷ್ಟನಾದವನಾವುದಂ
ನುಡಿಯಬೇಕು ಅದಂ ಪೇಳ್ದಪಂ | ಉಚ್ಚೈರಿತಿ – ಉಚ್ಚೈಃಅತಿಶಯದಿಂ| ಎತ್ತಲಾದರೂ
ಜಾನೀಯಾತ್–ತಿಳಿದೊಡಂ | ತದಪಿಹಾಗಾದೊಡಂ ನೀಚೈಃ ಕೀರ್ತಯೇತ್ | ಇತಿ ಸ್ವಲ್ಪಮಾತ್ರ
ತಿಳಿಯುತಿದ್ದೇನು ಎಂದು ಬ್ರೂಯಾತ್ – ನುಡಿವುದು | ಕರ್ಮಣಾತು ಕ್ರಿಯೆಯಿಂದಲಾದೊಡೆ
ವೈಶಿಷ್ಟ್ಯಂ-ಉಚ್ಚೈಸ್ಸರ್ವತ್ವಮಂ| ಕಥಯೇತ್-ತೋರಬೇಕು| ನವಾಚಾ! ಯೆಲ್ಲಿ ವಿನಯಾನ್ವಿತಃ-
ಪ್ರಶ್ರಯಯುಕ್ತನಾಗಿ ಜ್ಞಾನಾತಿಶಯ ಪ್ರಕಟನಮಂ ಮಾಳ್ಪುದು| ಎಂದು ಭಾವಂ| ಅಪೃಷ್ಟಕ್ಕಾ
ದೊಡಂ ಅಕಾರಣದತ್ತಣಿಂ ಭಾಷಣಮಂ ಪೇಳ್ದಪಂ| ಆಪದಿ ಮಾಂಗಲ್ಯಂ ವಚನೀಯಮಿತಿ
ಪ್ರಿಯಮಿತಿ | ಪ್ರಿಯಮಾಗಿ ಆವುದು ಪಥ್ಯಮೊ ಹಿತಮೆಂಬುದರ್ಥಂ ಸತ್ಯಂ| ತದೇವ-ಆದನೆ|
ಬ್ರೂಯಾತ್ಧರ್ಮಾರ್ಥಮೇವಚ| ಧರ್ಮ-ದತ್ತಣಿನಧರ್ಮ-ದತ್ತಣಿನನಪೇತಮಾದ| ಅಶ್ರದ್ಧೇಯಂ-
ವಿಶ್ವಾಸಮಂಮಾಡಲು ಶಕ್ಯಮಲ್ಲದ ಅಸಭ್ಯಮಶ್ಲೀಲಮಂ ಪರೋಕ್ಷಂ ಯದಶ್ರದ್ಧೇಯಮಿತಿ
ಸಂಬಂಧಃ | ಕಟು-ಕರ್ಣಕಟುಕಂ | ತ್ಯಜೇತ್–ನುಡಿಯಬಾರದೆಂಬುದರ್ಥಂ | ವರಾ"ಪ್ರವಿಶ್ಯ

ಸಾನುರಾಗಸ್ಯ ಚಿತ್ತಂ ಚಿತ್ತಜ್ಞಸಂಮತಃ ||" ಎಂಬ ನ್ಯಾಯದಿಂ ಪರಾರ್ಥಮಾಗಿ ಸ್ವಾಮಿಯು
ವಿಜ್ಞಾಪಿಸಿ ಸಾಧಿಸಬೇಕು ಎಂದು ಸಂಬಂಧಂ| ದೇಶಕಾಲಜ್ಞ ಇತಿ| ಆವದೇಶದೊಳಿರ್ದು ಸ್ವಾಮಿಯು
ಕಾರ್ಯಮಂ ಮಾಳ್ಪಂ, ಆವಕಾಲದೊಳ್ ಮಾಳ್ಪಂ | ತೌಜಾನಾತೀತಿ | ಅವೆರಡನುಂ ತಿಳಿದ
ಸೇವಕಂ ಆದೇಶದೊಳಂ| ಆಕಾಲದೊಳಂ ಪರಾರ್ಥಮಂ ಸಾಧಿಸಬೇಕು | ಸ್ವಾರ್ಥಂಚ |
ಆತ್ಮೀಯ ಕಾರ್ಯಂ| ಕುಶಲನಾದ ಅನ್ಯನಿಂ| ಸ್ವಾರ್ಥಕುಶಲನಾದ ಅನುಜೀವೀ ಕಾರಯೇತ್ |
ಮಾಡಿಸಬೇಕು | ಸ್ವಯಮರ್ಥಕಾರಿಣಾ – ಆತ್ಮಹಿತಕಾರಿಯಾದ ತನ್ನಿಂದ ಅಲ್ತು । ಪ್ರತ್ಯಕ್ಷ
ಪ್ರಾರ್ಥನಾಭಂಗದಿಂ ವೈಲಕ್ಷಣ್ಯಮಂ ಪಡೆವಂ| ತಥಾ-ಹಾಗೆ| ಗುಹ್ಯಂ ಕರ್ಮಚ ಗೋಪ್ಯಮಾದ
ಕರ್ಮಚ–ಶತ್ರುವಿಷಯದೊಳ್ ಅಭಿಚಾರಾದಿ ಕರ್ಮಮಂ ಅನ್ಯಸ್ವಾಮಿಯಂ | ಅಪ್ರಕಾಶ್ಯಮಂ–
ಪ್ರಕಾಶಿಸಲಾಗದು | ಆಗ ಮಂತ್ರಭೇದಮಪ್ಪುದೆಂದು ಕೌಟಲ್ಯಂ | ಹಾಗೆ ಸ್ವಾಮಿ ರಾಜ್ಯ
ಧ್ವಂಸಾದಿಗಳಂ, ವಿನಾಶಮಂ, ಮರಣಮಂ ಮನಸ್ಸಿನಿಂದಲುಂ ಚಿಂತಿಸಲಾಗದು | ನುಡಿದೊಡೆ
ವೈಪರೀತ್ಯಮಕ್ಕುಂ| ಸ್ತ್ರೀಭಿರಿತಿ| ಸ್ವಾಮಿಸ್ತ್ರೀಯರೊಡನೆಯುಂ, ತದ್ದರ್ಶಿಗಳಾದ ಗಣಿಕಾಧ್ಯಕ್ಷಾದಿ
ಗಳೊಳಂ ವೊಡನೆ ಸಂಸರ್ಗಮಂ ಬಿಡುವುದು | ಕಾಮೋಪಧಾಶುದ್ಧನೆಂಬ ಶಂಕಾನಿವೃತ್ಯರ್ಥಮಾಗಿ|
ತಥಾ-ಹಾಗೆ | ಗುಣಸಂಪನ್ನನಾದೊಡಂ| ಪ್ರಜ್ಞನಾದೊಡಮನುಜೀವಿ ತದ್ಗುಣಸ್ಪರ್ಧೆಯಂ
ಮಾಡಲಾಗದು| ಅನ್ಯದ್ವೇಷ್ಯೋ ಭವತೀತಿ| ರಾಗಾಪ(ಇತಿ) | ಕರ್ಮ ಕಾರಣ ಭಾವದೊಳ್
ರಾಗಾಪರಾಗಂಗಳ್ ತಿಳಿಯಲ್ ಶಕ್ಯಮಾಗವು | ಏತದುಂ ಕಾಣ್ಬುದೆಂದೊಡೆ| ಇಂಗಿತಾಕಾ
(ಇತಿ) ಇಂಗಿತ ಅನ್ಯಥಾವೃತ್ತಿ ಆಕಾರಗ್ರಹಣಮಾಕಾರ ಇತಿ ಕೌಟಲ್ಯಃ–ಇಂಗಿತ ತಿಳಿಯಲ್ಪಡು
ತಿದ್ದೀತು | ಹೃದಯಸ್ಥಿತಮಾದ ಅರ್ಥಂ ಆವುದದುನದು ಇಂಗಿತಂ | ಇಗಿ–ಗತ್ಯರ್ಥದೊಳ್
ಪಠಿಸಲ್ಪಟ್ಟುದು | ಸರ್ವೇ ಗತ್ಯರ್ಥಾಜ್ಞಾನಾರ್ಥಾ ಇತಿ ವಚನಾತ್ ! ಅದು ಅನ್ಯಥಾತ್ವಂ
ಪೂರ್ವ-ಪ್ರಕೃತದತ್ತಣಿಂ ಅನ್ಯಥಾತ್ವಂ! ಆಕೃತಿಗ್ರಹಣಮಾಕಾರಂ ಆಕೃತ್ಯಂತರದ ಗ್ರಹಣಂ
ಪೂರ್ವಪ್ರಕೃತಮಾದಪ್ರಸಲನಾದಿಕಮಾದ ಪ್ರಕೃತಿಯ | ಆಕೃತ್ಯಂತಗ್ರಹಣಂ ಆಕಾರಂ
ಕ್ರಿಯೆಗೆ ಅನ್ಯಥಾತ್ವಮಿಂಗಿತಂ | ಸ್ವಾಮಿಯ ಅನ್ಯಥಾತ್ವಮಾಕಾರಂ ಎಂದು ಸಮುದಾಯರ್ಥಂ
ಇಂಗಿತಾಕಾರತತ್ವಜ್ಞನಾದ ಅನುಜೀವಿಯೆಂದು ರಾಗಲಿಂಗಂಗಳಿಂಗಿತಾಕಾರಂಗಳಿಂ ಪೇಳ್ದಪಂ|
ದೃಷ್ಟ್ವಾಪ್ರಕಾಣುತಲೆ-ಪ್ರಸನ್ನನಾಗಿ ಆಕಾರಲಿಂಗಮಾದ ಕಾರ್ಯಮಂ ಗ್ರಹಿಸುತದ್ದಾನು ಆದರದಿಂ|
ಪೂರ್ವವೃತ್ತಮಾದ ವಾಕ್ಯಗ್ರಹಣದೊಳ್ಅನ್ಯಥಾವೃತ್ತಿಲಕ್ಷಣಮಿಂಗಿತಂ| ದಿಶತಿ-ತೋರುತಿದ್ದಾನು
ಆಸನಮಂ ಸಮೀಪದೊಳ್ ಕುಶಲಮಂ ಕೇಳುತಿದ್ದಾನು ಎಂದು| ಇದುಂ ಅನ್ಯಥಾವೃತ್ತಿ ಲಕ್ಷಣ
ಮಾದ ಇಂಗಿತಮೆ | ವಿವಿಕ್ತದರ್ಶನದೊಳ್ ನ ಶಂಕತೆ- ಶಂಕಿಸಂ | ವಿಶ್ವಾಸಯೋಗದಿಂ ತದರ್ಥ
ಮನು ಜೀವಿಗುಣಂಗಳ್ | ವಿಷಯಂಗಳ್ | ತತ್ಕೃತಾಮಿತಿ | ಅನುಜೀವಿಕೃತಾಶಂಕೆಯಂ ಇಷ್ಟ
ರೊಡನೆ ಕೇಳುತಿದ್ದಾನು | ಅವಮಾನಮಂಮಾಡದೆ ಯಿದ್ದಾನು | ಇದು ಇಂಗಿತಂ | ಶ್ಲಾಘ್ಯಂ-
ಶ್ಲಾಘನೀಯಮಾದ ಅನ್ಯತ್ ಕೀರ್ತಿಸಲ್ಪಡೆ ಆವ ಅನುಜೀವಿಯಂ ಸ್ವಾಮಿಯು ಕೊಂಡಾಡುತಿ
ದ್ದಾನು | ಅನ್ಯರಿಂ ಕೊಂಡಾಡಲ್ಪಟ್ಟ ಆವ ಅನುಜೀವಿಯಂ ಕೊಂಡಾಡುವಂ | ಹೀಗೆ ಅಹುದು |
ನಿನ್ನಂತೆ ಯಿಾತನೂ ಎಂದು | ಕಥಾಂತರಂಗಳನ್ಯರಿಂ ಮಾಡಲ್ಪಡೆ ಸ್ಮರತಿ-ಯಿಾತನಹಾಗೆ
ಮತ್ತೊರ್ವಂ ವ್ಯವಹರಿಸಲರಿಯನೆಂದು ಪ್ರಹೃಷ್ಟನಾಗಿ ನುಡಿದೊಡೆ ಗುಣಂಗಳಂ | ತಥಾಸಹತೇ–
ಪಥ್ಯಮಂ ನುಡಿಯಲ್ಪಟ್ಟು ಅಲ್ಲಿ ಮಾಡಲ್ಪಟ್ಟ ನಿಂದೆಯಂ | ನೀನು ಅನಾತ್ಮಜ್ಞನು ವಿಜಿಗೀಷು
ಗುಣರಹಿತನು ಇತ್ಯಾದಿಕಮಂ ಅನುಮನ್ಯತೇ-ಅಂಗೀಕರಿಸುತಿದ್ದಾನು | ಅನುಜೀವಿಯುಂ ನುಡಿಯ

ಲ್ಪಟ್ಟ ಕಾರ್ಯಮುಂ, ಬಹುಮನ್ಯತೇ - ಶ್ಲಾಘನಮುಂ ಮಾಡುತಿದ್ದಾನು | ಅನುರಕ್ತ ಸ್ವಾಮಿಲಕ್ಷಣಮುಂ ಪೇಳ್ವಪಂ | ವಿರಕ್ತಸ್ವಾಮಿಲಕ್ಷಣಮುಂ ಪೇಳ್ವಪಂ| ಉಪ (ಇತಿ) ಅದ್ಭುತಮಾದ ಉಪಕಾರಂಗಳೊಳ್ ಅನು ಜೀವಿಕೃತಂಗಳೊಳ್ ವಿರಕ್ತತ್ವದತ್ತಣಿಂ ಮಾಧ್ಯಸ್ಥ್ಯಮನೆ ತೋಱುತ್ತೆ ಅನುರಾಗಮುಂ ಪ್ರಕಟಿಸದೆ ಇದ್ದಾನು | ತತ್ಕೃತಮಾದ ಕರ್ಮಮುಂ ಅನ್ಯಕೃತಮೆಂದು ನುಡಿಯುತಿದ್ದಾನು | ಪಾರಿತೋಷಿಕಮುಂ ಕೊಡದೆ ಯಿರುತಿರಲು | "ಏಭಿರ್ಯೋಗೈರ್ವಿಜಾನೀಯಾತ್-ಅನುರಕ್ತಂ ಮಹೀಪತಿಂ|| ವಿರಕ್ತಂ ವಿಪರೀತೈಸ್ತು ತತಃಕಾರ್ಯಂ ವಿಚಿನ್ತಯೇತ್||" ಇತಿ | ವಿಪಕ್ಷಂ-ಶತ್ರುಭೂತನಂ ಉತ್ಥಾಪಯತಿ - ವಿಪಕ್ಷಾದಿಗಳಿಂ ಮಾಡಲ್ಪಟ್ಟ ತದ್ವಿನಾಶಮುಂ ಉಪೇಕ್ಷಿಸಿ "ಯಿಾತಂ ವಿನಾಶಮನೆಯ್ದಲಿ" ಎಂದು | ಕಾರ್ಯೇಚ ತತ್ಸಾಧ್ಯಮಾದ ಕಾರ್ಯಮುಪಸ್ಥಿತಮಾಗೆ ಆಶಾಂವರ್ದ್ಧಯತಿ | ಆಶಾಭಿವೃದ್ಧಿಯುಂ ಮಾಡುತಿದ್ದಾನು | ಯಿಾ ಕಾರ್ಯನಿಷ್ಪತ್ತ್ಯನಂತರಂ ನಿನ್ನ ದಾರಿದ್ರ್ಯವಿಮೋಚನೆಯಂ ಮಾಡುವೆನೆಂದು | ಕಾರ್ಯಫಲಮುಂಟಾಗೆ ಅನ್ಯಥಾ ಕುರುತೇ | ಯಿಾ ಕಾರ್ಯಂ ನಿನ್ನಿಂ ಸಾಧಿತಮಲ್ಲ ಎಂದು ತಥಾ ಯದ್ವಾಕ್ಯಂ ಸ್ವಾಮಿ ಅನುಜೀವಿ ವಿಷಯದೊಳ್ ಒಂದಾನೊಂದು ಮಧುರವಾಕ್ಯಮುಂ ಪ್ರಯೋಗಿಸಿದೊಡಂ | ಅದು ಅರ್ಥನಿಷ್ಠುರಮೆ | ಯಥಾ ಹೇಗೆ ಎಂದೊಡೆ:—ಎಲೆ ಭದ್ರ! ನಮ್ಮಲ್ಲಿ ಪ್ರಿಯಹಿತೈಷಿಯಾದ ನಿನ್ನಿಂದ ವಿಪಕ್ಷಮುಪೇಕ್ಷಿಸಲ್ಪಟ್ಟುದು ಸಮಗ್ರಮಾದ ಯಶಸ್ಸಂ ಕೊಡಲು ಯೆಂದು ಮಧುರಮಾಗಿ ನುಡಿದೊಡೆಯು ವಿಪಕ್ಷದೊಳ್ ಪಕ್ಷಪಾತಿ ನೀನೆಂದು ಅರ್ಥಂ ವಿಪರೀತಂ|—ತಥಾಚ-ಹಾಗೆ ಅರ್ಥಸಂಪತ್ತುಗಳ್ ಅನುಜೀವಿಕೃತಂಗಳೊಳಾದೊಡಂ | ಕೇವಲಂ ಪರಿವಾದಾ೯ - ನಿಂದೆಗಳನೆ, ಮಾಡುತಿದ್ದಾನು| ತಥಾಹಾಗೆ ಅಕೋಪನಾದೊಡಂ| ತದ್ದರ್ಶನದೊಳ್ ಶಕ್ರನಹಾಗೆ ಆಗುತಿದ್ದಾನು| ತನ್ನನೀತನೇನನುಬೇಡದೆ ಇರಲಿಯೆಂದು ಕೇವಲಪ್ರಸನ್ನನಾದೊಡಂ | ನಿಷ್ಫಲನಾಗುತಿದ್ದಾನು | ಪ್ರಸಾದರೂಪಕಾರಣದಿಂದ ಆಕಸ್ಮಿತಮಾಗಿ ಆತನಂಕಾಣುತಲೆವ್ರಜತಿ|ಐದುತಿದ್ದಾನು|ರೂಕ್ಷಮಾಗಿ ಮರಳಿನೋಡುತ್ತಿದ್ದಾನು | ಏನುಕಾರಣ ಈತನು ತನ್ನ ದೃಷ್ಟಿಪಥಮನೆಯ್ದಿದನೆಂದು | ತಥಾ ಹಾಗೆ ಘಟಯತಿ | ಮರ್ಮಂಗಳನಾಸಮಂತಾತ್ ಸುತ್ತಲುಂ ಸ್ಪೃಶನ್ವಕ್ತಿ-ಸ್ಪರ್ಶಿಸುತ್ತೆ ನುಡಿಯುತಿದ್ದಾನು| ಹಾಸಸ್ಥಾನಮಾಗಿ ಅನುಜೀವಿಯಂ ತಿಳಿಯುತಿದ್ದಾನು| ಹಾಸ್ಯಮಂ ಮಾಡುತಿದ್ದಾನು ಎಂಬುದರ್ಥಂ | ತಥಾ ಹಾಗೆ ದೋಷಮಿಲ್ಲದಿರ್ದೊಡಂ ವೃತ್ತಿಚ್ಛೇದಮುಂ ಮಾಡುತಿದ್ದಾನು ವೃಥಾ | ಸಾಧೂಕ್ತಮಾದೊಡಂ ಅನು ಜೀವಿವಾಕ್ಯಂ ಅನ್ಯಥಾ ಸಮರ್ಥಯತಿ| ಅಸಾಧುಯೆಂದು ಯೋಜಿಸುತಿದ್ದಾನು | ಅಪರ್ವಣಿ - ಆಸ್ಥಾನದೊಳೆ - ತಥಾ ಭಂಗಮುಂ ಮಾಡುತಿದ್ದಾನು | ವಿರಸನಾಗುತ್ತೆ ಉದ್ವೇಜಿಪನೆಂಬುದರ್ಥಂ | ಉಪಾಸ್ಯಮಾನನಾದೊಡಂ ಶಯನದೊಳ್ ಸುಪ್ತಲಕ್ಷ್ಯೇಣ—ಸುಪ್ತವ್ಯಾಜದಿಂದ ಇರುತಿದ್ದಾನು | ಈತನ ಸೇವೆ ವ್ಯರ್ಥಮಾಗಿಪೋಗಲಿ ಎಂದು | ತಥಾ ಹಾಗ—ಅಲ್ಲಿ ಪ್ರಯತ್ನದಿಂದ ಆರಾಧಿಸಲ್ಪಟ್ಟೊಡಂ | ಸುಪ್ತನೋಪಾದಿ ಚೇಷ್ಟಿಸುತ್ತಲಿದ್ದಾನು | ತಾನಱಿಯೆನು-ಆವಾಗ ನೀನು ಬಂದಿ ?-ಯೆಂದು ಸುಪ್ತನೋಪಾದಿ ನುಡಿವುತಿದ್ದಾನು | ಹಾಗಲ್ಲದಿರ್ದೊಡೆ ದೀರ್ಘನಿಶ್ವಾಸಮುಂ ಬಿಡುತಿದ್ದಾನು | ತತ್ಸೇವೆಯು ನಿಷ್ಫಲಮುಂ ಮಾಡಲು ಇತ್ಯಾದಿಭ್ಯಃ ಈ ಉಕ್ತಮಾದುದಂ ಆದಿಯೊಳಿಟ್ಟು(ಕೊಂಡು) ಅನ್ಯಮಾದ ಅನುರಕ್ತಲಕ್ಷಣಮುಂ ಲೋಕದಿಂ ತಿಳಿವುದು | ಅನುರಕ್ತ ಸ್ವಾಮಿಯತ್ತಣಿಂದ ಅನುಜೀವಿ ವೃತ್ತಿಂ ಜೀವನಮುಂ ಸಮಿಾಹಿತ | ಅಪೇಕ್ಷಿಪುದು | ಸಮಿಾಹಿತಪ್ರಾಪ್ತಿಗೋಸುಗ ವಿರಕ್ತನಂ ತ್ಯಜಿಪುದು | ನಿಷ್ಫಲತ್ವದತ್ತಣಿಂ ಅನರ್ಥಹೇತುತ್ವದತ್ತಣಿಂ ಇದಕ್ಕಪವಾದಮುಂ ಪೇಳ್ದಪಂ | ನಿರ್ಗುಣಂ—ಹೀನಗುಣನಾದೊಡಂ

ಭರ್ತಾರಂ – ಸ್ವಾಮಿಯಂ | ಆಪತ್ತುಗಡಸಿದಾತ (ನಂ) ನಪರಿತ್ಯಜೇತ್ - ಪರಿತ್ಯಜಿಸಲಾಗದು | ಯಸ್ಮಾತ್—ಯಾವುದಾನೊಂದು ಕಾರಣದತ್ತಣಿಂ ಆತನನಿಂ ಪರತರಂ ಶ್ರೇಷ್ಠನು | ನಾಸ್ತಿ-ಇಲ್ಲ | ಆವನಂ ಆಪತ್ತುಗಳೊಳ್ ಉಪತಿಷ್ಠತೇ—ಸೇವಿಪಂ | ಅದು ಕಾರಣಂ ಕೃತಜ್ಞನಪ್ಪುದಱಿಂದ ಯಿಾತಂ ಬಹೂಪಕರಿಸುವಂ ಆಪತ್ತುಗಳೊಳ್ | ಉಪಕಾರಕ್ಕೆ ಗುಣಮುಂ ಪೇಳ್ದಪಂ | ಸ್ವಸ್ಥವೃತ್ತೀನಾಂ—ಆಪತ್ತುಗಳ ಅಭಾವದಿಂದ ನಿರಾಕುಲಮಾದವೃತ್ತಮನುಳ್ಳ ಅರಸುಗಳಿಗೆ ಸತ್ವಾಢ್ಯರಾದ ಅನುಜೀವಿಗಳ್ ಅಭಿಲಷತ್ವಮನ್ನೈದರು ಏನೆಂದು ಸತ್ವಾಢ್ಯರ್ ಅಹುದೋ ಅಲ್ಲವೋ ಯೆಂದು ಸ್ವಾಮಿಗೆ ವಿಪಕ್ಷರೊಡನೆ ವಿರೋಧದೊಳ್ ಸ್ವಾಮಿ ರಕ್ಷಿಸಲ್ಪಟ್ಟನೆಂದು ಶೇಷಾನುಜೀವಿಮಧ್ಯದೊಳ್ ಆತನ ನಾಮವು ಅತಿರಿಚ್ಯತೇ | ಶೌರ್ಯದಿಂದ ಅತಿರಿಕ್ತಮಾಗುತಿದ್ದೀತು | ಇದನೆ ಸಮರ್ಥಿಸುತ್ತೆ ಪೇಳ್ದಪಂ | ಶ್ಲಾಘ್ಯಾಅಭಿಲಷಣೀಯಮುಂ, ಆನಂದನೀಯಮುಂ ಮಹತ್ತಾದ ಸ್ವಾಮ್ಯಾದಿಗಳ ಉಪಕಾರಿತ್ವ | ಆಪತ್ಸುಪರಿತ್ರಾಣಾದಿ ಕಾಲಂಗಳೊಳ್ ಪ್ರಸ್ತಾವದೊಳಂ ಉಭಯದೊಳಂ ಕಲ್ಯಾಣಮಾದ ಅಭ್ಯುದಯಮುಂ ಆದಕ್ಕೆ ಮಾಡುತಿದ್ದೀತು. ಸ್ವಲ್ಪಮಾದೊಡಂ ಸುಮಹೋದಯಂ ಸದ್ಯಗುದಯಸಂಪನ್ನನೆಂಬುದರ್ಥಂ | ಯಸ್ಮಾತ್-ಆವುದೊಂದು ಕಾರಣದತ್ತಣಿಂ ಮಹತ್ತಾದ ಸ್ವಾಮ್ಯುಪಕಾರಂ ಕರ್ತವ್ಯಮೆಂದು |

ಕೇವಲಾನು ಜೀವಿವೃತ್ತಮುಂ ಪೇಳ್ದು ಬಂಧುಮಿತ್ರಸಾಧಾರಣ ವೃತ್ತಮುಂ ಪೇಳ್ದಪಂ | ಅಕಾರ್ಯೇಷು—ಶಾಸ್ತ್ರ ನಿಷಿದ್ಧಾಚರಣಂಗಳೊಳ್ | ಪ್ರತಿಷೇಧಂ—ನಿವಾರಣಮುಂ | ಕಾರ್ಯೇ—ಧರ್ಮಾರ್ಥಫಲದೊಳ್ | ಅನುವರ್ತನಮುಂ ಯಿಾ ಕಾರ್ಯಂ ಮಾಡಲ್ಪಡಲಿ ಎಂದು | ಸಂಕ್ಷೇಪಾದಿತಿ | ಸತ್-ಶೋಭನಂ | ಬಂಧುಮಿತ್ರಾನುಜೀವಿವೃತ್ತಂ | ಪ್ರಸಂಗದತ್ತಣಿಂ-ಪ್ರಸನ್ನಗಮನವು ಅಲ್ಲ | ಬಂಧುಮಿತ್ರರ್ಗಮುಪದೇಶಿಸಲ್ಪಟ್ಟುದು | ಮರಳಿಯುಂ ಅನುಜೀವಿವೃತ್ತಮನೆ ಪೇಳ್ದಪಂ| ಪಾನಗೋಷ್ಠೀಷ್ವಿತಿ| ಯಥಾಹ ಕೌಟಲ್ಯಃ-ಮದ್ಯಪಾನಂಚ | ಉಗ್ರಪಾನೈರುದ್ವೇಜಯೇಯುರಿತಿ | ಪರಸ್ತ್ರೀಕಾಮರು | ಅಕಾರ್ಯವ್ಯಂಜನಂಗಳಿಂ ಸ್ತ್ರೀಮಧ್ಯದೊಳ್—ಶೂನ್ಯಾಗಾರಂಗಳೊಳ್ ಉದ್ವೇಜಯೇಯುರಿತಿ | ದ್ಯೂತಕಾಮನಂ ಕಾಪಟಿಕೈಃ ಪುರುಷೈರುದ್ವೇಜಯೇ ಯುರಿತಿ | ರಾಜಪುತ್ರಾವಸ್ಥೆಯೊಳ್ ಪೇೞ ಯಿಾ ಉಪಾಯಂಗಳ್ಯಥಾಸಂಭವಂ ರಾಜ್ಯಸ್ಥಂಗಂ ಯೋಜಿಸಲ್ತಕ್ಕುದು—*

ರುಷೈ ಉದ್ವೇಜಯೇಯುರಿತಿ | ರಾಜಪುತ್ರಾವಸ್ಥೆಯೊಳ್ ಪೇೞ ಈ ಉಪಾಯಂಗಳ್ ಯಥಾ ಸಂಭವಂ ರಾಜ್ಯಸ್ಥ ಸಂಯೋಗಿಸಲ್ತಕ್ಕುವು| ಎಂದು| ಏವಂ ಹೀಗೆ ರಾಜಾನಂ ಸ್ವಾಮಿಯಂ ಗೂಢಪುರುಷರುಂ ನಿರುದ್ಯೋಗರಾಗಿ ಸಾಮಾದ್ಯುಪಾಯಂಗಳಿಂ ನಾಟಕಾದಿಗಳಿಂ— ತಥಾಚ ಕೌಟಲ್ಯಃ—ಛಾಯಾನಾಟಕಾಪ್ರತೋದದಿಂ ಏಕಾಂತದೊಳ್ಪ್ರಮಾದಮನೆಯ್ದುತಿರ್ಪಸ್ವಾಮಿಯಂ ಬೋಧಿಸಬೇಕು | ಎಂದು ಅನುಜೀವಿಗಳ್ಗೆ ಸ್ವಾಮಿಪ್ರಮಾದೋಪೇಕ್ಷೆಯೊಳ್ ದೋಷಮುಂ ಪೇಳ್ದಪಂ—ರಾಜಾನಮಿತಿ—ಸ್ವಾಮಿಯುಂ ಆರುಕೆಲವರು ಉಪೇಕ್ಷಿಸುತ್ತಿದ್ದಾರು | ಸಜ್ಜಮಾನಂ—ಆಸಕ್ತಿಯನೆಯ್ದುತಿದ್ದಂಥಾ ವಿಕರ್ಮಸು ಶಾಸ್ತ್ರವಿರುದ್ಧಾಚರಣಂಗಳೊಳ್ ಅನುಜೀವಿಗಳ್ ಅಕೃತಾತ್ಮರಾಗಿ ಆ ಸ್ವಾಮಿಯೊಡನೆ ಕಾಲದಿಂ ಪರಾಭವಮನೆಯ್ದುವರ್ | ಉಪಾಸನಂಗಳ

---

* ಇಲ್ಲಿಂದಾಚೆಗೆ ಒಂದು ಒಲೆಬರೆಹವಿಲ್ಲ ಅದು ನಿಮಿತ್ತ ಯಿಾಕಾಗದ ಬಿಟ್ಟು ಇದೆ (ಎಂದು ಬರೆದಿದೆ)

ಕ್ರಮುಮಂ ಪೇಳ್ದಪಂ – ಜಯ (ಇತಿ) ಸ್ವಾಮಿಯಿಂದ ಆಹ್ವಾನಮುಂಟಾಗೆ | 'ಜಯಮಹಾರಾಜ' ಎಂಬ ವಚನದಿಂದ ಆಜ್ಞಾಪಿಸುವವನಾದ ಎಂದು ಆದರದಿಂದ ಅವಸರಂಗಳೊಳ್ ಪೇಳಲ್ತಕ್ಕುದು | ಯಿಾ ಸ್ವಾಮಿಯ ಆಜ್ಞೆಯಂ ಪುರಸ್ಕರಿಸಿ ಭೃತ್ಯರ್ ಉಪಾಸನಮುಂ ಮಾಡಬೇಕು. ಸೇವೆಯನೆಂಬುದರ್ಥಂ | ಸಂಕ್ಷಿಪ್ತ ಸೇವ್ಯಧರ್ಮಮಂ ಪೇಳ್ದಪಂ | ಭರ್ತುಃ–ಸ್ವಾಮಿಯ ಚಿತ್ತಾನುವರ್ತಿತ್ವವು, ಸದ್ವೃತ್ತವು | ಅನುಜೀವಿನಾಂ-ಸೇವಕರ್ಗೆ | ಏತತ್-ಯದು ಶೋಭನಮಾದ್ಯವೃತ್ತಂ | ಆವುದರತ್ತಣಿಂ ಕ್ರೂರಕರ್ಮಿಗಳಾದ ರಾಕ್ಷಸರುಂ ವಶೀಕ್ರಿಯನ್ತೇ | ಛಂದಾನುವರ್ತಿಗಳಾದ ಸೇವಕರಿಂದ | ಮನುಷ್ಯರಾದೊಡೆ ವಶೀಕೃತರಪ್ಪರ್‌ಯೆಂಬುದರ್ಥಂ | ಛಂದಾನುವರ್ತನಂ ವಶೀಕರಣಮಿತಿವಚನಾತ್ | ಪರಿಚಿತ್ತವೃತ್ತಿಗಳ್ ದುರ್ಗ್ರಾಹ್ಯಂಗಳೆಂದು ಶಂಕಿಸಿ ಪೇಳ್ದಪಂ | ಧೀಸತ್ವಯೆಂದು | (ಧೀ)–ಅಷ್ಟಗುಣಮುಳ್ಳ ಬುದ್ಧಿಪ್ರಜ್ಞೆ | ಶುಶ್ರೂಷಾ ಶ್ರವಣ ಗ್ರಹಣಧಾರಣ ವಿಜ್ಞಾನೋಹಾಪೋಹ ತತ್ವಾಭಿನಿವೇಶಂಗಳ್ ಪ್ರಜ್ಞಾಗುಣಂಗಳೆಂದು | ಸತ್ತ್ವಂ–ವ್ಯಸನದೊಳಮಭ್ಯುದಯದೊಳಮವಿಕಾರಿತ್ವಂ | ಉದ್ಯೋಗಮುದ್ಯಮಂ ಅನಲಸತ್ವಂ | "ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ರಿತಿವಚನಾತ್ | ಏವಂ ಗುಣತ್ರಯಯುಕ್ತರಾದ, ಆತ್ಮಸಂಪದುಪೇತರಾದ ಮಹಾತ್ಮರ್ಗೆ ಏನು ದುಷ್ಪ್ರಾಪಂ | ಕಿನ್ತು ಸಮಸ್ತಮುಂ ಸುಪ್ರಾಪಮೆ | ಏವಂ ಸ್ವಾಮಿಯು ಚಿತ್ತಗುಣಯುಕ್ತರಾದ ಮಹಾತ್ಮರಿಂವಶಿಕರಿಸಲು ಶಕ್ಯತೇ | ಶಕ್ಯನಪ್ಪನೆ | ತಥಾ-ಹಾಗೆ | ಛಂದಾನುವರ್ತಿಗಳಾದ ಲೋಕದೊಳ್ ಪ್ರಿಯವಾದಿಗಳಿಗೆ ಪರನಾವಂ | ಒಬ್ಬನುಂ ಪರನಾಗಂ | ಮತ್ತೂ ಸರ್ವಲೋಕಮುಂ ಸ್ವಜನಮೆ ಅಪ್ಪುದು | ಅದು ಕಾರಣದತ್ತಣಿಂ ಅನುಜೀವಿ ಧೀಸತ್ವೋದ್ಯೋಗಯುಕ್ತನಾಗಬೇಕು ಎಂದು ಭಾವಂ | ಉಕ್ತಗುಣಹೀನಂ ಕಿಂಚಿತ್ತನುಂ ಪಡೆಯನೆಂದು ಪೇಳ್ದಪಂ | ಅಲಸಸ್ಯ-ನಿರುದ್ಯೋಗಿಗೆ | ಅಲ್ಪದಿಂದಲೇ ಸಂತುಷ್ಟನಪ್ಪವಂಗೆ, ವಿದ್ಯಾಹೀನಂಗೆ | ಅಕೃತಾತ್ಮನಃ – ಅಜಿತೇಂದ್ರಿಯನಾದ ಪುರುಷಂಗೆ ಅನ್ಯಮಿರಲಿ ಅನ್ನಪ್ರದಾನಕಾಲದೊಳ್ ತಾಯುಂ ಪರಾಙ್ಮುಖಿಯಪ್ಪಳ್ ತಸ್ಮಾದದುಕಾರಣಂ ಅನುಜೀವಿ ಉಕ್ತಲಕ್ಷಣನಾಗಬೇಕು ಗುಣವಂತರಾದ ಅನುಜೀವಿಗಳ್ಗೆ ಉಪಭೋಗ್ಯಂಗಳ್ ಸ್ವಾಮಿಸ ಪತ್ತುಗಳ್ | ಇತರರ್ಗಲ್ಲಮೆಂದು ಪೇಳ್ದಪಂ | ಯೇ ಆರು | ಶೂರರಾದ ಅನುಜೀವಿಗಳ್ | ಯೇಚವಿದ್ವಾಂಸಃ - ಸೇವಾಭಿರ(ತ)ರು ಅವರಿಗೆ ನೃಪತಿಸಂಪತ್ತುಗಳ್ ಭೋಗ್ಯಂಗಳ್ ಇತರರ್ಗಲ್ಲಂ | ಅದುಕಾರಣಮನುಜೀವಿ ಪ್ರಭೃತಿ ಸರ್ವಜೀವರ್ಗೆ | ರಾಜಾ ಅರಸು ಪರ್ಜನ್ಯ ಇವ ವರ್ಷಾಕಾಲದಹಾಗೆ, ಭವೇತ್–ಆಗಬೇಕು | ಎತ್ತಾನುಂ ಲೋಭದಿಂ | ನಿರಾಜೀವ್ಯನಾದೊಡೆ ಆಗ ಯಿಾಸ್ವಾಮಿಯಂ| ಶುಷ್ಕವೃಕ್ಷಮುಂ ಸಪಕ್ಷಿಗಳಹಾಂಗೆ ಅನುಜೀವಿಗಳ್ | ತ್ಯಜಿಪರ್ | ಅದುಕಾರಣದತ್ತಣಿಂ | ಸ್ವಾಮಿ ದಾನಶೀಲನಾಗಬೇಕು ಎಂದು ಭಾವಂ | ಇದನೆ ಸಮರ್ಥಿಸುತ್ತೆ ಪೇಳ್ದಪಂ | ಕುಲಂ-ಸೋಮಸೂರ್ಯಕುಲಪ್ರಭುತ್ವಮುಂ | ಯುಧಿಷ್ಠಿರಸನೂನುಷ್ಠಾನಮುಂ | ಸಕಲಶಾಸ್ತ್ರಪಾರಂಗತತ್ವಮುಂ | ಪರ(ಶು)ರಾಮುಶೌರ್ಯಮುಂ | ಯಿಾ ಸಮಸ್ತಮುಂ ಗಣಿಸಲ್ಪಡದು | ಆಶ್ರಣೀಯತ್ವಲೇಖ್ಯದೊಳಾರೋಪಿಸಲ್ಪಡಂ | ಈ ಗುಣಂಗಳಿಂದ ಸ್ವಾಮಿ ಸಮಾಶ್ರಯಣೀಯನಲ್ಲಯೆಂಬುದರ್ಥಂ | ದುರ್ವೃತ್ತೋಽಪಿ ಕುಲೀನೋಪಿ ಜನೋದಾತರಿ ರಜ್ಯತೇ| 'ತ್ಯಾಗೋಗುಣೋಗುಣವತಾಯಧಿಕೋಮತೋ'ಇತಿ ವಚನಾತ್—ಮತ್ತೆಯುಂ ಸ್ಪಷ್ಟವಾಗಿ ಪೇಳ್ದಪಂ ಅರ್ಥಾರ್ಥೀ ಜೀವಲೋಕ ಅರ್ಥಂ ಜೀವಿಕೋಪಕರಣಂ | ತದರ್ಥಿಯಾದ ಜೀವಲೋಕಂ | ಜ್ವಲನ್ತಂ–ದಾನಶಕ್ತಿಯಿಂದ ಪ್ರಜ್ವಲಿಪ ಪಾರ್ಥಿವನಂ ಉಪಸರ್ಪತಿ| ಮಿಗೆ ಅರ್ಥಾರ್ಥಿಯಾದ ಪರಿಜನಮುಂ ಸ್ವಾಮಿಯನುಪಸರ್ಪತಿ | ಅನುಸರಿಪುದು

ಕ್ಷೀಣಕ್ಷೀರಾಂ| ಅದುಕಾರಣಮೆ ನಿರಾಜೀವ್ಯಮೆಂದು ವತ್ಸಂಬಿಡುತಿದ್ದೀತು | ತಾಯನು ಹೀಗೆ ಅರ್ಥಾರ್ಥಿಯಾದಲೋಕಂ| ಅದುಕಾರಣ ಸ್ವಾಮಿತ್ಯಾಗಶೀಲನಾಗಬೇಕು| ಎಂದು ಭಾವಂ| ಭೃತ್ಯಭರಣಮಂ ಪೇಳ್ದಪಂ | ಅಹಾಪಯ ನೃಪಃ–ಸ್ವಾಮಿಕಾಲಕ್ಷೇಪಮಂ ಮಾಡದೆ ಭೃತ್ಯಾನಾಂ ಭರಣಾರ್ಹರಾದ ಅನುವರ್ತಿನಾಂ – ಇಚ್ಛಾವಿಧಾಯಿಗಳ ಕರ್ಮಂಗಳಾನುರೂಪ್ಯದಿಂ ಉತ್ತಮ ಮಧ್ಯಮಾನುಗುಣ್ಯದಿಂ ಔಚಿತ್ಯದಿಂ ವೃತ್ತಿಂ–ಜೀವನಮಂ | ಕಲ್ಪಯೇತ್–ಮಾಡಬೇಕು | ಎಂಬುದರ್ಥಂ ವೃತ್ತಿಲೋಪದೊಳ್ ದೋಷಮಂ ಪೇಳ್ದಪಂ | ಆವಂಗೆ ಆವಕಾಲದೊಳ್ [ಆವುದು] ದಾತವ್ಯಂ| ಕೊಡಲ್ಪಡತಕ್ಕುದು ಸ್ಥಾನೇಚ-ಸ್ಥಾನದೊಳ್ | ಕೋಶಗೃಹದೊಳ್ | ಜನಪದಾದಿಯೊಳ್ |ಪಾತ್ರೇಚ ಗುಣಸಂಪನ್ನ(ನೊಳ್)ದಾತವ್ಯಂ | ಯಿಾಪಾತ್ರಂಗಳಂ ಈ ಪ್ರಕಾರಮಾದ ವೃತ್ತಿಯಂ ಕೊಡಿಸಿದೊಡೆ - ಹಿ ಯಸ್ಮಾ ದಾವಕಾರಣದತ್ತಣಿಂ ಯಿಾ ಸ್ವರೂಪಮಾದ ವೃತ್ತಿವಿಲೋಪಮಾದೊಡೆ ಆತಂ ಸ್ವಾಮಿಯಾಗಂ ನಿಂದ್ಯನಾಗಿ ಅಭಿನಂದ್ಯನಾಗಂ | ಅಪಾತ್ರದಾನದೊಳ್ | ದೋಷಮಂ ಪೇಳ್ದಪಂ | ಅಪಾತ್ರೆಯಲ್ಲಿ-ಪುರುಷಾರ್ಥತ್ರಯಾನುಪಪತ್ತಿ ಅವು ಅಪಾತ್ರಂಗಳ್ | ಆ ಅಪಾತ್ರಂಗಳೊಳ್ ವರ್ಜಿಸಲಾಗದು ಏನುಕಾರಣದತ್ತಣಿಂ ಅಪಾತ್ರದಾನಂ ಸತ್ಪುರುಷರಿಂ ವಿಗರ್ಹಿತಮಾದುದು | ನಿಷ್ಫಲತ್ವದತ್ತಣಿಂ | ಕೋಶಕ್ಷಯವ್ಯತಿರಿಕ್ತಮಾದ ಫಲಮಾವುದು ಕೇವಲ ಕೋಶಕ್ಷಯಮೆ ಅಪ್ಪುದು | ಯಥಾರ್ಥವಾಗಿ ದಾನಮುಂಟಾದೊಡಂ ಗುಣವತ್ಸೇವಾಕೃತಮಾದೊಡೆ ಕೀರ್ತಿಗೋಸುಗ ಅಪ್ಪುದು | ನ ಸರ್ವಾವಸ್ಥಾ ಶ್ಲಾಘನಕೈಃ – ಅಶ್ಲಾಘನಮುಂ | ಗುಣವತ್ಕೃತಮಾದೊಡೆ (ಸ್ವಾಮಿ ದಾನಶೀಲನಾಗಬೇಕು ಎಂದು ಭಾವಂ) ಇದನೆ ಸಮರ್ಥಿಸುತ್ತೆ ಪೇಳ್ದಪಂ | ಕೀರ್ತಿಧರ್ಮಂಗಳಿಗೋಸುಗ ಆಗುತಲಿದ್ದೀತು | ಎಂದು ಪಾತ್ರಸ್ವರೂಪ ಸೂಚನಾಪೂರ್ವಕವಾಗಿ ತತ್ಸಂಗ್ರಹಾರ್ಥವಾಗಿ ಪೇಳ್ದಪಂ | ಕುಲಂ ವಿದ್ಯಾ(ಇತಿ)| ಕುಲಮನೆ-ಉಭಯಕುಲಶುದ್ಧತೆ | ವಿದ್ಯೆ-ಆನ್ವೀಕ್ಷಕ್ಯಾದಿಶ್ರವಣಂ | ಶೌರ್ಯಂ-ಅಭೀರುತ್ವಮುಂ | ಸುಶೀಲಂ – ಸುಸ್ವಭಾವಂ | ಅದರ ಭಾವಂ | ಸೌಶೀಲ್ಯಂ ಭೂತಪೂರ್ವತಾಂ-ಪಿತೃಪೈತಾಮಹಕ್ರಮಾಗತತ್ವಮಂ | ವಯೋಽವಸ್ಥಾಂ – ಯೌವನಾವಸ್ಥೆಯುಂ | ಸಂವೀಕ್ಷ್ಯ - ನಿರೂಪಿಸಿ | ಸ್ವಾದ್ರಿಯೇತ-ಚೆನ್ನಾಗಿ ಆದರಿಸಬೇಕು·ಪಾತ್ರಮಿತಿ | ಸಂಗ್ರಹಿಸಬೇಕೆಂಬುದರ್ಥಂ | ಮಹಾತ್ಮರ್ವಾ - ಮಹಾವಿಜಿಗೀಷು ಎಂದು ಪಾತ್ರಭೂತರ ಅನಾದರದೊಳ್ ದೋಷಮಂ ಪೇಳ್ದಪಂ | ಕುಲೀನರ್ವಾ - ಮಹಾಕುಲಪ್ರಸೂತರಂ | ನಾವಮನ್ಯೇತ-ಅವಮಾನವ ಮಾಡಲಾಗದು | ಸತ್ಯವೃತ್ತಾರ್ತ - ಮಹಾನುಷ್ಠಾನಪರರಂ | ಮನಸ್ವಿನಃ - ಪ್ರಜ್ಞಾಪ್ರಯತ್ನಮನಸ್ಕರಂ | ಮನೋಬುದ್ಧಿಶ್ಚ ತತ್ಸಮಂ | ಇತಿ ವಚನಾತ್ | ಯಸ್ಮಾದಾವಕಾರಣದತ್ತಣಿಂ ತೇ-ಅವರ್ | ಅವಮಂತಾರಂ-ಅವಮಾನಮಾಡಿದಾತನಂ ತ್ಯಜಂತಿ-ಬಿಡುತಿದ್ದಾರು | ಅವಮಾನಿತರಾದೊಡೆ ಘ್ನಂತಿ - ಅದುಕಾರಣದಿಂ, ಮಾನನೀಯರನವಮಾನಮಾಡಲಾಗದು| ಪಾತ್ರಭೂತರ ಅಭ್ಯುದ್ಧರಣಮಂ ಪೇಳ್ದಪಂ| ಗುಣೈಃ–ಉದಾರಗುಣಂಗಳೊಡಗೂಡಿದರಂ | ಅನುಜೀವಿಗಳಂ | ಪ್ರೋನ್ನಯೇತ್–ಪ್ರಕರ್ಷಮನೆಯ್ದಿಪುದು | ಉತ್ತಮೋತ್ತಮರಂ-ನಿಕೃಷ್ಟರಾದೊಡೆ ಉನ್ನತಿಯೋಗ್ಯರಲ್ಲ | ಎಂದು ಭಾವಂ | ಅದು ಹೇಗೆ ಎಂದೊಡೆ-ಮಹತ್ತಾದ ಮಹೀಪತಿಯನುನ್ನತಿಯಂ ಪಡೆದು ಅವರ್ ನರೇಶ್ವರನಲಿ ನಭಿವೃದ್ಧನ ಮಾಳ್ಪರ್ | ಕೃತಜ್ಞತ್ವದಿಂದ | ಅರ್ಥಸಾಮರ್ಥ್ಯಾದಿಗಳಿಂ | ಸ್ವಾಮಿ ವಿವೇಕಜ್ಞನಾಗಬೇಕು ಎಂಬುದಂ ಪೇಳ್ದಪಂ | ಸರ್ವಾಧಿಕರಾದ ಕೌಟಲ್ಯರಹಿತರ್ಾ ಮಹಾಕುಲರಂ ನೀಚರೊಡನೆ | ಅಭಿವೃದ್ಧರಂ ಮಾಡಲಾಗದು | ನಿಯೋಗದೊಳ್ ನಿಯೋಗಿಸಲಾಗದು | ತುಲ್ಯಮಾನರಾದೊಡಂ ಮಾಡಬಾರದು | ವರ್ಗಂ ಕುಪಿತವಾಗೆ ಪತತಿ-ಬೀಳುತಿದ್ದಾನು | ಇತರಥಾ—

ತಥಾಚ ಕೌಟಿಲ್ಯಃ— "ನೀಚೈರುಪಹತ" ಇತಿ— ಇದು-ಅವಿವೇಕಿತ್ವಮು? | ವಿವೇಕಿಯಾದೊಡೆ ಉತ್ತಮಾಭಿಜನೋಪೇತರನು ಉತ್ತಮರೊಡನೆಯೇ ಅಭಿವೃದ್ಧರಂ ಮಾಳ್ಪುದು | ಇಲ್ಲಿ ಗುಣಮಂ ತೋಱುತ್ತೆ ಪೇೞ್ದಪಂ | ಕೃಶೋಽಪಿ ಹಿ ವಿವೇಕಜ್ಞಃ - ವಿವೇಕೋತ್ಥಮಾದ ವಿಚಿಂತ್ಯಜ್ಞಾನಂ | ಉತ್ತಮರನುತ್ತಮರೊಡನೆ ಅವವಂ ಯೋಜಿಪಂ | ಅತಂ ವಿವೇಕಜ್ಞಂ | ಕೃಶನಾದೊಡಂ ಸಂಶ್ರಯಣೀಯನು | ಬಹುಮಂದಿಯಿಂದ ಸೇವಿತನೆ | ರಾಜಾ ಅರಸು | ನಿರ್ವಿವೇ(ಕ)ತ್ವಕ್ಕೆ ದೋಷಮಂ ಪೇೞ್ದಪಂ | ನಿರಾಲೋಕೇ - ಹೇಯೋಪಾದೇಯ ದರ್ಶಕಜ್ಞಾನಂ | ಅದು ಅವಲೋಕಸ್ಯ-ಚಾತುರ್ವರ್ಣ್ಯಕ್ಕೆ ಇಲ್ಲ- ಅದು ನಿರಾಲೋಕಂ | ನಿರ್ವಿವೇಕಮೆಂಬುದರ್ಥಂ | ಯಾಪ್ರಕಾರನಾದ ಲೋಕದೊಳ್ ಕ್ಷುಧಾಪೀಡಿತರಾದೊಡಂ ಪಂಡಿತರ್ ಅಲ್ಲಿಯಿರರ್ | ಎಲ್ಲಿ ಜಾತ್ಯಮಾದ ಮಣಿಗೆ ವಜ್ರಾದಿಗೆ| ಕಾಚೇನನಿಕೃಷ್ಟನಾದ ಗಾಜಿನೊಡನೆ ಸಮುತ್ವವು-ಮುತಾ-ಅಭಿಮತವು ಎಂಬುದರ್ಥಂ| ಯಥಾ-ಹೇಗೆ ವಿವೇಕಿತ್ವದಿಂದ ಔಚಿತ್ಯದತ್ತಣಿಂ ವಿನಿಯೋಗ ಹಾಗೆ ಸತ್ಪಾತ್ರಪ್ರತಿಪತ್ತಿಯುಂ ಎಂದು ಪೇೞ್ದಪಂ| ವಿಶ್ರಾಮ್ಯಂತಿ-ಅವಸ್ವಾಮಿಯೊಳ್-ಅವಸ್ಥಾನಮಂ ಮಹಾತ್ಮರಾದ ಅನುಜೀವಿಗಳ್| ಸಕಲಗುಣಯುಕ್ತರಾಗಿ ಕಲ್ಪತರುಜಗಳ್ ಹೇಗೆ ಹಾಗೆ ಸಮಾಹಿತಪ್ರಾಪ್ತಿ ಉಂಟಹವೋ ಹೇಗೆ ಹಾಗೆ| ಮಾಡುತಿದ್ದಾರು| ಜೀವಂತಿ-ಜೀವಿಪರ್-ಅದೇನು ಕಾರಣವೆಂದೊಡೆ| ಶ್ರೀಯುತತ್ಸಂಭೋಗಫಲಂ| ಸಂಪತ್ತಿಗೆ ಫಲಮಿತಿ | ಅವರುತತ್ಪುರುಷಸಂಯೋಗಂ |

ತಥಾ ಕೌಟಿಲ್ಯಃ—ಅಲಬ್ಧಾರ್ಥಲಾಭಮುಂ ಲಬ್ಧಾರ್ಥಪರಿರಕ್ಷಣಮುಂ—ರಕ್ಷಿತಕ್ಕೆ ಸತ್ಪಾತ್ರಪ್ರತಿಪಾದನಮೆಂದು | ಇದನೆ ದೃಢಮಾಗಿ ಪೇೞ್ದಪಂ | ಲಕ್ಷ್ಮ್ಯಾ-ವಿಭೂತಿಯಿಂದ | ಲಕ್ಷ್ಮೀವತಾಂ ಅರಸುಗಳ್ಗೆ | ವಿಸ್ತಾರಿಣ್ಯಾ-ವಿಕಸಿತದಿಂದಲಾದೊಡಂ | ಕಿಂತಯಾ ಅದಱಿಂದ ಯೇನು ?| ಪ್ರಯೋಜನ ನಿರ್ಥಕದಿಂ | ಬಂಧುಗಳಿಂದ ಸ್ನೇಹಿತರಿಂದಲುಂ | ವಿಸ್ರಬ್ಧಂ-ಯಥೇಷ್ಟಮಾಗಿ | ಯಾ-ಅವುದು | ನಭುಜ್ಯತೇ-ಅನುಭವಿಸಲ್ಪಡದೆಯಿದ್ದೀತು | ಅವ್ಯಕ್ತ ಪ್ರಚಾರಮಂ ಲೇಶದಿಂ ಪೇೞ್ದಪಂ | ಆಯೇಷು | ಕೋಶಾಗಮುಮಾರ್ಗಂಗಳೊಳ್ ವಕ್ಷ್ಯಮಾಣನಾದ ಯೆಂಟಱೊಳಂ | ಆಪ್ತರ ನೊಲತ್ಯಕ್ಷರಂ? | ಉಪಧಾಶುದ್ಧರಂ ಪ್ರೇರಿಪುದು | ಅದಱಿಂ ಧನಮಂ | .ಆದಿತ್ಯನುಂ-ಉದಕಮಂ ಕಿರಣಗಳಿಂದೆ (ಉಸ್ರೈಃ) ಹೇಗೆ ಹಾಗೆ | ಆದದೀತ-ಸ್ವೀಕರಿಪುದು | ಅಭ್ಯಸ್ತಮಾದ ಕರ್ಮಮನುಳ್ಳ, ತತ್ವಮಂ ಬಲ್ಲವರಿಂ |

ತಥಾಚೋಕ್ತಂ—

" ಲಕ್ಷಣಜ್ಞೋ ನಿಕೃಷ್ಟಸ್ತು ಲಕ್ಷ್ಯವೇದೀ ತು ಮಧ್ಯಮಃ ||
ಉಭಯಂ ಯೋ ವಿಜಾನಾತಿ ಸ ಉತ್ತಮ ಇತಿ ಸ್ಮೃತಃ || "

ಶುಚೀನುಪಧಾಶುದ್ಧರಂ | ಕರ್ಮಜ್ಞರಂ | ತಜ್ಞರಾದ ಆಪ್ತರೊಡಗೂಡಿದ | ವಿಹಿತವಸ್ತುಗಳಂ ಪರ್ಯುಕ್ತಪುರುಷರಿಂ | ನಿರ್ಬಂಧ ಕಾಲೇಷು(ಧ) ನಾದಿಗಳಿಂ ಸ್ವಾಮಿಯು ಉದ್ಯೋಗ ಸಂಪನ್ನರಾದ ಅಧ್ಯಕ್ಷರಂ ಮಾಳ್ಪುದು | ಸರ್ವಕರ್ಮದೊಳಂ-ಕಥಾ-ಹಾಗೆ| ಆವವನಧ್ಯಕ್ಷನಂವ ಕರ್ಮಾದಿಗಳಂ ಬಲ್ಲನಾತನ(ನ) ಲ್ಲಿಯೆ ನಿಯೋಜಿಪುದು | ಯಥಾ – ಹೇಗೆ | ಆತ್ಮದೋಷವಿಶೇಷಂಗಳ್ | ಶಬ್ದ (ಸ್ಪರ್ಶ) ರೂಪರಸ ಗಂಧಂಗಳ್ ತತ್ಪ್ರಾಪ್ತ್ಯರ್ಥಮಾಗಿ ಅವ ಇಂದ್ರಿಯಕ್ಕೆ ಅವುದರ್ಥಂ | ಅದು ಹೇಗೆ ಎಂದೊಡೆ-ಶಬ್ದವಿಷಯಂ ಪ್ರಾಪ್ತಮಾಗೆ ಶ್ರವಣೇ(ಂದ್ರಿ) ಯಂ |

ಮಿಕ್ಕ ಇಂದ್ರಿಯಂಗಳ್ ಶಬ್ದಗ್ರಾಹಕಂಗಳಾಗವು | ತಥಾ ಹಾಗೆ ಸ್ಪರ್ಶಮಂ ಪಡೆಯಲ್ ತ್ವಗಿಂದ್ರಿಯಂ | ರೂಪಮಂ ಪಡೆಯಲ್ ಚಕ್ಷುರಿಂದ್ರಿಯಂ| ರಸಮಂ ಪಡೆಯಲ್ ಜಿಹ್ವೇಂದ್ರಿಯಂ| ಗಂಧಮಂ ಪಡೆಯಲ್ ಘ್ರಾಣೇಂದ್ರಿಯಂ | ಅನ್ಯವಿಷಯಮನನ್ಯದಿಂ ಪಡೆಯಲ್ ಶಕ್ಯಮಲ್ಲಂ | ಅದು ಕಾರಣದಿಂ ಆವಂ ಅಧ್ಯಕ್ಷನಾವುದಂ ಬಲ್ಲಂ ಆತನನಲ್ಲಿಯೇ ನಿಯೋಜಿಪುದು| ತಥಾ ಹಾಗೆ ಕೊಟ್ಟಂ-ಉದರಂ | ತತ್ಪೂರಣಾರ್ಥಧಾನ್ಯೋಪಚಾರದಿಂ ಕೊಟ್ಟಂ | ತತ್ ಸ್ಥಾನೆನಾರ್ಥಮಾದ ಅಗಾರಂ | ಅಲ್ಲಿ ನಿಯುಕ್ತನಾದನಂ-ತತ್ಪರನಾಗಿ ವಿಜಿಗೀಷು ಭರಣಮಂ ಮಾಡಬೇಕು | ಅದೇನು | ಧಾನ್ಯಾಗಾರಂ ಹೀನಮಾದೊಡೆ ಕ್ಷಣಮಾತ್ರಮುಂ ಜೀವನಂ ಕೂಡದು |

ಅತ ಏವ ರಾಮೇಣೋಕ್ತಂ—

ಸರ್ವ ರತ್ನಪ್ರಧಾನಸ್ಯ ಧಾನ್ಯೇನ ಕುಶಲಂ ಗೃಹಂ ||

ತಥಾನಾತ್ಯಾಯಂ ಚ ಕುರ್ಯಾದಿತಿ—

ನ್ಯಾಯದಿಂ | ಆಯದಿನಧಿಕವ್ಯಯಮಂ ಮಾಡಲಾಗದು | ತೌ-ಆಯವ್ಯಯಂಗಳಂ ಪ್ರತ್ಯಕ್ಷಮಾಗೆ ಪ್ರತಿದಿನಮುಂ ನೋಡಲಪ್ಪುದು | ಸ್ವಯಂ-ವಿಜಿಗೀಷುವು | ಇದರ ಹರಣ ನಿಷೇಧಾರ್ಥಮಾಗಿ ಅನಂತರೋದ್ದಿಷ್ಟದ್ವಾರಂಗಳಂ ಪೇೞ್ದಪಂ | ಕೃಷಿಃ-ರಾಜಕುಲಕೃತಾರ್ಥಂ | ವಣಿಕ್ಪಥಂ ದ್ವಿವಿದಂ-ಸ್ಥಲಪಥಂ | ಜಲಪಥಮೆಂದು | ದುರ್ಗಂ-ದುರ್ಗಮುಂ ರಾಜಧಾನ್ಯಾನಾಮುತ್ಪತ್ತಿಃ | ಸೇತುರಿತಿ-ಶಾಲ್ಯಾದಿವಾಪನಾರ್ಥಂ ಮಾಡಿದ ತಟಾಕಾದಿ ಜಲಾಧಾ(ರ) ತದುತ್ಪನ್ನೇಕ್ಷು ಶಾಲ್ಯಾದಿ ಸೇತುಃ – ಕುಂಜರ ಬಂಧನಂ – ಆನೆ ಕಪ್ಪು | ಆಯದ್ವಾರಮಹಾಮೂಲ್ಯಂಹಸ್ತಿಲಾಭದತ್ತಣಿಂ | ಖನ್ಯಾಕರ (ಇತಿ) ಖನಿಗಳ್-ರತ್ನಾದಿಖನನದಿಂ | ಆಕರಂ-ಸುವರ್ಣಾದಿಗಳ | ಆ–ಸಮಂತಾತ್ ಕರಣದಿಂ | ಮೃತ್ಪಾಷಾಣರಸಧಾತುಸಂ.... ರದಿಂ | ಸುವರ್ಣ – ರೂಪ್ಯಾದಿ ಲಾಭದತ್ತಣಿಂ ಧನಾದಾನಂ | ಕುಪ್ಯಪ್ರತಿಷ್ಠ ಶಾಕನಿಮಿಷಾದ್ಯಾದಾನದತ್ತಣಿಂ | ಶೂನ್ಯಾನಾಂ ಚ ನಿವೇಶನಮಷ್ಟಮ ಮಾಯದ್ವಾರಂ | ಎಂದು | ಅಷ್ಟ | ಕೃಷ್ಯಾದ್ಯಷ್ಟಕವರ್ಗ ಕಲ್ಪಿತಸ್ವಸ್ವವೃತ್ತನಿರಾಕುಲವೃತ್ತನಾಗಿ ವಿವರ್ಧಯೇತ್-ವಿಶೇಷಮಾಗಿ ವೃದ್ಧಿಯನೆಯ್ದಿಪುದು | ಯೇನುಕಾರಣ | ಆರಿಂದ ಎಂದೊಡೆ| ಜೀವನಾರ್ಥಮಾಗಿ ರಾಜ್ಯದ| ಅಜೀವ್ಯೈಃ-ಆ ಜೀವ್ಯನ್ತೆ ಯಿತ್ಯಾಜೀವಾ ಯೇ-ಆರು ಉಪಜೀವಿಸಲು ಶಕ್ಯರ್ | ಆ ಕಾರಣ ಅಧಿಕಾರಿಗಳಿಂದ ತಥಾಯಥಾ | ಯಥಾವರ್ತತೇ ಪಾರ್ಥಿವಃ | ವೃತ್ಯಾಕ್ಷೀಣೋಽಪಿ ಪಾರ್ಥಿವಃ | ತಸ್ಯಾಂ ತಸ್ಯಾಂ ನ ಸಂರೋಧಂ ಕುರ್ಯಾತ್ತ್ವಾಣೋಪಜೀವಿನಾಂ | ಅವಾವಕೃಷಿಯಿಂ ಪಾಶು ಪಾಲ್ಯೇನ ವಾಣಿಜ್ಯದಿಂದಲುಂ ವರ್ತತೇ-ಪ್ರವರ್ತಿಸುತ್ತಿದ್ದಾನು ಆ ಅವೃತ್ತಿಯೊಳ್ ಕ್ಷೀಣನಾದೊಡಂ ಅರಸು ಸಂರೋಧಮಂ ಮಾಡಲಾಗದು | ವಿಶೇಷಮಾಗಿ ಪಣ್ಯೋಪಜೀವಿಗಳ ಸಂರೋಧಮಂ ಮಾಡಲಾಗದು | ಜಗತ್ತಿನ ಭೋಗೋಪದೇಶಮಂ ಕೊಡಲು ಪೇೞ್ದಪಂ | ಸುಸಂರಕ್ಷೇತೇತ್ಯಾದಿ | ಯಥಾ ಹೇಗೆ ಪ್ರರೂಢಮಾದ ಸಸ್ಯಮಂ ಕಂಟಕಶಾಖೆಯಿಂದ ಸುತ್ತುಕಟ್ಟಿ ಒಬ್ಬಾನೊಬ್ಬನು ತದನಂತರ ವುಪದ್ರವಂಗಳತ್ತಣಿಂ ಫಲಾರ್ಥಮಾಗೆ ರಕ್ಷಿಸುತ್ತಿದ್ದಾನು | ಅನಂತರಂ ಲಗುಡಮಂ ಚೋರಾದಿ ನಿಷೇದಾರ್ಥಮಾಗಿ ಮಾಡುತಿದ್ದಾನು | ತದ್ವತ್ ಆ ಪ್ರಕಾರದಿಂದಲೇ ಭೋಗ್ಯಮಾದ ಯಿ ಜಗತ್ತಂ-ಪ್ರಜೆಯಂ | ಸ್ವಯಂ-ತಾನು | ಕಂಟಕಶಾಖಾಸಮಾನಮಾದ ದಂಡಪ್ರಣಯನದಿಂ | ತದರಂತರಂ ಸಮಾನಯುಕ್ತರರಿಂ ರಕ್ಷಿಸಬೇಕು | ಲಗುಡಸಮನಾದ ಚತುರಂಗವಂಡದಿಂ ವಿಪಕ್ಷಾಟವೀತಸ್ಕರರತ್ತಣಿಂ ರಕ್ಷಿತಮಾಗೆ

ಭೋಗ್ಯವಾಗುತಿದ್ದೀತು | ಯೆಂದುಭಾವಂ | ಯಿದನೆ ದೃಢವಾಗಿ ಪೇಲ್ದಪಂ | ಅಯುಕ್ತ ತೇಭ್ಯ ಇತಿ | ಆಯುಕ್ತತರಧ್ಯಕ್ಷಾದಿಗಳ್ | ತೇಭ್ಯಃ–ಸ್ವಪರ ಮಂಡಲಸ್ಥರತ್ತಣಿಂ | ಪರೇಭ್ಯಃ-ಶತ್ರುಗಳತ್ತಣಿಂ | ರಾಜವಲಭಾದೆ ವಿದ್ವೆವಿತಷ್ಕಾರಾದಿ ಅತ್ತಣಿಂ ? | ಪೃಥಿವೀಪತಿಲಾಭದಿಂ ಪ್ರಜೆಗಳ್ಗೆ ಅಯ್ದುಪ್ರಕಾರ ಭಯಂ | ಆ ಭಯವು ಹೇಗೆ ವುಂಟಾಗುವುದು | ಹೇಗೆ ಮಾಡಲ್ತಕ್ಕುದು | ಪಂಚಪ್ರಕಾರೀತ್ಯಾದಿ ಈ ನ್ಯಾಯಮಾದ ಪಂಚಪ್ರಕಾರಭಯಮಂ–ಯಿಾ ನೃಪರಿಂ ಹರಿಸಿ | ಸ್ವಯಂ–ತಾನು | ಆದಧೀತ–ಸ್ವೀಕರಿಸಿಪ್ಪುದು | ಫಲಂ–ಧಾನ್ಯಹಿರಣ್ಯಾದಿಕಮಂ ಕಾಲದಿಂದ | ಯೋಗ್ಯಮಾದ ತ್ರಿವರ್ಗಮಂ ಪರಿವರ್ತಿಪುದು | ಯಿನ್ನು ಧರ್ಮಾರ್ಥಕಾಮವೃದ್ಧ್ಯರ್ಥವಾಗಿ ದೃಷ್ಟಾಂತದರ್ಶನದಿಂ ಪ್ರಜಾಪಾಲನಮನುಪಜೀವನಮಂ ಪೇಲ್ದಪಂ| ಯಥಾಗೌರಿತಿ| ಹೇಗೆ ಗೋವು ಹಿಂಡಿತೃಣ ಲವಣಾದಿಗಳಿಂ ರಕ್ಷಿಸಲ್ಪಟ್ಟು ಕಾಲದಿಂ ಕರೆಯುತಿದ್ದೀತು | ಯಥಾ ಹೇಗೆ ಪ್ರಜೆಯಂ ನಿವೇಶ್ಯಾದಿಗಳೊಳ್ ಧಾನ್ಯಪಶುಹಿರಣ್ಯಾನುಗ್ರಹದಿಂ ಪಾಲಿಸಲ್ಪಡುತ್ತಿದ್ದೀತು | ಷಡ್ಭಾಗಕರಾದಾನಾದಿಯಿಂ | ಕರೆಯಲ್ಪಡುತಿದ್ದೀತು | ಹೇಗೆ ಎರಡನೆಯ ದೃಷ್ಟಾಂತಂ | ಹೇಗೆ ಮಾಲಾಕಾರದಿಂ ಪುಷ್ಪಫಲಾರ್ಥವಾಗಿ ಭೂಮಿಯು ಜಲದಿಂ ನನೆಯಲ್ಪಡುತಿದ್ದೀತು| ಹಾಗೆ ಈ ಪ್ರಜೆಯುಂಪಾಲಿಸಲ್ಪಟ್ಟು ಉಪಜೀವಿಸಲ್ಪಡುತಿದ್ದಿತು | ಅಭುಕ್ತಪೀಡಾ ನಿವಾರಣಾರ್ಥವಾಗಿ ಪೇಲ್ದಪಂ | ಆಸ್ರಾವಯೇತ್–ಆರುಕೆಲವರು ಪ್ರಜಾಪೀಡೆಯೊಳಗೆ ಉಪಚಿತರು | ಅವರಂ ದಂಡಪ್ರಣಯದತ್ತಣಿಂದ ಹೃತಧನರಂ ಮಾಳ್ಪುದು | ಹೇಗೆ ದುಷ್ಟವ್ರಣಾದಿಗಳ್ ಸ್ರಾವಿತಂಗಳಾದರೆ ಸುಖದಂಗಳ್ ಹಾಗೆ| ಆಯುಕ್ತರು ಮಾಧ್ಯಕ್ಷರುಂ ಪ್ರವರ್ತಿಪರ್| ಅಗ್ನ್ಯಾವಿವಮಹೀಪತೆ | ಯಥಾ–ಹೇಗೆ| ಅಗ್ನಿಯು| ಯೇನಮಾಡಲು ಹುರೆಂದು ತುಳಿದವನಂ ದಹಿಪುದು | ತುಳಿಯದಿರ್ದೊಡೆ ಪಾಕಾದಿಸಾಧನಮಪ್ಪುದು | ತಥಾ–ಹಾಗೆ | ಮಹೀಪತಿಯು ಯುಕ್ತಸೇವಿತನಾದೊಡೆ ಫಲದನಪ್ಪಂ | ಯೆಂದುಭಾವಂ | ಸ್ವಲ್ಪಮಪಿ–ಕಿಂಚಿತ್ತಾದೊಡಂ | ಯೇ ಆರು ಕೆಲಬರ್ ಪಾಪಿಷ್ಠರ್ ಭೂಪತಿವಿಷಯದೊಳ್ ಅಪಕಾರಮಂ ಮಾಡುವರ್ | ಆ ಮೂಢಬುದ್ಧಿಗಳ್ ಅಗ್ನಿಯೊಳ್ ಶಲಭಂಗಳ ಹಾಂಗೆ ದಹಿಸಲ್ಪಡುವರ್ | ನೃಪಕೋಪದತ್ತಣಿಂ | ಸಂವರ್ಧಯೇತ್(ಇತಿ)ತದ್ ಜ್ಞೈಃ–ಕೋಶವೃದ್ಧ್ಯುಪಾಯಜ್ಞರಿಂ | ನಿರಂತರಮುಂ ಕೋಶಮನಭಿವರ್ಧಿಪುದು | ಆಪ್ತಾಧಿಷ್ಠಿತಮಾದ ಕೋಶಮಂ ಕಾಲದೊಳ್ ಕೋಶವ್ಯಯಮಂ ಮಾಳ್ಪುದು | ತ್ರಿವರ್ಗಪ್ರತಿಪತ್ತಿಗೋಸುಗ–ಧರ್ಮಾರ್ಥಕಾಮಪ್ರಾಪ್ತಿಗೋಸುಗ | ಧರ್ಮನಿಮಿತ್ತವಾಗಿ ಕ್ಷೀಣಕೋಶನಾದ ನೃಪತಿಯ ಕೃಶತ್ವಮುಂ ಶೋಭಿಪುದು | ದೇವತೆಗಳಿಂ ಪೀತಾವಶಿಷ್ಟನಾದ ಶರತ್ಕಾಲ ಚಂದ್ರನ ಕೃಶತ್ವವು ಹೇಗೆ ಶೋಭಿಪುದೋ ಹಾಗೆ | ನೃಪತಿಗಂ ಸಂಕ್ಷಿಪ್ತಮಾದ ಶಾಸ್ತ್ರೋದ್ದೇಶಮಂ ಮಾಲ್ದಪಂ| ಶಾಸ್ತ್ರನಿಶ್ಚಾಯಕಬೃಹಸ್ಪತಿಯ ಆಪ್ತತರನಾದೊಡಂ ತಿಲನ್ನು ? ವಿಶ್ವಾಸಿಸಲಾಗದು | ಚಿತ್ತಾನಿತ್ಯತ್ವದತ್ತಣಿಂ |

ತಥಾ ಚ ಕೌಟಿಲ್ಯಃ— ಮನುಷ್ಯರ ಚಿತ್ತಾನಿತ್ಯತ್ವದತ್ತಣಿಂ ಸವಿಶ್ವಾಸಧರ್ಮರತ ಮನುಷ್ಯರ್ ಕರ್ಮಂಗಳೊಳ್ ನಿಯೋಗಿಸಲ್ಪಟ್ಟು ಅಪಕಾರಮಂ ಮಾಳ್ಪರ್ | "ಬುದ್ಧಿಶ್ಚಿತ್ತ ವಿಕಾರಿಣೀ" ತಚ್ಚ–ಅದುಕಾರಣ ಅವಿಶ್ವಾಸವು ಕಾರ್ಯವೆಂದು ಬೃಹಸ್ಪತಿಯ ಮತಂ ||

"ಅವಿಶ್ವಾಸೀ ತಥಾ ಚ ಸ್ಯಾದ್ಯಥಾ ಸಂವ್ಯವಹಾರವಾನ್||" ಅವಿಶ್ವಾಸರೊಳ್ ಸರ್ವಥಾ ಸಂವ್ಯವಹಾರಾಭಾವಂಪ್ರಾಪ್ತಮಾದೊಡಂ ಸಂವ್ಯವಹಾರದಿಂ ವಿಶ್ವಾಸಂಪುಟ್ಟುಗುಂ|ಅವಿಶ್ವಸ್ತನಾದ ದಂಡನಾಯಕಾಧ್ಯಕ್ಷನಂ ವಿಶ್ವಸ್ತನಂ ಮಾಳ್ಪುದು | ವಿಶ್ವಸ್ತನೊಳ್ ಸ್ವಾಮಿಯು ತಾನತಿವಿಶ್ವಾಸಮಂ ಮಾಡಲಾಗದು | ಲೇಶತಃ ವಿಶ್ವಸ್ತನಾದ ಅವನೊಳ್ ಸ್ವಾಮಿ ವಿಶ್ವಾಸಮನೆಯ್ದುತಿದ್ದಾನು |

ಆತಂ ವಿಭೂತಿಪಾತ್ರಮೆ | ಇತಿ-ಅದು ಅನುಜೀವಿಗಳ್ಗೆ ವುಪದೇಶಂ | ಹೇಗೆ ಸ್ವಾಮಿ ವಿಶ್ವಸ್ತನಪ್ಪಂ ಹಾಗೆ ಯತ್ನವುಂ ಮಾಡಲ್‌ತಕ್ಕುದು | ವಿಶ್ವಾಸಿಯುಂ ಸಂವ್ಯವಹಾರವಂತನುಂ ಹೇಗೆ ಅಪ್ಪಂ ಆತಗುಪದೇಶಿಸಲ್ಪೇಲ್ದಪಂ | ಪ್ರಾದುರ್ಭವಂತಿ-ಪುಟ್ಟುತಿದ್ದಾವು| ಅರ್ಥಸಂಬಂಧಂಗಳನೊಡನೆಯೆ ಚಿತ್ತಂಗಳ್| ಮಿತ್ರತ್ವಾಪಾದಕವಾದ ಕಾರ್ಯ ಮುತ್ಪನ್ನವಾದೊಡೆ ಚಿತ್ತಮುಂಸ್ನಿಗ್ಧಮಪ್ಪುದು| ವಿಶ್ವಾಸಮುಂ ಸಂವ್ಯವಹಾರಮುಂ ಪುಟ್ಟುಗುಂ| ಶತ್ರುತ್ವಾಪಾದಕಕಾರ್ಯಮುಂಟಾಗೆ ಚಿತ್ತಮುಂ ಶತ್ರುಭಾವಿಯಕ್ಕುಂ. "ಕಾರ್ಯಂ ಮಿತ್ರಾನುಕಾರಕಂ" ಪ್ರತಿಕ್ಷಣಮುಂ | ಅದುಕಾರಣ ಯೋಗಿಯಹಾಗೆ ಏಕಾಗ್ರಚಿತ್ತನಾಗಿ ಆ ಕಾರ್ಯಂಗಳಂ ನೋಲ್ಪುದು | ಪ್ರತೀಕಾರಾರ್ಥಂ ವಿಶ್ವಾಸಮಂತನುಂ| ಸಂವ್ಯವಹಾರ(ವಂತ)ನುಂ ಪ್ರವರ್ತಿತಮೆಂದು ಸ್ಮಾರಿತವನೆ ಸಮರ್ಥಿಸುತುಂ ಪೇಲ್ದಪಂ| ಉದ್ಯೋಗಾದನಿವೃತ್ತಸ್ಯ ಸುಸಹಾಯಸ್ಯ ಧೀಮತಃ ಛಾಯೇವಾನುಗತಾ ತಸ್ಯ ನಿತ್ಯಂ ಶ್ರೀಃ ಸಹಚಾರಿಣೀ | ಇತಿ | ಉದ್ಯೋಗಾತ್ – ವ್ಯವಸಾಯದತ್ತಣಿಂ ಅನಿವೃತ್ತಸ್ಯ–ಸತತೋದ್ಯೋಗಿಗೆ ಎಂಬುದರ್ಥಂ | ಸುಸಹಾಯಸ್ಯ ಧೀಮತಃ ಇತಿ ಪ್ರತೀತಂ | ಛಾಯೇವ ಸ್ವಕೀಯಛಾಯೆಯು ಹೇಗೆ ಹಾಗೆ ಅನುಸರಿಸಿ ಆತಂಗೆ ನಿತ್ಯಂ ಶ್ರೀ–ಸಂಪತ್ತು | ಸಹಚಾರಿಣೀ–ಅವಿಚ್ಛಿನ್ನಮಪ್ಪುದು | ಉಪಸಂಹರಿಸುತ್ತೆ ಪೇಲ್ದಪಂ | ಸ್ವನುಗತಾ-ವಿಧಿವತ್ತರಾ ಪಾರಿತೋಷಿಕ ದಾನಮಾನಾದಿ | ಮಧುರಾವಚಃ | ಅನುರಕ್ತಮಾದ ಸಮಸ್ತ ಲೋಕಮನುಳ್ಳ | ಸುನಿಪುಣಮಪ್ಪಂತು ಪರಂ ಆತ್ಮತಂತ್ರಂ ಸಮಸ್ತಮಂಡಲನಾದ ನೃಪತಿ | ಆತಂ ಸುದೀಪ್ತರಶ್ಮಿಃ-ತೇಜಸ್ವಿ | ಪ್ರತಿಸಂಪತ್ಕರಣ ಸ್ವಾಮಿ ಪ್ರಕೃತಿ | ಆಭಿಗಾಮಿಕಸಂಪರೀತ | ಗುಣಸಂಪಾದನದಿಂ |

ಶ್ರೀಮತ್ಕಾಮಂದಕೀಯ ನೀತಿಸಾರ ಟೀಕಾಯಾಂ

ಉಪಾಧ್ಯಾಯ ನಿರಪೇಕ್ಷಾಯಾಂ

— ಪಂಚಮಸ್ಸರ್ಗಃ [೫] —

— ಷಷ್ಠಸ್ಸರ್ಗಃ —

ಆತ್ಮಲೋಭಸಮೇತಾದಿ। ಪ್ರಕೃತೀನಾಂ ಆತ್ಮಲೋಭಸಮೇತಮಾದ ಪ್ರಕೃತಿಗಳ್ಗೆ ಸ್ವಸ್ವಗುಣಸಂಪಾದನದಿಂ ಸಾತ್ಮಲಾಭಂ ಸಂಪನ್ನಮಾದುದು। ಯಿಾ ಪ್ರಕಾರದಿಂದ ಸಪ್ತಾಂಗಕ್ಕೆ ಆತ್ಮಲಾಭ ಸಂಪನ್ನಮಾದುದು। ಈ ಪ್ರಕಾರದಿಂ ಪಾಲನವು ಆದ್ಯವು। ಅದಂ ಪೇಳ್ದಪಂ। ಲೋಕೇ – ಲೋಕವ್ಯವಹಾರದೊಳ್। ಲೋಕವ್ಯವಹಾರ ಭೇದ ವಶದಿಂ। ಕಾಲವಶದಿಂದಲುಂ ಅನ್ಯಮಪ್ಪುದು। ತದ್ಯಥಾ–ಅದು ಹೇಗೆ ಮಧ್ಯದೇಶದೊಳ್ ಅನ್ಯಧರ್ಮಂ। ಪ್ರತ್ಯಂತಮಾದ ಪಾರಸೀಕಾದಿಗಳೊಳ್ ಬೇರೆ ಧರ್ಮಂ। ಹಾಗೆ ಕೃತಯುಗ ದೊಳ್ ಬೇರೆ ಧರ್ಮಂ। ಎಂದು ಲೋಕವ್ಯವಹಾರ ಕುಶಲಂ। ವೇದಕುಶಲಮೆಂಬುದಱಿಂ। ವೇದೋಕ್ತಮಾದ ಲೋಕವ್ಯವಹಾರಮಂ ನೋಡಿ ಉಭಯಾವಿರುದ್ಧಮಾಗಿ ವ್ಯವಹರಿಪುದು। ಹಾಗೆ ಲೋಕವೇದ ಕುಶಲರಾದ ಅನುಜೀವಿಗಳಿಂ ಪರಿವೃತನಾಗಿ ಯೆಂಬುದಱಿಂ। ಸ್ವಯಂ ಪರಿಜ್ಞಾತಮಂ ಪರಿಜನರಿಂ ತಿಳಿದು ಮಾಳ್ಪುದೆಂದು ಭಾವಂ। ಸಾವೃತಃ। ವೃತಾದರನಾಗಿ ಚಿಂತಯೇದಿತಿ ಪಾಲನಾರ್ಥಚಿಂತೆಯಂ ಮಾಳ್ಪುದು। ಸ್ವಬಾಹ್ಯಾಭ್ಯಂತರ ವಿಭಾಗದಿಂದ ಇದ್ದ ರಾಜ್ಯಮಂ ನೃಪಂ ವಿಜಿಗೀಷು ಶರೀರಮೆ।

ತಥಾ ಚ ಕೌಟಲ್ಯಃ-ರಾಜಾ ರಾಜ್ಯಮಿತಿ-ಪ್ರಕೃತಿಸಂಕ್ಷೇಪಮಿತಿ ಬಾಹ್ಯಾಭ್ಯಂತರಮಾದೊಡೆ ರಾಷ್ಟ್ರಮೆ ಉದಾಹರಿಸಲ್ಪಟ್ಟುದು। ಅಶೇಷಪ್ರಕೃತಿಯಂ ರಾಷ್ಟ್ರದೊಳೆ ಉತ್ಪನ್ನಮಾಗುತಿದ್ದೀತು। ಎಂದು। ಅನ್ಯೋನ್ಯಾಧಾರಸಂಬಂಧಾತ್। ಇತಿ। ಅರಸಿಂದ ವ್ಯತಿರಿಕ್ತಮಾಗೆ ರಾಷ್ಟ್ರಮಿಲ್ಲ। ರಾಷ್ಟ್ರಮಿಲ್ಲದೆ ಅರಸುಮಿಲ್ಲ। ಎಂದು। ಅದುಕಾರಣದಿಂ ಇದು ಏಕಮೆಯೆಂದು। ಇದನೆ ಪೇಳ್ದಪಂ। ರಾಜ್ಯಾಂಗಮಾದ ಸಮಸ್ತಮಾದ ಅಮಾತ್ಯಾದಿಗಳ್ಗೆ ರಾಷ್ಟ್ರವು ಸಂಭವಮಾಗುತಿದ್ದೀತು। ಆವರಾಷ್ಟ್ರದಿಂ ಕೋಶಂ। ಕೋಶದಿಂ ಚತುರಂಗಂ। ಚತುರಂಗದಿಂದ ಅರಿಯರಾಷ್ಟ್ರದ ಭೂಮ್ಯೇಕಾನ್ತರಂ। ಮಿತ್ರಂ ರಾಷ್ಟ್ರದೊಳ್ ಸ್ಥಾಪನೀಯಂ। ದುರ್ಗಮುಂ ರಾಷ್ಟ್ರದಿಂದಮೆ। ಜನಪದಾದಿಗಳ್ ಅಮಾತ್ಯರೆಂದು। ಅದುಕಾರಣ ಸರ್ವಪ್ರಯತ್ನದಿಂದ ರಾಜಾ–ಅರಸು। ರಾಷ್ಟ್ರಂ-ಪ್ರಸಾಧಯೇತ್। ರಾಷ್ಟ್ರಲಾಭಮಂ ಪಾಲನಮಂ ಮಾಳ್ಪುದೆಂದು। ಅರ್ಥಂ। ಲೋಕ ಆರಾಷ್ಟ್ರ ಕೆಲನುಗ್ರಮನಿಚ್ಛೈಸುತ್ತೆ ? ಇತ್ಯಾದಿಯಂ ರಾಷ್ಟ್ರಸಂಪತ್ತಿಯ ನಿಚ್ಛೈ(ಸು)ವ ಅರಸು। ಶರೀರಸುಖಮನನುಪಾಲಿಪುದು। ಈ ಅಭಿಪ್ರಾಯದಿಂ ಶರೀರ ಪಾಲನಮುಂ ಧರ್ಮಾರ್ಥ ಮಪ್ಪುದು। ರಾಜರಕ್ಷಣಮೆ ಬೇರೆ ಧರ್ಮಮಿಲ್ಲ।—

ತಥಾ ಚ ಕೌಟಲ್ಯಃ—

" ರಾಜ್ಞೋ ಹಿ ವ್ರತಮುದ್ಥಾನಂ ಯಜ್ಞಸ್ತಸ್ಯಾಭಿಷೇಚನಂ।
ರಕ್ಷಿಣಾ ಸಮವೃತ್ತಿಸ್ತು ದೀಕ್ಷಾ ತಸ್ಯಾಭಿಷೇಚನಮ್ ॥ "

ಈ ಪ್ರಕಾರಮಾದ ಧರ್ಮಕ್ಕೆ ಶರೀರಮೆ ಸಾಧನಮೆಂದು ಧರ್ಮಾರ್ಥಿಯಾದ ವಿಧರ್ಮ ಅರಸುಗಳ್ಗೆ ಪ್ರಜಾರಕ್ಷಣಮೆ ಧರ್ಮರಕ್ಷಣಮುಂ ಚೋರಾದಿಹಿಂಸೆಯಲ್ಲಿ ನುಳಿದು ಸಾಗದು ತದ್ಧಿತಾವಂಕಿಯಾಗಿ ಅವರಂ ಕುರಿತು ಪೇಳ್ದಪಂ। ಧರ್ಮಮಾರೇಭಿರೇ ಹಿಂಸಾ ಮಿತ್ಯಾದಿ। [ಧರ್ಮ]ದತ್ತಣಿನನಪೇತಮಾದ ಹಿಂಸೆಯನಾರಂಭಿಸಿದರ್। ಋಷಿಕಲ್ಪಾಃ-ಮಹರ್ಷಿ ಸಮಾನರೇ। ಯಥಾ-ಹೇಗೆ। ಮಹರ್ಷಿಗಳ್ ಯಜ್ಞಂಗಳೊಳ್ ಧರ್ಮಮಾದ ಪಶ್ವಾಲಂಭನ ಲಕ್ಷಣಮಾದ ಹಿಂಸೆಯಂ ಮಾಡುತಿದ್ದಾರು। ಹಾಗೆ। ರಾಜರ್ಷಿಗಳುಂ ಚೋರಾದಿನಿಗ್ರಹರೂಪಮಾದ ಧರ್ಮ ಮಾದ ಹಿಂಸೆಯಂ ಮಾಡುತಿದ್ದಾರು। ಅದು ಕಾರಣದತ್ತಣಿಂ ಅಸಾಧುಗಳಾದ ಪಾಪಾತ್ಮಕರಂ ಹಿಂಸೆ ಮಾಳ್ಪರ್। ದೋಷಾನುಲಿಪ್ತರಾಗರ್। ಎಂದು। ಧರ್ಮಾಃ ವರ್ಣಾಶ್ರಮಧರ್ಮಂಗಳ್। ಸ್ವಧರ್ಮಸಂರಕ್ಷಣಮುಂ ಪರಧರ್ಮಸಂಕರ ನಿಷೇಧದತ್ತಣಿಂ ಧರ್ಮಾರ್ಥ। ವಿವರ್ಧಯೇತ್। ಅರ್ಥಾರ್ಜನ ವಿವರ್ಜನಮುಂ ಅಧರ್ಮಹಿಂಸಾದಿ ವ್ಯತಿರಿಕ್ತಮಪ್ಪಂತು ಸ್ವಧರ್ಮಮಂ ವರ್ಧಿಪುದು। ಆರು ಕೆಲವರು ಪ್ರಜೆಗಳಂ ಬಾಧಿಸುತಿದ್ದಾರು ಅವರಂ ಮಹೀಪತಿ ನಿಗ್ರಹಿಪುದು। ಈ ಪ್ರಕಾರಮಾ ದೊಡೆ ಹಿಂಸಾದೋಷಮಿಲ್ಲಮೆಂಬುದರ್ಥಂ। ಸರ್ವಸಾಧಾರಣ ಧರ್ಮಸ್ವರೂಪಮಂ ಪೇಳ್ದಪಂ। ಯಂ-ಆವುದನು। ಆರ್ಯಾಃ - ಸಾಧುಗಳು। ಆಗಮವೇದಿನಃ - ಸಮಯಾಗತಾಗಮಜ್ಞರು। ಶಂಸಂತಿ-ಕೊಂಡಾಡುತಿದ್ದಾರು। ವಿಧಿನಿಷೇಧಕಮಾದ ಅನುಷ್ಠಾನಮಂ। ಸಃ-ಅದು। ಧರ್ಮಂ। ಈ ಪ್ರಕಾರಮಾಗೆ ಸಕಲದೇಶಕಾಲಜಾನಾತಿಭೇದೇಷು ಅಸ್ಯವಿರುದ್ಧಃ–ಯಿಾ ಧರ್ಮಕ್ಕೆ ವಿರುದ್ಧ ಮಾದುದು ಅಧರ್ಮಂ। ಯಂ-ಆವುದಂ ಗರ್ಹನ್ತಿ-ನಿಂದಿಸುತಿದ್ದಾರು। ಅದಂ ಅಧರ್ಮಮೆಂದು ಪೇಳ್ದರ್ — ಎಂದು ಧರ್ಮಾಧರ್ಮಂಗಳ್ ಜಾತಿಕುಲಾನುಗದತ್ತಣಿಂ ಪ್ರಾಣಿವಿಹಿತಂಗ ಳೆಂದು। ಜಾನನ್ - ಸ್ಫುಟಮಹುಣ ಹೇಗೆಹಾಗೆ ಶಾಸನೇ - ಉಪದೇಶದೊಳ್ ಆಭಿಮುಖ್ಯದಿಂ ರಕ್ಷೆಯತ್ತಣಿಂ। ಸತಾಂ-ಸದಾಚಾರ್ಯರ। ಪ್ರಜೆಯಂ ಸಾಧುಮಪ್ಪಂತು ಉಪದ್ರವಂಗಳತ್ತಣಿಂ ರಕ್ಷಿಪುದು। ತತ್ಪರಿಪಂಥಿಗಳಂ–ಪ್ರಜೋಪದ್ರವಕಾರಕರಂ। ನಿಗ್ರಹಿಪುದು। ರಾಜ್ಯಂ–ರಾಷ್ಟ್ರ ಮೆಂದು ಪೇಳಲ್ಪಟ್ಟುದು। ತದುಪದ್ರವಮನಾರುಮಾಳ್ಪರ್। ರಾಜವಲ್ಲಭರ್ ಪ್ರತ್ಯೇಕಂ– ಒಬ್ಬೊಬ್ಬರನಾದೊಡಂ ಸಂತತರನಾದೊಡಂ, ದೂಷ್ಯರ್ ವಧ್ಯರುಮಾಗಿ ಪೇಳ್ವರವರಂ। ಪೂರ್ವಾಚಾರ್ಯರೆಂದು। ವಧ್ಯರೊಳ್ ಕರ್ತವ್ಯಮಂ ಪೇಳ್ದಪಂ। ದೂಷ್ಯಾಃ–ವಧ್ಯರಂ। ಉಪಾಂಶುದಂಡಂ। ಪ್ರಚ್ಛನ್ನವಧಂ। ಗುಪ್ತ-ಮಾನ। ಶಾಸ್ತ್ರೋಪಯೋಗಕೃತಂ। ಅಥವಾ– ಹಾಗಲ್ಲದೊಡೆ। ಪ್ರಧಾಷ್ಯರಂ-ಅಶ್ಲಾಘ್ಯದೋಷಯುಕ್ತರಂ ಮಾಡಿ। ತಾಮವಿದ್ವೇಷಾದಿಗತರಂ ಮಾಡಿ ಹನ್ಯಾತ್ ॥ ನಿಗ್ರಹಿಪುದೆಂದು ಅನುವರ್ತಿಸುತಿದ್ದೀತು। ಪ್ರದೂಷಣಪ್ರಯೋಗಮಂ ಪೇಳ್ದಪಂ। ರಾಜಾ-ಅರಸು। ರಹಸಿ - ಏಕಾಂತದೊಳ್ ಮಧ್ಯಮಕಕ್ಷೆಯೊಳೆಂಬುದರ್ಥಂ। ದೂಷ್ಯಾನ್-ಕುಲಕ್ಷಣರಂ। ದರ್ಶನಂ ಕೋಸುಗ ಕರೆಯಿಪುದು। ಗೂಢ ಶಸ್ತ್ರಾಃ ಪ್ರಚ್ಛಾದಿಶಾಸ್ತ್ರ ರಾದ ಅರಸಿನಿಂದಲೆ ಮೊದಲೆ ಪ್ರದೂಷ್ಯರೊಡನೆ ಸಂಗಮುಮನೆಯ್ದಿಸಲ್ಪಟ್ಟ। ತದೀಯತ್ವೇನ ಖ್ಯಾಪಿತರಾದರ್। ಅನುಪ್ರವೇಶಿಪುದು–ಅಶಸ್ತ್ರಗ್ರಾಹಿಗಳ್। ಪ್ರಶ್ನೆಮಾಡಲ್ಪಟ್ಟ ಸಂಕೇತಮಂ ಪೇಳ್ವುದು। ಪ್ರಯೋಜಿಸಲ್ಪಟ್ಟವು। ದೂಷ್ಯಾ ವಧಾರ್ಥಮಾಗಿ ಸ್ವಾಮಿಯಿಂದ ಯೆಂದು ಇತ್ಯಾದಿ ಪ್ರಯೋಗಗಳಿಂ ದೂಷ್ಯರಂ ಸ್ವಾಮಿದ್ರೋಹ ವುತ್ತರಂ। ಸಂದೂಷ್ಯ। ಪ್ರಜಾಭಿವೃದ್ಧಿ ಗೋಸುಗ। ದೋಷಪ್ರಹಾರೇಚ್ಛುವಾಗಿ ಉತ್ಕೃಷ್ಟರಾಜ್ಯಶಲ್ಯಮಾದ। ದೂಷ್ಯಾದಿಮನುದ್ಧರಿ ಪುದು। ಪ್ರಜಾಭಿವೃದ್ಧಿಯಫಲಕ್ಕೋಸುಗ। ಯೆಂದು ಪೇಳ್ದಪಂ। ಯಥಾ ಬೀಜಾಂಕುರಂ

ಸೂಕ್ಷ್ಮಂ ರಕ್ಷಿಸಲ್ಪಟ್ಟ ಪರಿ ಪುಷ್ಟಮಾಗಿ ಫಲನಿಷ್ಪತ್ತಿ ದೇಶಕಾಲದೊಳ್ ಫಲನಿಷ್ಪತ್ತಿಗೋಸುಗ ಆಗುತಿದ್ದೀತು। ಹಾಗೆ ಪ್ರಜಾರಕ್ಷಣಮಂ ದುಷ್ಟದಂಡದತ್ತಣಿನಪ್ಪುದು। ಆ ದಂಡಮುಂ ಶಾಸ್ತ್ರೋಕ್ತಮೆ। ಶ್ರೇಷ್ಠಮೆಂದು ಪೇಳ್ದಪಂ। ಉದ್ವೇಜಯತಿ - ತೀಕ್ಷ್ಣೇನ - ನ್ಯಾಯದತ್ತಣಿನಧಿಕಮಾದ। ದಂಡದಿಂ ಉದ್ವೇಜಿಪಂ। ಪ್ರಜೆಗಳನೆಂದು ಶೇಷಂ। ದೀನಾನುಕಂಪೆಯಿಂ ಪ್ರಮಾಣಹೀನಮಾದ ದಂಡದತ್ತಣಿಂ ಪರಿಭವಿಸಲ್ಪಡುವಂ। ಭಯಾಭಾವದತ್ತಣಿನೆಂದು। ಆವನಂಗೆ ಆವದಂಡಂ ಯೋಗ್ಯಂ ಆ ದಂಡಮನೆ ನಿಯೋಜಿಪುದು। ಪಕ್ಷಪಾತಮನಾಶ್ರಯಿಸಿದೆ।

ತಥಾ ಚ ಕೌಟಲ್ಯಃ— ತೀಕ್ಷ್ಣೋದಂಡಃ ಪ್ರಜಾನಾಮುದ್ವೇಜನೀಯೋ ಭವತಿ। ಮೃದು ದಂಡಃ ಪರಿಭೂಯತೇ। ಯಥಾರ್ಹಮಾದಂಡಃ ಪೂಜ್ಯಃ ಸುವಿಜ್ಞಾತಪ್ರಣಿಹಿತೋ ದಂಡಃ ಪ್ರಜಾ ಧರ್ಮಕಾಮಾರ್ಥೈರ್ಯೋಜಯತಿ। ದುಷ್ಪ್ರಣೀತಸ್ತು ಕಾಮಕ್ರೋಧಾಭ್ಯಾಂ ಮಜ್ಞಾನಾದ್ವಾ ವಾನಪ್ರಸ್ಥಪರಿವ್ರಾಜಿಕಾನಪಿ ಕೋ [ಪಯೇತ್]

[ಶ್ರೀಮತ್ಕಾಮಂದಕೀಯಟೀಕಾಯಾಮುಪಾಧ್ಯಾಯನಿರಪೇಕ್ಷಾಯಾಂ
ಪ್ರಜಾ] ಕಂಟಕಶೋಧನಂ [ನಾಮ]

— ಷಷ್ಠಸ್ಸರ್ಗಃ [೬] —

— ಸಪ್ತಮಃ ಸ್ಸರ್ಗಃ —

....ಶೇಷಮೆ ಆದ ರಾಜಪುತ್ರ ಪರಿರಕ್ಷಣಮಾರಂಭಿಸಲ್ಪಡುತಿದ್ದೀತು। ಅರಕ್ಷಿತರಾದ ರಾಜಪುತ್ರರ್ ಕಂಟಕರಪ್ಪರ್, ತಂದೆಗಂ ಪ್ರಜೆಗಳ್ಗಂ। ತದರ್ಥಮಾಗಿ ಪೇಳ್ದಪಂ। ಪ್ರಜಾತ್ಮಶ್ರೇಯಸೇ – ಪ್ರಜೆಗಳ ತನ್ನ ರಕ್ಷಣಾರ್ಥಮಾಗಿ। ರಾಜಾ–ಅರಸು। ವಿಜಿಗೀಷು। ಆತ್ಮಜಾನಾ–ಪುತ್ರರ। ರಕ್ಷಣಮಂ। ಹೇಗೆ ಅವರ ರಕ್ಷಣಮೆಂದೊಡೆ–ತದರ್ಥಮಾಗಿ ಪೇಳ್ದಪಂ। ಲೋಲುಪ್ಯಮಾನಾ। ಲೋಭಮನೆಯ್ದುತ್ತೆ। ಅರ್ಥಾರ್ಥಮಾಗಿ। ಹನ್ಯುಃ–ಸಂಹರಿಪರ್। ವಿಜಿಗೀಷುವಂ। ಅರಕ್ಷಿತರಾದೊಡೆಯೆಂದು। ರಾಜಪು(ತ್ರತ್)ಯೌವನಾದಿ ಮದೋನ್ಮತ್ತರಾಗಿ। ಗಜಂಗಳಹಾಗೆ ನಿರಂತಭ್ರಾತೃವಂ–ರಾಜ್ಯಯೋಗ್ಯಭ್ರಾತೃವಂ ತಂದೆಯಂ – ಅವಮಾನಿತರಾಗಿ ತಾನೆ ಅರಸುಯೆಂಬ ಅಭಿಮಾನದಿಂ। ಆತ್ಮಸಂಭಾವನೆಯಿಂದ ಯುಕ್ತಾಃ ಇತಿ – ತಥಾ ರಾಜಪುತ್ರೈಃ–ಮದೋನ್ಮತ್ತರಾದ ಅಭಿಹಿತವಧದತ್ತಣಿಂ। ಜಾತೋನ್ಮಾದಪುತ್ರರಿಂದ ಅಭಿಲಷ್ಯಮಾಣಮಾದ ರಾಜ್ಯಂ। ಇತಸ್ತತಃ – ಎಲ್ಲಾಕಡೆಯಲ್ಲಿ। ಅಭಿಯೋಗದತ್ತಣಿಂ। ವ್ಯಾಘ್ರಾಭಿಲಷಿತಮಾದ ಮಾಂಸದಹಾಗೆ। ದುಃಖದಿಂ ರಕ್ಷಿಸಲ್ಪಡುತಿದ್ದೀತು। ರಕ್ಷ್ಯತಂದೆಯಿಂದ ಆಪ್ತರಿಂ ರಕ್ಷಿಸಲ್ಪಟ್ಟೊಡಂ ಕಥಂಚಿತ್। ರಕ್ಷಾಶೈಥಿಲ್ಯಮನೆಯ್ದಿದೊಡೆ ಆಗ ರಾಜಪುತ್ರರ್ ಸಿಂಹ ಶಿಶುಗಳಹಾಗೆ। ಘ್ನಂತಿ–ನಾಶಮನೆಯ್ದಿಪರ್। ರಕ್ಷಕನಾದ ತಂದೆಯಂ। ಅಸಂಶಯಂ–ಸಂಶಯಮಿಲ್ಲ। ನಿಶ್ಚಯಮೆಂಬುದರ್ಥಂ। ರಾಜಪುತ್ರರಕ್ಷಾಪ್ರಕಾರಮಂ ಸುಶ್ಲಿಷ್ಟಮಾಗಿ ಪೇಳ್ದಪಂ। ವಿನಯಃ–ವಿನಯಂ ದ್ವಿವಿಧಂ। ಕೃತಕಮೆಂದುಂ ಸ್ವಾಭಾವಿಕಮೆಂದುಂ। ಸಹಜಂ ಜನ್ಮಾಂತರವಾಸನಾಯಾತಂ। ಕೃತಕಂ–ವಿದ್ಯಾಬುದ್ಧಿ ಸಂಯೋಗಜನಿತಂ। ಆ ದ್ವಿವಿಧವಿನಯಮಂ ಉಪಗ್ರಹಮಾಗಿ ಬಂಧನಮಾಗಿ ವುಳ್ಳವರನಾಗಿ ಕುಮಾರರಂ ಭೃತ್ಯರಂ। ನೃಪತಿಯು ಮಾಳ್ಪುದು। ಅವಿನೀತ ರಾಜಕುಮಾರಮಾದ ರಾಜಕುಲಂ। ಆಶು–ಶೀಘ್ರಮಾಗಿ। ನಶ್ಯತಿ - ನಾಶಮನೆಯ್ದುವುದು।

ತಥಾ ಚ ಕೌಟಲ್ಯಃ— ಕುಟ್ಟಿಹಿಡಿದ ಕಾಷ್ಠದಹಾಗೆ ಅವಿನೀತಪುತ್ರಮಾದ ರಾಜಕುಲಂ। ತಸ್ಮಾದ್-ಅದುಕಾರಣದತ್ತಣಿಂ ಗರ್ಭಿಣಿಯಾದ ರಾಜಮಹಿಷಿಯೊಳ್ ಕೌಮಾರ ಭೃತ್ಯಾಕುಶಲರಿಂ ಗರ್ಭಚಿಕಿತ್ಸಾನಂತರ ಮುತ್ಪನ್ನರಾದ ರಾಜಕುಮಾರಂಗೆ ಜಾತಕರ್ಮಮಂ ಪುರೋಹಿತಂ ಮಾಳ್ಪುದು। ಈ ಪ್ರಕಾರದಿಂ ವಿಧೇಯವಿನಯೋಪಗ್ರಹದಿಂ ರಾಜಪುತ್ರರಂ ರಕ್ಷಿಪುದು। ಎಂದು ಭಾವಂ। ಅವಿನೀತಕುಮಾರಮಾದ ರಾಜಕುಲಂ। ಅಚಿರಾತ್-ಶೀಘ್ರದಿಂ। ವಿಶೀರ್ಣಮಕ್ಕುಂ। ವಿನೀತಂ-ದ್ವಿವಿಧವಿನಯಯುಕ್ತನಾದ। ಔರಸಕ್ಷೇತ್ರಜಾದಿಕಮಂ ಯೌವರಾಜ್ಯದೊಳ್ ಅಭಿಷೇಚಿಪುದು। ಉದ್ವೃತ್ತಃ - ದುಷ್ಟನಾದೊಡೆ ದುಷ್ಟಗಜಮಂ ಹೇಗೆ ಹಾಗೆ ಸುಖಬಂಧನಮಂ ಮಾಳ್ಪುದು। ಗ್ರಾಮ್ಯಸುಖಂಗಳೊಳ್ ಯಾ ಪುತ್ರರಂ ಬಿಡಲಾಗದು। ಸುಖೋಪರುದ್ಧರಾದ ರಾಜಪುತ್ರರು ತಂದೆಯ ರಕ್ಷಿಸರೆಂಬ ಕಾರಣದಿಂ ಸುಖಬಂಧನರಂ ಮಾಳ್ಪುದು। ಎಂದು ಕೌಟಲ್ಯಂ ರಾಜಪುತ್ರಂ ಸುದುರ್ವತ್ತನಾದೊಡಂ ಪರಿತ್ಯಾಜ್ಯನಲ್ತು। ಪರಿತ್ಯಕ್ತನಾದೊಡೆ ಕ್ಷುತ್ತೃಷ್ಣಾದಿಗಳಿಂದ ಕ್ಲಿಶ್ಯಮಾನನಾಗಿ ವಿಪಕ್ಷರನಾಶ್ರಯಿಸಿ ಯೇನುಕಾರಣದಿಂ ತಂದೆಯಂ ಕೊಲ್ವಂ। ಅದು ಕಾರಣದತ್ತಣಿಂ ಸರ್ವಪ್ರಕಾರದಿಂದ ರಾಜಪುತ್ರರ್ ರಕ್ಷಣೀಯರ್ ಯೆಂದ—

ತಥಾ ಚ ವ್ಯಾಸಃ — ವ್ಯಸನೇ ಪರಸ್ತ್ರೀಮದ್ಯದ್ಯೂತಾದಿ ಸಪ್ತವ್ಯಸನದೊಳ್ ಸಜ್ಜಮಾಶಕ್ತಿಯನೆಯ್ದುತಿಹ ಪ್ರಣಿಹಿತವ್ಯಂಜನಗಳಿಂದ ಅದಕ್ಕೆ ವ್ಯಸನಸಂಪಾದಕತ್ವವು। ತಥಾ ಚ ವಿಜಿಗೀಷುವು ರಾಜಪುತ್ರನಂ ತನಗೆ ವಶಮಪ್ಪಂತು ಕ್ಲೇಶಪಡಿಸುವುದು।

ತಥಾ ಚ ಕೌಟಲ್ಯಃ— ಪರಸ್ತ್ರೀಯರೊಳಾಸಕ್ತನಂ ಆಚಾರ್ಯರ್ ಸಂಗತರಾದ ಅರುಚಿಗಳಾದ ಸ್ತ್ರೀಯರಿನುದ್ವೇಜಿಪುದು |

ಪುತ್ರರಕ್ಷಣಮುಂ ಪೇಲ್ದು ಆತ್ಮರಕ್ಷಣಮಂ ಪೇಲ್ದಪಂ | ಯಾನೇ-(ಇತಿ) ವಾಹನದೊಳ್ ಶಿಬಿಕೆಮುಂತಾದಿ | ಆಸನಂ - ಸಿಂಹಾಸನಂ | ಆದಱೊಳಂ | ಭೋಜ್ಯೇ-ಆಹಾರಾದಿಯೊಳ್ | ಪಾನೇ - ಪಾನೀಯಾದಿಯೊಳ್ ವಸ್ತ್ರೇ-ವಸನೋತ್ತರಿಯಾದಿಯೊಳ್ ಸರ್ವತ್ರ ಬಾಹ್ಯಸ್ತ್ರೀ ಸಂಸರ್ಗಾದಿಯೊಳ್ | ಅಪ್ರಮತ್ತಃ - ಸಾವಧಾನನಪ್ಪುದು | ವಿಶ್ವಾಸಮಂ ಮಾಡಲಾಗದು | ತಥಾಚ-ಬುದ್ಧಿವೇದ್ಯಮಾದ ಲಿಂಗಂಗಳಿಂ ವಿಷದೂಷಿತಮಂ ತಿಳಿದು ಪರಿಹರಿಪುದೆಂಬುದರ್ಥಂ | ವಿಷಪ್ರತೀಕಾರಾರ್ಥಮಾಗಿ ಪೇಲ್ದಪಂ | ವಿಷಘ್ನಮಾದ ಉದಕಂಗಳಿಂ ಸ್ನಾನಮಂ ಮಾಡಿ—

ತಥಾ ಚ ಕೌಟಲ್ಯಃ— ಸ್ವೇತಾದಿಗಳ್ ಗುಪ್ತಮಾದ ಸರ್ಪವಿಷಂಗಳಂ ಸಹಿಸವು- ಎಂದು ತಥಾ ವಿಷಘ್ನಮಣಿಭೂಷಿತಃ (ಇತಿ)

ತಥಾಚೋಕ್ತಂ—

ರಚಿತೋ ಗರುಡೋದ್ಗಾರಮಣಿರ್ಯಸ್ಯವಿಭೂಷಣಂ |
ಸ್ಥಾವರಂ ಜಂಗಮಂ ತಸ್ಯ ವಿಷಂ ನಿರ್ವಿಷತಾಂ ವ್ರಜೇತ್|| ಇತಿ—

ಪರೀಕ್ಷಿತಂ - ವಕ್ಷ್ಯಮಾಣಪ್ರಕಾರದಿಂ ರಾಜಾಜಾಂಗಲಿವಿದ್ಭಿಷವೃತಃ – ಇತಿ - ಮಹಾನುಭಾವನಮಾಗಿ ಬುದ್ಧರದ್ಧಾಂತೋದ್ವೃತ್ತಮಾದುವು ಜಾಂಗಳ್ಯಿ | ಭಿದಾವಿದ್ಯೆ, ತದ್ವಿದಿಗಳಾದ ಭಿಷಕ್ಕುಗಳಿಂದ ಪರಿವೃತನಾಗಿ | ರಾಜಾ-ಅರಸು | ಭೋಜ(ನ)ಮಂ ಮಾಳ್ಪುದು ಯೆಂಬುದರ್ಥಂ | ವಿಷದೂಷಿತಪರೀಕ್ಷಮಂ ಪೇಲ್ದಪಂ | ಭೃಂಗರಾಜಂ - ಕೃಷ್ಣರಾಜಪಕ್ಷಿಗೆ ಲೋಪುಚ್ಛಕಮೆಂದು ಪ್ರತೀತಂ | ಶುಕಾಃ - ಶಾರಿಕೆಗಳೆಂದುಂ ಪ್ರತೀತಂಗಳ್ ಪಕ್ಷಿಗಳ್ | ಕ್ರೋಶನ್ತಿ ಭೃಶಮುದ್ವಿಗ್ನಾ ವಿಷಪನ್ನಗದರ್ಶನಾತ್|| ಇತಿ - ಪ್ರತೀತಂ ಚಕೋರ ಇತಿ | ಚತೋರೋಲೋಹಿತಾಕ್ಷಃ ಪಕ್ಷೀ | ತಸ್ಯ - ಆ ಚಕೋರದ | ನೇತ್ರೇ - ನಯನಂಗಳ್ (ಎರಡುಂ) ವಿರಜ್ಯೇತೆ - ಶ್ವೇತಂಗಳಪ್ಪುವು | ಸುವ್ಯಕ್ತಮುಪ್ಪಂತು | ಮಾದ್ಯತಿ - ಮದಿಪುದು | ಸುರೆಯಿಂದ ಹೇಗೋ ಹಾಗೆ ಕ್ರೌಂಚಂ-ಲೋಹಿತಮಸ್ತಕಮಾಗಿರ್ದ ಪಕ್ಷಿ | ಕೋಕಿಲಮಾದೊಡೆ ಸುತ್ತಮಾಗಿ ಮರಣಮನೆಯ್ದುಗುಂ | ಪ್ರಾಣಂಗಳಂ ಬಿಡುವುದು | ಜೀವಂಜೀವಕಮಾದ ಪಕ್ಷಿಗೆ, ಗ್ಲಾನಿಃ - ಪೀಡೇವಿಷದರ್ಶನದಿಂದಪ್ಪುದು| ಈ ಉಕ್ತಪಕ್ಷಿಗಳೊಳ್ ಅನ್ಯತಮದಿಂದಲಾದೊಡಂ ಪರೀಕ್ಷಿತಮಾದೊಡೆ ವಿಷದೋಷರಹಿತಮಪ್ಪುದು ಸಮುಕ್ಷೀಯಾನ್ನಾನ್ಯಥಾ ಇತಿ| ತಥಾಮಯೂರಸ್ಯಪ್ರತೀತಂ| ಭೋಜನಾರ್ಥಮಾದ ಅನ್ನಮಂಕುಡುವುದು | ಮೊದಲು ಅಗ್ನಿಗೋಸುಗ | "ವಯೋಭ್ಯಶ್ಚ ತಥಾ ದದ್ಯಾತ್ ತತ್ರ ಲಿಂಗಾನಿ ಲಕ್ಷಯೇತ್|" ಇತಿ ಪ್ರತೀತಂ | ದೂಮ್ರಾ ಪ್ರತೀತಂ ಅಸ್ಪಿನ್ನತಾ | ಕೋಕಿಲೋಜ್ಜ್ವಲಮಯೂರಸ್ಕಂಧಸದೃಶ ಇತಿ | ವ್ಯಸನದಿಂ ಶೀಘ್ರಶುಷ್ಕತ್ವಮಂ ತ್ವಥನಮುಗ್ನಿಯನುಳಿದು ? ಶ್ಯಾಮ ಫೇನತ್ವಮಂ | ತಥಾ ಛಾಯೇತಿ | ಕ್ಷೀರಜಲಮಧ್ಯಾದಿ ಛಾಯೆ | ದೀಪ್ತಿಯು ಅಧಿಕವಾಗಿ ಯಾದೊಡಂ ಕಾಣಲ್ಪಡುಗುಂ | ವಿಷದೂಷಿತದೊಳ್ | ರಾಜಿಃ ರೇಖೆಯು ಫೇನಮಂಡಲಮುಂ ದೃಶ್ಯತೇ | ರಸಸ್ಯ ನೀಲಾ ಪಯಸಸ್ತತಾಮ್ರಾ ಮಧ್ಯತೋಯಸ್ಯ ಚ ಕೋಕಿಲಾಭಾ ಶ್ಯಾಮಾ ಚ ದಗ್ಧಾ ವಿಷದೂಷಿತಸ್ಯ|| ಮಧ್ಯದೊಳೂರ್ಧ್ವಗತಮಾದ ರೇಖೆಯುಂ | ಶುಷ್ಕಾದಿರಸಕ್ಕೆ ನೀಲರೇಖೆಯು |

ಪಯಸ್ಸಿಗೂ-ಕ್ಷೀರಕ್ಕೂ| ತಾಮ್ರರೇಖೆ | ಮಧ್ಯಕ್ಕೂತೋಯಕ್ಕೂ ಕೋಕಿಲಾಭಾ—"ಶ್ಯಾಮಾ ಚ ದಗ್ಧೋವಿಷದೂಷಿತಸ್ಯ |ಮಧ್ಯೇಭಿನತ್ಯೂರ್ಧ್ವಗತಾ ಚ ರೇಖಾ |" ತಥಾ | ಆರ್ದ್ರಮಾದ ಚೂತಫಲಾದಿಗೆ, ಸಮಸ್ತಮಾದ ಹರಿತ(ಕ)ಕ್ಕೆ ಪ್ರಮ್ಲಾನಭಾವವು | ಸದ್ಯಃ-ತತ್ಕ್ಷಣದೊಳ್ ಅಪ್ಪುದು, ವಿಷದೂಷಿತಕ್ಕೆ | ಉತ್ಪತ್ವತಾಪಾ ಕರಾಲಮನುಳಿದುಂ ವೃಂತಪ್ರದೇಶದೊಳ್ಳುತ್ತಿಪ್ಪದನುಂ | ವಿನೀಲಮುಂ-ಒಂದಾನೊಂದು ವೇಳೆಯೊಳೆ ಶ್ಯಾಮತ್ವಮುಮೆಂದು | ತದ್ಜ್ಞಾಃ-ವಿಷದೂಷಿತಲಕ್ಷಣಜ್ಞರು ಪೇಲ್ವರ್ | ತಥಾ ಶುಷ್ಕಮಾದ ವಲ್ಲೂರ ವತ್ಸ್ಯಾದಿಗೆ ವಿಷೋಪಪದೇಹದತ್ತಣಿಂ|ವಿವರ್ಣತಾ ಅವಯವಾಂಶಗಳೊಳು ಶೀಘ್ರಮುಪ್ಪುದೆಂದು ಕೆಲವರ್ಮೃದುವಿಗೆ ಕಟುತ್ವಮುಂ ಪೇಳ್ವರ್| ಕೆಲವರ್ ವಿಷದಿ(ದ)ಗ್ಧಸಮೀಪದೊಳ್ ಪಿಪೀಲಿಕಾದ್ಯಲ್ಪಜಂತುಘಾತಮಂ ಪೇಳ್ವರ್ | ಕಾರ್ಪಾಸತೂಲಾನಿತಿ | ಅವರ, ವ್ಯಾಯಾಮೈಃ - ಮಂಡಲಂಗಳಿಂದ ಆಕೀರ್ಣಮಾದ ತಂತವಿರಚಿತಮಾದ ವಿಶಿಷ್ಟಮೃಗರೋಮನಿರ್ಮಿತಂಗಳ್ಗಂ | ಭ್ರಂಶಂ-ಪತನಮಪ್ಪುದು-| ವಿಷಾಶ್ರಯದತ್ತಣಿಂ ವಿಷೋಪಲೇಪದಿಂದ ಯೆಂಬುರ್ಥಂ | ತಥಾ - ಸುವರ್ಣಾದಿಲೋಹಂಗಳಿಗೂ, ವಜ್ರಾದಿಮಣಿಗಳಿಗೂ ವಿಷಾಶ್ರಯ ಮಲಪಂಕೋಪದಿಗ್ಧತ್ವಂ | ಕಳಂಕಲಿಪ್ತಮುಂ ವಿಷಕ್ಕೆ ಸರ್ವೋಪದ್ರವರಹಿತತಾನಿಷೇಧಂ | ಸ್ನೇಹಂ-ಸ್ನಿಗ್ಧತೆ | ಗುರುತಾ-ಗುರುತ್ವಮುಂ | ವರ್ಣಂ-ಲೋಹಿತ ಪೀತಾದಿ | ಸ್ಪರ್ಶಂ-ಸುಖದುಃಖತ್ವಮೇತೇಷಾಂ-ಇವರ ಸ್ಥಾವರವಿಧಿಯೊಳ್ ವಿನಾಶಃ | ತಥೇತಿ | ಸಂಸ್ಕೃತವಿಷಾಶ್ರಯದತ್ತಣಿಂ ಸಾಮಾನ್ಯ ವಿಷದಿಂದ ಲೋಹಮಣಿಗಳ ಪ್ರಭಾವಂ ಹೋಗಲಾಡಲು ಶಕ್ಯವಲ್ಲಾ | ವಿಷದಾಯಿಗಳ ಚಿಹ್ನಂಗಳಂ ಪೇಲ್ದಪಂ | ಮುಖಕ್ಕೆ ಸಂಶುಷ್ಕತ್ವಮುಂ | ಸ್ವದೋಷದಂಡಭಯಭಾವನೋಪತಾಪದತ್ತಣಿಂ | ತತಃ – ಏವಂ ಶ್ಯಾವವಕ್ತ್ರತ್ವಂ | ವಾಗ್ಭಂಗ-ವಿಕಾರವಂತರಿಗೆ ಸ್ಪಷ್ಟಮಾಗಿ ನುಡಿಯಲು ಅಶಕ್ತತ್ವಮುಪ್ಪುದು | ಜೃಂಭಣಂ ಮುಹುರಿತಿ-ಸುಪ್ತೋತ್ಥಿನ ಹಾಗೆ ಕ್ಷಣಕ್ಷಣಕ್ಕೆ ಆಕಳಿಕೆಯುಂ | ಸ್ಖಲನಂ-ಸಮಮಾರ್ಗದೊಳಂ ಎಡಹುವಣಮುಂ | ವೇಪಥುಃ – ಕಂಪಂ ಶೀತಾದ್ಯಭಾವದೊಳಂ | ಸ್ವೇದಂ ಪ್ರವಾತದೊಳಂ | ಆವೇಗಂ-ಉದ್ವಿಗ್ನತೆ-ನಿಮಿತ್ತಾಭಾವದೊಳಂ | ದಿಗ್ವಿಲೋಕನಂ| ದೇವಪ್ರಣೀತ ಸ್ತ್ರೀಪುರುಷಾನುಶಂಕೆಯುಂ | ಸ್ವಕರ್ಮಣಿ-ಪಾಕಯಾಗಾದ್ಯನುಷ್ಠಾನದೊಳ್ | ಸ್ವಭೂಮೌ-ಸ್ವಗೃಹಾದಿಯೊಳ್ | ಅನವಸ್ಥಾನಂ | ಸ್ವದೋಷಪರಿಹಾರ ಬುದ್ಧಿಯಿಂ | ತಾನು ಇಲ್ಲಿ ಇರಲಿಲ್ಲದೆಯೆಂಬ ಸಂಕಲ್ಪದಿಂ "ಲಿಂಗಾನ್ಯೇತಾನಿ ನಿಪುಣಂ ಲಕ್ಷಯೇದ್ವಿಷದಾಯಿನಾಂ" ಎಂದು ಪ್ರತೀತಂ | ವಿಷಪ್ರಯೋಗಪ್ರತಿಷೇಧಾರ್ಥಂ ಪೇಲ್ದಪಂ | ಔಷಧಾನಿತಿ-ಔಷಧಂಗಳ್ ಚಿಕಿತ್ಸಕರಿಂ ಯಥಾಯೋಗಮುಪದಿಷ್ಟಂಗಳ್ | ಪಾನಂ-ಪಾನೀಯಂ—ತತ್ಕಲ್ಪಮಾದ ಔಷಲಾದಿ ಸಂಪಾದಿಕದಿಂ ಆಸ್ವಾದನಮಂ ತೆಗೆದುಕೊಂಡು ಭೋಜನಮುಂ ಮಾಳ್ಪುದು | ರಾಜಾ-ಅರಸು | ತಥಾ ಪ್ರಸಾಧನಾದಿ (ಇತಿ)— ಪ್ರಸಾಧನಮಲಂಕಾರಂ | ಆದಿಶಬ್ದದಿಂ ವಸ್ತ್ರವಿಲೇಪನಮಾಲ್ಯಾದಿ ಸರ್ವಮುಂ ಸುಪರೀಕ್ಷಿತಮಾಗಿ ಮಂತ್ರಿಗಳಿಂ ಮುದ್ರಿತಮಾಗಿ ಪರಿಚಾರಕರು ನರೇಂದ್ರಂಗೋಸುಗ ಸಮರ್ಪಿಸುವುದು | ನಾನ್ಯಥೇತಿ | ತಥಾ-ಪರಸ್ಮಾದಾಗತಂ-ಆವುದೊಂದು | ಪರಸ್ಮಾತ್-ಮಿತ್ರನತ್ತಣಿಂ ಅಮಿತ್ರನತ್ತಣಿಂದಾದೊಡಂ ಬಂದುದಂ ಸಮಸ್ತಮಂ ಪರೀಕ್ಷಿಪುದು | ಯಸ್ಮಾತ್-ಸ್ವೇಭ್ಯಃ-ಸ್ವಮಂಡಲಂಗಳತ್ತಣಿಂ | ಪರೇಭ್ಯಃ-ಪರಮಂಡಲಂಗಳತ್ತಣಿಂ | ಹಿತೈಷಿಗಳಿಂ | ರಾಜಾ ರಕ್ಷಣೀಯಂ |

ತಥಾ ಚ ಕೌಟಲ್ಯಃ— "ರಕ್ಷಿತದಿನಾದ ನೃಪಂ ರಾಜ್ಯಮಂ ಆಸನ್ನಪರಾವರುತ್ತಣಿಂ ರಕ್ಷಿಪ"ನೆಂದು—ತಥಾ ಯಾನವಾಹನ (ಇತಿ) ಯಾನಂ-ಶಿಬಿಕಾದಿ, ವಾಹನಂ ಹಸ್ತ್ಯಶ್ವರಥಾದಿ |

ಇವನಜ್ಞಾತಮಪ್ಪಂತೋಱಲಾಗದು | ಜ್ಞಾಸ್ವಭಾವಮಂ| ತೇನೈವವಿಶ್ವಾತಿಕರ್ಮಕರಹಸ್ತ್ಯಶ್ವರಥ
ವಾಹಾದಿಯನುಪಪಾದಿತಂ-ಧೌರಿತಮನ್ನೆಯೇಱುವುದು | ಅವಿಜ್ಞಾತೇನ-ತನ್ನಿಂದ ಅನುಚರರಿಂದ
ಲಾದೊಡಂ ತಿಳಿಯಲ್ಪಡದ | ಸಂಕಟೇನ – ಅವಿಸ್ತೀರ್ಣವಾದ ಮಾರ್ಗದಿಂದ ಪೇೞಲಾಗದು |
ಪರಕೃತಾತಿ ಸಂಧಾನ ಪ್ರತಿಷೇಧಾರ್ಥವಾಗಿ | ಪರಪ್ರಯುಕ್ತ ತೀಕ್ಷ್ಣರಸಾದಿ ಪ್ರತಿಷೇಧಾರ್ಥ
ವಾಗಿ ಪೇೞ್ದಪಂ | ವೀಕ್ಷಿತಂ-ದುಷ್ಟ ಕರ್ಮಾಚರಣಂ ಸ್ವಾಮಿವಿರುದ್ಧಾಚರಣಂ–ನ ವೀಕ್ಷಿತಂ–
ಕಾಣಲ್ಪಡಲಿಲ್ಲ | ಕದಾಚಿದಪಿ | ಯಸ್ಯ ಆಪಾತಂ-ಆ ಆಪ್ತಂ | ವಿಶ್ವಾಸಯೋಗ್ಯನಂ | ವಂಶ
ಕ್ರಮಾಗತನಂ | ಪಿತೃ ಪಿತಾಮಹಸಂವಿಭಕ್ತನಂ | ಕೃತಜೀವಿಕಾ | ಸಂವಿಭಾಗನೆಂದೊಡೆ
“ ಬುಭುಕ್ಷಿತಃ ಕಿಂ ನ ಕರೋತಿ ಪಾಪಂ ” ಇತಿ | ಈ ವಿಧವಾದ ಜನಮಂ ಆಸನ್ನವರ್ತಿನಂ |
ರಾಜಾ–ಅರಸು | ಆತ್ಮರಕ್ಷಣಾರ್ಥವಾಗಿ ಮಾೞ್ಪುದು | ಎಂದು ಭಾವಂ | ಅರನಾಸ್ಯನ್ನರಂ
ಮಾಡಲಾಗದು ಅವರಂ ಪೇೞ್ದಪಂ | ಅಧಾರ್ಮಿಕಾಂಶ್ಚ – ಅಧಾರ್ಮಿಕಾಃ–ಪಾಪಿಷ್ಠರುಂ |
ಕ್ರೂರಾಃ – ಹಿಂಸಕರುಂ | ದೃಷ್ಟದೋಷಾಃ – ಪ್ರತ್ಯಕ್ಷೀಕೃತ ಶಾಸ್ತ್ರವಿರುದ್ಧಾಚರಣರುಂ |
ನಿರಾಕೃತಾಃ–ವಿನಿರ್ಧಾರಿತರುಂ| ಪರೇಭ್ಯಃ–ಶತ್ರುಗಳತ್ತಣಿಂ ಬಂದವರುಂ–ಇವರನೆಲ್ಲರುಮಂ ದೂರ
ದಿಂದಲೇ ಬಿಡಬೇಕು | ಜಲಪಥದೊಳವಾತ್ಮರಕ್ಷಾರ್ಥಮಂ ಪೇೞ್ದಪಂ | ಮಹಾವಾತೇತಿ–
ಮಹಾವಾತಂಗಳಿಂದ ಅನುದ್ರುತವಾದ ಸ್ಥಿರತರನೆಂಬುದರ್ಥಂ| ಅಪರೀಕ್ಷಿತನಾವಿಕಾಂ-ಅನಾಪ್ತರ
ನೆಂಬುದರ್ಥಂ | ಅನ್ಯರಿಂ ಪ್ರತಿಷಿದ್ಧವಾದ ಓಡೆಯನೇಱಲಾಗದು| ತತ್ಸಂಗದಿಂ ದ್ವಿತೀಯವಿನಾಶ
ವಾಗಬೇಡಲೆಂದು ! ಆತುರಾಂಚ ದುರ್ಗಮಕತ್ವದಿಂದ ಅಸ್ಥಿರವಾದ ಓಡೆಯನೇಱಲಾಗದು |
ಆ ಕ್ರೀಡೆಯೊಳಾತ್ಮ ರಕ್ಷಣೆಯಂ ಪೇೞ್ದಪಂ || ಪರಿತಾಪಿಷ್ವಿತಿ–ಪರಿತಾಪಿಗಳಾದ ಗ್ರೀಷ್ಮದಿನಂಗ
ಳೊಳ್–ಪಶ್ಯನ್ನಿತಿ–ತಾನೇ ಪ್ರತ್ಯಕ್ಷೀಕರಿಸುತ್ತೆ | ಪರಂ ನೌಭಿಃ–ಓಡೆಗಳಿಂ | ಗುಣಬಂಧಧಿಂ
ಪರಾಧೀನಗತಿಯಾಗಿ | ಜಲಾದೊಳಾದೊಡಂ ತೀರದೊಳಾದೊಡಂ | ಸ್ಥಿತವಾದ ಆಪ್ತ ಸೈನ್ಯ
ಚಕ್ರಮಂ–''ಸುವಿಶೋಧಿತನಕ್ರಮೀನಜಾಲಂ'' ಸುವಿಶೋಧಿತವಾದನಕ್ರಜಾಲ–ಮೀನಶಬ್ದದಿಂ
ಮೀನಸುಹಚರ್ಯದತ್ತಣಿಂ ಮಕರಶಿಂಶುಮಾರಗ್ರಾಹಾದಿಗಳುಂ ಗ್ರಹಿಸಲ್ಪಡುತಿದ್ದಾವು| ತೇ–ಅವು|
ಶೋಧಿತಾಃ–ಅಪನೀತಂಗಳುಂ | ಯಸ್ಮಿ–ಆವುದಱೊಳ್| ತತ್–ಆ ಸರಸ್ಸಂ ಅವ್ಯಾಹೃತಸುಹೃತ್ಸ
ಮೇತನಾಗಿ ಪ್ರವೇ(ಶಿ)ಪುದು | ವನವಿಹಾರಮಂ ಪೇೞ್ದಪಂ–ಗಹನಮಿತಿ–ವನದೊಳ್ ಆವುದು
ಲತಾಸ್ತಂಬಕಂಟಕಂ ಆದಂ ವರ್ಜಿಪುದು | ವಿಶುದ್ಧಮಪ್ಪಂತು ಮೂವರಿಂ ಬಹಿರಂತಃ ಕೃತಶೋಧನ
ಮಾದ ವುದ್ಯಾನಮನೆಯ್ದುವುದು | ಮಧುರಮಪ್ಪಂತು – ಸಮಾನವಯಸ್ಕರೊಡನೆ ಕ್ರೀಡಿಸುತ್ತೆ
ಮುದಮನೆಯ್ದುವುದು| ವಿಷಯೋಪಭೋಗಾಪರಾಗದತ್ತಣಿಂ ಬೇಂಟೆಯೊಳ್ ಪೇೞ್ದಪಂ| ಸುವಿನೀ
ತೇತಿ | ಮೃಗಯಾವನಮನೆಯ್ದುವುದು ಎಂದು| ಪ್ರತೀತ(ಕ)ಂ | ಸತ್ಪೃಷ್ಠನಯಾ–ಬೇಂಟೆಯಂ
ಆಸುಕೋಷ್ಠ ಬೃಹತ್ಕುಕ್ಷಿಯಲ್ಲದಾತಂ | ವುಪೇಯಾತ್ – ಐದುವುದು | ಪರಗೃಹಪ್ರವೇಶಮಂ
ಪೇೞ್ದಪಂ | ಕಾರಯೇದಿತಿ | ಆತಾ – ಮೊದಲಲ್ಲಿಯೇ ಭವನ ಶೋಧನಮಂಮಾೞ್ಪುದು |
ತೀಕ್ಷ್ಣಾದಿ ನಿರಾಸಾರ್ಥವಾಗಿ | ಮಾತುಃ–ತಾಯಿಸಮೀಪಮಂ ಪ್ರವೇಶಿಸಲಿಚ್ಛೈಸಿ | ನೃಹಿತ
ಶಾಸ್ತ್ರದಿ ನನುಮತರಾಗಿ ಪ್ರವೇಶಿಪುದು | ಸಂಕಟದೊಳಂ ಗಹನದೊಳಂ ಇರಲಾಗದು | ಅಪಾಯ
ಸ್ಥಾನದತ್ತಣಿಂ ಪೊಱಮಡುವಲ್ಲಿ| ಪ್ರವೇಶೇಚ| ಪ್ರವೇಶರಾಜಮಾರ್ಗಮಂ ಯೆಲ್ಲಾ ಕಡೆಯಲ್ಲಿಯೂ|
ಪ್ರೋತ್ಸಾರಿತ ಜನವಾಗಚ್ಛೇತ್–ಅಯ್ದುವುದು || ಸಮ್ಯಕ್ಕಾಗಿ ಆಕಟ ಪ್ರದೇಶಂಗಳಂ ಪ್ರವೇಶಿಸ
ಲಾಗದು | ದರಪ್ರಯೋಗಾವಕಾಶದತ್ತಣಿಂ ಅರಿನೆಲಮತಿಕ್ರಾಂತಸಂವಾದನೆಲನಪ್ಪಂತು

ಗಮನಾಗಮನಂಗಳಂ ಮಾಡಲಾಗದು | ಯೆಂದು ನಿಶಾಂತ ಪ್ರತಿಸಂಧಾನಮಂ ಪೇೞ್ದಪಂ |
[ವರ್ಷಧರ–ಷಂ] ಡರ್ | ಕಂಚು ಕೋಷ್ಣೀಷಧಾರಿಭಿಃ – ಕಂಚುಕಂ – ಆಪ್ರಪದೀನಾವರಣಂ |
ವುಷ್ಣೀಷಂ–ಶಿರೋವೇಷ್ಟನಂ | ಕೈದುವರದಾರಿಗಳೊಡನೆ | ಸ್ತ್ರೀಗಳಿಗೆ ಚಿತ್ತವಿಕಾರವಾಗ
ಬೇಡವೆಂದು | ಅಂತಃಪುರೇಷು-ನಿಶಾಂತಂಗಳೊಳ್ | ವಿಚರ್ರ–ಸಂಚರಿಸುತ್ತೆ | ರಾಜಾ ಕುಬ್ಜ
ಕೈರಾತವಾಮನರೊಡನೆ-ಕುಬ್ಜರು–ವಕ್ರಾವಯವರು,ಕೈರಾತರು-ನಿರ್ಗತಪೃಷ್ಠರು|ಅವರೊಡಗೂಡಿ
ನೀಚೈರಿತಿ-ಶಸ್ತ್ರಾಗ್ನಿರಸಂಗಳ್ ದೂಷ್ಯಹೇತುತ್ವದತ್ತಣಿಂ ವರ್ಜನೀಯಂಗಳ್ ಯೆಂದು | ಪ್ರತೀಕಂ|
ಅಂತಃಪು(ಪಾ)ತ್ರರಾದವರ್-ಅಂತರ್ವಂಶಂನೃಪತಿಗೆ|ಅಲ್ಲಿ ನಿಯೋಗಿಸಲ್ಪಟ್ಟ ತತ್ಪ್ರತಿಬಂಧಸೈನ್ಯಮಂ
ತರ್ವಂಶಿಕಸೈನ್ಯಂ | ಇತರರ್ಗೆ ಅನವಕಾಶದಿನೆಂದು| ಪ್ರತೀಕಂ | ಅಶೀತಿಕಾಃ–ಪೂರ್ಣಾ ಶೀತಿ
ವರ್ಷರು ಸ್ತ್ರೀಗೆ ವುಪಶಾಂತರಾಗತ್ವದತ್ತಣಿಂ ವಿಪ್ಲವವಾಗವು | ಬುಧ್ಯೇರ್ರ–ತಿಳಿವುದು | ಅಂತಃ
ಪುರಗಳ ಶೌಚಂ ಪತಿಭಕ್ತತ್ವಮಂ | ಆಗಾರಿಷ್ವ – ಆಗಾರದೊಳ್ ನಿಯುಕ್ತರಾದ ವರ್ಷಧರಾದಿ
ಗಳುಂ ಅಥವಾ ಸ್ತ್ರೀಗಳ ಅಲಂಕಾರಾದಿ ವಿಧಾಯಕಾದಿಗಳುಂ ಪತಿಭಕ್ತತ್ವಮಂ ತಿಳಿವುದು |
ಆವಿಧವಾದ ಸ್ತ್ರೀಯರು ಸ್ನಾನಮಂ ಮಾಡಿ ನೂತನ ವಸ್ತ್ರಮಂ ಧರಿಸಿ ರಾಜಾನಂ, ಉಪತಿ
ಷ್ಠೇಯುಃ – ನೃಪತಿಯಂ ಸೇವಿಪುದು | ವಿಶುದ್ಧ ಸ್ರಗ್ವಿಭೂಷಣರಾಗಿ, ರಸಧೂಮಾಂಗಲೇಪ
ಶಂಕಾನಿವೃತ್ಯರ್ಥವಾಗಿ | ತಥಾ ಕುಹಕೈಃ–ಕುಹಕರು ಮಹೇಂದ್ರಜಾಲವೇದಿಗಳು | ಜಟಿಲರು–
ಜಟಾಧಾರಿಗಳು | ಮುಂಡರು–ಭಿಕ್ಷುಗಣಾದಿಗಳು | ತೈಶ್ಚ–ಅವರೊಡನೆ | ಆಂತರಃ – ಅಂತಃಪುರ
ಸಂವಾದಿ ಜನರು| ಸಂಸರ್ಗಂ–ಸಂಬಂಧಮಂ|ನಕ್ವಚಿತ್ ಗಚ್ಛೇತ್–ಎಯ್ದಬಾರದು|ಸರ(ಹ)ಪ್ರಯು
ಕ್ತರ ಸಾಧ್ಯತಿ–ಸಂಧಾನಭಯದತ್ತಣಿಂ ಬಾಹ್ಯೈರ್ದಾಸೀಜನೈಃ – ತಥಾವೇಶ್ಯೆಯರೊಡನೆಯುಂ
ಸಂಸರ್ಗಮಂ ಎಯ್ದಲಾಗದು | ಚಿತ್ರಪ್ರವೇಶದಿ ನಿಷೇಧಾರ್ಥವಾಗಿಯೆಂದು ನಿರ್ಗಚ್ಛೇತ್ |
ಉಪವಿಶೇತ್ | ಅಂತಃಪುರ ಸಂಚಾರಿ ವಿಜ್ಞಾತದ್ರವ್ಯಸಂಚಾರಿ | ದ್ವಾಸ್ಥೈರ್ವಿಜ್ಞಾತಾನಾಂ–
ಬಾಗಿಲವರಿಂ ಜ್ಞಾತವಾ(ದ)| ದ್ರವ್ಯಸಂಚಾರಿಕಾರಣೈಃ ನೋಪಲಕ್ಷಿತೋರಾಜ ವಿದಿತಿ ನವ್ಯ
ಪ್ರಯೋಜನದಿಂದ.ಉಪಲಕ್ಷಿತರಿಂದ ಅವಿದಿತನಾಗಿ | ಸಾಂಕ್ರಾಮಿಕವ್ಯಾಧಿ ಪ್ರಶಮನಾರ್ಥವಾಗಿ
ಪೇೞ್ದಪಂ | ನ ಚಾನುಜೀವಿನಂ | ಭೃತ್ಯನಂ | ಅಕಲ್ಯಂ – ವ್ಯಾಧಿತನಂ | ನ ಪಶ್ಯೇತ್–ನೋಡ
ಲಾಗದು | ಸಂಸರ್ಗನಿಷೇದಾರ್ಥಂ | ಅನ್ಯತ್ರಾತ್ಯಯಿಕಾದ್ರೋಗಾದಿತಿ | ಮುಖ್ಯಾನುಜೀವೀ |
ಆತ್ಯಯಿಕೇನ–ಪ್ರಾಣಹತವಾದ ರೋಗದಿಂ ಅಭಿಹತನಾದೊಡೆ ತದಾ ಅವಶ್ಯಂ ನೋಡಬಹುದು |
ತನಗೆ ಪ್ರತೀಕಾರಮಂ ಮಾಡಿ ಅದೇನು ಕಾರಣಮೆಂದೊಡೆ – “ಸರ್ವಸ್ಯೈವಾತುರೋಗುರುಃ”
ಸ್ನಾತಃ–ನೃಪತಿಸ್ನಾನಮಂ ಮಾಡಿ ವಿಶುದ್ಧಕಾಯತ್ವದತ್ತಣಿಂ–ಕುಂಕುಮ ಕಸ್ತೂರ್ಯಾದಿಗಳಿಂದ
ಅನುಲಿಪ್ತನಾಗಿ | ಸುರಭಿಸ್ರಗ್ವಿ – ಸುರಭಿಗಳಾದ ಮಾಲತೀ ಮಲ್ಲಿಕಾಮಾಲಿಕಾಧರನಾಗಿ | ರುಚಿರ
ಭೂಷಣಃ–ಭಾಸ್ವರಾಭರಣನಾಗಿ | ದೇವಿಗಳ್ಗೆ ಮನೋಹರನಾಗಿ - ತಚ್ಚಿತ್ತಾರಾಧನಾರ್ಥವಾಗಿ,
ಸ್ನಾತಾಂ–ಸ್ನಾನಮಂ ಮಾಡಿ ವಿಶುದ್ಧವಸನಮನುಳ್ಳ | ದೇವೀಂ–ಪಟ್ಟಮಹಿಷಿಯಂ | ಅಲಂಕೃ
ತೆಯಂ | ಪ್ರಶ್ಯೇತ್ – ನೋಡುವುದು | ಸ್ವಾನುರಾಗವೃದ್ಧ್ಯರ್ಥವಾಗಿ | ಪುರಾತಿಸಂಧಾನನಿವಾ
ರಣಾರ್ಥವಾಗಿ ಪೇೞ್ದಪಂ | ದೇವೀಗೃಹಮನಾತ್ಮೀಯ ಗೃಹದತ್ತಣಿಂ | ನ ಸಮಾಗಚ್ಛೇತ್–
ಅಯ್ದಲಾಗದು | ಅತ್ಯಂತ ವಲ್ಲಭನಾದೊಡಂ, ಇಹಲೌಕಿಕವಿಸ್ರಂಭಂ–ವಿಶ್ವಾಸಮಂ| ನವ್ರಜೇತ್–
ಅಯ್ದಲಾಗದು | ವಿಶ್ವಸ್ತರಿಗೆ ಸ್ತ್ರೀಯರೊಳ್ ವಿನಾಶಮಂ ತೋರುತ್ತೆ ಪೇೞ್ದಪಂ | ದೇವೀಗೃಹ
ಗತನಾದ ಭದ್ರಸೇನನಂ ಒಡಹುಟ್ಟಿದಂ ಸಂಹರಿಸಿದನೆಂದು ಮಾತೃಶಯ್ಯಾಂತರೇಲೀನ(ಇತಿ)

ಕಾರೂಷಂ-ಕಾರೂಷದೇಶಾಧಿಪತಿಯಂ ಔರಸನಾದ ಸುತಂ। ಪುತ್ರಾಂತರಾತ್ತಯೌವರಾಜ್ಯನಂ ಕುಪಿತೆಯಾದ ತಾಯಿಂದ ಪ್ರೇರಿತನಾಗಿ ಸಂಹರಿಸಿದನೆಂದು। ವರ್ತತೇ। ತಥಾ ಲಾಜಾನಾಂ ವಿಷೇಣಸಂಯೋಜ್ಯಮಧುನೇತೀರ ಹೋಗತಂ ದೇವೀ ಕಾಶೀರಾಜೇಂದ್ರಂ ನಿಜಘಾನ-ಅರಳುಗಳಂ ವಿಷದೊಡನೆ ಬೆರಸಿ ಜೇನುತುಪ್ಪದಿಂಡ ವಿಲೋಭಿತನಾದ ಕಾಶೀರಾಜನಂ ಏಕಾಂತಗತನಂ ದೇವಿ ಸಂಹರಿಸಿದಳೆಂದು। ಏಕಾಸ್ಥನತ್ತಣಿಂ ವಾಸಕಂ ಬಾಗಿಲೊಳು ಅವಮಾನಿತೆಯಾಗಿ ಕೋಪದತ್ತಣಿಂ ಎಂದು। "ವಿಷಾಕ್ತೇನ ಚ ಸೌವೀರಂ ಮೇಖಲಾಮಣಿನಾ ನೃಪಂ। ನೂಪುರೇಣ ಚ ವೈರನ್ತ್ಯಂ ಜಾತುಷಂ ದರ್ಪಣೇನ ಚ ॥" ವಿಷಾಕ್ತಮಾದ ಮೇಖಲಾಮಣಿಗಳಿಂದ ಸೌವೀರದೇಶಾಧಿಪತಿಯಂ ಸಂಹರಿಸಿದಳ್। ನೂಪುರದಿಂದಲೇ ವೈರಂತ್ಯಾಖ್ಯನೃಪನಂ ಸ್ಪರ್ಶವಿಷದಂಡದಿಂ ಸಂಹರಿಸಿದಳ್। ಜಾತುಷಾಖ್ಯನೃಪನಂ ದರ್ಪಣದಿಂದಲೇ ದರ್ಶನವಿಷದಿಗ್ಧಧಾರದಿಂ ಸ್ತ್ರೀಯು ಸಂಹರಿಸಿದಳೆಂದು ವರ್ತತೇ। "ವೇಣ್ಯಾಂ ಶಸ್ತ್ರಂ ಸಮಾಧಾಯ" ಜಡೆಯೊಳ್ ಶಸ್ತ್ರಮನಿಟ್ಟು ಏಕಾಂತಗತನಾದ ವಿಡೂರಥನೆಂಬ ನೃಪನಂ ನಿದ್ರಾವಿವಶನಂ। ಜಘಾನ-ಸಂಹರಿಸಿದಳ್। ಎಂದು। ಈ ವಿಧಮಾದ ಅನುಷ್ಠಾನಮಂ ವಿಜಿಗೀಷು ವಿರ್ಜಿಪುದು। ಶತ್ರುಗಳೊಳ್ ಪ್ರಯೋಗಿಪುದು। ತಥಾ ಇತಿ। ಆ ಪ್ರಕಾರಮಾಗೆ ತಮ್ಮ ಸ್ತ್ರೀಯರಿಂದಲೇ ಏಕಾಂತಗತನಾದ ಶತ್ರುವು ವಿನಾಶಮನೆಯ್ದುವಂ। ದಾರಗುಪ್ತಿಗೆ ಫಲಮಂ ತೋರುತ್ತೆ ಪೇಳ್ದಪಂ। "ಯಸ್ಯದಾರಾಸ್ಸುಗುಪ್ತಾಸ್ಯುಃ ಪುರುಷೈರಾಪ್ತಕಾರಿಭಿಃ ॥ ಸರ್ವಭೋಗಾನ್ವಿತಂ ತಸ್ಯ ಹಸ್ತೇ ಲೋಕದ್ವಯಂ ಸ್ಥಿತಂ॥" ಯಸ್ಯ ಪುಂಸ:-ಸಾಮಾನ್ಯ ಪುರುಷಂಗೆ ಆದೊಡಂ ಅರಸಿಗೆ ಆದೊಡಂ। ದಾರಾಃ-ಕಳತ್ರಂಗಳ್। ಸುಗುಪ್ತಾಃ-ರಕ್ಷಿತಂಗಳ್। ಆಪ್ತಕಾರಿಗಳಾದ ಪುರುಷರಿಂ-ಆಪ್ತಂ-ಹಿತಮಂ ಕುರ್ವಂತಿ ತೈಃ। ಅವರಿಂ, ಸರ್ವಭೋಗಾನ್ವಿತಂ-ಸಕಲ ಕಾಮಾವಾಪ್ತಿರೂಪವಸ್ತುಯುಕ್ತಮಾದ। ಲೋಕದ್ವಯಮುಂ। ಆತನ ಹಸ್ತ ಸ್ಥಿತಂ। ಪರಲೋಕದೊಳ್ ಕುಲಕಳಂಕಮಿಲ್ಲದುದರಿಂ ಸ್ವರ್ಗಮೆಂದು। ಧರ್ಮಾರ್ಥಮಂ ದಾರ ರಕ್ಷಣಾರ್ಥಮಂ ಪೇಳ್ದಪಂ। ಧರ್ಮಾಭಿಸಂಧಿಯಿಂ ನರಪತಿಯು "ಸರ್ವದಾರಾನನು ಕ್ರಮಾತ್" ಶ್ರಾಸ್ತ್ರೋಕ್ತಕ್ರಮದಿಂದ ಸಮಸ್ತಾಂತಃಪುರಸ್ತ್ರೀಯರನೆಯ್ದುವುದು. ಪ್ರತಿದಿವಸಂ ಸಮ್ಯಗ್ವಾಜೀ ಕರಣಂಗಳಿಂ ಶಾಸ್ತ್ರೋಕ್ತಂಗಳಿನುಪಬೃಂಹಿತಃ-ಕೃತಶುಕ್ಲವೃದ್ಧಿ ಆಗಿ। ಶಯನ ವಿಧಿಯಂ ಪೇಳ್ದಪಂ। ವಿಚಾರ್ಯ-ನಿರ್ಣಯಿಸಿ। ಕಾರ್ಯಾದಯದಂಗಳಹೋರಾತ್ರಮಂ ಹದಿನಾರು ಭಾಗಮಂ ಮಾಡಿ। ಅಹೋರಾತ್ರಗಳೊಳ್ ಆ ಕಾರ್ಯಾದಯದಂಗಳಂ ನಿರ್ವರ್ತಿಸಿ, ದಿನಕ್ಷಯದೊಳ್ ಲೋಕಮಂ ವಿಸರ್ಜಿಸಿ ಪೃಷ್ಠದೆಯರೊಡನೆ ಕೃತಮಾದ ಸಮಸ್ತಕ್ರಿಯೆಯುಳ್ಳವನಾಗಿ ಪುರುಷರ್ಗೆ ಅಂತಃಪುರದೊಳ್ ಪ್ರವೇಶಾಭಾವದತ್ತಣಿಂ ಅಶಸ್ತ್ರವಂಧ್ಯೇನ ಪಾಣಿನಾ ಸ್ವಕಿಂಕರಮಿತಿ ನಿರಂತರಂ ಶಸ್ತ್ರ ಸನ್ನಿಹಿತಮಾಗಿ ಮಾಡಲ್ತಕ್ಕುದೆಂಬುದರ್ಥಂ। ಸ್ವಪೇತ್-ನಿದ್ರೆಗೆಯ್ವುದು। ಅಲ್ಲಿಯುಂ ಅತ್ಯಂತ ನಿದ್ರಾಸಕ್ತಿಮಾಡಲ್ತಕ್ಕುದಲ್ಲ. ಪರಮಾಪ್ತರಾದ ಅಂತರ್ವಂಶಿಕಮಹಾಪುರುಷಾಭಿವೀಕ್ಷಿತನಾಗಿ ನಿದ್ರಾಸಕ್ತಿ ನಿವಾರಣಾರ್ಥಂ ಪೇಳ್ದಪಂ। ನಿತ್ಯಾನುಷ್ಠಾನದಿಂದ ದಿನಮನೆಂಟು ಭಾಗಮುಂಮಾಡಿ ರಾತ್ರಿಯನೆಂಟು ಭಾಗಮುಂಮಾಡಿ ನಿಯುಕ್ತಾನುಷ್ಠಾನಪೂರ್ವರಂ। ಜಾಗ್ರತ್-ಅಪ್ರಮತ್ತನಾಗಿ ಅದಱಿಂದ ಸರ್ವಕಾರ್ಯಮಂ ನರೇಶ್ವರಂ ನೋಡುತಿರೆ ಸುಖಂ ಸ್ವಪಂತಿ-ಆಸತೇ-ಯಿರುತಿದ್ದಾವು। ನಿರ್ಗತಮನಃಪೀಡೆಗಳಾಗಿ ಪ್ರಜೆಗಳ್ ಉಪದ್ರವಕಾರಿಗಳನಿಗ್ರಹದತ್ತಣಿಂ। ಪ್ರಮತ್ತಚಿತ್ತೇ ನರೇಶ್ವರೇ ಆವ ಅರಸಿನ ಚಿತ್ತಂ ಪ್ರಮತ್ತಂ ವಿಷಯಾಸಕ್ತಂ ಪ್ರಮಾದಮೆಂದು ವಿಷಯಾಸಕ್ತಿ-ತಥಾಚ ಕೌಟಲ್ಯೇ

ನೋಕ್ತಂ। ಮಧು ಹೇಗೆ ಶಬ್ದಾ(ದಿ)ಷ್ವಿಂದ್ರಿಯಾರ್ಥೇಷು ಪ್ರಸಕ್ತಃ। ಪ್ರಮಾದೇನೇತಿ। ಸ್ವಪತಿ ಕಾರ್ಯಾ ಕಾರ್ಯಮಂ ಕುರಿತು ಆ ಚಿಂತೆಯಿಂ ಭೂಪಾಲಕಂ ನಿದ್ರೆಗೆಯ್ಯುತ್ತಿರೆ। ಕುತಃ-ಎತ್ತ। ಅಸ್ಮಾತ್-ಈ ಗೃಹಪತಿಯತ್ತಣಿಂ। ಪ್ರಪರಿತ್ರಾಣಂ। ಈ ಅರಸಿನ ಪ್ರಜಾಗರದಿಂ। ಜಗತ್ ಸಕಲಂ। ಪ್ರಜಾರೂಪಂ। ಪ್ರಕರ್ಷದಿಂ ಬಾಧಿಸಲ್ಪಡುಗುಂ। ಅದು ಕಾರಣದತ್ತಣಿಂ ಭೂಪತಿಯಂ ಸತತೋತ್ಥಿತನಿಂದಲೆ ಭಾವ್ಯಂ। ಇತಿಸ್ಮೇತಿ। ಈ ಪ್ರಕಾರದಿಂ ಶುಕ್ರಬೃಹಸ್ಪತಿಗಳ್ ಬಭಾಷಿರೇ-ನುಡಿದರ್। ನೃಪಸ್ಯ-ಅರಸಿನ। ರಾಜ್ಯದ ರಕ್ಷಣಂ। ತದೇತದೇವಂ-ಉಕ್ತಪ್ರಕಾರದಿಂ ಪರಿಪಾಲಿಸುತ್ತೆ ನರೇಶ್ವರಂ ಪಾಲನಸಾಮರ್ಥ್ಯಮಂ। ವ್ರಜೇತ್-ಅಯ್ದುವಂ।

ಇತಿ ಶ್ರೀಮಕ್ಕಾಮಂದಕೀಯನೀತಿಸಾರಟೀಕಾಯಾಂ
ಉಪಾಧ್ಯಾಯ ನಿರಪೇಕ್ಷಾಯಾಂ
ರಾಜಪುತ್ರಾತ್ಮಕ ರಕ್ಷಣಂ ನಾಮ
— ಸಪ್ತಮಸ್ಸರ್ಗಃ [೭] —

— ಅ ಥಾ ಷ್ಟ ಮ ಸ್ಸ ರ್ಗಃ —

(ಮಂಡಲಶೋಧನ ಪ್ರಕರಣಂ)

ಸ್ವಮಂಡಲಮಂ ಸುವಿಹಿತಮಾಗಿ ಮಾಡಿ ಪರಮಂಡಲಂಗಳಂ ವಿಜೇತುಂ ಜಯಿಸಲೋಸುಗ
ಮಂಡಲಮನೆ ವಿಚಾರಿಪುದು ಮಂಡಲಯೋನಿ - ಮಂಡಲಶೋಧನಪ್ರಕರಣಮಂ ಪೇೞ್ದಪಂ |

ಉಪೇತಃ ಸಂಪನ್ನಃ | ಕೋಶದಂಡಂಗಳಿಂದ ಸಂಪನ್ನನಾಗಿ | ಪ್ರಭುಶಕ್ತಿಯುಕ್ತನಾಗಿ
ಯೆಂಬುದರ್ಥಂ | "ಕೋಶದಂಡಂ ಪ್ರಭುಶಕ್ತಿ" ರಿತಿವಚನಾತ್ | ಸಾಮಾತ್ಯ ಇತಿ | ಭರ್ತೃಸಂನಿ
ಧಾತ್ರಾದಿ ಕರ್ಮಾಮಾತ್ಯಯುಕ್ತನಾದ | ಸಹಮಂತ್ರಿಭಿಃ – ಬುದ್ಧ್ಯಮಾತ್ಯಾದಿಗಳಿನೆಂಬುದಱಿಂ
ಮಂತ್ರಶಕ್ತಿಸಂಪನ್ನತೆ ತೋರಲ್ಪಟ್ಟುದು | ದುರ್ಗಸ್ಥ ಇತಿ – ಯುಕ್ತಗುಣಸಂಪನ್ನದುರ್ಗಸ್ಥನೆಂ
ಬುದು | ಚಿನ್ತಯೇತ್ – ಎಂದು ಉತ್ಸಾಹಶಕ್ತಿ ಸೂಚಿಸಲ್ಪಟ್ಟಿತು | ಸುವಿಹಿತಮಂಡಲಚಿತ್ತಃ |
ಪರಮಂಡಲಂ – ಅರಿ ಮಿತ್ರಮಧ್ಯಮೋದಾಸೀನಾದಿಕ್ರಮಂ | ಆತ್ಮಸ್ವಾಧೀನಮಾಗಿ ಮಾಡಲೋ
ಸುಗ ಶಕ್ತಿತ್ರಯ ಸಂಪತ್ತಿಯು ಪ್ರತಿಪಾದಿಸಲ್ಪಟ್ಟುದು | ಅಸಂಪೂರ್ಣಶಕ್ತಿತ್ರಯನಿಂ ಪರಮಂಡ
ಲಂಗಳ್ ಗ್ರಹಿಸಲ್ಪಡಲು ಶಕ್ಯಂಗಳಲ್ಲವಲ್ಲಾ | ಮಂಡಲಾಧಿಪನೆ ವಿಜಿಗೀಷುವು ಯೆಂಬುದರ್ಥಂ |
ಮಂಡಲಶುದ್ಧಿಯಂ ತೋರುತ್ತೆ ಪೇೞ್ದಪಂ | ರಥಾರೋಹಣೋಪಾದಿ | ರಾಜತೇ–ಪ್ರಕಾಶಿಸುತಿ
ದ್ದಾನು | ವಿಶುದ್ಧಮಂಡಲೇ–ರಥಚಕ್ರದ ಯೆಂದು ಭಾವಂ | ಯದಿ-ಯೆತ್ತಲಾನುಂ | ರಥಚಕ್ರ
ಮಂಡಲವು ವಿಶುದ್ಧಂ - ಕಾಲದೊಳ್ ಸುಘಟಿತಮಲ್ಲದೊಡೆ ಆಗ ಮಂಡಲಕ್ಕೆ ರಥದೊಳ್ ಸ್ಖಲಿತ
ಗತಿ ಅಪ್ಪುದು | ರಥೀವ ರಾಜತೇ - ತಥಾ-ಹಾಗೆ | ವಿಜಿಗೀಷುವುಂ | ಶುದ್ಧೇ ಮಂಡಲೇ - ಶತ್ರು
ಮಿತ್ರಮಧ್ಯಮೋದಾಸೀನ ಲಕ್ಷಣಮಾದ ಮಂಡಲವು ಶುದ್ಧಮಾದೊಡೆ | ಶತ್ರು (ಮಿತ್ರ) ಮಧ್ಯ
ಮೋದಾಸೀನರುಂ ಆವಾಗ ವಿಜಿಗೀಷುವಿಗೆ ಮಿತ್ರಭಾವಿಗಳಾದೊಡೆ ಅಶುದ್ಧಮಂಡಲಂ | ಮಂಡ
ಲವು - ತತ್ರ-ಅಲ್ಲಿ ಚರ್ರ-ಚರಿಸುತ್ತಾ ರಾಜಾ-ಅರಸು| ರಾಜತೇ-ಪ್ರಕಾಶಿಸುತಿದ್ದಾನು | ವಿಧೇಯ
ಮಂಡತ್ವದತ್ತಣಿಂ | ಅಶುದ್ಧಮಂಡಲದೊಳ್ ಹೇಗೆ ರಥಚಕ್ರವು ಶೀರ್ಣಮಪ್ಪುದು | ತಥಾ-
ಮಂಡಲವು ಶತ್ರುಮಿತ್ರಾದಿಕವು | ವಿಶೀರ್ಯತೇ–ವಿಜಿಗೀಷುಗೆ ವಿಗುಣಮಾಗುತಿದ್ದೀತು | ತತಶ್ಚ
ರಾಜಾ ನೈವ ವಿರಾಜತೇ | ವಿಗುಣಮಂಡಲನಾದ ನೃಪತಿವೊಪ್ಪಂ | ಯೆಂದು ಮಂಡಲಶುದ್ಧಿಯ
ಮಾಡಲ್ತಕ್ಕುದೆಂದು ಭಾವಂ | ವಿಜಿಗೀಷುವ ಮಂಡಲಕ್ರಮಮಂ ಪೇೞ್ದಪಂ | ರೋಚತ ಇತಿ |
ಪ್ರಿಯನಾಗುತಿದ್ದಾನು | ಸರ್ವಭೂತೇ ಭ್ಯಃ - ಚತುರ್ವರ್ಣಾದಿ ಪ್ರಾಣಿಗಳಿಗೋಸುಗ | ಶಶೀವ,
ಅಮೃತಾಂಶುವು ಹೇಗೆ ಹಾಗೆ ಅಖಂಡಮಂಡಲನಾಗಿ | ತಸ್ಮಾತ್ – ಅದುಕಾರಣದತ್ತಣಿಂ |
ವಿಜಿಗೀಷುವು ಆಗಬೇಕು | ನಿರಂತರವೂ | ಸಪ್ತ ಪ್ರಕೃತಿಕಮಾದ ರಾಜ್ಯಂ ಮಂಡಲಮೆನಿಕ್ಕುಂ |
ಆ ಸಪ್ತಪ್ರಕೃತಿಗಳ್ ಆವಾಗ ಸ್ವಗುಣ ಗುಣ ಸಂಪದುಪೇತಂಗಳಪ್ಪುವು | ಆಗ ಸಂಪೂರ್ಣ
ಮಂಡಲನೆಂದು ಪೇೞಲ್ಪಡುಗುಂ | ಏವಂ ಹೀಗೆ ನಿರಂತರವೂ ಸಂಪೂರ್ಣಮಂಡಲನಾಗಬೇಕು |
ಯಿದನೆ ಸಮರ್ಥಿಸುತ್ತೆ ಪೇೞ್ದಪಂ | ಅಮಾತ್ಯೇತಿ | ಅಮಾತ್ಯಂ - ಮಂತ್ರ್ಯಾದಿಗಳ್ |
ರಾಷ್ಟ್ರಂ - ಜನಪದಮುಂ | ದುರ್ಗಮುಕ್ತಲಕ್ಷಣಂ | ಕೋಶಂ-ಹಿರಣ್ಯಸುವರ್ಣಾದಿ | ದಂಡಂ-
ಚತುರಂಗಬಲಂ-ಈ ಅಯ್ದುಂ ಪ್ರಕೃತಿಗಳುಂ ವಿಜಿಗೀಷುಗೆ ಭೋಗ್ಯತ್ವದಿನುದಾಹರಿಸಲ್ಪಟ್ಟುವು |
ವಿಜಿಗೀಷು ಇದಕ್ಕೆ ಭೋಕ್ತೃವೆಂದು ಭಾವಂ | ಯಥಾ ಇತಿ | ಈ ಅನಂತರೋಕ್ತ ಪ್ರಕೃತಿಪಂಚ
ಕಮುಂ | ತಥಾಮಿತ್ರಂ-ಮಿತ್ರನುಂ | ಸಪ್ತಮಂ ಪೃಥಿವೀಪತಿಯು "ಸಪ್ತಪ್ರಕೃತಿಕಂ ರಾಜ್ಯಮಿತ್ಯು
ವಾಚ ಬೃಹಸ್ಪತಿಃ||" ಅಮರಗುರುವು | ಪರಮಂಡಲಗ್ರಹಣದೊಳ್ ವಿಜಿಗೀಷುವೆ ಅಧಿಕಾರಿ |

ತತ್ಸಂಜ್ಞಾ ನಿರುಕ್ತಿಯಂ ತಲ್ಲಕ್ಷಣಂಗಳಂ ಪೇೞ್ದಪಂ | ಸಂಪನ್ನ ಇತಿ | ಆತ್ಮಸಂಪದ್ಗುಣೇಷು-
ಆಭಿಗಾಮಿಕ ಗುಣಂಗಳೊಳ್ ಪರಿತಂಗಳಾದೊಡಂ ಗುಣಂಗಳ್ ಪೇೞಲ್ಪಡುತಿದ್ದಾನು ಮರ
ಳಿಯುಂ | ವಿಜಿಗೀಷುಗೆ ಅತಿಶಯದಿನವರಿಂ ಸಪ್ರಯೋಜನಮೆಂದು | ಕೌಲೀನಮಿತಿ | ಕುಲೀನ
ಭಾವಂ – ಕೌಲೀನಮುಂ ಕುಲಶುದ್ಧತೆ | ವೃದ್ಧಸೇವಿತ್ವಂ - ವಿದ್ಯಾವೃದ್ಧಸೇವಾತತ್ಪರತ್ವಮುಂ |
ಅದೀರ್ಘಸೂತ್ರತಾ - ಸೂತ್ರ್ಯತೇ - ಪರ್ಯಾಲೋಚಿಸಲ್ಪಡುತಿದ್ದೀತು ಕಾರ್ಯವು ಇದಱಿ
ನೆಂದು ಸೂತ್ರಂ | ಅದು ದೀರ್ಘಮಾವಂಗೆ ಆತಂ - ದೀರ್ಘಸೂತ್ರಂ | ಆತನ ಭಾವಂ ದೀರ್ಘ
ಸೂತ್ರತಾ | ಇತಿ (ಅದಿಲ್ಲದಿರ್ಪುದು ಅದೀರ್ಘಸೂತ್ರತಾ) ಶೀಘ್ರಕಾರಿತ್ವಮೆಂಬುದರ್ಥಂ |
ಅಕ್ಷೌದ್ರ್ಯಂ-ಕ್ಷುದ್ರ:-ಪರಗುಣಾಸಹಿಷ್ಣು, ನ ಕ್ಷುದ್ರಃ-ಅಕ್ಷುದ್ರಂ| ಆತನ ಭಾವಂ-ಅಕ್ಷೌದ್ರ್ಯಂ|
ಪ್ರಶ್ರಯಂ - ಅನುದ್ಧತತ್ವಮುಂ | ಸ್ವಪ್ರಧಾನತಾ ಆತ್ಮಾಯತ್ತ ಸಿದ್ಧತ್ವಮುಂ | ದೇಶಕಾಲಜ್ಞತಾ
ಕ್ಷುಧಾತಪಾದಿಕ್ಲೇಶಂಗಳ ಸಹತೆಯೆಂದು | ಆತನ ಭಾವಂ–ಕ್ಲೇಶಸಹಿಷ್ಣುತೆ | ಸರ್ವವಿಜ್ಞಾನತಾ-
ಸಕಲಕಲಾಕೌಶಲಮುಂ | ದಾಕ್ಷ್ಯ-ಮಾಶುಕಾರಿತ್ವಮುಂ| ಊರ್ಜಸ್ವಿತೆ-ಕಾಯಬಲವತ್ತೆ| ಸಂವೃತ
ಮಂತ್ರತಾ - ಇಂಗಿತಾಕಾರಗೋಪನದತ್ತಣಿಂ | ಅವಿಸಂವಾದತಾ ಶಬ್ದಚ್ಛಂತಿಗನತಿಸಂಧಾನತೆ |
ಶೌರ್ಯ-ಮಭೀರುತೆ | ಭಕ್ತಿಜ್ಞತ್ವಂ-ಅನುಜೀವ್ಯಾದಿಕೃತಭಕ್ತಿಯಂ, ಜಾನಾತಿ-ತಿಳಿಯುತಿದ್ದಾನು |
ಆತನ ಭಾವಂ-ಭಕ್ತಿಜ್ಞತೆ | ಕೃತಮಂ ತಿಳಿಯುತಿದ್ದಾನು - ಆತನ ಭಾವಂ - ಕೃತಜ್ಞತೆ | ಶರಣಾ
ಗತರ, ಸ್ನಿಗ್ಧೋಪಚಾರಪೂರ್ವಕಮಪ್ಪಂತು ರಕ್ಷಣಮುಂ | ಅನುರ್ಷಿತ್ವಮುಂ-ಅಪಕಾರಿಗಳೊಳಂ
ಕ್ಷಾಂತಿ | ಅಚಾಪಲಂ - ಸ್ಥೈರ್ಯಮುಂ | ಸ್ವಕರ್ಮದೃಷ್ಟಶಾಸ್ತ್ರತ್ವಂ - ಅರಸುಗಳ್ಗೆ ಸ್ವಕರ್ಮಂ
ಪ್ರಜಾಪಾಲನಂ | ಅದು ಆಯುಧಸಾಧ್ಯಂ | ಸಕಲಾಯುಧವಿಷಯದೊಳ್ ದೃಷ್ಟಂಗಳ್ ಶಾಸ್ತ್ರಂಗ
ಳಾವನಿಂ ಆತನ ಭಾವಂ| ಕೃತೀ-ಕೃತಂಪಂಡಿತೆ(ಅವನಭಾವಂ)ಪಾಂಡಿತ್ಯಮಾನ್ವೀಕ್ಷಕೀ ಪರಿಜ್ಞಾನ
ವತ್ವಂ | ದೀರ್ಘದರ್ಶಿತಾ-ದೀರ್ಘದರ್ಶನಂ ಕಾಲದಿಂ ವ್ಯವಹಿತಮುಂ ಶಾಸ್ತ್ರಚಕ್ಷುಸ್ಸಿನಿಂ ನೋಡಲ್
ಶೀಲಮಾವಂಗೆ ಆತನ ಭಾವಂ | ಜಿತಶ್ರಮತ್ವಂ-ಯುದ್ಧಾ(ತ್ಮಕ)ಶ್ರಮಂಗಳಂ ಜಯಿಸುವಾತನ
ಭಾವಂ | ವಾಗ್ಮಿತ್ವಂ-ಪ್ರಶಸ್ತವಾಕ್ತ್ವಂ | ಅಕ್ರೂರಪರಿವಾರತಾ | ಅದುರ್ಜನಪರಿಜನತ್ವಮುಂ |
ಪ್ರಕೃತಿಸ್ಫೀತತಾ - ಅಮಾತ್ಯಾದಿಪ್ರಕೃತಿಗಳ್ಗೆ | ಸ್ಫೀತತಾ-ಸ್ವಸ್ವಗುಣಸಂಪನ್ನತೆ | ಯೆಂದುಂ ವಿಜಿ
ಗೀಷು ಗುಣೋದಯಮಿಂತು ಪೇೞಲ್ಪಟ್ಟುದು | ಗುಣಂಗಳಿಂ ವಿಜಿಗೀಷುಗೆ ಅಭ್ಯುದಯಮಾಗು
ತಿದ್ದೀತು ಯೆಂದು ಉತ್ಸಾಹಗುಣಕ್ಕೆ ಪ್ರಾಧಾನ್ಯಮಂ ಪೇೞ್ದಪಂ | ಸರ್ವೈರಿತಿ - ಸರ್ವೈರನನ್ತರಂ
ರಕ್ತಮಾದ ಗುಣಂಗಳಿಂದ ಹೀನನಾದೊಡಂ | ಆ ಅರಸು ಪ್ರಜಾರಂಜನದತ್ತಣಿಂ ಸ್ವಕರ್ಮದೃಷ್ಟ
ಶಾಸ್ತ್ರತ್ವಂ - ಸ್ವಕರ್ಮದೊಳ್ ವಿಜಿಗೀಷುವಿಂದ ಆವಶಾಸ್ತ್ರಂ-ಷಾಡ್ಗುಣ್ಯಂ | ತದರ್ಥದತ್ತಣಿಂ
ಮೃಗಂಗಳ್ ಹೇಗೆ ಹಾಗೆ ನಾಶಮನೆಯ್ದುತಿದ್ದಾರು | ಪ್ರತಾಪಮುತ್ಸಾಹ ಶಕ್ತಿಯತ್ತಣಿಂದಲಪ್ಪು
ದೆಂದು ಭಾವಂ | ಇದನೆ ಸಮರ್ಥಿಸುತ್ತೆ ಪೇೞ್ದಪಂ | ಪ್ರತಾಪಪ್ರಕರ್ಷದತ್ತಣಿಂ ಶತ್ರುಗಳಂ
ಸಂತಾಪಪಡಿಸುತಿದ್ದಾನು | ಎಂದು ಸಕಲ ಶತ್ರು ಶಿರೋವಿಕರ್ತನಜನಿತಮಾದ ಯಶಸ್ಸು ಪ್ರತಾಪ
ಶಬ್ದದಿಂ ಪೇೞಲ್ಪಡುತ್ತಿದ್ದೀತು | ಆದಱ ಸಿದ್ಧಿಯುಂಟಾಗೆ ನೃಪತಿಃ-ಮಹೀಪತಿಯು | ಶ್ರೀಯಂ-
ಸಂಪತ್ತಮಶ್ನುತೆ| ಪಡೆ(ಯಿ)ಗುಂ ನಿರಂತರಯುದ್ಧಮಾಗೆ ಯೋಗಯೋಗದೊಳ್ ಪರಮುತ್ಕೃಷ್ಟ
ಮಾದ ಪ್ರತಾ(ಪ)ಮಂ ಪುಟ್ಟಿಪುದು | ಪ್ರತಾಪದಿನುಪತಪ್ತಮಾದ ದ್ವಾದಶರಾಜಮಂಡಲಂ ವಶ
ಮಪ್ಪುದೆಂದು ಭಾವಂ | ವಿಜಿಗೀಷುಲಕ್ಷಣಮಂ ಪೇೞ್ದಪಂ | ಏಕಾರ್ಥೇತಿ-ಏಕಾರ್ಥಭೂಮಿ ಹಿರ
ಣ್ಯಾದಿ ಅರ್ಥದೊಳೆ | ಅಭಿನಿವೇಶಂ ಆತ್ಮಸಾತ್ಕೃತರಣದೊಳ್ ಎಲ್ಲಿ ಇರ್ವರಿಗುಂ ಆಗ್ರಹಂ

ಅದು ಏಕಾರ್ಥಾಭಿನಿವೇಶತ್ವ (೦) ಅರಿಲಕ್ಷಣಮುಂ — ಅವರಿರ್ವರುಮನ್ಯೋನ್ಯಶತ್ರುಗಳ್ ಅಪ್ಪರ್। ಆತಂ ದ್ವಿಃಪ್ರಕಾರಂ। ದಾರುಣಂ ಸುಖೋಚ್ಛೇದ್ಯನೆಂದು। ದಾರುಣನಂ ಪೇಳ್ದಪಂ। "ದಾರುಣಸ್ತು ಸ್ಮೃತ ಸ್ಸ ವಿ ಜಿ ಗೀಷು ಗುಣಾನ್ವಿತಃ ॥" ಆವುವು ವಿಜಿಗೀಷು ಗುಣಂಗಳ್ ಅವೆ ಆವನಂಗೆ ಅವಂ ದಾರುಣಂ, ದುರುಚ್ಛೇದ್ಯಂ। ಅದು ಕಾರಣ ತನಗೆ ದುರುಚ್ಛೇದ್ಯಮನಿತಿಚ್ಛೆಯು[?]ಪವಿಜಿಗೀಷುವಿಂ ತನ್ನೊಳ್ ಸಂಪಾದಿಸಲ್ತಕ್ಕುವು। ಯೆಂದು ಭಾವಂ। ಸುಖೋಚ್ಛೇದ್ಯನಂ ಪೇಳ್ದಪಂ ॥ ಲುಬ್ಧ ಇತಿ। ಲುಬ್ಧ-ನರ್ಥಲೋಭದಿಂ ದಾನಶಕ್ತಿರಹಿತಂ ಆತನತ್ತಣಿಂ ಪ್ರಕೃತಿಗಳ್ ವಿರಕ್ತಂಗಳಪ್ಪುವು। ಕ್ರೂರ-ತಿತೀಕ್ಷ್ಣದಂಡನುದ್ವೇಜನೀಯ ನಪ್ಪಂ। ಅಲಸಂ-ನಿರುದ್ಯೋಗಂ। ಆತನ ಪ್ರಕೃತಿಗಳ್ ನಿರಕ್ತಂಗಳಪ್ಪುವು "ಸ ಯಚ್ಛೀಲಃ ತಚ್ಛೀಲಾಃ ಪ್ರಕೃತಯಃ" ಇತಿ ವಚನಾತ್। ಅಸತ್ಯಂ-ವೃಷಾವಾದಿ। ಆತನೆಲ್ಲರ್ಗೆಯುಮವಿಶ್ವಾಸಿಯಪ್ಪಂ। ಪ್ರಮಾದಿ-ಪ್ರಮಾದಂ-ವಿಷಯಾಸಕ್ತಿ-'ಶಬ್ದಾದಿಷ್ವಿಂದ್ರಿಯಾರ್ಥೇಷು ಚ ಪ್ರಸಕ್ತಃಪ್ರಮಾದೇನೆ'ತಿ ವಚನಾತ್। ಅದು ಆವನಂಗೆ ಉಂಟು। ಭೀರು-ಶೌರ್ಯರಹಿತಂ। ಸಂಗ್ರಾಮಾಸಮರ್ಥನಾಗುತಿದ್ದಾನು। ಎಂದು। ಅಸ್ಥಿರಃ-ಸ್ಥಿರರಹಿತತ್ವಾತ್। ಪ್ರಕೃತಿಗಳಿಂ ಬಿಡಲ್ಪಡುಗುಂ।-"ಸುಖೇನೋಚ್ಛೇದ್ಯೋರಿಪುಃಸ್ಮೃತಃ" ವಿಜಿಗೀಷುಗಂ ಅಮಿತ್ರಂಗಂ ಲಕ್ಷಣಂಗಳ್, ಪೇಲಲ್ಪಟ್ಟುವು। ಯಾತವ್ಯಇತಿ ಯಾತವ್ಯನಂ - ಐದಬೇಕೆಂಬ ಇಚ್ಛೆಯುಳ್ಳ ವಿಜಿಗೀಷುವ ಅಗ್ರದೊಳಂ ಪಶ್ಚಾದ್ಭಾಗದೊಳಂ ಆಸನ್ನವ್ಯವಹಿತತ್ವಭೇದದಿಂದ ಅಮಿತ್ರಾದಿಗಳ ಸಂಜ್ಞಾಂತರಂಗಳಂ ವ್ಯವಹಾರಾರ್ಥಮಾಗಿ ಪೇಳ್ದಪಂ। ಪಾರ್ಷ್ಣಿರಿತಿ-ವಿಜಿಗೀಷುವ, ಗಚ್ಛತಃ-ಐದುತಿರ್ಪಾತನ। ಪಾರ್ಷ್ಣಿಯಂ-ಪಾದತಲಮಂ, ಪಶ್ಚಾದ್ಭಾಗದೋಪಾದಿ ವ್ಯವಸ್ಥಿತನುಂ। ಪಶ್ಚಾದ್ಗೃಹ್ಣಾತಿಯೆಂದು ಪಾರ್ಷ್ಣಿಗ್ರಾಹನೆಂದು ಪೇಳ್ವಪ್ಪಂ। ಪಶ್ಚಾದಾಕ್ರಂದಃ ತದನಂತರಂ ವಿಜಿಗೀಷೋರ್ವಾ ಭೂಮ್ಯೇಕಾಂತರಂ ಮಿತ್ರಮಾಕ್ರಂದ್ಯತೆ-ಕರೆಯಲ್ಪಡುತಿದ್ದಾನು। ವಿಜಿಗೀಷುಪಾರ್ಷ್ಣಿಗ್ರಹ ನಿಷೇಧಾಯ। ಯೆಂದು। ಆಕ್ರಂದಂ-ತದನಂತರಂ ಪಾರ್ಷ್ಣಿಗ್ರಾಹ ಭೂಮ್ಯಂತರಮೆ ಆ ಸಮಂತಾದೇತೌ-ಯಿಾಯರ್ವರೂ ಆಸಾತಾಂ ಬಲವಂತೌ ಕುರುತ ಇತಿ ಪ್ರಶ್ಚಾಂದ್ರಾಜಾನಶ್ಚತ್ವಾರಃ। ಪುರತಃಪಂಚ। ಮಧ್ಯಮಂ ವಿಜಿಗೀಷುವೆಂದು ದಶರಾಜಮಂಡಲಂ ವಿಜಿಗೀಷೋರಿತಿ ಸಂಬಂಧಃ। ಅರಿಪ್ರಕೃತೇ ತೇನ ಬಲಾಧಿಕ್ಯದಿಂ ಸಂಜ್ಞಾಂತರಮುಂ ಪೇಳ್ದಪಂ। ಅರೇಃ-ಯಾತವ್ಯನ ವಿಜಿಗೀಷುವ ಭೂಮ್ಯನಂತರಮಾದ ಅರಿ ವಿಶೇಷಂ ಮಧ್ಯಮನೆಂದು ಪೇಲಲ್ಪಟ್ಟಂ। ಯಾತವ್ಯಂಗೆಯುಂ ಭೂಮ್ಯನಂತರಂ ರಿಪು। ವಿಜಿ ಗೀಷು(ವಿ)ಂ(ಗೆ)ಯುಂ ರಿಪುವೆ। ವುತಪಾರಿಭಾವದಿಂದ ಅರಿತ್ವಂ। ಆಮಿತ್ರಯುಕ್ತವೂ ತಥಾ ಅನುಗ್ರಹಿ ಸಂಹತಯೋರರಿ ವಿಜಿಗೀಷ್ವೋ ರೇಕೀಭೂತಯೋರನುಗ್ರಹೇ ಕೋಶದಂಡಾಭ್ಯಾಮುಪಚಾರೇ। ಪ್ರಭುಃ-ಸಮರ್ಥಂ। ತದಪೇಕ್ಷೆಯಿಂ ಶಕ್ತಿಹೀನತ್ವದತ್ತಣಿಂ ನಿಗ್ರಹೇ ತಯೋರೇವ ವ್ಯಸ್ತಯೋಃ ವಿಭಿನ್ನರ ನಿಗ್ರಹದೊಳ್ ॥ ಏಕೈಕಂ ಮಧ್ಯಮಸ್ಸೇತಿ ಯುದ್ಧೇಸಮರ್ಥೋನ ಭವತೀತಿ ಮಂಡಲಾದಿತಿ, ಏತೇಷಾಂ-ವಿಜಗೀಷ್ವರಿಮಧ್ಯಮರ ಮಂಡಲಾತ್-ಭೂಭಾಗದತ್ತಣಿಂ। ಬಹಿಸ್ಸಾನ್ತರಃ ವಿಜಿಗೀಷೋರೇಕ ಭೂಮ್ಯಂತರಂ-ಬಲಾಪೇಕ್ಷೆಯಿಂದ। ಉದಾಸೀನಂ। ಅನುಗ್ರಹೇ ಸಂಹತಾನಾಂ ಅರಿವಿಜಿಗೀಷು ಮಧ್ಯಮರ ಪೂರ್ವದೋಪಾದಿಪ್ರಭುವ್ಯಸ್ತರವರೊಳ್ ಪ್ರಭುಃ-ಎಂದು। ಮೂಲೇತಿಮೂಲಭೂತವಾದ ಚತಸ್ರಃ। ಅವರೊಳ್ ಷಾಡ್ಗುಣ್ಯಪ್ರಯೋಗವು ಸನ್ನಿಹಿತತವು। ಪ್ರಕೀರ್ತಿತಾಃ-ಆಹೈವಂ ಮಂತ್ರ ಕುಶಲೊ। ನೀತಿತಂತ್ರ ಪ್ರವೀಣಂ, ಚತುಷ್ಕಂ-ಚತುರ್ಭೇದಂ ಭಿನ್ನಮಾದ ಮಂಡಲಂ, ಆಖ್ಯತ್। ವಿಜಿಗೀಷು ರಿತಿ-ವಿಜಿಗೀಷು-ಉಕ್ತಲಕ್ಷಣಂ।

ಅರಿಯು-ಯಾತವ್ಯಾಖ್ಯಾತಂ। ಮಿತ್ರಂ-ಅಗ್ರದೊಳ್ ಯಾತವ್ಯ ಭೂಮ್ಯನಂತರಂ। ಮಧ್ಯಮೋದಾಸೀನರ್ ಕೃತಲಕ್ಷಣರ್। ಸನ್ನಿಹಿತತ್ವದಿಂ ಈ ಆರುಮಂದಿಯೊಳೆ ಷಾಡ್ಗುಣ್ಯವ್ಯಾಪಾರಮೆಂದು [1]ಇಂದ್ರ ಚಂದ್ರರ್ ಷಟ್ಕಮುಂ ಮಂಡಲಭೇದಮುಂ ಪೇಳ್ವರ್। ತಥಾ ಉದಾಸೀನ ಮಧ್ಯಮರು ಕೃತಲಕ್ಷಣರ್। ವಿಜಿಗೀಷು-ಮಂಡಲಾನಂತರಂ। ದಶರಾಜಕಂ ತಚ್ಚ ದ್ವಾದಶ ನರೇಂದ್ರರ್ಗೆ। ಅರಿಮಿತ್ರರ್ ಪ್ರತ್ಯೇಕಂ ಷಡ್ವಿಂಶತ್ಕಮಂಡಲಂ ತೇ ಚದ್ವಾದಶ ನರೇಂದ್ರರ್। ಅಲ್ಲಿ ಅರಿಮಿತ್ರರಿಂ ಚತುರ್ವಿಂಶತಿ। ಯೆಂದು ಷಡ್ವಿಂಶತ್ಕಮಂಡಲಮುಂ ಪುನರಪಿ ಮಯೋ ಮನ್ಯತೇ-ಯಥಾ ದ್ವಾದಶಾನಾಮಿತಿ। ದ್ವಾದಶಮಂಡಲನರೇಂದ್ರರ್ಗೆ ಅಯ್ದಯ್ದು ಪ್ರತ್ಯೇಕಪ್ರತ್ಯೇಕವಾಗಿ ಅಮಾತ್ಯದುರ್ಗಕೋಶರಾಷ್ಟ್ರದಂಡಂಗಳೆಂಬ ಪ್ರಕೃತಿಗಳಂ ಪೇಳ್ವರ್ ಮ[2]ನುಷ್ಯರ್। ಅತಶ್ಚ ಕಿಂ ಭವತಿ - ಆಗ ಏನಪ್ಪುದೆಂದೊಡೆ ಮೌಲಾ ಇತಿ। ಮೂಲಮಾದ ಆ ದ್ವಾದಶಸ್ವಾಮಿ ಪ್ರಕೃತಿಗಳ್ ಪೇಲಲ್ಪಟ್ಟುವು। ಅಮಾತ್ಯಾದ್ಯಾಸ್ತಥಾಚಾಯಾಃ ಷಷ್ಟಿದ್ರವ್ಯಪ್ರಕೃತಿಗಳ್। ದ್ವಾದಶರಾಜಪ್ರಭೃತಯಃ 'ಸಪ್ತತಿಶ್ಚಾಧಿಕಾಹ್ಯೇತಾ ಸರ್ವಂ ಪ್ರಕೃತಿಮಂಡಲ' ಮಿತಿ ನೂತನಾ ಮನ್ಯಂತೇ। ಯಥಾ ಯಥಾರಾಜಾದಿಭಿಸ್ತಥಾಮಾತ್ಯಾದಿಭಿರಪಿ ಸಹ ಷಾಡ್ಗುಣ್ಯಪ್ರಯೋಗೋವಿದ್ಯತ ಇತಿ ಭಾವಃ। ಬೃಹಸ್ಪತಿಮತಮುಂ ವೇಳ್ದಪಂ — [3]ಅಯುಕ್ತಯಿತಿ-ಉ(ಭ)ಯಾರಿರಿತಿ-ವಿಜಿಗೀಷು ಯಾತವ್ಯರ ಭೂಮ್ಯನಂತರತ್ವದತ್ತಣಿಂ। ಉಭಯಾರಿ 'ಏಕಾರ್ಥಾಭಿನಿವೇಶನಮರಿಲಕ್ಷಣ' ಮಿತಿ ವಚನಾತ್। ಹೀಗೆ ಅರ್ಥಾಪತ್ತಿಯಂ। ಮಧ್ಯಮಂ - ಮಧ್ಯಮನೆ ಆಗುತಿದ್ದಾನು ಉಭಯಸುಹೃತ್. ವಿಜಿಗೀಷು ಯಾತವ್ಯರ ಭೂಮ್ಯನಂತರತ್ವದತ್ತಣಿಂ ಉಭಯರ್ಗಂ ಮಿತ್ರಂ। ಭವತಿ-ಆಗುತಿದ್ದಾನು। ಅಷ್ಟಾದಶಾನಾಮಿತಿ। ಅನಂತರೋಕ್ತಮಾದ ಅಷ್ಟಾದಶಂಗಳ್ಗೆ ಇತರ ಅಮಾತ್ಯಾದ್ಯರ್ ಪ್ರತ್ಯೇಕಪ್ರತ್ಯೇಕಮಷ್ಟೋತ್ತರಶತಮಾದ ಮಂಡಲಮುಂ ಕವಿಗಳ್ ಪೇಳ್ವರೆಂದು। ಅಷ್ಟಾದಶಪಂಚಕಂ - ನವತಿ (ಮತ್ತಂ) ಮೌಲಂಗಳಷ್ಟಾದಶಮೆಂದು ಅಷ್ಟೋತ್ತರಶತಮೆಂದು। ತಥಾ ಅಷ್ಟಾದಶೇತಿ। ಏತೇ ಅನಂತರೋಕ್ತಮಾದ ಏಕಾದಶ-ಹನ್ನೊಂದು। ಏತೇಷಾಂ ಇವರ ಮಿತ್ರಶತ್ರುಗಳ್ ಪೃಥಕ್ ಪೃಥಕ್ ಚತುಷ್ಪಂಚಾಶತ್ಕಂ ಐವತ್ತು(೫೦)ಮಂಡಲಮುಂ ವಿಶಾಲಾಕ್ಷಂ ನುಡಿಯುತಿದ್ದಾನು। ಮತಾಂತರಂಗಳ್-ತಥಾ-ಚತುಃ ಪಂಚಾಶೀತಿ(ಮಿ)ತಿ। ಅನಂತರೋಕ್ತಮಾದ ಚತುಃಪಂಚಾಶತ್ತಾದ ರಾಜ್ಞಾಂ ಅರಸುಗಳ್ಗೆ ಪೃಥಕ್ಕಾ ಚತುರ್ವಿಂಶತಿಸಂಯುಕ್ತಮಾದ ಮಂಡಲವು। ತ್ರಿಶತಂ ಚತುರ್ವಿಂಶತ್ಯಧಿಕಶತತ್ರಯದಿಂ ಕೆಲವರ್ ಮಂಡಲಮುಂ ಕಲ್ಪಿಸರ್। ಎಂಬುದರ್ಥಂ। ಸಮೂಹವಾಚಿತ್ವದತ್ತಣಿಂ ಮಂಡಲಶಬ್ದಕ್ಕೆ ಸಪ್ತಪ್ರಕೃತಿಗಂ। ಯತ್ತು ವಿಜಿಗೀಷೋಶ್ವರ್ಗ "ಚತುರ್ದಶಕಮೇವೇಹಮಂಡಲಂ ಪರಿಚಕ್ಷತೇ। ಷಡ್ಗುಣಪ್ರಯೋಗದೊಳ್ ಸನ್ನಿಹಿತತ್ವದತ್ತಣಿಂ।" ತಥಾ ಮಂಡಲತ್ರಿಕಂಯೆಂದು ಇವರೊಳ್ ಅರಿವಿಜಿಗೀಷು ಮಧ್ಯಮರ್। ಮಿತ್ರಯುಕ್ತರಾದೊಡೆ - ಪೃಥಕ್ - ಪ್ರತ್ಯೇಕಪ್ರತ್ಯೇಕ ತಮ್ಮತಮ್ಮ ಮಿತ್ರಯುಕ್ತರಾಗೆ ಷಟ್ಕಮೆಂದು ಮತ್ತೆ ಕೆಲವರ್ ಆಚಾರ್ಯರು ಪೇಳ್ವರ್। ಯಾವದ್ಭಿರೇವ ಚಿಂತ್ಯತೇ ತಾವದ್ಭಿರೇವ ಭವತಿ। ಯೆಂದು

(1) ಮೂಲದಲ್ಲಿ ಪುಲೊಮೇಂದ್ರಾ ಎಂದಿದೆ. (2) ಮೂಲದಲ್ಲಿ ಆಮನಸ್ತ್ರೀಹಮಾನವಾಃ - ಎಂದಿದೆ. ಮಾನವಶಬ್ದಕ್ಕೆ ಮನುಷ್ಯರು ಎಂದು ಅರ್ಥ ಬರೆದಿದೆ. ಈ ಪ್ರಕರಣದಲ್ಲಿ ನೀತಿಶಾಸ್ತ್ರಕರ್ತೃಗಳ ಬೇರೆಬೇರೆ ಮತವನ್ನು ಹೇಳುವುದರಿಂದ ಮನುವಿನಮತಾನುಸಾರಿಗಳು ಎಂದು ಅರ್ಥ ಹೇಳಬೇಕೆಂದು ತೋರುವುದು (3) ಮೂಲದಲ್ಲಿ ಸಂಯುಕ್ತ ಎಂದಿದೆ.

'ಅಮಾತ್ಯಾದ್ಯಾಃ ಪ್ರಕೃತಿಗಳ್ | ಏಕೈಕಸ್ಯ ಅನಂತರೋಕ್ತ ಭೂಪತಿಷಟ್ಕಕ್ಕೆ ಮಂಡಲಂ ಮಂಡಲ
ಷಟ್ಕಮುಂ ಮಂಡಲವೇದಿಗಳಾದ ಮತ್ತೆ ಕೆಲವರಾಚಾರ್ಯರ್ ಪೇಳ್ವರ್| 'ಸಪ್ತಪ್ರಕೃತಿಕಾ[1] ಸ್ತ್ವೇತೇ
ವಿಜಿಗೀಷ್ವರಿಮಧ್ಯಮಾಃ || ಏಕವಿಂಶತಿರಿತ್ಯಾಹುರಪರೇ[2] ಪರವಾದಿನಃ' || ವಿಜಿಗೀಷ್ವಂಮಧ್ಯಮರ್
ಪ್ರತ್ಯೇಕಸಪ್ತಪ್ರಕೃತಿಯಿಂದ ಏಕವಿಂಶತಿಕಂಮಂಡಲಮೆಂದು ಮತ್ತೆ ಕೆಲವರ್ ಪರವಾದಿಗಳ್
ಪೇಳ್ವರ್ ಯೆಂದು | ಪ್ರತೀಕಂ | 'ಚತ್ವಾರಃ ಪಾರ್ಥಿವಾ ಮೌಲಾಃ ಪೃಥಜ್ಮಿತ್ರೈಸ್ಸಹಾಷ್ಟಕಂ||
ಅಮಾತ್ಯಾದಿಭಿರೇತೇ[3] ನ ಜಗತ್ಯಕ್ಷರಸಮ್ಮಿತಂ'|| ಚತ್ವಾರೋ ಮೌಲಾಃ-ವಿಜಿಗೀಷ್ವರಿಮಿತ್ರೋದಾ
ಸೀನರ್| ಪ್ರತ್ಯೇಕಂ ಮಿತ್ರರೊಡನೆ ಅಷ್ಟಕಂ| ಮಂಡಲಮೆಂದು ಶೇಷಂ| ಅಮಾತ್ಯಾದಿಪಂಚಕದಿಂ
ದಿವರ್ ನೃಪರ್ - ಜಗತ್ಯಕ್ಷರಸಮ್ಮಿತಂ - ತದಕ್ಷರಂಗಳ್ ಪಾದಚತುಷ್ಟಯದೊಳ್ ಅಷ್ಟಚತ್ವಾರಿಂ
ಶತ್ಕಂ ಮಂಡಲಮೆಂದು | ''ವಿಜಿಗೀಷೋ[1] ರ್ಯೇ ಪುರಸ್ತಾ ದ್ಯೇಚ ಪಶ್ಚಾತ್ಪ್ರಕೀರ್ತಿತಾಃ|| ದಶಕಂ
ಮಂಡಲಮಿದಂ ಮಂಡಲಜ್ಞಾಃ ಪ್ರಚಕ್ಷತೇ ||'' ಪೂರ್ವಾಖ್ಯಾತಮಾದ ದಶಭೂಮಿಪಾಲರ್ಗೆ
ಅಮಾತ್ಯಾದಿಗಳ್ ಪ್ರತ್ಯೇಕಪ್ರತ್ಯೇಕಮಾಗೆ ಮಂಡಲಜ್ಞರ್ ಷಷ್ಟಿಸಂಖ್ಯೆಯಂಪೇಳ್ವರ್| ಪ್ರತೀಕಂ|
'' ಪ್ರಾಗೂರ್ಧ್ವಂ ವಿಜಿಗೀಷೋಶ್ಚ ಪಶ್ಚಿಮಾದಿತಿ ಪಂಚಮಂ || ಅಮಾತ್ಯಾದ್ಯಾಃ ಪೃಥಕ್ತೇಷಾಂ
ತ್ರಿಂಶತ್ಕಂ [2] ಪರಿಚಕ್ಷತೇ || '' ಅರಿಮಿತ್ರರ್, ನೇತುಃ–ವಿಜಿಗೀಷುವಿಗೆ | ಪುರಃ-ಮುಂದುಗಡೆಯಲ್ಲಿ
ಭೂಮ್ಯನಂತರ-ಭೂಮ್ಯೇಕಾಂತರರ್ ವಿಜಿಗೀಷುವೊಡನೆ ಪಂಚಕಂ-ಅಯ್ದು | ಅದಕ್ಕೆ ಅಮಾ
ತ್ಯಾದಿಗಳ್ ಪ್ರತ್ಯೇಕ ಮಯ್ದುಯ್ದಾಗೆ| ಇಪ್ಪತ್ತಯ್ದು | ಅಂತು ತ್ರಿಂಶತ್ಕಮಂಡಲಮಂ ಪರಿಚಕ್ಷತೇ-
ಪೇಳುತಿದ್ದಾರು| [3] ''ಅರೇಅಪ್ಯೇಷಸ್ಯಾನ್ಮಾರ್ಗೋ ದೃಷ್ಟೋಮನೀಷಿಭಿಃ || ಪಂಚಕಂ ಮಂಡಲಂ
ನ್ಯಾಯ್ಯಂ ತ್ರಿಂಶತ್ಕಂಚ ಪೃಥಕ್ (ಪೃಥಕ್) || '' ಹೀಗೆ ವಿಜಿಗೀಷುವಿಗೆ ಶತ್ರುವಿಗಂ ಅನಂತ
ರೋಕ್ತ ನ್ಯಾಯದಿಂ ಪಂಚಕಂ ತ್ರಿಂಶತ್ಕಮುಮೆಂದು ಸರ್ವ್ವವಾಕ್ಯಮುಂ| ಹಾಗಲ್ಲದಿರ್ದೊಡೆ |
ಪರೈರಪ್ಯೇಷ ಏವೇತಿ-ಆತಿದೇಶಂ-ಆ ಅರಿಯುಂ ವಿಜಿಗೀಷುಮಂಡಲಮಂ ಚಿಂತಿಸುತಿದ್ದಾನು |
ಆತಂಗಂ ಆ ಯಥೋಕ್ತಕ್ರಮಮೆ ನೋಡಲ್ತಕ್ಕುದು | ಏಷಾ ಮೇತ ನ್ಯಾಯಮೆಂದು ಮತ್ತೆ
ಭೇದಂಗಳಂ ಪೇಳ್ದಪಂ || ಪಂಚಕಮಿತ್ಯಾದಿ | ದ್ವೇ ಏವ ಪ್ರಕೃತೀ ನ್ಯಾಯ್ಯೇ ಇತ್ಯುವಾಚ ಪರಾ
ಶರಃ || ''ಅಭಿಯೋಕ್ತೃಪ್ರಧಾನತ್ವಾ(ದತ್ತಣಿಂ) ಯಥಾನ್ಯಾಯಾರಿಗುಪ್ತಯೇ ||'' ನ್ಯಾಯ್ಯೇ-
ನ್ಯಾಯಾನಪೇತದೊಳ್| ಹೀಗೆಂದು ಪರಾಶರಮುನೀಶ್ವರಂ ನುಡಿದಂ| ಪರರಂ ಕುರಿತು ಅಭಿಯುಕ್ತ
ನಾಗುತಿದ್ದಾನು | ಪರರಿಂದ ಅಭಿಯುಜ್ಯತೆ ಯೆಂದಾದೊಡಂ ನ್ಯಾಯ್ಯೆಯೆಂದು | ಯುಜಿಧಾತು
ವ್ಯಾಖ್ಯಾತಮಾದುದು | ಪರಸ್ಪರಾಭಿಯೋಗದೊಳ್ ವಿಜಿಗೀಷುವಿಗಮರಿಗಮರಿತ್ವಂ ವಿಜಿಗೀಷು
ತ್ವಂಗಳೇಕಪ್ರಕೃತಿಯೆಂದು | ಅದು ಕಾರಣ ಪರಸ್ಪರಾಭಿಯೋಗದೊಳ್ ಯಥಾ ಹೇಗೆ ವಿಜಿಗೀಷು
ವಿಂದ ಅರಿಯು ಅರಿಯಿಂದ ವಿಜಿಗೀಷುವುಮಭಿಯುಕ್ತನಾಗುತಿದ್ದಾನು ಯೆಂದು | ಹೀಗೆ
ವಿಜಿಗೀಷುವು ಅಭಿಯೋಕ್ತೃ ಶಕ್ತ್ಯುಪಚಯ ಮುಂಟಾಗೆ ಅರಿರಪಿ-ಅರಿಯುಂ | ಈ ಪ್ರಕಾರಮಾಗೆ
ಆತನೆ ವಿಜಿಗೀಷು | ಆತನೆ ಅರಿಯೆಂದು | ಇದು ಕಾರಣದಿಂದಮೇಕಮೆ ಪ್ರಕೃತಿಯೆಂದು | ಏಕ
ಪ್ರಕೃತಿ ಯಿಾ ಮಂಡಲಮೆಂದು ಉಪಸಂಹರಿಸುತ್ತೆ ಪೇಳ್ದಪಂ | ಇತಿ-ಈ ಪ್ರಕಾರದಿಂ, ಬಹು

(1) ಸ್ವರ್ವೇ (ಮೂ) (2) ನಯವಾದಿ (3) ತ್ಯೆಶ್ಚ (4) ವಿಜಿಗೀಷೋಃಪುರಸ್ತಾಚ್ಚಯೇ ಪಶ್ಚಾಚ್ಚ
ಪ್ರಕೀರ್ತಿತಾಃ|| (5) ಪ್ರಚಕ್ಷತೆ (6) ಅರೇರಪ್ಯೇವಮೇವೇತಿದೃಷ್ಟಂ ದೃಷ್ಟಿಮತಾಂ ವರೈಃ || ಪಂಚಕಂ ಮಂಡಲಂ
ಯೋಜ್ಯಂ ತ್ರಿಂಶತ್ಕಾಂ ಚ ಮನೀಷಿಭಿಃ || ರಿತಿ ||

ಪ್ರಕಾರಮಾಗಿ ಮಂಡಲಮಂ ಪೇಳುತಿದ್ದಾರು | '' ಸರ್ವಲೋಕಪ್ರತೀತಂ ತು ಸ್ಫುಟಂ ದ್ವಾದಶ
ರಾಜಕಂ ||'' ಹೀಗೆ ಬಹುಪ್ರಕಾರ(ಮಾಗಿ)ಮಂಡಲಮಂ ಪೂರ್ವಾಚಾರ್ಯರ್ ಪೇಳುತಿದ್ದಾರು|
ಕಾಮಂದಕನಿಂದಮುಂ ಬಹುಶ್ರುತತ್ವಖ್ಯಾಪನಾರ್ಥಮಾಗಿ ಗ್ರಂಥವಿಸ್ತರದೋಷಮುಂ ಗಣಿಸಲ್ಪಡ
ಲಿಲ್ಲ|| ಸರ್ವಲೋಕ ಪ್ರತೀತಮಾದೊಡೆ ದ್ವಾದಶರಾಜಕಮೇವೇತ್ಯುಕ್ತಮೆಂದು ಇದನೆ ಸಮರ್ಥಿಸುತ್ತೆ
ಪೇಳ್ದಪಂ | '' ಅಷ್ಟಶಾಖಂ ಚತುರ್ಮೂಲಂ ಷಷ್ಟಿಪತ್ರಂ ದ್ವಯೋಸ್ಥಿತಂ|| ಷಟ್ಪುಷ್ಪಂ ತ್ರಿಫಲಂ
ವೃಕ್ಷಂ ಯೋ ಜಾನಾತಿ ಸ ನೀತಿವಿತ್|| '' ಇತಿ-ಮಂಡಲವು ವೃಕ್ಷತ್ವದಿಂ ನಿರೂಪಿಸಲ್ಪಡುತಿದ್ದೀತು|
ಚತು[1] ರ್ಮೂಲಮೆಂದು| ವಿಜಿಗೀಷ್ವರಿಮಧ್ಯಮೋದಾಸೀನಮೆಂದು ಚತುರ್ಮ್ಮಂಡಲಂಗಳ್(ಮೂಲಂ)
ಆವದಕ್ಕೆ ಅದು ಅಷ್ಟಶಾಖಮಿತಿ ಮೂಲಭೂತಮಾದ ವಿಜಿಗೀಷ್ವಾದಿ ಚತುಷ್ಟಯಕ್ಕೆ ಅರಿಮಿತ್ರರ್
ಪ್ರತ್ಯೇಕಮಾದೊಡೆಯೆಂದು ಅರಸುಗಳ್ ಶಾಖೆಗಳ್ | ಷಷ್ಟಿಪತ್ರಮಿತಿ - ವಿಜಿಗೀಷ್ವಾದಿ
ದ್ವಾದಶರೂಪಂಗಳ್ಗೆ ಪ್ರತ್ಯೇಕಮಮಾತ್ಯಾದಿ ಪಂಚಪಂಚ-ಆಯ್ದುಯ್ದುಪ್ರಕೃತಿಗಳೆಂದು ಅರವತ್ತು
ಪ್ರಕೃತಿಗಳೆ ಪತ್ರಂಗಳ್| ದ್ವಯೋ ಸ್ಥಿತಮಿತಿ ದೈವ ಪುರುಷಕಾರ ಇತಿದ್ವಯಂ - ಎರಡುಮಾಧಾರ
ಭೂತಮಾಗಿ ಕ್ಷೇತ್ರಭೂತಮಲ್ಲಿ | ಇಹ ಷಟ್ಪುಷ್ಪಮಿತಿ-ಸಂಧಿವಿಗ್ರಹ ಯಾನ ಆಸನ ದ್ವೈಧೀಭಾವ
ಸಮಾಶ್ರಯಂಗಳ್ ಆರುಗುಣಂಗಳುಂ ಷಟ್ಪುಷ್ಪಂಗಳ್ | ತ್ರಿಫಲಮಿತಿ ಕ್ಷಯಸ್ಥಾನ ವೃದ್ಧಿಯೆಂಬ
ಅಭ್ಯುದಯಂಗಳ್ ಅವುವು ಷಾಡ್ಗುಣ್ಯ ಫಲ ಭೂತಂಗಳ್ | ಉತ್ತಮಮಧ್ಯಮಾಧಮ-
ಲಾಭಂಗಳ್ | ಏವಂ– ಈ ಪ್ರಕಾರಮಾದ ಮಂಡಲಮೆಂಬ ವೃಕ್ಷಮಂ ಯೋಜಾನಾತಿ–ಆವಂ ತಿಳಿ
ಯುತ್ತಿದ್ದಾನು ಅವಂ| ನೀತಿವಿತ್–ನೀತಿಜ್ಞಂ | ಮಂಡಲದೊಳ್ ಷಾಡ್ಗುಣ್ಯ ಪ್ರಯೋಗಮಂ
ಪೇಳ್ದಪಂ || 'ಪಾರ್ಷ್ಣಿಗ್ರಾಹಸ್ತಥಾಸಾರಃ ಶತ್ರುಮಿತ್ರೇಪ್ರಕೀರ್ತಿತೇ || [1] ಆಕ್ರಂದಸ್ತ್ವಸ್ಯ
ಸಾರೋಽಪಿ ವಿಜಿಗೀಷೋಃ' ವಿಜಿಗೀಷುಗೆ ಯಾತವ್ಯನಂಕುರಿತು ಐದುತಿದ್ದಾನು | ಆತಂಗೆ
ಪಾರ್ಷ್ಣಿಗ್ರಾಹಂ ವಿಘ್ನವಿಧಾಯಿ | ಪ್ರಥಿತಂ | ಭೂಮ್ಯನಂತರಂ ತದಾಸಾರ ಇತಿ | ಪಾರ್ಷ್ಣಿ
ಗ್ರಾಹ ಭೂಮ್ಯಂತರಂ ಮಿತ್ರಂ ಯಿರ್ವರುಂ ಶತ್ರುಮಿತ್ರರೆಂದು ಪೇಳ್ವರ್ | ಶತ್ರೋಃ ಯಾತ
ವ್ಯಂಗೆ| ಮಿತ್ರರು ಆಕ್ರಂದ ಇತಿ | ಪಾರ್ಷ್ಣಿಗ್ರಾಹನ ಭೂಮ್ಯನಂತರಂ ವಿಜಿಗೀಷುವಿಂ ಪಾರ್ಷ್ಣಿ
ಗ್ರಾಹಾರ್ಥಮಾಕ್ರಂದ್ಯತೇ–ಕರೆಯಲುಪಡುತಿದ್ದಾನು | ಯೆಂದು ಆಕ್ರಂದಂ | ಆತನ ಭೂಮ್ಯನಂ
ತರಂ ರಾಜಾ | ಆಪತ್ತ್ರಾಣಾರ್ಥಮಾಗಿ ಆಸರತಿಯೆಂದು | ಇವರಿರ್ವರುಂ ಪೇಳ್ವ ವಿಜಿಗೀಷುಗೆ
ಮಿತ್ರರೆಂದು ಉದಾಹರಿಸಲ್ಪಟ್ಟರು | ಯೆಂದು ಅನುವರ್ತಿಸುತಿದ್ದೀತು | "ಪುರೋಯಾಯಾದ್ವಿಗೃ
ಹ್ಯೈವಂ ಮಿತ್ರಾಭ್ಯಾಂ ಪಶ್ಚಿಮಾವರೀ|| ಪಶ್ಚಿಮಾಯಿವ ಪೂರ್ವಾಭ್ಯಾಂ ಅರಿಂತನ್ಮಿತ್ರಮೇವಚ||"
ಪುರಃ–ಮುಂದುಗಡೆಯಲ್ಲಿ ಯಾತವ್ಯನಂ ಕುರಿತು ಯಾಯಾತ್–ಐದಬೇಕು| ವಿಜಿಗೀಷುವು ವಿಗೃ
ಹ್ಯೈವಂ–ವಿಗ್ರಹಮಂ ಮಾಡಿಸಿ | ಮಿತ್ರಾಭ್ಯಾಂ – ಆಕ್ರಂದಾಸಾರಾಭ್ಯಾಂ | ಪಶ್ಚಿಮಸ್ಥ
ರಾದ ಆಕ್ರಂದಪಾರ್ಷ್ಣಿಗ್ರಾಹಸಂಜ್ಞರಂ | ಪಶ್ಚಿಮಾವಿವ–ಪೂರ್ವಾಭ್ಯಾಂ ಮಿತ್ರಾಮಿತ್ರರಿಂ | ಅ
ಮಿತ್ರರಂ–ಯಾತವ್ಯಮಿತ್ರರಂ | ವಿಗೃಹ್ಯ–ವಿಗ್ರಹಮಂ ಮಾಡಿಸಿಯೆಂದು ಅನುವರ್ತತೇ | ಆದಿ ವಿ
ತ್ರಂಗೆ ಅಮಿತ್ರನಾದ ಮಿತ್ರನಂ | ಬಹುಳಮಾದ ಶಾಂತಿಯಿಂದುಪಲಕ್ಷಿತಮಾದ | 'ಪಶ್ಚಾದ್ಗಚ್ಛೇ
ನರಾಧಿಪಃ||' ಅರಿಮಿತ್ರಸ್ಯ–ಯಾತವ್ಯಮಿತ್ರನ | ಪುರತಃ-ಮುಂದೆ | ಆವಮಿತ್ರನು| ತತ್ರ-ಆ ಮಿತ್ರ
ನಲ್ಲಿ–ಕೃತಕೃತ್ಯೇನ - ಕೃತಮಹೋಪಕಾರನಿಂ | ಬಹುಳಮಾಗಿ ಉಪಚಿತಮಾದ ಶಕ್ತಿಯುಳ್ಳ

(1) ಮರ್ಂಡಲ (2) ಆಕ್ರಂದೋಥತಥಾಸಾರಃ ವಿಜಿಗೀಷೋಃ

ವನಿಂ ಶತ್ರುವಂ ಕುರಿತು ಅನಿರುದ್ಧಚೇಷ್ಟನಂ ಮಾಡಿ ಯಾತವ್ಯಮಿತ್ರನಂ ಸ್ತಂಭಿತಂ ಮಾಡಿ
ಉಭಯಮಿತ್ರವಾದ ಉದಾಸೀನ ವಿಶೇಷದಿಂದಯೋನೂ ಯೆಂದು| ಈತಂ ಸ್ತಂಭಿಸಿದೊಡೆ
ವಿಜಿಗೀಷುವಿಂ ಕೃತಕೃತ್ಯನೆಂದು | ಹೀಗೆ ಮಾಡಿ ಪಶ್ಚಾದ್ಗಚ್ಛೇನ್ನೃಪೋ ನಾನ್ಯಥಾ ಇತಿ | ಇದನೆ
ಸಮರ್ಥಿಸುತ್ತೆ ಪೇಲ್ದಪಂ | 'ಆಕ್ರಂದೇನಾತ್ಮನಾಚೈವ ಪಾರ್ಷ್ಣಿಗ್ರಾಹಂ ಪ್ರಪೀಡಯೇತ್ ||'
ಆವನಂ ಪೀಡಿಪುದು | 'ಅರಿಮಿತ್ರಸ್ಯ ಮಿತ್ರಸ್ಯಪೀಡನಂ ಪೃಥಿವೀಪತಿಃ ||' ಕುರ್ವೀತೋಭಯಮಿ
ತ್ರೇಣ ಚೈವ ಹಿ || ಅರಿ-ಯಾತವ್ಯಂ | ತಸ್ಯಮಿತ್ರಂ-ಆತಂಗೆ ಆವನಂ ಮಿತ್ರಂ | ತಸ್ಯಾಪಿ -
ಆತಂಗೆಯುಂ ಆವನಂ ಮಿತ್ರಂ | ತಸ್ಯ ಆತನ ಪೀಡನಮಂ ಪೃಥ್ವೀಪತಿಯು ಕುರ್ವೀತ | ಉಭ
ಯಮಿತ್ರೇಣ - ಪೂರ್ವೋಕ್ತಮಿತ್ರದ್ವಯದಿಂ - ವಿಜಿಗೀಷು ಮಿತ್ರೇಣ ಚೈವ ಹಿ | ಪ್ರತೀಕಂ |
"ಅನೇನ ಕ್ರಮಯೋಗೇನ ವಿಜಿಗೀಷುಃಸದೋತ್ಥಿತಃ|| ಮಿತ್ರಂಪೀಡಯೇದಹಿತಂ ಶತ್ರುಮಿತ್ರಾಣಾ
ಮಂತರಾಂತರಾ|" ಅನಂತರೋಕ್ತಕ್ರಮಯೋಗದಿಂ ವಿಜಿಗೀಷುವು ನಿತ್ಯೋತ್ಥಿತನಾಗಿ ಅಹಿತನಂ
ಪೀಡಿಪುದು| ಸರ್ವಥಾಪಕಾರಿಯಂ ಶತ್ರುಭೂಮ್ಯಂತರಮಿತ್ರರ ಅನಂತರೋತ್ತರಸ್ಥಿತನಂ| ಸಂದಂಶ
ನ್ಯಾಯದಿಂ | 'ಪೀಡ್ಯಮಾನೋಹ್ಯುಭಯತಃ ಸದೋದ್ಯುಕ್ತೈಃ ಮನೀಷಿಭಿಃ || ರಿಪುರುಚ್ಛೇದಮಾ
ಯಾತಿ ತದ್ವಶೋವಾಽವತಿಷ್ಠತೇ ||' ಪೀಡ್ಯಮಾನೋಹ್ಯುಭಯತಃ | ಏಕಪಾರ್ಶ್ವದೊಳ್
ವಿಜಿಗೀಷುವಿಂದೆ| ಅಪರತಃ - ಮತ್ತೊಂದು ಪಾರ್ಶ್ವದೊಳ್ ವಿಜಿಗೀಷುಮಿತ್ರರಿಂ| ಕ್ರಮಾಕ್ರಮ
ವ್ಯವಸ್ಥಿತರಿಂ| ಸದೋದ್ಯುಕ್ತೈರ್ಮನೀಷಿಭಿಃ| ಪ್ರಾಜ್ಞರಿಂ ರಿಪುರುಚ್ಛೇದಮಾಯಾತಿ ತದ್ವಶೇ
ವಾಽವತಿಷ್ಠತೇ || ಇರುತಿದ್ದಾನು| ಉಭಯ ಮಿತ್ರನ ಆತ್ಮಸಾತ್ಕರಣಾರ್ಥಮಾಗಿ ಪೇಲ್ದಪಂ|
"ಸರ್ವೋಪಾಯೈಸ್ತು ಕುರ್ವೀತ ಸಾಮಾನ್ಯಂ ಮಿತ್ರಮಾತ್ಮಸಾತ್ || ಭವಂತಿ ಮಿತ್ರಾದುಚ್ಛಿನ್ನಾಃ
ಸುಖೋಚ್ಛೇದ್ಯಾ ಹಿ ವಿದ್ವಿಷಃ ||' ಸಾಮಪ್ರದಾನಾದಿಗಳಿಂ ಸಾಮಾನ್ಯಂ ಶತ್ರುವಿಗಂ ತನಗಂ
ಸಾಧಾರಣಂ| ಆತ್ಮಸಾ-ದಾತ್ಮಸಾಧಾರಣನಂ ಕುರ್ಯಾತ್-ಮಾಡೂದು | ಏನು ಕಾರಣದಿನೆನೆ
ಪೇಲ್ದಪಂ | "ಭವಂತಿ ಮಿತ್ರಾದುಚ್ಛಿನ್ನಾಃ" ಬಿಡಿಸಲ್ಪಟ್ಟಂಥಾ ಶತ್ರುಗಳ್ ಸುಖೋಚ್ಛೇದ್ಯರ್ |
ಹಿ-ಆವುದಾನೊಂದು ಕಾರಣದತ್ತಣಿಂ| ನಿಸ್ಸಹಾಯತ್ವದಿಂ ಅರಿಗೆಯುಂ ಮಿತ್ರಾಪಾದನಾರ್ಥಮಂ
ಪೇಲ್ದಪಂ | "ಕಾರಣೈರೇವ ಜಾಯನ್ತೇ ಮಿತ್ರಾಣಿ ರಿಪವಸ್ತಥಾ ||" ಉಪಕಾರಾಖ್ಯ ಕಾರಣಂ
ಗಳಿಂ ಮಿತ್ರರಪ್ಪರ್ | ಅಪಕಾರಾಖ್ಯಕಾರಣಂಗಳಿಂ ಶತ್ರುಗಳಪ್ಪರ್ "ಉಪಕಾರಾಪಕಾರೌ ಹಿ
ಲಕ್ಷ್ಯಂ ಲಕ್ಷಣ ಮೇತಯೋಃ | ಇತಿವಚನಾತ್ | ರಿಪವೊ[ಯೇ]ನ ಜಾಯನ್ತೇ ಕಾರಣಂ
ತತ್ಪರಿತ್ಯಜೇತ್ ||" ವಿಜಿಗೀಷುವೆಂದು ಭಾವಂ-ಕೇವಲನಲ್ತು | ಮುಖ್ಯೋ ಜಗತಿ ಮಿತ್ರತ್ವೇ
ಸ್ಥಾಪಯೇತ್ ಕ್ಷುದ್ರಕಾನಪಿ"ೀತಿ ದರ್ಶಯನ್ನಾಹ| ತಾನು ಮುಖ್ಯರನಾದೊಡಂ ಕ್ಷುದ್ರರನಾ
ದೊಡಂ ಮಿತ್ರತ್ವದೊಳ್ ಸ್ಥಾಪಿಪುದು| ಯೆಂದು ಪೇಲ್ದಪಂ "ಪ್ರಾಧಾನ್ಯೇನ ಹಿ ಸರ್ವತ್ರ
ಸರ್ವಾ[1]ಸ್ಸಂರಂಜಯೇತ್ಪ್ರಜಾಃ|| ತಾಸಾಂ[2]ಸಂರಂಜನಾದ್ರಾಜಾ ಸರ್ವಾಂಗೀಂ ಶ್ರಿಯಮಶ್ನುತೇ||"
ಪ್ರಾಧಾನ್ಯೇನ-ಮುಖ್ಯತ್ವದಿಂ| ಸರ್ವತ್ರ-ಸ್ಥಾನೀಯ ದ್ರೋಣಾಮುಖ ಖರ್ವಟ (ಕರ್ಪ್ವಟ?)
ಪಟ್ಟಣಗ್ರಾಮಾದಿಗಳೊಳ್ ಸ್ವಜನಪದದೊಳ್ ಯಥಾ ಯೋಗ್ಯಂ ಪರಜನಪದದೊಳಂ ಯಥಾ
ಯೋಗ್ಯಮಾಗಿ ಸರ್ವಾಃ-ಚತುರ್ವರ್ಣಾಶ್ರಮಲಕ್ಷಣಮಾದ ಪ್ರಜೆಗಳಂ ಸಾಮಾದಿಗ(ಳುಂ?)ಳಿಂ
ಆನುರೂಪ್ಯದಿಂ ಸಂರಂಜಯೇತ್-"ಅನುರಾಗೇಣ ಹಿ ಸರ್ವ ಗುಣ್ಯ"ಮಿತಿವಚನಾತ್| "ಜನಾನು

(1) ಸಂಸರ್ಜಯೇತ್ (2) ಸಂಸರ್ಜನಾತ್

ರಂಜನಾದ್ರಾಜಾ ಸರ್ವಾಂಗೀಂ ಶ್ರಿಯಮಶ್ನುತೇ ||" ಶ್ರೀಹೇತುವಪ್ಪುದಱಿಂದ| ಉಪಚಾರ
ದತ್ತಣಿಂ ಪೃಥಿವೀಪತಿಯೆಂದು | ಹೇಳಲ್ಪಡುತ್ತಿದ್ದೀತು | ತಸ್ಯಾಮಂಗಾನಿ-ಅದಱೊಳಂಗಂಗಳ್ |
ಚತುಸ್ಸಮುದ್ರಾಂತರ್ವರ್ತಿ ವಿಷಯಂಗಳ್ | ಏವಂಭೂತಮಾದ ಸರ್ವಾಂಗಂಗಳ್ | ಅದಱೊಳ್
ಅಂಥಾ ಶ್ರಿಯು ಅಶ್ನುತೇ-ಐದುತಿದ್ದಾನು | ಚಕ್ರವರ್ತಿತ್ವಾಧಿಪತಿಯಾಗುತಿದ್ದಾನುಯೆಂಬು
ದರ್ಥಂ | ಇದಂ ಸಮರ್ಥಿಸುತ್ತೆ ಪೇಲ್ದಪಂ| "ದೂರೇ ಚರಾನ್ಮಾಂಡಲಿಕಾನ್ [1]ಅನ್ಯಾನ್ ದುರ್ಗ
ನಿವಾಸಿನಃ| ಮಿತ್ರೀಕುರ್ವೀತ ತತ್ರಾಣಾಃ ಸಾಧಯನ್ತೀಹ ಮಂಡಲಂ || ದೂರೇ ಚರಾನ್
ಮಂಡಲಿನಃ-ದ್ವಾದಶರಾಜಕದತ್ತಣಿಂ ಬಹಿರ್ಭೂತರನಾದೊಡಂ | ಅನ್ಯಾನ್-ದುರ್ಗನಿವಾಸಿಗಳಂ
ಮಿತ್ರರಂ ಮಾಳ್ಪುದು | ಅಮಿತ್ರರನಾದೊಡಂ ಮಿತ್ರರಂ ಮಾಳ್ಪುದೆಂಬುದರ್ಥಂ | "ಸಾಧ
ಯನ್ತೀಹ ಮಂಡಲಂ"ಯೆಂದು ಜಾತ್ಯೇಕವಚನಂ| ಅಪರಮಂಡಲಂಗಳಂ ಸಾಧಿಪರೆಂಬುದರ್ಥಂ|
ಸಂಘಧರ್ಮಮಂ ಪೇಲ್ದಪಂ| [2]ಚಲೇಚ್ಚೇದೂರ್ಜಿತಖಲೋ ಮಧ್ಯಮೋಪಿ ಜಿ ಗೀಷಯಾ |
ಏಕೀಭೂಯಾರಿಣಾ ತಿಷ್ಠೇದಶಕ್ತಃ ಸಂಧಿನಾ ನಯೇತ್||" ಊರ್ಜಿತಬಲಃ-ಶಕ್ತಿತ್ರಯ ಸಂಪನ್ನ
ರಾದ ಮಧ್ಯಮಂ ವಿಜಿಗೀಷಯಾ-ಜಯೇಚ್ಛೆಯಿಂ| ಚಲೇತ್ ವಿಜಿಗೀಷುವಂ ಕುರಿತು
ಅಭಿ(ಯು)ಕ್ತನಾದೊಡೆ| ಆಗ ಏಕೀಭೂಯಾರಿಣಾ ತಿಷ್ಠೇತ್| ಅರಿಣಾ-ಯಾತವ್ಯನೊಡನೆ
ಕೃತಸಂಧಿಯಾಗಿರ್ಪುದು | ಅಶಕ್ತನಾದೊಡೆ ಸಂಧಿನಾ-ಕೋಶಾದಿನಿರೂಪಣದಿಂ | ನಯೇತ್-
ಐದುವುದು | ತಥಾ - ಉದಾಸೀನೇ ವಿಚಲತಿ ಸರ್ವೈಃಮಂಡಲಿನಸ್ಸಹ || ಸಂಘ ಧರ್ಮೇಣ
ತಿಷ್ಠೇಯುಸ್ಸನ್ನಮೇಯುರಶಕ್ತಯಃ ||" ಉದಾಸೀನಂಜಯೇಚ್ಛೆಯಿಂ ಚಲಿಸುತಿರೆ| ಸರ್ವೇ
ಮಂಡಲಿನಃ- ವಿಜಿಗೀಷ್ವರಿಮಧ್ಯಮಾಧಮರು ಸಹ ಕೂಡಿ ಸಂಘಧರ್ಮದಿಂದಿರ್ಪುದು| ಆತ್ಮ
ಸಂರಕ್ಷಣಾರ್ಥಮಾಗಿ | ಸಂನಮೇಯುರಶಕ್ತಯಃ - ಅಶಕ್ತರಾದೊಡೆ ನಮ್ರರಪ್ಪುದು| ಉಕ್ತ
ಕ್ರಮದಿಂ ಸಂಘಧರ್ಮಮಂ ಪೇಲ್ದಪಂ| "ಉತ್ಪನ್ನಸ್ನೇಹಧರ್ಮೇಷು ಸಂಭೂಯ ಸ್ವಾರ್ಥ
ಸಿದ್ಧಯೇ | ಆಪತತ್ಪ್ರಕರಣಂ ಸಮ್ಯಕ್ಸಂಘಧರ್ಮಮಿತಿಸ್ಮೃತಂ ||" ಕೃಚ್ಛ್ರೇಷು-ಮಹಾ
ವ್ಯಸನಂಗಳೊಳ್| ಸಂಭೂಯ-ಏಕೀಭಾವಮನೆಯ್ದಿ ಸ್ವಾರ್ಥಸಿದ್ಧಿಗೋಸುಗ| ಆಪತತ್ಪ್ರಕರಣಮಂ
ಸಮ್ಯಕ್ಕಾಗಿ ಮಾಳ್ಪುದು| ಯೆಂಬ ದಾರವು ವಾಕ್ಯಶೇಷಂ| ತದು-ಅದು ಸಂಘವೃತ್ತಮೆಂದು
ಸ್ಮರಿಸಲ್ಪಟ್ಟಿತು| ಅರಿ ವಿಜಿಗೀಷು ಮಧ್ಯಮರು-ಅವರೊಳ್ ವಿಜಿಗೀಷುವೃತ್ತಮಂ ಪೇಲ್ದಪಂ ||
"ಸಹಜಃ ಕಾರ್ಯಜಶ್ಚೈವ ವಿವಿಧಶ್ಯತ್ರುರುಚ್ಯತೇ| ಸಹಜಃ ಸ್ವಕುಲೋತ್ಪನ್ನಃ ಇತರಃ ಕಾರ್ಯಜಃ
ಸ್ಮೃತಃ ||" ಸಹಜಃ-ಸ್ವಕುಲೋತ್ಪನ್ನಃ, ದಾಯಾದಾದಿ| ಇತರಃ-ಕಾರ್ಯಜಃ| ಏಕಾರ್ಥಾಭಿ
ನಿವೇಶಾದಿಕಾರ್ಯಂಗಳಿಂ ಜಾಯತೇ ಯೆಂದು ಶತ್ರುದ್ವಿವಿಧನಾಗಿ ಪೇಲಲ್ಪಡುತ್ತಿದ್ದಾನೆಂದು
ಭಾವಂ| "ಉಚ್ಛೇದಾಪಚಯೌ ಕಾಲೇ ಪೀಡನಂ [3]ತರ್ಪಣಂ ತಥಾ || ಇತಿ ವಿದ್ಯಾವಿದಃ
ಪ್ರಾಹುಃ [4]ಶತ್ರೋರ್ವೃತ್ತಂ ಚತುರ್ವಿಧಂ ||" ಉಚ್ಛೇದಃ-ಸ್ವಭೂಮಿಯತ್ತಣಿಂ ಪರಿತ್ಯಜನಂ,
ಅಪಚಯಃ-ಶಕ್ತಿ ವಿಯೋಜನಂ| ಪೀಡನಕರ್ಷಣಂಗಳಂ ತಾನೆ ಪೇಲ್ವಂ| ಅನುಕೂಲಕಾಲ
ದೊಳ್| ವಿದ್ಯಾವಿದಃ-ದಂಡನೀತಿಜ್ಞರ್| ಶತ್ರೋರ್ವಿಜಯಭೂಮಿಯಾದ ಶತ್ರುವಿನ ವೃತ್ತಂ
ಚತುರ್ವಿಧಂ| ವಿಜಿಗೀಷುವಿಗೆ, ಪ್ರಾಹುಃ-ಪೇಲ್ವರ್| " ರೇಚನಂ ಕೋಶದಂಡಾಭ್ಯಾಂ ಮಹಾ

(1) ಸ್ಥಾನದುರ್ಗನಿವಾಸಿನಃ (2) ಚಲೇಶ್ಚೇಮಾಜಿರ್ತ, ಚಲೇತ್ತದೋರ್ಜಿತ (ಮು) (3) ಕರ್ಷಣಂ
(4) ಶತ್ರಾ

ಮಾತ್ರವಧಸ್ತಥಾ|| ಯೇ ತತ್ಕರ್ಷಣಮಿತ್ಯಾಹುರಾಚಾರ್ಯಾಃ ಪೀಡನಂ ಪರಂ || " ಯಾತವ್ಯನ ಕೋಶರೇಚನಂ – ಸಕಲಕೋಶಗ್ರಹಣಂ | ದಂಡೋಪನತಂಗೆ ಚತುರಂಗಬಲೋಪಾದಾನಂ | ಮಹಾಮಾತ್ರವಧಂ-ತದೀಯ ಪ್ರಧಾನವಧಂ ಕೂಟಾದಿಯುದ್ಧದೊಳ್ ಅವರಿಂ ಕರ್ಷಣಮೆಂದು ಆಚಾರ್ಯರ್ ಪೇೞ್ವರ್ | ಪೀಡನಂ – ಪರ ತನ್ಮಂಡಲನಾಶಗ್ರಹಣಂ | ದಂಡೋಪನತಂಗೆ ಭೀಲೋಭನಾದಿಕಮಂ | ಉಚ್ಛೇದ್ಯನಂ ಪೇೞ್ದಪಂ | ಸಮಾಶ್ರಯವಿಹೀನೋ ವಾ ದುರ್ಬಲಂ ವಾಸಮಾವೃತಃ || ಸ ರಿಪುಃ ಸಂಪದಾ ಯುಕ್ತ ಉಚ್ಛೇದ್ಯೋ ಭೂಮ್ಯನಂತರಃ|| ಸಮಾಶ್ರಯಂ ದುರ್ಗಬಲವಂತನಾದೊಡಂ |(ತ)ದ್ವಿಹೀನಂ-ತದ್ರಹಿತಂ | ದುರ್ಬಲಂ ವಾ ಸಮಾಶ್ರಿತಃ|| ಶಕ್ಯೋ ರಿಪುಸಂಪದಾಯುಕ್ತ ಮಿತಿ | ಶತ್ರುವು ಆವ ಧರ್ಮಂಗಳಿಂ ಸುಖೋಚ್ಛೇದ್ಯನಪ್ಪಂ | ದೋಷ ಸಾಮ್ಯದಿಂ ಅವನನಂತರಮೆ ಪ್ರತಿಪಾದಿಸುತಿದ್ದಾನು | " ಲುಬ್ಧಃ ಕ್ರೂರೋಽಲಸೋಽಸತ್ಯಃ ಪ್ರಮಾದೀ ಭೀರುರಸ್ಥಿರಃ | ಆವೇದೋ ವಾಽವಮನ್ತಾ ಚ ಸುಖೋಚ್ಛೇದ್ಯೋ ರಿಪುಸ್ತದಾ || " ಇತಿ ಈ ಪ್ರಕಾರಮಾದ ಅರಿಯು ಸಂಪತ್ತಿನಿಂದಯುಕ್ತಂ ಸದಾ ಸುಖೋಚ್ಛೇದ್ಯನೆಂದು| ಪ್ರತೀಕಂ| ಕಶ(ಷ)ರ್ನ(ಣ) ಪೀಡನಂಗಳ್ಗೆ ವಿಷಯಮಂ ಪೇೞ್ದಪಂ | " ಕರ್ಷನಂ ಪೀಡನಂ ಕಾಲೇ ಕುರ್ವೀತಾಶ್ರಯಮಾಶ್ರಿತಃ || ಸಮಾಶ್ರಯಂ ದುರ್ಗಮಾಹುಃ ಮಿತ್ರಂ ವಾ ಸಾಧುಸಮ್ಮತಂ || ಕರ್ಶನಂ–ಕೃಶತ್ವಕರಣಂ–ಕರ್ಶನದತ್ತಣಿಂದಧಿಕಮಾದ ಮಹಾಮಾತ್ರಾದಿ ವಧಾದಿಕಮಂ| ಕಾಲೇ ದೇಶಕಾಲಾದ್ಯನುಕೂಲ ಸಮಯದೊಳ್ | ಕುರ್ವೀತ-ಮಾೞ್ಪುದು ವಿಜಿಗೀಷುವು | ಆಶ್ರಯ ಮಾನಿನಮಿತಿ | ಸಮಾಶ್ರಯಾಭಿಮಾನವಂತನಂ | ಸಮಾಶ್ರಯೋ ದುರ್ಗಮಾಹುಃ ಮಿತ್ರಂ ವಾ ಸಾಧು ಸಮ್ಮತಂ || ಸಮಾಶ್ರಯಬಲದಿಂ ಶತ್ರು ಉಚ್ಛೇದ್ಯನಲ್ಲುಯೆಂದು | ಅಲ್ಲಿ ಪೀಡನಮುಂ ಕರ್ಶನಮುಂ ಪ್ರಯೋಜ್ಯಮೆಂದು | "ಕೋಸೌ ಸಮಾಶ್ರಯ" ಇತ್ಯತ ಆಹ | "ಸಮಾಶ್ರಯೋ ಮಿತ್ರಮಾಹು ರ್ಮಿತ್ರಂ ವಾ ಸಾಧುಸಮ್ಮತಂ ||" ಇತಿ ಸಹಜ ಶತ್ರುವು ಸರ್ವಥಾ ಉಚ್ಛೇದ್ಯನೆಂದು ಪೇೞ್ದಪಂ | "ವಿಭೀಷಣಸ್ಯ ಸೌದರ್ಯೋ ಯಥಾ ಸೂರ್ಯಸುತಸ್ಯ ಚ || ಸರ್ವತಂತ್ರಾಪಹಾರಿತ್ವಾತ್ತಥೋಚ್ಛೇದ್ಯೋ ನಿಜೋರಿಪುಃ ||" ವಿಭೀಷಣಂಗೆ ಸಹೋದರನಾದ ರಾವಣಂ ಹೇಗೆ ಉಚ್ಛೇದ್ಯಂ | ಸುಗ್ರೀವಂಗೆ ಸಹೋದರನಾದ ವಾಲಿಯು ಸಹಜ ಶತ್ರುವು | ಸರ್ವತಂತ್ರಾಪಹಾರಿತ್ವಾತಾ-ತಂತ್ರಂ-ರಾಜ್ಯಂ| ಏತತ್ಸರ್ವಂ-ಅದನೆಲ್ಲಮಂ| ಅಪಹರಿಸಲ್ ಶೀಲಂ-ಸರ್ವತಂತ್ರಾಪಹಾರಿತ್ವಂ | ಅದು ಕಾರಣದತ್ತಣಿಂ ಸಹಜಶತ್ರುವುಚ್ಛೇದ್ಯನೆ | ಸಹೋದರನೆಂತು ಉಚ್ಛೇದ್ಯನೆನೆ ಪೇೞ್ದಪಂ || " ಛಿದ್ರಂ ಮರ್ಮ ಚ ವೀರ್ಯಂ ಚ ವಿಜಾನಾತಿ ನಿಜೋರಿಪುಃ || ದಹತ್ಯಂತರ್ಗತಶ್ಚೈವ ಶುಷ್ಕಂ ವೃಕ್ಷಮಿವಾನಲಃ || ಛಿದ್ರಂ-ರಕ್ಷಾಶೈಥಿಲ್ಯಾದಿ | ಮರ್ಮ-ಯತ್ರಾಭಿಯುಕ್ತಮಾತ್ರೇ ಮಿಳತಿ | ತಥಾ-ವೀರ್ಯಂ-ಬಲವತ್ತ್ವಾಂ-ಜಾನಾತಿ–ತಿಳಿಯುತ್ತಿದ್ದಾನು | ನಿಜೋರಿಪುಃ–ಸಹಜ ಶತ್ರುವು–ಸೋದರ್ಯಾದಿ | ಯಿಾತನಂತಸ್ಥನಾಗಿ ದಹಿಸುತಿದ್ದಾನು | ಶುಷ್ಕವೃಕ್ಷಮನಗ್ನಿಯೋಪಾದಿಯಲ್ಲಿ ಯೆಂದು | ಅದುಕಾರಣದತ್ತಣಿಂ ಕೆಲವು ಶತ್ರುವಿಶೇಷಮೆ ಉಚ್ಛೇದ್ಯಮಲ್ಲು | ಮಿತ್ರವಿಶೇಷಮುಮುಚ್ಛೇದ್ಯಮೆಂದು ಪೇೞ್ದಪಂ || "ವರ್ತತೇ ಪಕ್ಷಪಾತೇನ ವಿಶ್ವಸ್ತೋ ವಿಜಿಗೀಷಯಾ|| ತದುಚ್ಛಿದ್ಯಾದಿಂದ್ರ ಯಿವ ತ್ರಿಶಿರಸಂ ಕೃತತ್ವರಃ||" ಆವನರಿವಿಜಿಗೀಷು ಮಿತ್ರಮುಭಯಾತ್ಮಕಯಾಗಿ ಪಕ್ಷಪಾತದಿಂ ವರ್ತತೇ | ವಿಶ್ವಸ್ತನಾದ ವಿಜಿಗೀಷುವೊಳು ಅಪಕಾರಮಂ ಮಾೞ್ಪೆನೆಂದು ವ್ಯವಸಾಯಮನೆಯ್ದುತಿರೆ ಅತನಮುಚ್ಛಿದ್ಯಾದಿಂದ್ರಯಿವ | ಯಿಂದ್ರಂತ್ರಿಶಿರನಂ, ಕೃತತ್ವರನಾಗಿ – ಶೀಘ್ರತ್ವರನೆಂಬುದರ್ಥಂ | ತ್ರಿಶಿರನೆಂಬುವಂ ಇಂದ್ರಂಗೆಯು ಮಸುರಾಧಿಪತಿ

ಗೆಯುಂ ಅತ್ಯಂತಸ್ನಿಗ್ಧನೆಂದು ತಿಳಿದು ಇಂದ್ರನಿಂ ನಿಹತನಾಪನೆಂದು | ಅರಿಗಮುಪಕಾರಂ ಕಾರ್ಯವಶದಿಂ ವಿಧೇಯಮೆಂದು ಪೇೞ್ದಪಂ | "ಬಲಿನಾವಿಗೃಹೀತಸ್ಯ್ಯವಿದ್ವಿಷಃ ಕೃಚ್ಛ್ರವರ್ತಿನಃ|| ಕುರ್ವೀತೋಪಚಯಂ ಶತ್ರೋರಾತ್ಮ್ಯೋಚ್ಛಿತ್ತಿವಿಶಂಕಯಾ ||" ಬಲಿನಾ - ಅವಿಚ್ಛಿನ್ನ ಶಕ್ತಿತ್ರಯನಿಂ ವಿಗೃಹೀತನಾದ | ಅರೇಃ ಕೃಚ್ಛ್ರವರ್ತಿನಃ- ಆಪನ್ನನ | ಕುರ್ವೀತೋಪಚಯಂ-ಶಕ್ತ್ಯುಪಚಯಮಂ | ಏನು ಕಾರಣಮನೆ ಪೇೞ್ದಪಂ | "ಯಸ್ಮಿನ್ನುಚ್ಛಿದ್ಯಮಾನೇ ತು ರಿಪುರನ್ಯಃ ಪ್ರವರ್ತತೇ|| ನತಚ್ಛಿಷ್ಯೋಚ್ಛಿಷ್ಯ ತಿಷ್ಠೇತ್ ಕುರ್ವೀತೇನಂ ಸ್ವಗೋಚರಂ||"ಭೃತ್ಯಭಾವದೊಳಾದೊಡಂ ಸ್ಥಾಪಿಪುದು | ತಥಾ – "ವಂಶಾಗತೋ ರಿಪುರ್ಯಸ್ತು ವಿಚಲೇದ್ದುರುಪಗ್ರಹಃ||" ಕಥಮಿತಿ ಆತ್ಮಾಧೀನತ್ವಂ ತತ್ರಸಂಶಯಮಿಯಾಸುಃ ತತ್ಕುಲೀನಂ ಸಮುನ್ನಯೇತ್|| ವಂಶಾಗತಂ ಸ್ವಕೀಯ ಕುಲಪ್ರಭವನಾದ ರಿಪುವು | ಏಕಾರ್ಥಾಭಿನಿವೇಶಿಯು| ವಿಚಲೇತ್ ವ್ಯಭಿಚರಿಸಿ | ದುರುಪಗ್ರಹಃ | ಕಥಮಿತಿ| ಆತ್ಮಾಧೀನತ್ವಂ ಮಾಡಲಶಕ್ಯಮಾಗೆ ಆಗ ಆತನ ಸಂಶಯಮನಕೋಸುಗ ಶೀಘ್ರಮಾಗೆ ತದೀಯಾದನಂ ಸಮುನ್ನಯೇತ್ | ಈತಂಗೆ ಆತನೇ ಪ್ರತೀಕಾರಮೆಂದು 'ವಿಷಂ ವಿಷೇಣ ವ್ಯಥತೇ ವಜ್ರಂ ವಜ್ರೇಣ ಭಿದ್ಯತೇ||ಗಜೇಂದ್ರೋದೃಪ್ತಸಾರೇಣ ಗಜೇಂದ್ರೇಣೈವ ವಧ್ಯತೇ' ವಿಷಂ - ಸ್ಥಾವರವಿಷಮು, ವಿಷೇಣವ್ಯಥತೆ–ನಿರ್ವಿಷಮಾಗೆ ಮಾಡಲು ಪಡುತಿದ್ದೀತು | ವಜ್ರಂ ವಜ್ರದಿಂದಲೆ ಭೇದಿಸಲ್ಪಡುತಿದ್ದೀತು ನಾನ್ಯೇನ | ಗಜೇಂದ್ರಂ ದೃಪ್ತಸಾರಮಾದ ಗಜೇಂದ್ರನಿಂದಲೆ ವಧಿಸಲ್ಪಡುತಿದ್ದೀತು | 'ಮತ್ಸ್ಯೋಮತ್ಸ್ಯಮುಪಾದತ್ತೆ [ಜ್ಞಾತಿಃ] ಜ್ಞಾತಿಮಸಂಶಯಃ || ರಾವಣೋಚ್ಛಿತ್ತಯೇ ರಾಮೊ ವಿಭೀಷಣಮಪೂಜಯತ್||'ಮತ್ಸ್ಯಂ ಮತ್ಸ್ಯಮಂ ನುಂಗುತಿದ್ದೀತು| ಜ್ಞಾತಿಃ-ಸ್ವಜನಂ, ಜ್ಞಾತಿಮಸಂಶಯಂ | ಇದನೆ ತೋರಿದಪಂ—ರಾವಣೋಚ್ಛಿತ್ತಯೇ ರಾಮಃ ವಿಭೀಷಣಂ ಅಪೂಜಯತ್ | ತತ್ಸೂಚಿತ ಛಿದ್ರದಾನತರಂಗಳಿಂ ರಾವಣನುಜ್ಝಿತನಾದಂ ಯೆಂದು | ದ್ವಾದಶಮಂಡಲಶೋಧನಮಂ ಪೇೞ್ದಪಂ | "ಯಸ್ಮಿನ್ ಮಂಡಲಸಂಕ್ಷೋಭಃ ಕೃತೇ ಭರ್ತರಿ ಕರ್ಮಣಿ | ನ ತತ್ ಕುರ್ವೀತ ಮೇಧಾವೀ ಪ್ರಕೃತೀರನುರಂಜಯೇತ್ ||" ಯಸ್ಮಿನ್ ಕರ್ಮಣಿ- ಆವ ಕರ್ಮವು ಮಾಡಲ್ಪಡೆ| ಮಂಡಲಸ್ಯ-ದ್ವಾದಶರಾಜಕಕ್ಕೆ ಸಂಕ್ಷೋಭಂ-ಕರ್ಷಕ್ಷಯಾದಿಯು| ಭವತಿ ಆಗುತಿದ್ದೀತು | ನ-ಕುರ್ವೀತ ಮೇಧಾವೀ-ವಿಜಿಗೀಷುವು | ಪ್ರಕೃತೀಃ - ಏಕಾದಶಪ್ರಕೃತಿಗಳಂ - ತದೀಯಾಮಾತ್ಯಾದಿಗಳಂ – ಅನುರಂಜಯೇತ್ ಸಕಲಮಂಡಲಂಗಳೊಳ್ ಭರ್ತಾ ಭವತಿ ನೇತಾ | ಸ್ವಪರ ವಿಭಾಗದಿಂ ಪ್ರಕೃತಿಗಳೊಳ್ ಉಪಾಯಪ್ರಯೋಗಮಂ ಪೇೞ್ದಪಂ|| ಸಾಮ್ನಾದಾನೇನಮಾನೇನ ಪ್ರಕೃತೀರನುರಂಜಯೇತ್ || ಪರಕೀಯಸ್ತು ಶತ್ರುಮಿತ್ರ ತನ್ಮಿತ್ರಾದಿ ಕರಂ ಭೇದದಂಡಾಭ್ಯಾಂ ಆಚರೇತ್ | ಸಂಹರಿಪುದೆಂಬುದರ್ಥಂ | ಮಿತ್ರಾದಿಗಳ್ಗೆ ಆತ್ಮೀಯತ್ವಮುಂ ಕಾದಾಚಿತ್ಕಮೆಂದು ಪೇೞ್ದಪಂ | "ಆಕೀರ್ಣಂ ಮಂಡಲಂ ಸರ್ವಂ ಮಿತ್ರೈರರಿಭಿರೇವ ಚ|| ಸರ್ವಸ್ಸ್ವಾರ್ಥಪರೋಲೋಕಃ ಕುತೋಮಧ್ಯಸ್ಥತಾ ಕ್ವಚಿತ್||ಮಂಡಲಂ-ಚಕ್ರವರ್ತಿಕ್ಷೇತ್ರಂ| ಸರ್ವಂ ಇತರಶೇಷಮಾಗಿ | ಆಕೀರ್ಣಂ-ವ್ಯಾಪ್ತಂ | ಮಿತ್ರೈರರಿಭಿರೇವ ಚ | ಭೂಮ್ಯನಂತರ-ಭೂಮ್ಯೇಕಾಂತರತೆಯುಂ| ತತ್ರ-ಆ ಮಂಡಲದೊಳ್| ಸರ್ವಃ-ನಿರವಶೇಷಮಾದ ಲೋಕಂ ಸ್ವಾರ್ಥಪರಮೆ;–

ತಥಾಚೋಕ್ತಂ:—

"ನಾ ನಾಸ್ತಿ ಪುರುಷೋ ಲೋಕೇ ಶ್ರಿಯಂ ಯೋ ನಾಭಿವಾಂಛತಿ ||
ಆಶಕ್ತಿ ಭಗ್ನಮಾನಸ್ತು ನರೇಂದ್ರಾನ್ ಪರ್ಯುಪಾಸತೇ ||—"

ಎವಂಚ— ಈ ಪ್ರಕಾರಮಾಗೆ ಒಬ್ಬಗಂ ಮಿತ್ರತ್ವಮುಂ ಮಧ್ಯಸ್ಥತ್ವಮುಂ ನ ವಿದ್ಯತೆ-ಇಲ್ಲ| ಏಕಾರ್ಥಾಭಿನಿವೇಶಿತ್ವದತ್ತಣಿಂ ಅರಿತ್ವಮೇ ಸಂಭಾವಿತ್ವಂ| ಸಮಸ್ತಲೋಕಮುಂ ಸ್ವಾರ್ಥಪರಮೆಂದು ಯತ್ತಣಮುಮದ್ಯತೆ ವಂದುಸ್ಥಳದೊಳ್ | ಇದನೆ ಸಮರ್ಥಿಸಿ ಪೇಳ್ದಪಂ | "ಭೋಗಪ್ರಾಪ್ತಂ ವಿಕುರ್ವಾಣಂ ಮಿತ್ರಮಪ್ಯುಪಪೀಡಯೇತ್ || ಅತ್ಯಂತವಿಕೃತಂ ಹನ್ಯಾತ್ ಸ ಪಾಪೀಯಾನ್ ರಿಪುಃಸ್ಮೃತಃ||" ಭೋಗಹೇತುವಪ್ಪುದಱಿಂ | ಭೋಗಂ-ಕೋಶಮೇತೇನ ಪ್ರಾಪ್ತಂ-ಕೋಶದಿಂ ಸಂಬಂಧನಮೆಂಬುದರ್ಥಂ | ವಿಕುರ್ವಾಣಂ ವಿಕಾರಮನೆಯ್ದುತಿರ್ದಾತನಂ ಮಿತ್ರನನಾದೊಡಂ ಪೀಡಯೇತ್-ಪೀಡಿಪುದು | ಹೇಗೆ ವಿಕಾರಮಂ ಬಿಡುವಂ| ಅತ್ಯಂತ ವಿಕೃತನಾದೊಡೆ ವಿಜಿಗೀಷು ಅಪಕಾರ ಪ್ರವೃತ್ತನಂ| ಹನ್ಯಾತ್-ಸಂಹರಿಪುದು | ಆಗಲ್ಲದೊಡೆ ಸರ್ವ ವಿಶ್ವಾಸಘಾತುಕ ಪ್ರವೃತ್ತನಾದ ಪಾಪೀಯರ್ಾ-ನಿಕೃಷ್ಟತರನಾದ| ರಿಪುಃ-ಶತ್ರುಯೆಂದು| ವರ್ತತೇ ಪಕ್ಷಪಾತೇನ ಮಿತ್ರಂ'ಚೇದುಭಯಾತ್ಮಕಂ | ವಜ್ರೀವತ್ರಿಶಿರಸಂ ಉಚ್ಛಿದ್ಯಾತ್ತಂ ಕೃತತ್ವರಃ|' ಎತ್ತಣಾನುಂ ವಿಜಿಗೀಷುವಿಗೆ ಮಿತ್ರನು ಉಭಯಾತ್ಮಕನಾಗಿ ಶತ್ರುವಿನೊಳ್ ಪಕ್ಷಪಾತದಿಂ| ವರ್ತತೇ-ಪ್ರವೃತ್ತನಾದೊಡೆ | ವಿಶ್ವಸ್ತನಾದ ವಿಜಿಗೀಷುವಿನೊಳ್ ಅಪಕಾರ ಬುದ್ಧಿಯಂ ಮಾಡಿ ಅನ್ಯರೊಡನೆ ವ್ಯವಸಾಯಮಂ ಮಾಳ್ಪನಂ ತಮುಚ್ಛಿನ್ದ್ಯಾತ್ | ವಜ್ರೀವ-ಯಿಂದ್ರನ ಹಾಗೆ | ತ್ರಿಶಿರಸಂ ಕೃತತ್ವರಃ-ಶೀಘ್ರತ್ವರನೆಂಬುದರ್ಥಂ | ತ್ರಿಶಿರನೆಂಬ ದೇವವಿಶೇಷಂ ದಾನವಪತಿಗಂ ಯಿಂದ್ರಂಗಂ ಆಸ್ವಾದನವಿಷಯದೊಳ್ ದಾನವರೊಳ್ ಅತಿಸ್ನಿಗ್ಧನೆಂದು ವಜ್ರಿಯಿಂ ನಿಹತನಾದನೆಂದು | 'ಅಮಿತ್ರಾಣಪಿ ಕುರ್ವೀತ ಮಿತ್ರಾಣ್ಯಪ್ಯುಭಯಾವಹಂ| ನ ಹಿ ತೇ ವರ್ತಮಾನಾನಿ ಮಿತ್ರಾಣ್ಯಪಿ ಪರಿತ್ಯಜೇತ್|' ಆರು ವುಪಚಯಾವಹರಾದ ಮಿತ್ರರು ಪೂರ್ವರಲ್ಲದೊಡಂ ಅವರಂ ಮಿತ್ರರಂ ಮಾಳ್ಪುದು | ವುಪಚಯಾವಹರನಾದೊಡಂ ಅಹಿತದೊಳ್ ವರ್ತಮಾನನಾದ ಮಿತ್ರರನಾದೊಡಂ ಪರಿತ್ಯಜಿಪುದು ಯೆಂದು | "ಸ ಬಂಧು ರ್ಯೋಽನುಬಧ್ನಾತಿ [1] ಹಿತೇಷ್ವತ್ಯಾಹಿತಾದರಃ || ಅನುರಕ್ತಂ ವಿರಕ್ತಂ ವಾ ತನ್ಮಿತ್ರಮುಪಕಾರಿ ಯತ್ ||" ಬಂಧುರಪಿ ಸಹೋದರನಾದೊಡಂ | ಆವನಂ ಅಹಿತಂ ಆತಂ ಶತ್ರು| ಶತ್ರುವಿನೋಪಾದಿಯಲ್ಲಿ ಆತನಂ ತ್ಯಜಿಪುದು| "ಅನುರಕ್ತಂ ವಿರಕ್ತಂ ಚ ತನ್ಮಿತ್ರಮುಪಕಾರಿ ಯತ್ | ಮಿತ್ರಂ ವಿಚಾರ್ಯ ಬಹುಶೋ ಜ್ಞಾತದೋಷಂ ಪರಿತ್ಯಜೇತ್ | ತ್ಯಜನ್ನಭೂತದೋಷಂ ಹಿ ಧರ್ಮಾರ್ಥಾವುಪಹನ್ತಿ [2] ಸಃ ||" ಮಿತ್ರಂ ದೋಷವದೇತದಿತಿ ಸೂಚಿತಂ| ಬಹುಶಃ ವಿಚಾರ್ಯ-ನೂನ ಪ್ರಮಾಣತ್ರಯದಿಂ ದೋಷಮಂ ತಿಳಿದು | ಸುವಿದಿತ ದೋಷಂ—ತ್ಯಜೇತ್—ತ್ಯಜಿಪುದು | ನಾನ್ಯಥಾ | ಅಭೂತ ದೋಷಪರಿತ್ಯಾಗದೊಳ್ ಧರ್ಮಮುಪಹತಮಪ್ಪುದು | ಮಿತ್ರಸಾಧ್ಯಮಾದ ಅರ್ಥಮಂ ತತ್ತ್ಯಾಗದೊಳ್ ಸಮುಪಹನ್ತ್ಯತಯೇವೇ | ತಥಾ"ಸ್ವಯಂ ದೋಷಗುಣಾನ್ವೇಷೀ ಭವೇತ್ ಸರ್ವತ್ರ ಸರ್ವದಾ|| ಸ್ವಯಂಜ್ಞಾತೇಷುದೋಷೇಷು ಶಸ್ಯತೇ ದಂಡಪಾತನಂ ||" ವಿಜಿಗೀಷುವು ತಾನೆ ದೋಷಗುಣಾನ್ವೇಷಿ ಅಪ್ಪುದು | "ಸ್ವಯಂ ಜ್ಞಾತೇಷು ದೋಷೇಷು ಶಸ್ಯತೇ ದಂಡಪಾತನಂ ||" ಇತಿ ಪ್ರತೀತಂ | ತಥಾ-"ನಹ್ಯವಿಜ್ಞಾತೇನ ದೋಷಂ ಕುರ್ಯಾತ್ ಕಥಂಚನ | ಭುಜಂಗಮಿವಮನ್ಯಂತೇ ನಿರ್ದೋಷಕ್ರೋಧನಂ ಜನಾಃ ||" ಇದು ಸುಗಮಂ | ತಥಾ || "ಮಿತ್ರಾಣಾಮಂತರಂ ವಿಂದ್ಯಾತ್ ಜ್ಯಾಯೋಮಧ್ಯಕನೀಯಸಾಂ || ಜ್ಯಾಯೋಮಧ್ಯಕನೀಯಾಂಸಿ ಕರ್ಮಾಣಿ ಚ ಪೃಥಕ್ಪೃಥಕ್ ||" ಜ್ಯಾಯೋಮಧ್ಯಕನೀಯಸಮಾದ | ಮಿತ್ರಾಣಾಂ-ಮಿತ್ರರ | ಅಂತರಂ-ತಾರತಮ್ಯಮಂ, ವಿಂದ್ಯಾತ್-ತಿಳಿವುದು | ಏತಱಿಂ

(1) ಹಿತೇರ್ಥೇವಾಹಿತಾದರಃ (2) ಹನ್ತಿ ಹಿ

ತಿಳಿವುದೆನೆ — ಅವರ ಉಪಕಾರಕರ್ಮಂಗಳಿಂ | ಜ್ಯಾಯೋಮಧ್ಯಕನೀಯಾಂಸಕರ್ಮಂಗಳಂ ಪ್ರತ್ಯೇಕ ಪ್ರತ್ಯೇಕಂ | ಜ್ಯಾಯಃ ಕರ್ಮ-ಉಪಕಾರಲಕ್ಷಣಮನಾವಂ ಮಾಳ್ಪಂ ಅವಂ ಜ್ಯಾಯೋಮಿತ್ರಂ | ಮಧ್ಯಮಕರ್ಮಲಕ್ಷಣ ಮುಪಕಾರಮುಂ ಆವಂ ಮಾಳ್ಪನಾತಂ ಮಧ್ಯಮಮಿತ್ರಂ | ಕನೀಯಸಮಾದ ಕರ್ಮಮಂ ಆವಂ ಮಾಳ್ಪಂ ಆತಂ ಕನೀಯಸಮಿತ್ರಂ | ಕರ್ಮಂಗಳಂ ಪ್ರತ್ಯೇಕ ಪ್ರತ್ಯೇಕನಾಗಿ ತಿಳಿವುದುಯೆಂದು|| "ನಹಿ [1] ಮಿತ್ರಾಭಿಯುಕ್ತಂ ತಂ ಶೃಣುಯಾದ್ವಾಪಿತದ್ವಿಧಂ|| ಮಿತ್ರಭೇದಂ ಚ ಯೇಕುರ್ಯುಸ್ತಾರ್ನ್ ಸಮಸ್ತಾರ್ನ್ ಪರಿತ್ಯಜೇತ್ ||" ನ ಹಿ ಪಿಶುನವಚನಾಭಿಯುಕ್ತನಾದ ಮಿತ್ರನಂ | ಶೃಣುಯಾದ್ವಾಪಿ ತದ್ವಿಧಂ || ಮಿತ್ರಭೇದಮನಾರು ಮಾಳ್ಪರ್ | ತಾರ್ನ್ ಸಮಸ್ತಾರ್ನ್-ಅವರೆಲ್ಲರಂ ಪರಿತ್ಯಜಿಪುದು | ಯೆಂದು ಪ್ರತೀತಂ | ವಿಜಿಗೀಷುವಂ ಮಿತ್ರಾದಿ ವಿಷಯದೊಳ್ ಪರಪ್ರಸಕ್ತವಚನಂಗಳ್ ಪರೀಕ್ಷಣೀಯಂಗಳೆಂದು ಪೇಳ್ದಪಂ || "ಪ್ರಾಯೋಗಿಕಂ ಮಾತ್ಸರಿಕಂ ಮಾಧ್ಯಸ್ಥಂ ಪಕ್ಷಪಾತಿಕಂ || ಸೋಪನ್ಯಾಸಂ ಚ ಜಾನೀಯಾತ್ ವಚಸ್ಸಾನುಶಯಂ ತಥಾ ||" ಪ್ರಯೋಗೋ-ಭೇದಾದ್ಯುಪಾಯಂ ತತ್ರ ಭವಂ ಪ್ರಾಯೋಗಿಕಂ | ಯಥಾ-ಮುದ್ರಾರಾಕ್ಷಸದೊಳ್ ಚಾಣಕ್ಯಚಂದ್ರಗುಪ್ತರ್ಗೆ ಕೃತಕೃತಕಕಲಹರ್ಗೆ ಭೇದಕರ್ತೃವಾದ ರಾಕ್ಷಸ ಪ್ರಯುಕ್ತನಪ್ಪ ವೈತಾಳಿಕಂ ಪಠಿಸುತ್ತಿದ್ದಾನು |—

'ಭೂಷಣಾದ್ಯುಪಯೋಗೇನ ಪ್ರಭುರ್ಭವತಿ ನ ಪ್ರಭುಃ ||

ಪರ್ರೈರಪರಿಭೂತಾಜ್ಞಃ ಸ್ವಮೇವ ಪ್ರಭುರುಚ್ಯತೇ||' ಇತ್ಯಾದಿಪ್ರಾಯೋಗಿಕಂ ವಚನಂ |

ಮಾತ್ಸರಿಕಮಿತಿ— ಮತ್ಸರೇ ಭವಂ - ಮಾತ್ಸರಿಕಂ—ಯಥಾ-ತತ್ರೈವ ಚಾಣಕ್ಯ—

ಕಥಯ ಕಥಯ ಕ ಏಷ ಚಂದ್ರಗುಪ್ತಮಭಿಭವಿತುಮಿಚ್ಛತಿ—

ಮಧ್ಯಸ್ಥ ಇತಿ – ಇಚ್ಛಾದ್ವೇಷರಹಿತಂ ಯಥಾ – ತತ್ರೈವ ಚಾಣಕ್ಯವಚನಕಂ-ಮಾಕಲ್ಪ ನೂನಂ ಸುಹೃತ್ತಮಃ | ನ ಹ್ಯನಾತ್ಮಸದೃಶೇಷು ರಾಕ್ಷಸಃ ನ್ಯಾಸೀಕರಿಷ್ಯತಿ—

ಪಾಕ್ಷಪಾತಿಕಮಿತಿ – ಪಕ್ಷಪಾತಪ್ರಯುಕ್ತಂ – ತಥಾ - ತತ್ರೈವ—ಚಾರ(ಣ) ಸಮರ್ಪಿತಾಂ ರಾಕ್ಷಸನಾಮಾಂಕಿತಾಂ ಅಂಗುಲ್ಯಾಂ ನಿರೀಕ್ಷ್ಯ—ಸಹರ್ಷಂ—ಚಾಣಕ್ಯೇನ ಮನಸ್ಯೇವೋಕ್ತಂ—ನನು ವಕ್ತವ್ಯಂ ರಾಕ್ಷಸಯೇವ ಯಮಂಗುಲೆ ಪ್ರಮಾಣಯಿಾ ಸಂವೃತ್ತಮಿತಿ ರಾಕ್ಷಸೇ ಪಕ್ಷಪಾತಮಿತಿ—

ಸೋಪನ್ಯಾಸಂಚೇತಿ – ಯಸ್ಮಿನ್ ವಚಸಿ ಸ್ಥಿತಸ್ಯಾರ್ಥಸ್ಯೋಪ – ಸಮೀಪೇ ಸಾದೃಶ್ಯಾದನ್ಯೋರ್ಥಃ ನ್ಯಸ್ಯತೇ– ಸ ಉಪನ್ಯಾಸಃ – ತಥಾ ಚ ತತ್ರೈವ—ಚಾಣಕ್ಯಃ—ಭೋಶ್ರೇ(ಷ್ಠಿನ್) ಇದಮಾಸನಮಾಸ್ತಾಂ | ಚಂದನದಾಸಃ ಇತ್ಯಾದಿ – ಉಪನ್ಯಾಸಂ—

ಸಾನುಶಯಂ – ಯಥೇತಿ – ಅನುಶಯಃ ಪಶ್ಚಾತ್ತಾಪಃ ಯಥಾ ತತ್ರೈವ ರಾಕ್ಷಸಶ್ಯಸ್ತ್ರಮಾಕೃಷ್ಯ—

(1) ಮಿಥ್ಯಾಭಿಯುಂಜೀತ....ದಾಪಿ ತದ್ವಿಧಂ |

"ಪ್ರಾಕಾರಂ ಪರಿತಃ ಶರಾಸನಧರೈಃ ಕ್ಷಿಪ್ತಂ ಪರಿಕ್ಷಿಪ್ಯತಾ |
ದ್ವಾರೇಷು ದ್ವಿರದೈಃ ಯೇತದ್ವಿಪಘಟಾ ಭೇಧಕ್ಷಮೈಃ ಸ್ಥೀಯತಾಂ ||
ತ್ಯಕ್ತ್ವಾವ್ಮೃತ್ಯುಭಯಂ—'' ಏತಸ್ಸಾನುಶಯಂ ವಚ ಇತಿ—

ಏತತ್ಸರ್ವಂ ವಿಜಾನೀಯಾತ್ ವಿಜಿಗೀಷುವೆಂದು | ವಿಜಿಗೀಷುಗೆ ಮಿತ್ರವಿಷಯದೊಳ್ ವೃತ್ತಿಯಂ ಪೇೞ್ದಪಂ | "ಪ್ರಕಾಶಪಕ್ಷಗ್ರಹಣಂ ನ ಕುರ್ಯಾತ್ ಸುಹೃದಾಂ ಸ್ವಯಂ|| ಅನ್ಯೋನ್ಯಮತ್ಸರಂ ಚೈಷಾಂ ಸ್ವಯಮೇವ ತು ವಾರಯೇತ್ ||" ಸುಹೃದಾಂ—ಸ್ನೇಹಿತರ ಮಧ್ಯದೊಳ್ ಕಸ್ಯಚಿದಪಿ ಮಿತ್ರನ ಪ್ರಕಾಶಪಕ್ಷಗ್ರಹಣಮಂ ನ ಕುರ್ಯಾತ್-ವಿಜಿಗೀಷು | ಅನ್ಯೋನ್ಯಮತ್ಸರಂ ಚೈಷಾಂ ಸ್ವಯಮೇವಾಶು ವಾರಯೇತ್| ಇತಿ ಪ್ರತೀತಂ| ತಥಾ 'ಕಾರ್ಯಸ್ಯ ಹಿ ಗರೀಯಸ್ತ್ವಾನ್ನೀಚಾನಾಮಪಿ ಕಾಲವಿತ್|| ಸತೋಽಪಿ ದೋಷಾ ಪ್ರಚ್ಛಾದ್ಯ ಗುಣಾನಪ್ಯಸತೋ ವದೇತ್ ||' ಕಾರ್ಯಂ - ಪೃಥ್ವೀಲಾಭಪಾಲನಂ | ತಸ್ಯೈವ ಗರೀಯಸ್ತ್ವಂ | ನೀಚರಾದ ಮಿತ್ರರ್ಗಂ | ಕಾಲವಿತ್ - ಆವ ಕಾಲದೊಳ್ ಮಿತ್ರಸಾಧ್ಯಕಾರ್ಯಮುಪಸ್ಥಿತಮಪ್ಪುದು | ಸತ್ತಾದೊಡಂ ದಂಡದೋಷಮಂ ಪ್ರಚ್ಛಾ(ದಯೇ)ದಿತಿ | ಅಸತ್ತಾದೊಡಂ ಗುಣಂಗಳಂ ವದೇತ್ | ಮಿತ್ರಾಣಾಮಿತಿ ವಾಕ್ಯಶೇಷಃ | ತಥಾ|| "ಪ್ರಾಯೋಮಿತ್ರಾಣಿ ಕುರ್ವೀತ ಸರ್ವಾವಸ್ಥಾನಿ ಭೂಪತಿಃ | ಬಹುಮಿತ್ರೋ ಹಿ ಶಕ್ನೋತಿ ವಶೇ ಸ್ಥಾಪಯಿತುಂ ರಿಪೂ||" ಪ್ರಾಯೋ-ಬಾಹುಳ್ಯದಿಂ| ಸರ್ವಾವಸ್ಥಾತ್ಮ ರಿಪುಮಧ್ಯಮಾದಿಗಳಂ, ನಿಕೃಷ್ಟರಂ-ಮ್ಲೇಚ್ಛಾವಿಕಶ್ವಪಚಪುಳಿಂದಪದರೊಳ್ ಕುರ್ವೀತ ಭೂಪತಿಃ| ಹಿ-ಯಸ್ಮಾತ್ | ಬಹುಮಿತ್ರಂ ಶತ್ರುಗಳಂ ವಶವರ್ತಿಗಳಂ ಮಾಡಲು ಶಕ್ತನಪ್ಪನೆಂದು ಮಿತ್ರಪ್ರಶಂಸದಿಂ ಪೇೞ್ದಪಂ | "ನ ತತ್ರ ತಿಷ್ಠತಿ ಭ್ರಾತಾ ಪಿತಾವಾಽನ್ಯೋಽಪಿವಾಜನಃ || ಪುಂಸಾಮಾಪತ್ಪ್ರತೀಕಾರಿ ಸನ್ಮಿತ್ರಂ ಯತ್ರತಿಷ್ಠತಿ||'' ಇತಿ ಪ್ರತೀತಂ| ಮಂಡಲವೃತ್ತಮಂ ಪೇೞ್ದಪಂ| "ಮಿತ್ರೋದಾಸೀನರಿಪವಃ ಏತನ್ಮಾತ್ರಂ ಹಿ ಮಂಡಲಂ' ಸಮ್ಯಕ್ಸ್ಥಾಪನಮೇತೇಷಾಂಮಿತಿ ಮಂಡಲಶೋಧನಂ||"ಮಿತ್ರಂಮಂಡಲಂ| ಪರಮಂಡಲಂ| ಉದಾಸೀನಮಂಡಂ ಎಂಬುದೆ ಚಿಂತ್ಯಂಯೆಂದು| ಯಿದು ಮಾತ್ರಮೆ ಮಂಡಲಂ| ಯಿಲ್ಲಿ| ಅತಿಪ್ರಯತ್ನಂ ಕಾರ್ಯಮೆಂದು ಭಾವಂ| ಸಮ್ಯಕ್ಸಾಧನಮೇತೇಷಾಮಿತಿ | ಮಂಡಲಶೋಧನಂ | ಮಿತ್ರಮಂಡಲ ಪ್ರತಿಪಾದಿತಂ-ಎಂದು ವಾಕ್ಯಶೇಷಂ—

ಇತಿಸ್ಮರಾಜಾ ನಯವರ್ತ್ಮನಾ ಪ್ರಜ-ಸಮುದ್ಯಮಾ ಮಂಡಲಶುದ್ಧಿಮಾಚರೇತ್ ||
ವಿರಾಜತೇ ಸಾಧು ವಿಶುದ್ಧಮಂಡಲಃ-ಶರಚ್ಛಶೀವ ಪ್ರತಿನಂದರ್ಯ ಪ್ರಜಾಃ||

ಇತಿ-ಉಕ್ತನ್ಯಾಯದಿಂ | ನಯ ವರ್ತ್ಮನಾ - ನೀತಿಮಾರ್ಗದಿಂ-ಪ್ರಜಮಂಡಲ ಶುದ್ಧಿಯನಾಚರಿಸುತ್ತೆ ಪೇೞ್ದಪಂ | ರಾಜತೇ ಸಾಧು ವಿಶುದ್ಧಮಂಡಲಃ - ಶರಚ್ಛಶೀವ ಪ್ರತಿನಂದರ್ಯ ಪ್ರಜಾಃ || ಇತಿ ಪ್ರತೀಕಂ |

ಇತಿ ಶ್ರೀ ಕಾಮಂದಕೀಯನೀತಿಸಾರಟೀಕಾಯಾ
ಮುಪಾಧ್ಯಾಯನಿರಪೇಕ್ಷಾಯಾಂ |
(ಮಂಡಲಶೋಧನಂ ನಾಮ)
— ಅ ಷ್ಟ ಮ ಸ್ಸ ರ್ಗಃ [೮] —

— ಗದ್ಯಂ —

ಇದು ಸತತನತಶತಧೃತಿ ಶತಮುಖಮುಖ ಸುರವಿತತಿ ವಿತತಕೋಟೀರಕೋಟಿತಟಘಟಿತ
ಚಟು(ಲ)ಹರಿನೀಲಮಣಿಸ್ತೋಮಾಭಿರಾಮಧಾಮರೋಲಂಬಜಾಲ ಸೇವಿತಕಂದಳದ
ರವಿಂದಾಮಂದ ಸುಂದರಮಂಗಳಮಂಗಳರಂಗನಾಥಚರಣಸುರುಚಿರನಖ
ಮಯೂಖ ನಿಸ್ತಂದ್ರಸಾಂದ್ರಚಂದ್ರಿಕಾಲೋಲಲೀಲಾಚಕೋರ
ಯಶೋವಿಮಲಸುಮನಸಸಮುದಯಸುರಭಿ ಹರಿದಂತಾಪ್ರತಿಮ
ಪ್ರತಾಪಪ್ರಚುರ ಪ್ರಭಾಪಲ್ಲವಸಮುಲ್ಲಸಿತ ಸಕಲವಿಬುಧ
ನಿಕರಸುಕರಮನೋರಥಪ್ರದಫಲ ಲಲಿತ
ಶ್ರೀ ಚಿಕ್ಕದೇವರಾಜರಾಜಿತಾನಲ್ಪಕಲ್ಪತರು ಸಮಾಶ್ರಿತ

ಲಕ್ಷ್ಮೀಪತಿ ರಮ್ಯಾಭಿದಾನ ಚಿಕ್ಕುಪಾಧ್ಯಾಯಸಚಿವಶಿರೋಮಣಿ

ವಿರಚಿತಮಪ್ಪ **ಕಾಮಂದಕೀಯನೀತಿಯೊಳ್** ಮಂಡಲಯೋಗದರ್ಶನಂ
ಅಷ್ಟಮಾಶ್ವಾಸಂ—

ಶ್ರೀ ಶ್ರೀ ಶ್ರೀ ಶ್ರೀ

ಕಂ|| ಸಿಂಧುಬಂಧನನ ವಿದ್ವಿ |
ಟ್ಸಿಂಧುರಸಂಚಯಮೃಗೇಂದ್ರನಡಿದಾವರೆಯೊಳ್ ||
ಸಂಧಿಸಿ ಮನದೊಳ್ ಪೇೞ್ವೆಂ |
ಸಂಧಿವಿಕಲ್ಪಾಖ್ಯಮೆನಿಪ ನೀತಿಯನಿದರೊಳ್ || ೧ ||

ಅದೆಂತೆನೆ :—

ನಂದಕಮುರುಕೀರ್ತಿಲತಾ |
ಕಂದಕಮತಿದರ್ಪಿತಾರಿ ಭೂಭೃದ್ವನಿತಾ ||
ಕ್ರಂದಕಮಾಶ್ರುತವಿಬುಧಾ |
ನಂದಕ ಮಾಖಲ್ಗೆ ಮವನಿಸಂಕ್ರಂದನನಾ || ೨ ||*

— (ಎಂದು ಗ್ರಂಥವು ನಿಂತಿದೆ)

---

* ಈ ಎರಡು ಕಂದಗಳಿಂದ ಉಳಿದ ಎಂಟು (ಹನ್ನೆರಡು) ಅಧ್ಯಾಯಗಳಿಗೂ ಟೀಕೆಯಿದ್ದಂತೆ ತೋರುವುದು. ಆದರೆ ಅದು ದೊರಕದೇ ಹೋದುದು ಕನ್ನಡಿಗರ ದೌರ್ಭಾಗ್ಯವೆಂದೇ ಹೇಳಬೇಕು—

ಪರಿಶಿಷ್ಟಗಳು

ಪರಿಶಿಷ್ಟ ೧

[೯ನೆಯ ಸರ್ಗದಿಂದ ೨೦ನೆ ಸರ್ಗದವರೆಗಣ ವಿಷಯ ಸಂಗ್ರಹ]

ಇನ್ನು ಮುಂದೆ ರಾಜರುಗಳಿಗೆ ಅತಿಮುಖ್ಯವಾಗಿರಬೇಕಾದ ಸಂಧಿ ಮೊದಲಾದ ಷಾಡ್ಗುಣ್ಯಗಳನ್ನು ವಿವರಿಸಲಾರಂಭಿಸಿ, ಅವುಗಳಲ್ಲಿ ಮೊದಲನೆಯದಾದ ಸಂಧಿಯೆಂಬುದನ್ನು ಈ ಒಂಭತ್ತನೆಯ ಸರ್ಗದಲ್ಲಿ ಹೇಳುವನು.

ಬಲಶಾಲಿಯೊಡನೆ ಯುದ್ಧವೊದಗಿದಾಗ ಅದಕ್ಕೆ ಪ್ರತಿಕ್ರಿಯೆಯನ್ನುಮಾಡಲಾಗದೆ ಆಪತ್ತಿಗೆ ಗುರಿಯಾದ ವಿಜಿಗೀಷುವು ಕಾಲಯಾಪನಕ್ಕಾಗಿ ಸಂಧಿಯನ್ನು ಮಾಡಿಕೊಳ್ಳಬೇಕು–ಈ ಸಂಧಿಯಲ್ಲಿ ಕಪಾಲ, ಉಪಹಾರ, ಸಂತಾನ, ಸಂಗತ, ಉಪನ್ಯಾಸ, ಪ್ರತೀಕಾರ, ಸಂಯೋಗ ಪುರುಷಾಂತರ, ಅದೃಷ್ಟತರ, ಆದಿಷ್ಟ, ಆತ್ಮಾಮಿಷ, ಉಪಗ್ರಹ, ಪರಿಕ್ರಿಯ, ಉಚ್ಛಿನ್ನ, ಪರ(ಫಲ)ದೂಷಣ, ಸ್ಕಂಧೋಪನೇಯ ಎಂದು ಹದಿನಾರು ವಿಧಗಳುಂಟು ಎಂದು ಹೇಳಿ ಕ್ರಮವಾಗಿ ಇವುಗಳ ಲಕ್ಷಣಗಳನ್ನೂ ಇವುಗಳಲ್ಲಿ ಉಪಹಾರ, ಸಂತಾನ (ಸಂಬಂಧ) ಸಂಗತ (ಮೈತ್ರಿ) ಪ್ರತೀಕಾರ ನಾಲ್ಕೂಉತ್ತಮಗಳು ಉಳಿದುವುಸಾಮಾನ್ಯಗಳೆಂದೂ ಹೇಳಿ ತನ್ನ ಮತದಲ್ಲಿ ನಾಲ್ಕನೆ ಮೈತ್ರಿಯನ್ನು ಬಿಟ್ಟು ಉಳಿದುವೆಲ್ಲಾ ಎರಡನೆಯ ಉಪಹಾರಸಂಧಿಯಭೇದಗಳು ಏತಕ್ಕೆಂದರೆ ಇದಿರಾಳಿಯು [ವಿಜಿಗೀಷು] ಬಲಶಾಲಿಯಾಗಿರುವುದರಿಂದ ಯಾವುದಾದರೊಂದನ್ನು ಪಡೆಯದೆ ಹಿಂದಿರುಗುವುದಿಲ್ಲ- ಆದುದರಿಂದ ಇದನ್ನು ಬಿಟ್ಟು ಬೇರೆ ಯಾವಸಂಧಿಯೂ ಇಲ್ಲ ಎಂದುಹೇಳಿ ಅಸಂಧೇಯರು(ಸಂಧಿಗೆ ಅನರ್ಹರು) ಬಾಲ, ವೃದ್ಧ, ದೀರ್ಘರೋಗಿ, ಜಾತಿಬಹಿಷ್ಕೃತ, ಭೀರುಕ, ಭೀರುಜನ, ಲುಬ್ಧ, ಲುಬ್ಧಜನ, ವಿರಕ್ತಪ್ರಕೃತಿ, ವಿಷಯೇಷ್ವತಿಸಕ್ತಿವಂತ, ಅನೇಕಚಿತ್ತಮಂತ್ರ, ದೇವಬ್ರಾಹ್ಮಣ ನಿಂದಕ, ದೈವೋಪಹತಕ, ದೈವಚಿಂತಕ, ದುರ್ಭಿಕ್ಷವ್ಯಸನೋಪೇತ, ಬಲವ್ಯಸನಸಂಕುಲ, ಅದೇಶಸ್ಥ, ಬಹುರಿಪು, ಕಾಲೇನಯುಕ್ತ, ಸತ್ಯಧರ್ಮವ್ಯಪೇತ, ಎಂದು ಇಪ್ಪತ್ತುಬಗೆಯವರೆಂದು ಹೇಳಿ ಕ್ರಮವಾಗಿ ಅವರ ಲಕ್ಷಣವನ್ನು ಹೇಳಿ ಸಂಧೇಯರು—ಸತ್ಯವಂತ, ಆರ್ಯ, ಧಾರ್ಮಿಕ, ಅನಾರ್ಯ? ಭಾತೃಸಂಘಾತವಂತ, ಬಲಿ, ಅನೇಕವಿಜಯಿ ಎಂಬ ಏಳುಬಗೆಯವರಾಗಿರುವರೆಂದು ಕ್ರಮವಾಗಿ ಅವರ ಲಕ್ಷಣವನ್ನು ಉದಾಹರಣಗಳೊಡನೆ ವಿವರಿಸಿ ಬುದ್ಧಿವಂತನು ಸಂಧಿತನಾದರೂ ಹಗೆಯನ್ನು ನಂಬಕೂಡದು ; ಇಂದ್ರನು ವೃತ್ರಾಸುರನೊಡನೆ ಸಂಧಿನಾಡಿಕೊಂಡು ನಂಬಿಸಿ ಅವನನ್ನು ಕೊಂದನು, ರಾಜ್ಯದಲ್ಲಿ ಆಸೆಯುಳ್ಳ ತಂದೆಯು ಮಗನಲ್ಲೂ ದ್ವೇಷವನ್ನು ಮಾಡುವನು. ಇದು ಲೋಕನ್ಯಾಯಕ್ಕೆ ವಿರುದ್ಧವಾದುದು. ಶತ್ರುವಿನಿಂದ ದುರ್ಗದಲ್ಲಿ ಸೆರೆಯಿಡಲ್ಪಟ್ಟಿರುವವನು ತನ್ನ ಬಿಡುಗಡೆಗಾಗಿ ಮತ್ತೊಬ್ಬ ಬಲಶಾಲಿಯನ್ನು ಸಂಧಿಮೂಲಕ ಬರಮಾಡಿಕೊಳ್ಳಬೇಕು, ತನ್ನ ಶಕ್ತಿಯನ್ನೂ ಉತ್ಸಾಹವನ್ನೂ ವಿಜಿಗೀಷುವು ನೋಡಿಕೊಂಡು ಸಿಂಹವು ಆನೆಯನ್ನು ತಾಗುವಂತೆ ತಾಗಬೇಕು ಎಂದು ಭರದ್ವಾಜನು ಹೇಳಿರುವನು, ಆದುದರಿಂದ ಕ್ಷತ್ರಿಯರಲ್ಲಿ ಉತ್ಸಾಹ ಶಾಲಿಯು ಬಲಶಾಲಿ ರಾಜನನ್ನಾದರೂ ಗೆಲ್ಲಬಲ್ಲನು, ಸ್ವಲ್ಪಸೈನ್ಯವುಳ್ಳವನು ಉತ್ಸಾಹದಿಂದ ಬಲಶಾಲಿಯನ್ನು ಅಡಗಿಸುತ್ತಿರುವಾಗ ಇತರ ರಿಪುಗಳೂ ಅವನಿಗೆ ಸ್ವಾಧೀನರಾಗುವರು. ಜಯವು ಯಾವಾಗಲೂ ಸಂದೇಹದಿಂದ ಕೂಡಿರುವಲ್ಲಿ ಸಮಾನ ಬಲಶಾಲಿಯೊಡನೆಯೂ ಬುದ್ಧಿವಂತನು ಸಂಧಿಮಾಡಿಕೊಳ್ಳಬೇಕು, ಸಂಶಯದಿಂದ ಕೂಡಿದ ಕಲಹವನ್ನು ಆರಂಭಿಸಕೂಡದು ಎಂಬ ಬೃಹಸ್ಪತಿಮತವನ್ನು ಹೇಳಿ, ತನ್ನ ಅಭಿವೃದ್ಧಿಯನ್ನು ಕೋರುವವನು ಸಮಾನ ಬಲಶಾಲಿಯೊಡನೆ

ಯುದ್ಧಮಾಡಿದರೆ ಎರಡು ಹಸಿಯ ಗಡಿಗೆಗಳನ್ನು ಪರಸ್ಪರವಾಗಿ ಬಲವಾಗಿ ತಾಕಿಸಿದರೆ ಎರಡೂ ಒಡೆದುಹೋಗುವಂತೆ ಇಬ್ಬರಿಗೂ ನಾಶಸಂಭವವಿರುವುದರಿಂದ ಸಂಧಿಮಾಡಿಕೊಳ್ಳುವುದೇ ಮೇಲು ಎಂದು ಬೃಹಸ್ಪತಿಮತವನ್ನು ಸಮರ್ಥಿಸಿ, ಸಮಾನಬಲಿಗಳಿಗೆ ಯುದ್ಧವು ಸಂಭವಿಸಿದರೆ ಸುಂದೋಪಸುಂದರಂತೆ ಇಬ್ಬರಿಗೂ ಮಹಾನಾಶವುಂಟೆಂದು ಹೇಳಿ ವ್ಯಸನದಿಂದ ಕೂಡಿ ಬಂದು ಶರಣಾಗತನಾದ ರಿಪುವು ಹೀನನಾಗಿದ್ದರೂ ಸಂಧೇಯನಾಗಿರುವನು. ಗಾಯದಲ್ಲಿ ಬಿದ್ದ ಜಲಬಿಂದುವಿನಂತೆ ಆತನಸ್ಥಿತಿಯು ಮನಸ್ಸಿಗೆ ಖೇದಕರವಾಗಿರುವುದು. ಹೀನನೊಡನೆ ಸಂಧಿಯನ್ನು ಇಚ್ಛಿಸಕೂಡದು, ಈ ಕಾರಣದಲ್ಲಿ ಸಂಶಯವಿಲ್ಲ. ಹೀಗೆ ಆತನು ಸಂಧಿಮಾಡಿಕೊಂಡು ಸಮಯದಲ್ಲಿ ನಿಷ್ಠುರವಾಗಿ ಪ್ರಹರಿಸುವನು. ಬಲಶಾಲಿಯೊಡನೆ ಸಂಧಿಮಾಡಿಕೊಂಡು ಅವನೊಳಗೆ ಪ್ರವೇಶಿಸಿ ಅವನು ತನ್ನನ್ನು ಮಿತ್ರನೆಂದು ನಂಬುವಂತೆ ನಡೆಯಬೇಕು, ನಂಬಿಕೆಯನ್ನು ಹುಟ್ಟಿಸುವ ನೀತಿಯಲ್ಲಿ ಉದ್ಯುಕ್ತನಾದವನು ತನ್ನ ಆಕಾರಚೇಷ್ಟಿತವನ್ನು ಗುಟ್ಟಾಗಿಟ್ಟುಕೊಂಡು ಪ್ರಿಯನಾಗಿರುವಂತೆಯೇ ಮಾತಾಡಬೇಕು, ಇದರಿಂದ ಸಮಯದಲ್ಲಿ ತನ್ನ ಕಾರ್ಯಸಾಧನೆಗೆ ಅನುಕೂಲವಾಗುವುದು, ದೇವೇಂದ್ರನು ದಿತಿಯನ್ನು ಹೀಗೆ ನಂಬಿಸಿಯೇ ಆಕೆಯ ಗರ್ಭದಲ್ಲಿದ್ದ ತನ್ನ ಹಗೆಯನ್ನು ಕೊಂದನು. ತನಗೆ ಹಗೆಯಾದವನ ಯುವರಾಜನೊಡನಾಗಲಿ, ಪ್ರಧಾನಪುರುಷನೊಡನಾಗಲಿ ಸ್ನೇಹವನ್ನು ಬಳೆಯಿಸಿ ಒಳಗಡೆಯಲ್ಲಿ ಅವರು ರಾಜನ ಮೇಲೆ ಕೋಪಿಸುವಂತೆಮಾಡಬೇಕು, ಹಿಂದೆ ಹೇಳಿದ ಪ್ರಧಾನಪುರುಷರಿಗೆ ವಿಪುಲವಾಗಿ ಧನವನ್ನು ಕೊಟ್ಟು ವಶಮಾಡಿಕೊಂಡು ಅವರ ಮೂಲಕ ಹಗೆಯರಸನ ಅರ್ಥಾದಿ ಪ್ರಯೋಜನಗಳನ್ನೆ ಹಾಳುಮಾಡಬೇಕು. ಹೀಗೆ ಪ್ರಧಾನ ಪುರುಷನು ದೂಷಿತನಾಗಲು ಉಗ್ರನಾದ ರಿಪುವಾದರೂ ತನ್ನ ಪಕ್ಷದಲ್ಲೇ ಅವಿಶ್ವಾಸಿಯಾಗುವುದರಿಂದ ಸುಲಭವಾಗಿ ಜಯಿಸಲ್ಪಡುವನು. ಹೀಗೆ ವಿಜಿಗೀಷುವಿನ (ಹಗೆಯ) ಪ್ರಧಾನಾದಿಗಳನ್ನು ಅಪಾರವಾದ ದ್ರವ್ಯದಾನದ ಮೂಲಕ ವಶಪಡಿಸಿಕೊಂಡು ಅವನ ಉದ್ಯೋಗಗಳೆಲ್ಲವನ್ನೂ ನಿಲ್ಲಿಸುವಂತೆ ಮಾಡಬೇಕು, ವಿಷದಾನದಿಂದಲಾದರೂ ಶತ್ರುವನ್ನು ಸಾಧಿಸಬೇಕು ಅಥವಾ ಅರಿಯಶತ್ರುವನ್ನು ಹುರಿಗೊಳಿಸಿ ಸಿಟ್ಟುಬರುವಂತೆಮಾಡಿ ಅವನಿಂದ ವಿಜಿಗೀಷುವನ್ನು [ತನ್ನಮೇಲೆ ಯುದ್ಧಕ್ಕೆ ಬರುವ ಹಗೆಯನ್ನು] ಅಡಗಿಸಬೇಕು, ಆ ರಾಜನಿರುವ ದೇಶದ ಪ್ರಜೆಗಳಂತೆಯೇ ಅಲ್ಲಿ ವಾಸವಾಗಿದ್ದು, ದೇಶಪ್ರೀತಿಯಿರುವಂತೆ ನಟಿಸುತ್ತಾ ಜ್ಯೋತಿಷ್ಕರು ಮೊದಲಾದ ವೇಷದಲ್ಲಿ ತನ್ನವರನ್ನು ಕಳುಹಿಸಿ ಹಗೆಯ ದೇಶವ್ಯಸನವನ್ನು ಕಲ್ಪಿಸಬೇಕು. ಹಣದನಾಶವನ್ನುಳಿಸಿಕೊಳ್ಳುವುದಕ್ಕಾಗಿಯೂ ವಧಾದಿದೋಷಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೂ ಯುದ್ಧವನ್ನು ನಿಲ್ಲಿಸಬೇಕು. ಏಕೆಂದರೆ ದೋಷ [ಅನರ್ಥ] ಗಳೆಲ್ಲವೂ ಯುದ್ಧದಿಂದಲೇ ಉಂಟಾಗುವುವು, ಯುದ್ಧದಿಂದ ತನ್ನ ಕಳತ್ರ, ಹಣ, ಸ್ನೇಹಿತರು ಬಲ ಇವೆಲ್ಲವೂ ಕ್ಷಣದಲ್ಲಿ ವ್ಯರ್ಥವಾಗುವುವು. ಹೀಗೆ ಸರ್ವಪ್ರಕಾರದಲ್ಲಿಯೂ ಅನರ್ಥಕಾರಿಯಾದ ಯುದ್ಧವನ್ನು ಪದೇ ಪದೇ ಆರಂಭಿಸಕೂಡದು. ಸ್ನೇಹಿತರು, ಹಣ, ರಾಜ್ಯ, ತಾನು, ತನ್ನ ಕೀರ್ತಿ ಇವುಗಳಿಗೆ ಸಂದೇಹವನ್ನುಂಟುಮಾಡುವ ಯುದ್ಧವನ್ನು [ವಿಗ್ರಹವನ್ನು] ದಡ್ಡನಲ್ಲದ [ಮೂರ್ಖನಲ್ಲದ] ಮತ್ತಾವನುತಾನೇ ಮಾಡಲುದ್ಯೋಗಿಸುವನು, ಸಮನಾದ ಸೈನ್ಯಸಾಧನಗಳುಳ್ಳ ಸಾಮಂತನು ತನ್ನ ಮೇಲೆ ಯುದ್ಧಕ್ಕೆ ಬಂದರೂ ಅವನೊಡನೆ ಸಾಮೋಪಾಯದಿಂದಲಾಗಲಿ, ಹಣವನ್ನು ಕೊಡುವುದರ ಮೂಲಕವಾಗಿಯಾಗಲಿ ಅವರ ಕಡೆಯವರಲ್ಲೇ ದ್ವೇಷವನ್ನು ಹುಟ್ಟಿಸುವ ಭೇದೋಪಾಯದಿಂದಾಗಲಿ ಸಂಧಿಮಾಡಿಕೊಳ್ಳಬೇಕು. ವಿಗ್ರಹಕ್ಕೆ ಮೊದಲು ಪ್ರಯತ್ನಿಸಲೇ ಕೂಡದು. ತನ್ನಮೇಲೆ ಯುದ್ಧಕ್ಕೆ ಬಂದಿರುವ ವಿಜಿಗೀಷುವಿಗೆ ತನ್ನ

ರಕ್ಷಣೆಗಾಗಿ ಧೀರನಾದವನು ಬಲಶಾಲಿಯಂತೆ ಹೆಚ್ಚು ಸಂತಾಪನ್ನು [ಕಷ್ಟವನ್ನು] ಕೊಡಬೇಕು. ಹೀಗೆ ಕಷ್ಟಕ್ಕೆ ಸಿಕ್ಕಿದ ವಿಜಿಗೀಷುವು ಕಾಯ್ದ ಎರಡು ಲೋಹದ ತುಂಡುಗಳಂತೆ ಸುಲಭವಾಗಿ ಸಂಧೇಯನಾಗುವನು.

ಈ ರೀತಿಯಲ್ಲಿ ಪೂರ್ವಿಕರಾದ ಮಹರ್ಷಿಗಳು [ಸಂಧಿವಿಷಯದಲ್ಲಿ ಚೆನ್ನಾಗಿ ತಿಳಿವಳಿಕೆಯುಳ್ಳವರು,] ಸಂಧಿಯ ಪ್ರಕಾರವನ್ನು ವಿವರಿಸಿರುವರು. ರಾಜನಾದವನು ಧೀರನಾಗಿ ಕಾರ್ಯದ ಗುರುಲಾಘವಗಳನ್ನು ನೋಡಿಕೊಂಡು ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕು, ಎಂದು ಈ ಸರ್ಗವನ್ನು ಉಪಸಂಹರಿಸಿರುವನು–(೯)

ಹತ್ತನೆ ಸರ್ಗ

ಹಿಂದಣ ಸರ್ಗದಲ್ಲಿ ಮೊದಲನೆಯದಾದ ಸಂಧಿಯ ಲಕ್ಷಣಭೇದಗಳನ್ನು ವಿವರಿಸಿ ಈ ೧೦ನೇ ಸರ್ಗದಲ್ಲಿವಿಗ್ರಹದ ಎಂದರೆವಿರೋಧದ ಫಲರೂಪವಾದ ಯುದ್ಧದಲಕ್ಷಣಭೇದಗಳನ್ನು ಹೇಳುವನು. ಪರಸ್ಪರವಾಗಿ ಸಿಟ್ಟುಗೊಂಡ ಪುರುಷರಿಗೆ ಪರಸ್ಪರಾಪಕಾರಮಾಡಬೇಕೆಂಬ ಉದ್ದೇಶದಿಂದ ಪರಸ್ಪರವಾಗಿ ವಿಗ್ರಹವು ಹುಟ್ಟುವುದು. ತನ್ನ ಅಭ್ಯುದಯವನ್ನಪೇಕ್ಷಿಸುವವನು ಅಥವಾ ಪರನಿಂದ ಪೀಡಿತನಾದವನು, ದೇಶಕಾಲ ಬಲಗಳಿಂದ ಕೂಡಿದವನಾಗಿ ಯುದ್ಧವನ್ನಾ(ವಿಗ್ರಹ)ರಂಭಿಸಬೇಕು ವಿಗ್ರಹಕ್ಕೆ– ರಾಜ್ಯ, ಸ್ತ್ರೀ, ಸ್ಥಾನ, ದೇಶ, ಜ್ಞಾನ, ಧನ, ಇವುಗಳ ಅಪಹಾರ, ಮದ, ಮಾನ, ವೈಷಯಿಕಪೀಡಾ, ಜ್ಞಾನ, ಅರ್ಥ, ಶಕ್ತಿ, ಧರ್ಮ ಇವುಗಳ ವಿಘಾತ, ದೈವ, ಮಿತ್ರ, ಅರ್ಥಾದ್ಯವಮಾನ, ಬಂಧುನಾಶನ, ಭೂತಾನುಗ್ರಹವಿಚ್ಛೇದ, ಮಂಡಲದೂಷಣ, ಏಕಾರ್ಥಾಭಿನಿವೇಶಿತ್ವ, ಈ ೨೦ ಕಾರಣಗಳುಂಟು–ಇವುಗಳಲ್ಲಿ ಮೊದಲನೆಯ ಆರನ್ನು ಆಯಾ ಪದಾರ್ಥಗಳನ್ನೊಪ್ಪಿಸಿ ಶರಣಾಗತನಾಗಿ ವಿಗ್ರಹವನ್ನಡಗಿಸುವುದು ತುಂಬಾ ಮೇಲಾದುದು. ಹಾಗೆಯೇ ವೈಷಯಿಕ ಪೀಡೆಯನ್ನು ಶಮೋಪಾಯದಿಂದ ನಿವಾರಿಸಿಕೊಳ್ಳಬೇಕು. ಜ್ಞಾನಾಪಹಾರ, ಜ್ಞಾನಶಕ್ತಿವಿಘಾತ ಇವುಗಳಲ್ಲಿ ತದರ್ಥವನ್ನು ತ್ಯಾಗಮಾಡುವುದರಿಂದ ಶಾನ್ತಿಯನ್ನುಂಟುಮಾಡಬೇಕು. ಮಿತ್ರಜವಾದುದನ್ನು ಉಪೇಕ್ಷಿಸಕೂಡದು, ಅವಮಾನದಿಂದ ಹುಟ್ಟಿದುದನ್ನು ಮಾನದಿಂದ ಶಾನ್ತಿಹೊಂದಿಸಬೇಕು. ಬಂಧುನಾಶಸಮುದ್ಭವವಾದ ವಿಗ್ರಹವನ್ನು ರಹಸ್ಯ ಪ್ರಯೋಗ ಅಥವಾ ರಹಸ್ಯಕರಣ ಇವುಗಳಿಂದ ಶಾಂತಿಗೊಳಿಸಬೇಕು, ಏಕಾರ್ಥಾಭಿನಿವೇಶ ವಿಗ್ರಹದಲ್ಲಿ ವಿಚಕ್ಷಣನಾದವನು ಎಷ್ಟು ಅರ್ಥವನ್ನು ತ್ಯಾಗಮಾಡುವುದರಿಂದ ಪೀಡೆಯು ಆಗುವುದಿಲ್ಲವೋ ಅಂಥಹ ತ್ಯಾಗವನ್ನು ಮಾಡಿ ವಿಗ್ರಹವನ್ನು ಶಾಂತಿಗೊಳಿಸಬೇಕು. ಧನಾಪಹಾರವಿಗ್ರಹದಲ್ಲಿವಿರೋಧವನ್ನು [ವಿಗ್ರಹವನ್ನು] ಆಚರಿಸಲೇಕೂಡದು ಏಕೆಂದರೆ ಯುದ್ಧವಾದರೆ ಸರ್ವಧನಕ್ಕೂ ನಾಶಬರಬಹುದು, ಎಂಬುದರಿಂದ, ಭೂತಾನುಗ್ರಹವಿಚ್ಛೇದದಿಂದಾದುದನ್ನು ವಶ್ಯೇಂದ್ರಿಯನಾಗಿ ಸಹಿಸಿಕೊಳ್ಳಬೇಕು. ದೈವಿಕವಾದುದನ್ನು ದೈವವೇ ನಾಶಮಾಡಬೇಕಾದುದರಿಂದ ತಾಳ್ಮೆಯಿಂದಲೇ ಇರಬೇಕು.

ವೈರವು ಸಾಪತ್ನಜಂ (ಹಗೆಗಳಿಂದಹುಟ್ಟಿದುದು) ವಾಸ್ತುಜಂ (ವಸ್ತುಗಳಿಗೆಸಂಬಂಧಿಸಿದುದು) ಸ್ತ್ರೀಜಂ (ಸ್ತ್ರೀಯರಿಗಾಗಿಹುಟ್ಟಿದುದು) ಅಪರಾಧಜಂ [ತಪ್ಪಿನಿಂದ ಹುಟ್ಟಿದುದು] ವೀರಸಂಬಂಧಿಜಂ (ಪರಾಕ್ರಮಾಸಹಿಷ್ಣುತ್ವ) ಅತಿ ಪರಾಕ್ರಮಜಂ ಎಂದು ವೈರವು ಅಯ್ದು ಬಗೆಯಾಗಿವೆ.

[ಮತಾಂತರ]

ವೈರವು ಭೂಮ್ಯುಪರೋಧದಿಂದ (ಭೂಮಿಯನ್ನು ಹೆಚ್ಚಿಸಿಕೊಳ್ಳುವುದು) ಶಕ್ತಿ ವಿಘಾತ ಮಾಡಬೇಕೆಂಬುದ್ದೇಶದಿಂದ (ಪ್ರಭು ಮಂತ್ರೋತ್ಸಾಹ ಶಕ್ತಿಗಳು ಮೂರು) ತನ್ನ ಭೂಮಿಯ (ದೇಶದ) ಪಕ್ಕದಲ್ಲಿರುವವನಿಂದ, ಮಂಡಲದಲ್ಲಿ ಕ್ಷೋಭೆಹುಟ್ಟಿಸಬೇಕೆಂಬುದ್ದೇಶದಿಂದ, ಹುಟ್ಟಿದುದು ಎಂದು ನಾಲ್ಕುಬಗೆಯೆಂದು ಇಂದ್ರನು ಹೇಳಿರುವನು.

ಕುಲದವರ (ಜ್ಞಾತಿಗಳ) ಸಂಬಂಧದಿಂದ ಹುಟ್ಟಿದುದು, ತಪ್ಪುಮಾಡುವುದರಿಂದ ಹುಟ್ಟಿದುದು ಎಂದು ವೈರವು ಎರಡುವಿಧವೆಂದು ಮನುಶಿಷ್ಯರ ಮತವು—

ಸ್ವಲ್ಪಫಲವುಳ್ಳ ಅಥವಾ ನಿಷ್ಫಲವಾದ, ಅಥವಾ ಫಲದಲ್ಲಿ ಸಂದೇಹವುಳ್ಳ, ಮತ್ತು ಮುಂದಿನಕಾಲದಲ್ಲೂ ತತ್ಕಾಲದಲ್ಲೂ ಮಂಡಲಕ್ಷೋಭಕಾರಕವಾದ ವೈರವನ್ನು ಬಿಡಬೇಕು, ಇದಿರಾಳಿಯ ಪರಾಕ್ರಮವನ್ನು ತಿಳಿಯದೆಯೂ, ದುಷ್ಟರಿಂದ ಪ್ರೇರಿತನಾಗಿಯೂ, ಸ್ತ್ರೀನಿಮಿತ್ತವಾಗಿಯೂ, ದೀರ್ಘಕಾಲ ನಡೆಯತಕ್ಕುದಾಗಿಯೂ ಇರುವ ವಿಗ್ರಹವನ್ನು ಆರಂಭಿಸಕೂಡದು.

ಅಕಾಲದಲ್ಲಿಯೂ, ದೈವಬಲವುಳ್ಳವನೊಡನೆಯೂ, ಬಲಶಾಲಿಯಾದ ಮಿತ್ರನಿರುವನೊಡನೆಯೂ, ತತ್ಕಾಲದಲ್ಲಿ ಮಾತ್ರ ಬಲದಿಂದ ಕೂಡಿ ಮುಂದೆ ಬಲವರ್ಜಿತನಾಗುವನೊಡನೆಯೂ ವೈರವನ್ನಾರಂಭಿಸಕೂಡದು.

ಬುದ್ಧಿವಂತನಾದ ರಾಜನು ಆಮೆಯಂತೆ [ಕೌರ್ಮಂ] ಸಂಕೋಚವನ್ನು ಹೊಂದಿ [ದುರ್ಗಾದಿಗಳಲ್ಲಿಡಗಿಕೊಂಡಿದ್ದು] ಹಗೆಯ ಪ್ರಹಾರವನ್ನೂ ಸಹಿಸಿಕೊಂಡಿರುವವನಾಗಿ ಅನುಕೂಲಕಾಲವು [ಶತ್ರುವನ್ನಡಗಿಸಲು] ಬಂದಹಾಗೆಲ್ಲಾ ಎದ್ದುನಿಂತು ಶತ್ರುವನ್ನು ಸಂಹರಿಸುತ್ತಿರಬೇಕೆಂಬುದೇ ವೈರದಸಾರವು. ಇನ್ನು ಸಾಧ್ಯಾಸಾಧ್ಯ ವಿಭಾಗವನ್ನು ಹೇಳುವನು— ಸತ್ಕುಲದಲ್ಲಿ ಹುಟ್ಟಿದವನು, ಸತ್ಯವಂತ, ತುಂಬಾ ಪರಾಕ್ರಮವುಳ್ಳವನು, ಸ್ಥಿರನು [ರೂಢಮೂಲನು] ಕೃತಜ್ಞ [ಇತರರು ತನಗೆ ಮಾಡಿದುಪಕಾರವನ್ನು ಮರೆಯದಿರುವವನು] ಧೈರ್ಯಶಾಲಿಯು, ಊರ್ಜಿತನು [ಅದೃಷ್ಟಶಾಲಿ—ಅಥವಾ ಬಲವಾಗಿ ನೆಲಸಿರುವವ] ತುಂಬಾ ದಾನಮಾಡುವವನು, ಪ್ರೀತಿಯುಳ್ಳವ [ಶರಣಾಗತರಕ್ಷಣದಲ್ಲಿ ದೀಕ್ಷಾಬದ್ಧ] ಇಂತಹ ಹಗೆಯನ್ನು ಗೆಲ್ಲುವುದು ಅಸಾಧ್ಯವು – ಹಾಗೆಯೇ ಸುಳ್ಳುಗಾರ, ಕಠಿನಮನಸ್ಕ, ಕೃತಘ್ನ, ಅಂಜುಪುರಕ, ಪ್ರಮಾದಿ [ಎಚ್ಚರಿಕೆಯಿಲ್ಲದವ] ಸೋಮಾರಿ, ವಿಷಾದವುಳ್ಳವ, ದೀರ್ಘದ್ವೇಷಿ, ದುರಭಿಮಾನವುಳ್ಳವ [ತನಗಿಂತ ದೊಡ್ಡವರಿಲ್ಲ ಎಂದು ಭಾವಿಸುವವ] ನಿಧಾನವಾಗಿ ಕೆಲಸಮಾಡುವವ, ಸ್ತ್ರೀದ್ಯೂತಪಾನಾದಿವ್ಯಸನಗಳಲ್ಲಿ ಸದಾ ಹಣವನ್ನು ವ್ರಯಮಾಡುವವನು ಇಂತಹ ದುರ್ಗಣಶಾಲಿಯಾದ ಹಗೆಯು ಸುಲಭಸಾಧ್ಯನು. ಇಂತವನಮೇಲೆ ವಿಜಿಗೀಷುವು. ಪ್ರಭುಮಂತ್ರೋತ್ಸಾದ ಶಕ್ತಿಗಳಿಂದ ಕೂಡಿ ಯುದ್ಧಕ್ಕೆ ಹೊರಡಬೇಕು ಆದಕಾರಣ ಈ ಮೇಲೆ ಹೇಳಿದ ರೀತಿಯನ್ನು ಬಿಟ್ಟು ಸಾಧುಜನೊಡನೆ ವಿರೋಧವನ್ನಾರಾಭಿಸುವವನು ತನ್ನನ್ನೇ ಹಾಳುಮಾಡಿಕೊಳ್ಳುವನು— ಬಹು ಪ್ರಯತ್ನದಿಂದ ರಾಜ್ಯಸ್ಥಿತಿಯನ್ನು ಮುಂದುವರಿಸುವ ಬುದ್ಧಿಯಿಂದ ಮಂಡಲಪ್ರಯೋಗಗಳನ್ನೆಲ್ಲಾ ಚೆನ್ನಾಗಿ ನೋಡಿ [ಪರೀಕ್ಷಿಸಿ] ಈ ವಿಗ್ರಹದ ದಾರಿಯನ್ನು ಸ್ಥಿರೋದ್ಯಮನಾಗಿ ಚೆನ್ನಾಗಿ ಪ್ರಯತ್ನಿಸಬೇಕು–ಎಂದು ಸರ್ಗವನ್ನುಪಸಂಹರಿಸಿರುವನು [೧೦]

ಹನ್ನೊಂದನೆ ಸರ್ಗ

ಇನ್ನು ಈ ೧೧ನೆಸರ್ಗದಲ್ಲಿ ಯಾನಂ, ಆಸನಂ, ದ್ವೈಧೀಭಾವಂ, ಆಶ್ರಯಂ ಎಂಬ ನಾಲ್ಕನ್ನೂ ವಿವರಿಸಿ ಹೇಳಿರುವನು— ಅವುಗಳಲ್ಲಿ ಮೊದಲು ಯಾನ ವಿಚಾರವನ್ನು ಹೇಳಿರುವನು—

ಉತ್ಕೃಷ್ಟಬಲವೀರ್ಯವುಳ್ಳವನೂ, ಜಯೈಷಿಯೂ, ತನ್ನ ಗುಣಗಳಿಂದ ಸಪ್ತ ಪ್ರಕೃತಿಗಳ ಅನುರಾಗವನ್ನು ಪಡೆದವನೂ ಆದ ವಿಜಿಗೀಷುವಿನ ದಂಡಯಾತ್ರೆಗೆ ಯಾನವೆಂದು ಹೆಸರು. ವಿಗೃಹ್ಯಯಾನ, ಸಂಧಾಯಯಾನ, ಸಂಭೂಯಯಾನ, ಪ್ರಸಂಗಯಾನ, ಉಪೇಕ್ಷಾಯಾನವೆಂದು ಯಾನವು ಪಂಚವಿಧವು. ಎಲ್ಲಿ ವಿಜಿಗೀಷುವು ಶತ್ರುಗಳನ್ನು ತಾನೊಬ್ಬನೇ ಜಯಿಸಬೇಕೆಂಬ ಉದ್ದೇಶದಿಂದ ಹೊರಡುವನೋ ಆ ಯಾನವನ್ನು ವಿಗೃಹ್ಯಯಾನವೆಂದು ಯಾನತತ್ವವನ್ನು ತಿಳಿದವರು ಹೇಳುವರು. ಸಾಮಂತರೊಡನೆಯೂ, ಭೂಮ್ಯನಂತರ ರಾಜರೊಡನೆಯೂಸೇರಿ ಒಟ್ಟಾಗಿಇತರರನ್ನು ಜಯಿಸುವ ಉದ್ದೇಶದಿಂದಮಾಡುವ ಯಾನಕ್ಕೆ ಸಂಧಾಯಯಾನವೆಂದು ಹೆಸರು. ಇಬ್ಬರುಹಗೆಗಳ ಮೇಲೆ ಪ್ರಕೃತಿನಾಶನಕ್ಕಾಗಿ ಮಾಡುವ ಯಾನವು|| ಸಂಭೂಯಯಾನವೆನಿಸಿಕೊಳ್ಳುವುದು–ಹಿಂದೆ ಸೂರ್ಯನನ್ನು ಹಣ್ಣೆಂದು ನುಂಗಲು ಹೋದ ಹನುಮಂತನನ್ನು ತನ್ನ ಆಹಾರವಾದ ಸೂರ್ಯನನ್ನು ಹನುಮಂತನು ಅಪಹರಿಸುವನೆಂದು ಹನುಮನನ್ನು ನುಂಗಲು ರಾಹುವು ಪ್ರಯತ್ನಿಸಲು ಸೂರ್ಯನೂ ಹನುಮಂತನೂ ಸೇರಿ ರಾಹುವನ್ನಡಗಿಸಿದರು ಎಂದು ಪುರಾಣಕಥೆಯು ಇದಕ್ಕೆ ಉದಾಹರಣವು– ಅಲ್ಪಬಲರಾದ ಹಲವರನ್ನು ಸೇರಿಸಿಕೊಂಡು ವಿಜಯಲಬ್ಧವಾದ ಫಲದಲ್ಲಿ ಎಲ್ಲರೂ ಸಮಭಾಗಿಗಳೆಂದು ಪ್ರತಿಜ್ಞೆಮಾಡಿಕೊಂಡು ಇತರರೊಡನೆ ಮಾಡುವ ಯಾತ್ರೆಗೆ ಸಂಭೂಯಯಾತ್ರೆಯೆಂದು ಹೆಸರು. ಒಬ್ಬನೊಡನೆ ಯುದ್ಧಮಾಡಬೇಕೆಂದು ಹೊರಟಾಗ ದಾರಿಯುಲ್ಲಿ ಮತ್ತೊಬ್ಬನೊಡನೆ ಮಾಡಬೇಕಾಗಿ ಬಂದ ಯಾತ್ರೆಗೆ ಪ್ರಸಂಗಯಾವವೆಂದು ಹೆಸರು – ಶಲ್ಯನು ಇದಕ್ಕೆ ನಿದರ್ಶನವು (ಪಾಂಡವರ ಕಡೆ ಸೇರಬೇಕೆಂದು ಬರುತ್ತಿದ್ದವನು ದಾರಿಯಲ್ಲಿ ಕೌರವನ ಉಪಚಾರಗಳನ್ನು ಸ್ವೀಕರಿಸಿದುದರಿಂದ ಕೌರವರ ಕಡೆಗೇ ಸೇರಬೇಕಾಯಿತು), ಬಲಶಾಲಿಯಾದ ಶತ್ರುವಿನಮೇಲೆ ಯಾತ್ರೆಗೆ ಹೊರಟು ಅವರನ್ನು ತಾತ್ಕಾಲಿಕವಾಗಿ ಉಪೇಕ್ಷಿಸಿ ಅವರ ಶತ್ರುಗಳಮೇಲೆ ಮಾಡುವ ಯಾತ್ರೆಗೆ ಉಪೇಕ್ಷಾಯಾನವೆಂದು ಹೆಸರು— ಇಂದ್ರನು ಬಲಿಷ್ಠರಾದ ಕಾಲಕೇಯ ನಿವಾತಕವಚರನ್ನು ಸಂಹರಿಸಲು ಹೊರಟು, ಅವರಮೇಲಣ ಯಾತ್ರೆಯನ್ನುಪೇಕ್ಷಿಸಿ ಅವರ ಮಿತ್ರರಾದ ಸಮುದ್ರತೀರ ಹಿರಣ್ಯಪುರ ನಿವಾಸಿಗಳಾದ ಪೌಲೋಮಕಾಲಕೇಯರಮೇಲೆ ಹೊರಟ ಯಾನವು ಇದಕ್ಕೆ ನಿದರ್ಶನವು.

ಹೀಗೆಂಬ ಈ ಹದಿನಾರು ಬಗೆಯ ವಿಗ್ರಹವನ್ನು ವಿಚಕ್ಷಣನಾದವನು ಮಾಡಕೂಡದು— ತತ್ಕಾಲದಲ್ಲಿಯೂ ಮುಂದೆಯೂ, ಶುದ್ಧವಾಗಿರು(ತೊಡರಿಲ್ಲದಿರು)ವ ಯುದ್ಧವನ್ನಾರಂಭಿಸಬೇಕು. ಹೀಗೆಯೇ ವಿದ್ವಾಂಸನಾದವನು ತಾತ್ಕಾಲಿಕ ಭವಿಷ್ಯತ್ಕಾಲಗಳಲ್ಲಿ ಶುದ್ಧವಾಗಿರುವ ಕಾರ್ಯಗಳನ್ನೇ ಆರಂಭಿಸಬೇಕು. ಇಂತಹ ಕಾರ್ಯಗಳೇ ಇಹಲೋಕ ಪರಲೋಕಗಳೆರಡರಲ್ಲೂ ಕೊಡುವುವು. ಮತ್ತು ಪರಲೋಕ ವಿರುದ್ಧವಾದ ಕಾರ್ಯಗಳನ್ನು ಮಾಡಲೇಕೂಡದು. (ದೂರತಳ್ಳಬೇಕು) ಹೇಗೆ ಆಗಮಪ್ರಮಾಣವನ್ನು ತಿಳಿದವನು ಸಾಧುವಾಗಿರುವ ಕಲ್ಯಾಣಕಾರ್ಯಗಳನ್ನೇಮಾಡಬೇಕು.

ವಿಗ್ರಹ(ಯಾನ)ಕ್ಕೆ ಅನುಕೂಲವಾದ ಕಾಲ – ಬುದ್ಧಿಶಾಲಿಯಾದ ವಿಜಿಗೀಷು ತನ್ನ ಬಲವು ಹೃಷ್ಟವಾಗಿಯೂ ಪುಷ್ಟವಾಗಿಯೂ ಇರುವಾಗ ಪರನಬಲವು ಇದಕ್ಕೆ ವಿಪರೀತವಾಗಿ

(ಅಹೃಷ್ಟ, ಅಪುಷ್ಟ)ರಲು ವಿಗ್ರಹವನ್ನು ಆಚರಿಸಬೇಕು. ಯಾವಾಗ ತನ್ನ ಪ್ರಕೃತಿಮಂಡಲವು ಅನುಕೂಲವಾಗಿರುವುದೊ ಮತ್ತು ಮಿತ್ರ, ಆಕ್ರಂದ, ಆಸಾರ ಎಂಬುವರು ತನ್ನಲ್ಲಿ ದೃಢಭಕ್ತಿಯಿಂದ ಇರುವರೋ ದೈವವು (ಅದೃಷ್ಟ) ಪ್ರತಿಕೂಲ ಲಕ್ಷಣವಿಲ್ಲದೆ ಅನುಕೂಲ ಲಕ್ಷಣದಿಂದ ಕೂಡಿರುವುದೋ ಅದೇ ವಿಗ್ರಹಕ್ಕೆ ಪ್ರಶಸ್ತಮಾದ ಕಾಲವು. ವಿಗ್ರಹಕ್ಕೆ ಫಲಗಳು– ಭೂಮಿ, ಮಿತ್ರ, ಹಿರಣ್ಯ ಈ ಮೂರರ ಲಾಭವು ವಿಗ್ರಹಕ್ಕೆ ಫಲವು. ಇವು ನಿಯತವಾಗಿ ದೊರೆಕುವುದೆಂದು ಕಂಡುಬಂದಾಗ ವಿಗ್ರಹವನ್ನಾಚರಿಸಬೇಕು. ಫಲಗಳ ಗುರುಲಾಘವಗಳು–ಈ ಮೂರರಲ್ಲಿ ಧ್ರವ್ಯವೆಂಬುದು ಬಹು ಮುಖ್ಯವಾದುದು. (ಏಕೆಂದರೆ, ಲೋಕವ್ಯವಹಾರಗಳಿಗೆಲ್ಲಾ ಹಣವೇ ಮೂಲಭೂತವಾದುದು) ಇಂತಹ ದ್ರವ್ಯವು ಮಿತ್ರನಿಂದ ಲಭಿಸುವುದಾದುದರಿಂದ ಅದಕ್ಕಿಂತ ಮಿತ್ರ ಲಾಭವು ಹೆಚ್ಚಿನದು. ಇವೆರಡರ ಉತ್ಪತ್ತಿಗೂ (ಹಣ ಬಂಧುಮಿತ್ರಾದಿ ಸಂಪತ್ತಿಲಾಭಕ್ಕೆ) ಭೂಮಿಯು ಮುಖ್ಯಕಾರಣವಾಗಿರುವುದರಿಂದ, ಭೂಮಿಲಾಭವು ಅವೆರಡಕ್ಕಿಂತಲೂಮೇಲಾದುದು. ಬುದ್ಧಿಶಾಲಿಯು ಸರ್ವ ಸಂಪತ್ತಿನಲ್ಲೂ ಸಮನಾದ ಶತ್ರುವಿನಲ್ಲಿ ವಿಗ್ರಹವು ಒದಗಿದರೆ ಸಾಮಾದ್ಯುಪಾಯಗಳಲ್ಲಿ ಯಾವುದು ಸಾಧ್ಯವೋ ಅದರಿಂದ ಒದಗಿದ ಯುದ್ಧವನ್ನು ಶಾಂತಿಮಾಡಿಕೊಳ್ಳಬೇಕು. ತನ್ನ ಸಂಪತ್ತನ್ನು ನಾಶಮಾಡಿಕೊಳ್ಳಬಾರದೆಂದಿರುವವನು ಯಾವಾಗಲು ವಿಜಯವು ಸಂದೇಹಾಸ್ಪದವಾದುದರಿಂದ ರಭಸ(ಆತುರ)ದಿಂದ ಬಲಶಾಲಿಯಮೇಲೆ ವಿಗ್ರಹಕ್ಕೆಬೀಳಕೂಡದು. ಇದನ್ನೇ ದೃಷ್ಟಾಂತದಿಂದ ಸ್ಥಿರಪಡಿಸುವನು — ವೇತಸ(ನೀರುಹಬಸೇಗಿಡ)ವೆಂಬ ಗಿಡದ ವೃತ್ತಿಯನ್ನು ವಿಜಿಗೀಷುವು ಯಾವಾಗಲು ಆಶ್ರಯಿಸುವುದು ಒಳ್ಳೆಯದು (ವೇತಸವು ರಭಸದಿಂದ ತನ್ನ ಮೇಲೆ ಪ್ರವಾಹವನ್ನು ಇದಿರಿಸದೆ ತಲೆಬಗ್ಗಿ ಸಹಿಸಿಕೊಂಡಿರುವುದರಿಂದ ನೀರಿನ ಹೊಡೆತದಿಂದ ತಪ್ಪಿಕೊಂಡು ಸುಖವಾಗಿ ಬಾಳುವುದು) ಭುಜಂಗ (ಹಾವಿನ) ಸಂಬಂಧವಾದ ವೃತ್ತಿಯನ್ನು ಯಾವಾಗಲೂ ಆಶ್ರಯಿಸಬಾರದು. (ಹಾವು ರಭಸದಿಂದ ಮನುಷ್ಯರ ಮೇಲೆಬಿದ್ದು ಪ್ರಾಣಗಳನ್ನು ಕಳೆದುಕೊಳ್ಳುವುದು) ಯಾತವ್ಯ(ಯಾನಮಾಡತಕ್ಕವ)ನ ಲಕ್ಷಣವು–ಉತ್ತಮ ಪಂಡಿತನಾದವನು ಮತ್ತನಾಗಿಯೂ, ಪ್ರಮತ್ತನಾಗಿಯೂ ಇರುವವನನ್ನು ಸ್ವಾಧೀನಪಡಿಸಿಕೊಳ್ಳ(ನುಂಗ)ಬೇಕು— ಸ್ತ್ರೀಲೋಲತೆ, ಪಾನ, ಬೇಟೆ ಮತ್ತು ಜೂಜು ಇವೇ ಮೊದಲಾದ ದೈವೋಪಘಾತಗಳು ಬಹುಪ್ರಕಾರಗಳು. ಇಂತಹ ವ್ಯಸನಗಳಲ್ಲಿ ಆಸಕ್ತನಾದವನನ್ನು ಸುಖವಾಗಿ ಸಾಧಿಸಬಹುದು.

ಇನ್ನು ಆಸನವೆಂಬ ಗುಣವನ್ನು ವಿವರಿಸುವನು–ಹಿಂದೆ ಹೇಳಿದಂತೆ ಯಾತವ್ಯನಿಂದ ಶತ್ರು ವಿಜಿಗೀಷು ಇವರಲ್ಲಿ ಪರಸ್ಪರವಾಗಿ ಸಾಮರ್ಥ್ಯವನ್ನು ವಿಘಾತಮಾಡುವುದಕ್ಕಾಗಿ ಒಂದೆಡೆಯಲ್ಲಿ ಹೊಂಚು ಕಾಯುವುದಕ್ಕೆ ಆಸನವೆಂದು ಹೆಸರು. ಇದು ಯಾನದಂತೆಯೇ ವಿಗೃಹ್ಯಾಸನ, ಸಂಧಾಯಾಸನ, ಸಂಭೂಯಾಸನ, ಪ್ರಸಂಗಾಸನ, ಉಪೇಕ್ಷಾಸನ ಎಂದು ಐದುಬಗೆಯಾಗಿರುವುದು. ಶತ್ರುವಿನೊಡನೆ ಯುದ್ಧವನ್ನಾರಂಭಿಸಿ ಒಂದೆಡೆ ಇದ್ದುಕೊಂಡು ಅನ್ಯೋನ್ಯವಾಗಿ ಆಕ್ರಾಂತಿಯನ್ನುಂಟುಮಾಡುವು (ಶತ್ರುವಿನ ಸಾಧನ ಸಾಮಗ್ರ್ಯಾದಿಗಳನ್ನು ನಿರೋಧಿಸಿ) ದಕ್ಕೆ ವಿಗೃಹ್ಯಾಸನವೆಂದು ಹೆಸರು–ಮತ್ತು ಬಲವಾದ ದುರ್ಗದಲ್ಲಿರುವ ಶತ್ರುವನ್ನು ಯುದ್ಧದಿಂದ ಆಕ್ರಮಿಸಲಾಗದಿರುವಾಗ ಹೊರಗಡೆಯಿದ್ದುಕೊಂಡು ಅವನ ದುರ್ಗದೊಳಕ್ಕೆ ಹೊರಗಣಿಂದ ಆಹಾರ, ಸೈನ್ಯ ಮೊದಲಾದ ಸಾಮಗ್ರಿಗಳನ್ನು ಹೋಗದಂತೆ ತಡೆಯುವುದು ವಿಗೃಹ್ಯಾಸನವೆನಿಸಿಕೊಳ್ಳುವುದು; ಹೀಗೆ ನೀರು, ಧನಧಾನ್ಯಾಯುಧಾದಿಗಳು ದುರ್ಗಸ್ಥನಾದ ಶತ್ರುವು ಪಡೆಯಲಾರದೆ ಪ್ರಕೃತಿಗಳ ಐಕಮತ್ಯವನ್ನು ಕಳೆದುಕೊಂಡು ಕೊನೆಗೆ ತಾನೇ ಬಂದು ಶರಣಾಗತನಾಗುವನು;

ಅರಿ ವಿಜಿಗೀಷು ಇಬ್ಬರಿಗೂ ಯುದ್ಧವು ಕ್ಷೀಣವಾಗಿ ಬರುತ್ತಿರುವಾಗ ತಾತ್ಕಾಲಿಕವಾಗಿ ಸಂಧಿ ಮಾಡಿಕೊಂಡು ಕಾಲನಿರೀಕ್ಷಣೆ ಮಾಡುವುದಕ್ಕೆ ಸಂಧಾಯಾಸನವೆಂದು ಹೆಸರು—ರಾವಣನು ಶಾತ್ರುರಾವಣನಾಗಿದ್ದರೂ ನಿವಾತಕವಚರೆಂಬ ರಾಕ್ಷಸರೊಡನೆ ಒಂದು ವರ್ಷಕಾಲ ಯುದ್ಧ ಮಾಡುತ್ತಾ ಇಬ್ಬರೂ ಕ್ಷೀಣಬಲರಾಗುತ್ತಿರುವಾಗ ಬ್ರಹ್ಮದೇವನ ಮಧ್ಯಸ್ಥತೆಯಿಂದ ಸಂಧಿ ಮಾಡಿಕೊಂಡುದು ಇದಕ್ಕೆ ದೃಷ್ಟಾಂತವು – ಅರಿ ವಿಜಿಗೀಷುಗಳಿಗೆ ಸಮಾನಬಲರಾದ ಉದಾಸೀನ ಮಧ್ಯಮರನ್ನು ತಾವು ತಾವು ಹಾಗೆಯೇ ಇರುವಂತೆ ಮಾಡುವುದು ಸಂಭೂಯಾಸನವು. ಅರಿ ವಿಜೀಗೀಷುವಿಬ್ಬರಿಗೂ ಶತ್ರುವಾಗಿ ಇಬ್ಬರ ನಾಶವನ್ನು ಅಪೇಕ್ಷಿಸುವವರಲ್ಲಿ ಅಧಿಕನಾದವನೊಡನೆ ಸಂಧಿಮಾಡಿಕೊಂಡು ತನ್ನ ಹಗೆಗೆ ಪ್ರತಿಯಾಗಿ ಯುದ್ಧಮಾಡುವಂತೆ ಏರ್ಪಡಿಸುವುದೂ ಸಂಭೂಯಯಾನವೆನಿಸಿಕೊಳ್ಳುವುದು. ಒಬ್ಬನಸಂಗಡಯಾನೇಚ್ಛುವಾದ ವಿಜಿಗೀಷುಗೆಆನುಷಂಗಿಕವಾಗಿ ಮತ್ತೊಬ್ಬನೊಡನೆ ಒದಗುವ ಆಸನಕ್ಕೆ ಪ್ರಸಂಗಾಸನವೆಂದು ಹೆಸರು. ಯಾನವನ್ನಾರಂಭಿಸಿ ಹಗೆಯು ತುಂಬಾ ಪ್ರಬಲನೆಂದು ತಿಳಿದು ಬಂದೊಡನೆ-ಅವನ ಛಿದ್ರವನ್ನು ನಿರೀಕ್ಷಿಸುತ್ತಾ ಇರುವುದು ಉಪೇಕ್ಷಾಸನವೆನಿಸಿಕೊಳ್ಳುವುದು - ಕೃಷ್ಣನು ಪಾರಿಜಾತಾಪಹರಣವನ್ನು ಮಾಡಿದಾಗ ಇಂದ್ರನು ಯುದ್ಧವನ್ನಾರಂಭಿಸಿ ನಿಲ್ಲಿಸಿದುದು ಉದಾಹರಣವು. ಯಾವುದಾದರೊಂದು ಕಾರಣದಿಂದ ಶತ್ರುವಿನೊಡನೆ ಯುದ್ಧಮಾಡದೆ ಉಪೇಕ್ಷೆಯಿಂದಿರುವುದೂ–ರುಕ್ಮಿಣಿಯ ತಮ್ಮ ರುಕ್ಮಿಯು ಇದಕ್ಕೆ ಉದಾಹರಣವು. (ಶ್ರೀಕೃಷ್ಣನು ತನ್ನಲ್ಲನುರಕ್ತೆಯಾದ ರುಕ್ಮಿಣಿಯನ್ನು ಅಪಹರಿಸಿದುದಕ್ಕೆ ರುಕ್ಮಿಯು ಯುದ್ಧವನ್ನಾರಂಭಿಸಿ ಸೋತು ಅವಮಾನಹೊಂದಿ ಶ್ರೀಕೃಷ್ಣನನ್ನು ಜಯಸಿದಹೊರತು ನಗರಪ್ರವೇಶಮಾಡುವುದಿಲ್ಲವೆಂದು ರುದ್ರನನ್ನು ಕುರಿತು ತಪಸ್ಸುಮಾಡುತ್ತಿದ್ದನೆಂಬುದು ಭಾಗವತ ೧೦ನೆಯ ಸ್ಕಂಧದ ಕಥೆ) — ಇನ್ನು ಮುಂದೆ ದ್ವೈಧೀಭಾವವೆಂಬ ಗುಣವನ್ನು ವಿವರಿಸುವನು—

ಇಬ್ಬರು ಬಲಶಾಲಿಗಳು ಯುದ್ಧಮಾಡುತ್ತಿರುವಾಗ ತಾನು ಮಾತಿನಿಂದ ಶರಣಾಗತನೆಂದು ಹೇಳುತ್ತಾ ಕಾಕಾಕ್ಷಿನ್ಯಾಯದಂತೆ ಯಾವಕಡೆಗೆ ಬೇಕಾದರೆ (ಗೆದ್ದಕಡೆ) ಸೇರುವಂತೆ ಮಧ್ಯದಲ್ಲಿ ತಟಸ್ಥನಂತಿರಬೇಕು. ಇದೇ ದ್ವೈಧೀಭಾವವು – ಅವರಿಬ್ಬರಲ್ಲಿ ಯಾವನು ಸನ್ನಿಕೃಷ್ಟತರನೋ ಅವನನ್ನು ಯಾನಕ್ಕೆ ಪ್ರೇರಿಸಬೇಕು. ಇಬ್ಬರಲ್ಲಿ ಯಾರು ಬಲಶಾಲಿಯೋ ಅವನಕಡೆ ಸೇರಬೇಕು. ಅವರಿಬ್ಬರೂ ತನ್ನನ್ನು ಇವನು ಕೇವಲ ಮಾತುಗಾರ - ಇವನನ್ನು ನಂಬಕೂಡದೆಂದು ತನ್ನ ದೂರಮಾಡಿದಾಗ ಆಗ ಈಬಲವತ್ತರನಾದ ಅವರ ಶತ್ರುವನ್ನಾಶ್ರಯಿಸಬೇಕು. ಈ ದ್ವೈದೀಭಾವವು ಎರಡುವಿಧ–ಸ್ವತಂತ್ರ ಪರತಂತ್ರಗಳೆಂದು ಎರಡುವಿಧ ಸ್ವತಂತ್ರದ ಲಕ್ಷಣವು ಹೇಳಿಯಾಯಿತು. ಇನ್ನು ಪರತಂತ್ರವೆಂದರೆ – ಉಭಯವೇತನವುಳ್ಳವನು.

ಆರನೆಯ ಸಮಾಶ್ರಯ ಲಕ್ಷಣ ಭೇದಗಳನ್ನು ಇನ್ನು ಹೇಳುವನು- ಬಲಶಾಲಿಯಿಂದ ನಾಶ ಮಾಡಲ್ಪಡತಕ್ಕವನಾಗಿ ಪ್ರತಿಕ್ರಿಯೆಮಾಡಲು ಶಕ್ತಿಯಿಲ್ಲದವನು – ಸತ್ಯವಂತನೂ, ಕುಲೀನನೂ, ಆರ್ಯನೂ ಆದ ಬಲೋತ್ಕಟನನ್ನು ಶರಣಾಗತಿಮಾಡುವುದೇ ಸಮಾಶ್ರಯವು—

ಹೀಗೆ ಸಂಶ್ರಯಮಾಡಿದವನು- ಆಶ್ರಯವಿತ್ತವನನ್ನು ನೋಡಿದರೆ ಆಸ್ತಿಕ್ಯವನ್ನು (ವಿನಯವನ್ನು) ತೋರಿಸಬೇಕು. ಅವನು ಯಾವುದನ್ನು ಭಾವಿಸುವನೋ ಅದನ್ನು ಭಾವಿಸಬೇಕು. ಅವನ ಕೆಲಸವನ್ನು ಭಕ್ತಿಯಿಂದ ನಡೆಸಬೇಕು. ಯಾವನಭಾವವು ಹೇಗೆಹೇಗೆಇರುವುದೋ ಅದರಂತೆ ನಡೆದು ಅವನೊಳಗೆ ತುಂಬಾ ಮಿತ್ರನಂತೆ ಸೇರಿಕೊಂಡು ಬೇಗನೆ ಅವನನ್ನು ತನ್ನ ವಶಪಡಿಸಿಕೊಳ್ಳಬೇಕು.

ಗುರುವಿನಲ್ಲಿ ಹೇಗೋ ಹಾಗೆ ಆತನಲ್ಲಿ ವಿನಯದಿಂದಿದ್ದುಕೊಂಡು ಕಾಲವನ್ನು ಕಳೆಯುತ್ತಾ ಅವನ ಸಂಗದಿಂದ ಪರಿಪೂರ್ಣನಾಗಿ ಬಳಿಕ ತನ್ನ ವಶಮಾಡಿಕೊಳ್ಳಬೇಕು. ತನ್ನಮೇಲೆ ದಂಡೆತ್ತಿಬಂದ ಬಲಶಾಲಿಗೆ ವಿಸಂಧಿಯೂ ಅನಪಾಶ್ರಯನೂ ಆದ ವಿಜಿಗೀಷುವು, ತನ್ನ ದಂಡಿನ ಅಥವಾ ಕೋಶದ (ಅರ್ಥದ) ಭೂಮಿಯ,ಅಥವಾ ಭೂಮಿಯಲ್ಲಿ ಹುಟ್ಟುವ ವಸ್ತುಗಳ ಭಾಗವನ್ನಾದರೂಕೊಟ್ಟು ಅವನನ್ನು ಆಶ್ರಯಿಸಬೇಕು. ಒಂದುವೇಳೆ ಅದಕ್ಕೆ ಅವನು ಒಪ್ಪದಿದ್ದರೆ ತನ್ನಮೇಲೆ ಹೇಳಿದ ಬಲ ಕೋಶ ಭೂಮ್ಯಾದಿಗಳೆಲ್ಲವನ್ನೂ ಕೊಟ್ಟಾದರೂ ತನ್ನ ಪ್ರಾಣರಕ್ಷಣೆಗಾಗಿ ಅವನನ್ನು ಆಶ್ರಯಿಸಬೇಕು. ಜೀವಿಸಿದ್ದರೆ ಯುಧಿಷ್ಠಿರನಂತೆ ಮತ್ತೆ ಭೂಮಿಯನ್ನು ಪಡೆಯಬಹುದಲ್ಲವೆ. (ಇದು ವಾಲ್ಮೀಕಿರಾಮಾಯಣದ ಶ್ಲೋಕ) ಲೋಕದಲ್ಲಿ ರೂಢವಾಗಿರುವ ಈ ಗಾದೆಯು ಕಲ್ಯಾಣ (ಮಂಗಳ) ಕರವಾದುದೆಂದು ನನಗೆ ತೋರುತ್ತದೆ – ಜೀವಿಸಿರುವ ಮನುಷ್ಯನನ್ನು ಮನುಷ್ಯಾಯುಸ್ಸಾದ ನೂರುವರ್ಷಗಳಿಂದಲಾದರೂ ಆನಂದವನ್ನು ಪಡೆಯುವನು.(೬೨)ತನ್ನಕುಲವನ್ನು ಕಾಪಾಡಿಕೊಳ್ಳಲು ಕೆಟ್ಟವನಾದ ಕುಲದಲ್ಲಿ ಹುಟ್ಟಿದವನನ್ನು ಬಿಡಬೇಕು ಒಂದು ಕೆಟ್ಟಕುಲದಿಂದ ಗ್ರಾಮಕ್ಕೆ ಕೇಡಾಗುವಂತಿದ್ದರೆ ಆ ಕುಲವನ್ನೇ ಸಂಪೂರ್ಣವಾಗಿ ಹೊರಹೊರಡಿಸಬೇಕು (ಬಿಡಬೇಕು). ಕೇಡನ್ನುಂಟುಮಾಡುವ ಗ್ರಾಮವನ್ನು ದೇಶಹಿತಕ್ಕಾಗಿ ತ್ಯಾಗಮಾಡಬೇಕು. ವಿಚಾರಮಾಡಿ ತನಗೆ ಕೇಡಾಗುವಂತಿದ್ದರೆ ಆ ದೇಶವನ್ನೇ (ಭೂಮಿಯನ್ನೇ) ತ್ಯಾಗಮಾಡಬೇಕು[ಪಾಠಾಂತರ – ಆತ್ಮಾರ್ಥೇಪೃಥಿವೀಂ ತ್ಯಜೇತ್ — ತನಗಾಗಿ (ತನ್ನ ರಕ್ಷಣೆಗಾಗಿ) ವಾಸಮಾಡುವ ಭೂಮಿಯನ್ನೇ ದೇಶವನ್ನೇ ಬಿಡಬೇಕು] ಹೀಗೆ ಹಗೆಯನ್ನಾಶ್ರಯಿಸಿದವನು, ಆತನಿಗೆ (ಹಗೆಗೆ) ಯಾವುದಾದರೂ ಇಕ್ಕಟ್ಟು ಒದಗಿದಾಗ ಅಥವಾ ತನಗೆ ದೇಶಕಾಲಕೋಶಾದಿಗಳು ಲಾಭವಾದಾಗ ಅಥವಾ ಅವನು ಸಪ್ತವ್ಯಸನಗಳಲ್ಲಿ ಮಗ್ನನಾಗಿರುವಾಗ ಬಲಶಾಲಿಯಾದ ಸಿಂಹದಂತೆ ಆತನ ಮೇಲೆ ಬಿದ್ದು ಜಯವನ್ನು ಪಡೆಯಬೇಕು. ತನಗಿಂತ ಬಲಶಾಲಿಯೊಡನೆಯಾಗಲಿ, ತನಗೆ ಸಮ ಅಥವಾ ಕನಿಷ್ಠನಾಗಿ ಇರುವವನೊಡನಾಗಲಿ, ಕ್ಷಯ, ವ್ಯಯ, ಇವುಗಳಿಂದಾದ ದೋಷದ ದೆಸೆಯಿಂದಾಗಲಿ, ನಂಬಿಕೆಯಿಂದಾಗಲಿ, ದ್ರೋಹದಿಂದಾಗಲಿ ಕಾರಣವಿಲ್ಲದೆ ಸಂಧಿಮಾಡಿಕೊಳ್ಳಕೂಡದು, ಒಬ್ಬನು ಸಂಧಿಮಾಡಿಕೊಳ್ಳಲು ಕಾರಣವೇನೆಂಬುದನ್ನು ಸರಿಯಾಗಿ ವಿಚಾರಮಾಡದೆ ತಂದೆಯಲ್ಲಿಯೂ ವಿಶ್ವಾಸವಿಡಕೂಡದು–ಏಕೆಂದರೆ ವಿಶ್ವಾಸವನ್ನು ಮಾಡಿದ ಸಾಧುಗಳಿಗೆ ಅಸಾಧುಗಳು ದ್ರೋಹವನ್ನು ಮಾಡಿಯೇಮಾಡುವರು– ಹೀಗೆಂದು ಷಾಡ್ಗುಣ್ಯಗಳ ಸಿದ್ಧಾಂತವು– ಕೆಲವರು ದ್ವೈಗುಣ್ಯವೆಂದು ಹೇಳಿ ಸಂಧಿ - ವಿಗ್ರಹ ಎರಡನ್ನು ಮಾತ್ರ ಹೇಳುವರು (ಈ ಮತದಲ್ಲಿ ಆಸನವು ವಿಗ್ರಹಭೇದವೆಂದೂ, ಉಳಿದ-ಯಾನ, ದ್ವೈಧೀಭಾವ ಆಶ್ರಯಗಳು ಸಂಧಿಯ ಭೇದವೆಂದೂ ಅಭಿಪ್ರಾಯವು). ಮತ್ತೆ ಕೆಲವು ನೀತಿಶಾಸ್ತ್ರವೇತ್ತರು ಯಾನಾಸನಗಳೆರಡೂ ವಿಗ್ರಹಕ್ಕಾಗಿಯೂ, ದ್ವೈಧೀಭಾವ ಸಮಾಶ್ರಯಗಳು ಸಂಧಿಭೇದವಾಗಿರುವುದರಿಂದ, ವಿಗ್ರಹಸಂಧಿಗಳೆಂಬ ದ್ವೈಗುಣ್ಯವನ್ನೇ ಪ್ರಸಿದ್ಧವಾಗಿ ಹೇಳಿರುವರು - ಸಂಧಾಯ ಎಂದು ಹೇಳಿರುವುದೆಲ್ಲಾ ಸಂಧಿಯ ರೂಪವೆಂದೇ ನಮ್ಮ ಇಷ್ಟವು. ವಿರೋಧ (ವಿಗ್ರಹ) ಮಾಡು ಎಂದು ಹೇಳಿರುವುದೆಲ್ಲಾ ವಿಗ್ರಹಭೇದವೆಂದೇ ಗ್ರಾಹ್ಯಮಾಡುವುದುಚಿತವು. ಇನ್ನು ಮತ್ತೆ ಕೆಲವರು, ವಿಗ್ರಹ, ಸಂಧಿ - ಆಶ್ರಯ ಈ ಮೂರು ಇರಬೇಕಾದುದರಿಂದ ತ್ರೈಗುಣ್ಯವೆಂದು ಹೇಳುವರು. ಸಂಧಿವಿಗ್ರಹ ಎರಡೇ ಎಂದು ಮತ್ತೆ ಕೆಲವರು ಹೇಳುವರು. ಬಲಶಾಲಿಯಾದವನಿಂದ ಬಾಧಿಸಲ್ಪಡುವವನು ಅವನನ್ನು ಜಯಿಸಲು ಮತ್ತೊಬ್ಬನನ್ನಾಶ್ರಯಿಸುವುದರಿಂದ, ಆ ಬಗೆಯಲ್ಲಿ ಮತ್ತೊಬ್ಬನನ್ನು ಸಂಧಿಸುವ ಆಶ್ರಯವು ಸಂಧಿಗಿಂತಲೂ

ಬೇರೆಯೆಂದು ಬೃಹಸ್ಪತ್ಯಾಚಾರ್ಯರು ತ್ರೈಗುಣ್ಯವನ್ನು ಸ್ಥಿರೀಕರಿಸುವರು. ಸ್ವಕೀಯಾಚಾರ್ಯನಾದ ಕೌಟಿಲ್ಯನ ಮತವು ಅನ್ಯೋನ್ಯವಿಗ್ರಹವನ್ನು ಅನುಸರಿಸಿ - ಸಂಧಿಯಾನ, ಆಸನ, ದ್ವೈಧೀಭಾವ, ಸಮಾಶ್ರಯ ಇವಿಷ್ಟರ ಪ್ರಯೋಗಕ್ಕೂ ಅವಕಾಶವಿರುವುದರಿಂದ ಷಾಡ್ಗುಣ್ಯವೆಂಬುದೇ ಯುಕ್ತವೆಂದು ಹೇಳಿ ಸರ್ಗವನ್ನು ಉಪಸಂಹರಿಸಿರುವನು.—

೧೨ ನೆ ಸರ್ಗ

(ಮಂತ್ರವಿಚಾರ)

ಷಾಡ್ಗುಣ್ಯದಲ್ಲಿ ನಿಶ್ಚಿತಮತಿಯಾದ ಗುಟ್ಟಾದ ನಡೆಸಳಿಕೆಯುಳ್ಳ ಮಂತ್ರಜ್ಞನಾದ ವಿಜಿಗೀಷು ರಾಜನು ರಹಸ್ಯವಿಷಯವನ್ನು ಮಂತ್ರಜ್ಞರಾದ ಮಂತ್ರಿಗಳೊಡನೆ ಆಲೋಚಿಸಬೇಕು- (ಮಂತ್ರ ಶಬ್ದಕ್ಕೆ ಗುಟ್ಟಾಗಿ ಮಾತಾಡುವಿಕೆ ಎಂದು ಶಬ್ದಾರ್ಥ) ಮಂತ್ರಾರ್ಥದಲ್ಲಿ ಕುಶಲನಾದ ರಾಜನು ಸುಖವನ್ನೂ ಐಶ್ವರ್ಯವನ್ನೂ ಅನುಭವಿಸುವನು. ಇದಕ್ಕೆ ವಿಪರೀತವಾಗಿ ಸ್ವತಂತ್ರನಾಗಿ ಕಾರು ಬಾರುಮಾಡುವ ರಾಜನು ವಿದ್ವಾಂಸರಿಂದ ತಿರಸ್ಕರಿಸಲ್ಪಡುವನು, ಯಜ್ಞವನ್ನು ರಾಕ್ಷಸರು ಹಾಳುಮಾಡುವಂತೆ ದುರ್ಮಂತ್ರವುಳ್ಳ ಈ ರಾಜನನ್ನು ಹಗೆಗಳು ಎಲ್ಲಾ ಕಡೆಗಳಿಂದಲೂ ನುಗ್ಗಿ ನಾಶಮಾಡುವರು. ಆದುದರಿಂದ ರಾಜನು ಯಾವಾಗಲೂ ಮಂತ್ರಪರನಾಗಿಯೇ ಇರಬೇಕು.

ಇಲ್ಲಿ ರಾಜನು ವಿದ್ವಾಂಸನಾದ ಆಪ್ತನೊಡನೆ ಎಲ್ಲಾ ಕಾರ್ಯಗಳನ್ನೂ ಆಲೋಚಿಸಬೇಕು. ಮಂತ್ರನಿಶ್ಚಯದಲ್ಲಿ ಆಪ್ತನಾಗಿದ್ದರೂ ಮೂರ್ಖ (ಅಪಂಡಿತ) ನಾದವನನ್ನು ವಿದ್ವಾಂಸನಾಗಿದ್ದರೂ ಅನಾಪ್ತನಾಗಿರುವನನನ್ನು ಬಿಟ್ಟುಬಿಡಬೇಕು. ಸನ್ಮಾರ್ಗದಲ್ಲಿ ವರ್ತಿಸುತ್ತಾ ಕಾರ್ಯಗಳನ್ನು ಚೆನ್ನಾಗಿ ಸಾಧಿಸಿದ್ದ ಸತ್ಪುರುಷರಾದ ಹಿಂದಣ ರಾಜರಿಂದ ಆಚರಿಸಲ್ಪಟ್ಟ ಶಾಸ್ತ್ರೀಯವಾದ ದಾರಿಯನ್ನು ಬಿಡಕೂಡದು. ಶಾಸ್ತ್ರಮಾರ್ಗವನ್ನು ಮೀರಿ ಆತುರದಿಂದ ಕೆಲಸವನ್ನಾರಂಭಿಸುವವನು, ಶತ್ರುಗಳ ವಶನಾಗದೆ ಇರನು. ಪ್ರಭುಶಕ್ತಿ ಉತ್ಸಾಹಶಕ್ತಿಗಳಿಗಿಂತ ಮಂತ್ರಶಕ್ತಿಯು ತುಂಬಾ ಪ್ರಶಸ್ತವಾದುದು - ಹಿಂದೆ ಪ್ರಭೂತ್ಸಾಹಶಕ್ತಿಗಳಿಂದ ಕೂಡಿದ ಶುಕ್ರಾಚಾರ್ಯರು (ದೈತ್ಯಗುರು) ಬೃಹಸ್ಪತಿ (ದೇವಗುರು) ಯಿಂದ ಸೋಲಿಸಲ್ಪಟ್ಟರು. ಸಾಮಾದ್ಯುಪಾಯಗಳಿಂದ (ಕಾರ್ಯದ) ಅಪಾಯವನ್ನು ದೂರವಾಗಿ ವಿಚಾರಮಾಡುವ (ದೂರದರ್ಶಿ) ಪಂಡಿತರಿಂದ ಚಿಂತಿಸಲ್ಪಟ್ಟ ಕಾರ್ಯಗಳೆಲ್ಲವೂ ಸಫಲಗಳೇ ಆಗುವುವು (ವ್ಯರ್ಥವಾಗವು), ಸಾಮಾದ್ಯುಪಾಯಗಳನ್ನು ಹಗೆಗಳಲ್ಲಿ ಮೊದಲು ಕ್ರಮವಾಗಿ ಉಪಯೋಗಿಸಿ ಬಳಿಕ ಕಾಲವನ್ನು ನಿರೀಕ್ಷಿಸಿ ಹಗೆಯಮೇಲೆ ಬೀಳಬೇಕು. ಕೇವಲ ಪರಾಕ್ರಮವನ್ನೇ ಉಪಯೋಗಿಸಿ ಸಹಸಾ ಹಗೆಗಳಮೇಲೆ ಬಿದ್ದರೆ ಸೋಲನ್ನು ಪಡೆದು ಕೊನೆಯಲ್ಲಿ ಪಶ್ಚಾತ್ತಾಪ ಪಡುವನು. ತಿಳಿಯಾದ ಪ್ರಸನ್ನ, ಬುದ್ಧಿಶಕ್ತಿಯಿಂದ ಈಕಾರ್ಯವು ಮಾಡಲು ಶಕ್ಯ, ಈ ಕಾರ್ಯವು ಅಶಕ್ಯ - ಎಂಬ ನಿರ್ಣಯಕ್ಕೆ ಬರಬೇಕು. ಹಾಗಲ್ಲದೆ ದಂತಗಳಿಂದ ಕಾಡುಗಲ್ಲನ್ನು ತಾಕುವ ಆನೆಗೆ ದಂತ ಮುರಿಯುವುದು ಮಾತ್ರವೇ ಫಲವಾಗುವುದಲ್ಲವೇ? ಯಾವ ರಾಜನು ಚೆನ್ನಾಗಿ ಆಲೋಚಿಸಿ ನಡೆಸಿದ ಕಾರ್ಯವು ಒಂದೇವೇಳೆ ಕೆಟ್ಟುಹೋದರೆ ಅದು ಅವನ ತಪ್ಪಲ್ಲ- ಅವನ ಸರಿಯಾದ ಪುರುಷ ಪ್ರಯತ್ನವು ದೈವದಿಂದ ನಾಶಮಾಡಲ್ಪಟ್ಟಿರುವುದು (ಮನುಷ್ಯ ಪ್ರಯತ್ನವು ಕೆಲವುವೇಳೆ ದೈವದಿಂದ ವಿಫಲವಾಗಬಹುದು- ಅದು ಮನುಷ್ಯನ ತಪ್ಪಲ್ಲ -ಎಂದು

ಭಾವವು). ತನ್ನ ಶಕ್ತಿಯನ್ನೂ ಪರನ (ಹಗೆಯ) ಶಕ್ತಿಯನ್ನೂ ಚೆನ್ನಾಗಿ ತಿಳಿದುಕೊಂಡು ಧೀರನಾದನನು ಹಗೆಯಮೇಲೆ ಬೀಳಬೇಕು - ಇದೇ ಆತ್ಮಪರವೇದನವೆಂಬ ಶಾಸ್ತ್ರವಿಜ್ಞಾನವು. ಬುದ್ಧಿಶಾಲಿಯಾದವನು ಫಲವಿಲ್ಲದ, ತುಂಬಾ ಕ್ಲೇಶವನ್ನು ಕೊಡುವ, ಫಲದಲ್ಲಿ ಸಂಶಯವುಳ್ಳ ದೊಡ್ಡವರ ಹಗೆತನವನ್ನು ಸಂಪಾದಿಸಿಕೊಳ್ಳುವ ಕಾರ್ಯವನ್ನು ಆರಂಭಿಸಕೂಡದು- ತಾತ್ಕಾಲಿಕವಾಗಿಯೂ, ಮುಂದಣ ಕಾಲದಲ್ಲಿಯೂ ಮಂಗಳಕರವಾಗಿ ಪರಿಶುದ್ಧವಾಗಿರುವ ಮತ್ತುರಕ್ಷಣಾದಿಕ್ರಮಗಳನ್ನನುವರ್ತಿಸಿರುವ ಇಹಪರಲೋಕಗಳೆರಡರಲ್ಲಿಯೂ ಹಿತಕರವಾಗಿರುವ ಕಾರ್ಯವು ಕ್ಷತ್ರಿಯನಿಗೆ (ಪ್ರಶಸ್ತ) ಉಚಿತವಾದುದೆಂದು ಸತ್ಪುರುಷರು ಹೇಳಿರುವರು. ತಾತ್ಕಾಲಿಕವಾಗಿ ಕಹಿಯಾಗಿರುವುದಾದರೂ (ಕಷ್ಟಸಾಧ್ಯ) ಮುಂದೆ ಹಿತವನ್ನುಂಟುಮಾಡುವ ಇತರ ನಿಂದೆಗೆ ಗುರಿಯಾಗದಿರುವ ಕಾರ್ಯವನ್ನು ಆರಂಭಿಸಬೇಕು. ಯಾವ ಸುಖವು ಮೊದಲಲ್ಲಿ (ಆರಂಭ) ವಿಷದಂತೆಯೂ ಮುಂದೆ ಅಮೃತದಂತೆಯೂ ಇರುವುದೋ ಆ ಸುಖವು ಸಾತ್ವಿಕಸುಖವೆನಿಸಿಕೊಳ್ಳುವುದು. ಅಂತಹ ತನ್ನ ಬುದ್ಧಿಯ ಪ್ರಸನ್ನತೆಯಿಂದ ಹುಟ್ಟಿದ, ಚೆನ್ನಾಗಿ ವಿಚಾರಮಾಡಿ ಆರಂಭಿಸಿದ ಯಾವ ಕೆಲಸವಾದರೂ ಸರ್ವದಾ ಫಲವನ್ನು ಕೊಡುವುದರಿಂದ ಶ್ರೇಯಸ್ಕರವಾಗಿಯೇ ಇರುವುದು. ಕೆಲವು ಸಂದರ್ಭ ಸಿಂಹವೃತ್ತಿಯಿಂದ ಅರಂಭಿಸಿದ ಕಾರ್ಯವೂ ಕೂಡ ಫಲಕಾರಿಯಾಗುವುದು- ಸಂಪತ್ತನ್ನು ಆರ್ಜಿಸಲು ದುಷ್ಕರದಿಂದ ಕಾರ್ಯವನ್ನು ಸಾಧಿಸಲು ಸಹಸಾ ಪ್ರವರ್ತಿಸಕೂಡದು. ಮದವೇರಿದ ಆನೆಯನ್ನು ಉಪಾಯದಿಂದಲೂ ಉಪದೇಶದಿಂದಲೂ ವಶಪಡಿಸಿಕೊಳ್ಳಬೇಕಲ್ಲವೆ ?

ಅಶಕ್ಯವಾದ ಕಾರ್ಯವನ್ನು ಮಾಡಲಾರಂಭಿಸಿದವರಿಗೆ ಕ್ಲೇಶವಲ್ಲದೆ ಬೇರೆ ಫಲವೆಲ್ಲಿಂದ ಬಂದೀತು. ಆಕಾಶವನ್ನಾಶ್ವಾದಿಸುವವನಿಗೆ ಕಚಗ್ರಹವು ಎಲ್ಲಿಂದ ಬಂದೀತು. ದೀಪದ ಹುಳುವಿನಂತೆ ಉರಿಯುವ ಬೆಂಕಿಯಲ್ಲಿ ಬೀಳಕೂಡದು. ಯಾವುದು ಮುಟ್ಟಲು ಯೋಗ್ಯವೋ ಅಂತಹವನ್ನೇ ಮುಟ್ಟಬೇಕು (ಬೆಂಕಿಯು ಮುಟ್ಟುವ ವಸ್ತುವಲ್ಲವೆಂದು ಭಾವ). ಏಕೆಂದರೆ ದೀಪದಮೇಲೆ ಬೀಳುವ ದೀಪದ ಹುಳಕ್ಕೆ(ಶಲಭ), ಮರಣವಲ್ಲದೆ ಬೇರೇನು ದೊರಕೀತು– ದುಃಖಲಭ್ಯಗಳಾದ ವಸ್ತುಗಳಲ್ಲಿ ಮೋಹದಿಂದ ಅವನ್ನು ಪಡೆಯಲು ಪ್ರಯತ್ನಿಸುವವನು ಕಾರ್ಯನಾಶದಿಂದ ಪರಿತಾಪವನ್ನು ಪಡೆಯುವನು. ಒಳ್ಳೆಯ ತಿಳಿವಿನಿಂದ ಕೂಡಿದ ಬುದ್ಧಿಯಿಂದ ಸರಿಯಾಗಿ ಆಲೋಚಿಸಿ ಸಂಪತ್ತನ್ನು ಕ್ರಮವಾಗಿ ಪಡೆಯಬೇಕು. ಎತ್ತರವಾದ ಬೆಟ್ಟವನ್ನು ಹತ್ತುವವನು ತಪ್ಪುಹೆಜ್ಜೆಯನ್ನಿಡದೆ ಎಚ್ಚರಿಕೆಯಿಂದ ಹೆಜ್ಜೆಯನ್ನಿಟ್ಟು ನಡೆದರೆ ಸುಖವಾಗಿ ಬೆಟ್ಟದ ತುದಿಯನ್ನು ತಲಪುವನು. ರಾಜಪದವಿಯು ಎಲ್ಲರಿಂದಲೂ ಹತ್ತಲು ಸಾಧ್ಯವಿಲ್ಲದುದೂ, ಎಲ್ಲಾ ಜನರಿಂದಲೂ ನಮಸ್ಕರಿಸಲ್ಪಡತಕ್ಕುದೂ ಆಗಿರುವುದು. ಇಂತಹ ರಾಜಪದವಿಯಲ್ಲಿ ಸ್ವಲ್ಪ ತಪ್ಪುಕಾರ್ಯ ನಡೆದರೂ ಬ್ರಾಹ್ಮಣ್ಯದಂತೆ ಬೇಗನೆ ಕೆಟ್ಟುಹೋಗುವುದು. ನೀತಿಶಾಸ್ತ್ರದಲ್ಲಿ ಹೇಳಿರುವ ಕ್ರಮದಲ್ಲಿ ಆರಂಭಿಸಲ್ಪಟ್ಟ ಕಾರ್ಯವನ್ನಾದರೂ ಆಲೋಚಿಸಿಯೇ ಮಾಡಬೇಕು. ಇಂತಹ ಕಾರ್ಯಗಳು ಮನೋಹಾರಿಯಾದ ತೋಟದಂತೆ ಬೇಗನೆ ಫಲಕೊಡುವುವು. ಚೆನ್ನಾಗಿ ಆಲೋಚಿಸಿ ಆರಂಭಿಸಿದ ಕಾರ್ಯವು ಒಂದು ವೇಳೆ ನಿಷ್ಫಲವಾದರೂ ವಿಚಾರಮಾಡದೆ ಆರಂಭಿಸಿ ವಿಫಲವಾದ ಕಾರ್ಯದಷ್ಟು ಸಂತಾಪವನ್ನುಂಟುಮಾಡುವುದಿಲ್ಲ. ಬುದ್ಧಿಶಾಲಿಯಾದವನಿಗೆ ಅಸಾಧ್ಯವಾದ ಕಾರ್ಯವೊಂದೂ ಇಲ್ಲ. ತುಂಬಾ ಗಟ್ಟಿಯಾದ ಕಬ್ಬಿಣವನ್ನು ಕರಗಿಸಿ ದ್ರವರೂಪಕ್ಕೆ ತರಬಹುದಲ್ಲವೆ:— ದಪ್ಪನಾದ ಉಕ್ಕಿನ ಗಟ್ಟಿಯು ಯಾವ ವಸ್ತುವನ್ನು ಕತ್ತರಿಸಿ ತುಂಡುಮಾಡಲಾರದು. ಅದೇ ಉಕ್ಕಿನ ಹರಿತವಾದ ಚಿಕ್ಕ ಉಳಿಯು ಎಂತಹ ಕಲ್ಲನ್ನಾದರೂ ಸೀಳಬಹುದು. ಸ್ವಾಭಾವಿಕವಾಗಿ ಬೆಂಕಿಯನ್ನು ಆರಿ

ಸುವ ನೀರನ್ನು ಉಪಾಯದಿಂದ ಪಾತ್ರೆಯಲ್ಲಿಟ್ಟು ಅದೇ ಬೆಂಕಿಯಿಂದ ಶೋಷಿಸಬಹುದಲ್ಲವೆ. ವಿಷದೊಡಗೂಡಿದ ಆಹಾರದ ಬಲವು ವಿಷವೇ ಆಗಿ ತಿಂದವನ ಸಾವಿಗೆ ಕಾರಣವಾಗುವುದು. ಅದೇ ವಿಷವು ಬೇರೆ ಪದಾರ್ಥದೊಡನೆ ಸೇರಿ ಔಷಧವಾಗಿ ತಿಂದವನ ರೋಗವನ್ನು ಗುಣಪಡಿಸುವುದು- ತಿಳಿಯದಿರುವ ವಿಷಯವನ್ನು ತಿಳಿದುಕೊಳ್ಳುವುದು, ತಿಳಿದ ವಿಷಯವನ್ನು ನಿಶ್ಚಯಿಸುವುದು ಮತ್ತು ವಿದ್ವಾಂಸರ ಶಿಕ್ಷೆಯನ್ನು ಪಡೆಯುವುದು, ಇವುಗಳನ್ನುಳ್ಳವನು ಯಾವನನ್ನೂ ಅವಮಾನಗೊಳಿಸುವುದಿಲ್ಲ—

(ಮಂತ್ರಿಗಳ ಸಂಖ್ಯೆ)

ರಾಜನು ಮೂವರು ಅಥವಾ ನಾಲ್ವರು ಮಂತ್ರಿಗಳೊಡನೆ ಆಲೋಚನೆಯನ್ನು ನಡೆಸಬೇಕು. ಯಾರ ಸಲಹೆಯ ಮಾತು ಉತ್ತಮವಾದುದೋ ಅದನ್ನು ಗ್ರಹಿಸಲು ಎಲ್ಲ ಮಂತ್ರಿಗಳ ಮಾತನ್ನೂ ಕ್ರಮವಾಗಿ ಕೇಳಬೇಕು. ಆ ಮಂತ್ರಿಗಳಲ್ಲಿ ಒಬ್ಬನನ್ನೂ ಅವಮಾನ ಮಾಡಕೂಡದು. ಎಲ್ಲರ ಅಭಿಪ್ರಾಯವನ್ನೂ ಕೇಳಬೇಕು. ಹುಡುಗನ ಮಾತಾದರೂ, ಅದು ಪ್ರಯೋಜನಕಾರಿಯಾಗಿದ್ದರೆ ಗ್ರಹಿಸಬೇಕಾಗಿರುವಲ್ಲಿ, ಪಂಡಿತನಾದವನ ಮಾತನ್ನು ತಿರಸ್ಕರಿಸದೆ ಗ್ರಹಿಸಬೇಕು, ಎಂದು ಮತ್ತೆ ಹೇಳಬೇಕೇ ?—

ತನಗೆ ಅಲಬ್ಧವಾದುದನ್ನು ಪಡೆಯುವುದಕ್ಕಾಗಿಯೂ, ಇನ್ನೊಬ್ಬನಿಂದ ಅಪಹರಿಸಲ್ಪಡುತ್ತಿರುವ ತನ್ನದನ್ನು ಕಾಪಾಡಿಕೊಳ್ಳುವುದಕ್ಕಾಗಿಯೂ, ಇವಿಷ್ಟೇ ವಿಜಿಗೀಷುವಿನ ವೀರ್ಯಕ್ಕೆ ವ್ಯಾಯಾಮಭೂಮಿಗಳಾಗಿವೆ— ಜಯಶೀಲನಾಗಿ ಕೃತಕೃತ್ಯನಾಗಿರುವ ರಾಜನ ಸಂಪತ್ತುಗಳು ಭೋಗಕ್ಕೆ ಉಪಯೋಗಿಸಲ್ಪಡುವುವು. ಜಯವನ್ನು ಪಡೆಯದವನಿಗೆ ಆ ಸಂಪತ್ತುಗಳೇ ವಿಡಂಬನೆಗಳಾಗಿ ಪರಿಣಮಿಸುವುವು—

ಮದದಿಂದ ಉದ್ಧತನಾಗಿ ಕೆಲಸವನ್ನು ನಡೆಸುವ ಕ್ರಮವನ್ನು ತಿಳಿಯದೆ ಯಾವ ರಾಜನು ಮಂತ್ರಿಗಳ(ಮಂತ್ರ) ಸಲಹೆಗಳನ್ನು ಮೀರುವನೋ ಅಂತವನನ್ನು ಬಲುಬೇಗನೆ ಶತ್ರುಗಳು ಆಕ್ರಮಿಸುವರು. ಮಂತ್ರದ ಮೂಲವನ್ನು ಗೋಪ್ಯವಾಗಿರಿಸ (ಕಾಪಾಡ) ಬೇಕು. ಈ ಮಂತ್ರ ಗೋಪನವೇ ರಾಜರಿಗೆ ಮೂಲವು. ಆ ಮಂತ್ರವು ಗುಟ್ಟಾಗದೆ ರಟ್ಟಾದರೆ ಕೇಡು ಒದಗುವುದು. ಗುಟ್ಟಾಗಿಡಲ್ಪಟ್ಟರೆ ರಕ್ಷಣೆಯನ್ನು ಕೊಡುವುದು. ಸಿಂಹವು ಹೇಗೆ ಅಡಗಿದ್ದು ಮೃಗಗಳು ಹತ್ತಿರ ಬಂದ ಕಾಲದಲ್ಲಿ ಎದ್ದು ಮೇಲೆಬಿದ್ದು ಸಂಹರಿಸುವಂತೆ ರಾಜನು ಮಂತ್ರಿಗಳೊಡನೆ ಆಲೋಚಿಸಿದ ಜಯಸಾಧನ ಕಾರ್ಯವನ್ನು ಗುಟ್ಟಾಗಿ ಅಡಗಿಸಿಕೊಂಡಿದ್ದು ಕಾಲದಲ್ಲಿ ಎದ್ದು ಶತ್ರುವಿನ ಮೇಲೆ ಬಿದ್ದು ಜಯವನ್ನು ಪಡೆಯಬೇಕು. ಇವನ ಕಾರ್ಯದ ಕ್ರಮವನ್ನು, ಇತರರು ಕೆಲಸವಾದ ಮೇಲೆಯೇ ತಿಳಿಯಬೇಕಲ್ಲದೆ ಮೊದಲು ತಿಳಿಯಲು ಅವಕಾಶವೇ ಇರಕೂಡದು—ಫಲಕಾರಿಯಾಗುವ ಮಂತ್ರವು ಅನುಬಂಧಿಗಳಿಗೂ ಫಲಿಸುವುದಕ್ಕೆ ಮೊದಲು ತಿಳಿಯದಿರಬೇಕು. ದೀರ್ಘಕಾಲ ವಿಳಂಬವಾಗಕೂಡದು, ಹೆಚ್ಚು ಪ್ರಯಾಸವಿರಕೂಡದು—ಇಂತಹ ಮಂತ್ರವೇ ಪ್ರಶಸ್ತ್ಯವಾದುದು.

ಮಂತ್ರಪಂಚಾಂಗಂ (ಮಂತ್ರಾಲೋಚನೆಯ ಐದು ಅಂಗಗಳು ಎಂದರೆ ಅಂಶಗಳು) ಸಹಾಯಗಳು, ಸಾಧನೋಪಾಯಗಳು, ದೇಶಕಾಲಗಳ ವಿಭಾಗ (ಔಚಿತ್ಯ–ಯಾವ ದೇಶದಲ್ಲಿ ಯಾವ ಕಾಲದಲ್ಲಿ ಎಂತಹ ಕೆಲಸಮಾಡಬೇಕೆಂಬ ವಿವೇಚನಾಶಕ್ತಿ) ಕಾರ್ಯವಿಪತ್ತಿಗೆ ಪ್ರತೀಕಾರ ಕಾರ್ಯಸಿದ್ಧಿ ಇವು ಮಂತ್ರದ ಪಂಚಾಂಗಗಳು—ಶತ್ರುಜಯಕ್ಕೆ ಆರಂಭಿಸಿದ ಕಾರ್ಯವನ್ನು ಮುಂದುವರಿಸಬೇಕು. ಆರಂಭಿಸದಿರುವ ಕಾರ್ಯವನ್ನು ಆರಂಭಿಸಬೇಕು, ನಡೆಸುತ್ತಿರುವ ಕಾರ್ಯವನ್ನು

ವಿಶೇಷವಾಗಿ ವೃದ್ಧಿಯಾಗುವಂತೆ ಮಾಡಬೇಕು. ಮಂತ್ರಾಲೋಚನೆಯನ್ನು ತಿಳಿದವರು ಕಾರ್ಯದ್ವಾರದಲ್ಲಿ ಅನೇಕಪ್ರಕಾರವಾಗಿ ಪ್ರಚಾರಪಡಿಸಬೇಕು. ಮನಸ್ಸಿಗೆ ಯಾವುದು ಒಪ್ಪಿಗೆಯಾಗುವುದೋ ಅದರಿಂದ ಒಳ್ಳೆಯ ಪರಿಣಾಮವುಂಟಾಗುವುದು. ಯಾವ ಮಂತ್ರದಲ್ಲಿ ಮಂತ್ರಿಗಳ ಮನಸ್ಸಿನೊಡನೆ ಸಂವಾದವು ಬರುವುದೋ, ಮನಸ್ಸಿನಲ್ಲಿ ಶಂಕೆಯುಂಟಾಗುವುದಿಲ್ಲವೋ ಯಾವುದನ್ನು ಸಾಧುಗಳು ನಿಂದಿಸುವುದಿಲ್ಲವೋ ಅಂತಹ ಮಾಡಲಿಚ್ಛಿಸುವ ಕಾರ್ಯವು ಫಲಕಾರಿಯಾಗುವುದು–ಮಂತ್ರಿಗಳ ಸಲಹೆಗಳನ್ನು ತೆಗೆದುಕೊಂಡರೂ ರಾಜನು ಮತ್ತೆ ತನ್ನ ಮನಸ್ಸಿನಲ್ಲಿ ಆ ಸಲಹೆಗಳ ಯುಕ್ತಾಯುಕ್ತತೆಗಳನ್ನು ವಿಮರ್ಶಿಸಬೇಕು; ತನ್ನ ಸ್ವಾರ್ಥವು ಕೆಡದಂತಹ ಮಂತ್ರಾಲೋಚನೆಯನ್ನು ಸ್ವೀಕರಿಸಬೇಕು. ಮಂತ್ರಿಗಳು ಸ್ವಪ್ರಯೋಜನಕ್ಕಾಗಿ ಬಹುಕಾಲ ಯುದ್ಧವನ್ನು ಮುಂದುವರಿಸಲಿಚ್ಛಿಸಿ ಸಲಹೆ ಕೊಡುವರು, ಯುದ್ಧವು ದೀರ್ಘಕಾಲ ನಡೆಯುತ್ತಿದ್ದರೆ ಮಂತ್ರಿಗಳಿಗೆ ಸ್ವಾರ್ಥಲಾಭವು ಉಂಟಾಗುವುದು — ಮನಸ್ಸಿನ ಪ್ರಸನ್ನತೆ (ಶಾಂತತೆ) ಶ್ರದ್ಧೆ (ಅತ್ಯಾಸಕ್ತಿ-ನಂಬಿಕೆ) ಇಂದ್ರಿಯಗಳ ಪಾಟವ, ಸಹಾಯ ಒದಗುವಿಕೆ, ಈ ಐದರ ಸಂಪತ್ತಿಯು ಕಾರ್ಯಸಿದ್ಧಿಯ ಲಕ್ಷಣವು – ಅಲ್ಪವಾಗಿ ಆರಂಭಿಸೋಣ. ವಿಘ್ನಗಳು ಸಂಭವಿಸದಿರುವಿಕೆ, ಮೇಲಿಂದ ಮೇಲೆ ಸಾಧನಗಳ ಒದಗುವಿಕೆ ಇವು ಮೊದಲೇ ಮುಂದೆ ಕಾರ್ಯವು ಸಿದ್ಧಿಸುವುದೆಂಬುದನ್ನು ಸೂಚಿಸುವುವು. ಮಂತ್ರವನ್ನು (ಕಾರ್ಯಾಲೋಚನೆಯನ್ನು) ಬಾರಿಬಾರಿಗೂ ಮನನಮಾಡಿ ಧರಿಸಬೇಕು–ಪ್ರಯತ್ನವನ್ನು ಮಾಡಬೇಕು; ಪ್ರಯತ್ನಮಾಡದ ಮಂತ್ರಧಾರಣವು ಕಾರ್ಯವನ್ನು ಬೆಂಕಿಯಂತೆ ದಹಿಸುವುದು–ಮಂತ್ರ ಆಲೋಚನೆ ವಿಚಾರದಲ್ಲೇ ತತ್ಪರನಾಗಿದ್ದುಕೊಂಡು ಆಪ್ತರಮೂಲಕ ಮಂತ್ರವನ್ನು ರಕ್ಷಿಸಬೇಕು. ರಕ್ಷಿಸಲ್ಪಡದಿರುವ ಮಂತ್ರವು ಆಪ್ತಪರಂಪರೆಯಿಂದ ಭಿನ್ನವಾಗಿ ಹೋದೀತು. ಮದ (ಹೆಮ್ಮೆ ಅಥವಾ ಸುರಾಪಾನಗಳಿಂದಾದ ಮತ್ತು) ಪ್ರಮಾದ (ಮೈಮರೆತಿರುವಿಕೆ-ಔದಾಸೀನ್ಯ) ಕೋಪ, ನಿದ್ರೆಯಲ್ಲಿ ಕನವರಿಸಿಕೊಳ್ಳುವುದು, ಇವು ಗುಪ್ತವಾಗಿದ್ದ ಮಂತ್ರವನ್ನು ಹೊರಗೆಡಹುವುವು. ಹೀಗೆಯೇ ಹೆಂಗಸರು, ಗಿಳಿ ಗೊರವಂಕ ಮೊದಲಾದ ಪಕ್ಷಿಗಳೂ ಮಂತ್ರಭೇದಕಗಳು — ಕಂಭಗಳಿಲ್ಲದಿರುವ (ಏಕೆಂದರೆ ಅನುಚರರು ಅಥವಾ ಹಗೆಯ ಗುಪ್ತಚಾರರು ಕಂಭಗಳ ಮರೆಯಲ್ಲಿ ಮರೆಸಿಕೊಂಡಿದ್ದು ಕೇಳುವ ಸಂಭವವುಂಟು) ಕಿಟಕಿಗಳಿಲ್ಲದಿರುವ (ಕಿಟಕಿಗಳ ಮೂಲಕ ಮಂತ್ರದ ಮಾತುಗಳು ಹೊರಗೆ ಹರಡಬಹುದು) ಭಿತ್ಯಂತರಗಳು (ಗೋಡೆಗಳೆಂಬ ವ್ಯವಧಾನವು ಇಲ್ಲದಿರುವ) ಉಪ್ಪರಿಗೆ ಮನೆಯ ತುದಿಯ ಕೋಣೆಯನ್ನಾಗಲಿ, ಜನಸಂಚಾರ ಶೂನ್ಯವಾದ ಗಹನವಾದ ಕಾಡಿನಲ್ಲಾಗಲಿ, ಮಂತ್ರವನ್ನು ನಡೆಸಬೇಕು, ಮತ್ತು ಛಿದ್ರವಿಲ್ಲದಿರುವ (ಬಿರುಕು ಗವಾಕ್ಷ ಮೊದಲಾದುವಿಲ್ಲದ ಗೋಡೆಗಳುಳ್ಳ) ಜನಸಂಚಾರವಿಲ್ಲದ, ಜನಗಳು ಯಾವಾಗಲೂ ಸಂಚರಿಸುವುದಕ್ಕೆ ಅವಕಾಶವಿಲ್ಲದಿರುವ, ಗಾಳಿಯು ಬೀಸದಿರುವ, ರಹಸ್ಯಗೃಹದಲ್ಲಾಗಲಿ ಮಂತ್ರವನ್ನು ನಡೆಸಬೇಕು.—

ಮಂತ್ರಿಮಂಡಲ ಭೇದವು

ಮನುವು ೧೨ ಮಂದಿ ಮಂತ್ರಿಗಳಿರಬೇಕು ಎಂದು ಹೇಳಿರುವನು. ಬೃಹಸ್ಪತಿಯು ೧೬ಮಂದಿ ಇರಬೇಕೆನ್ನುವನು. ಶುಕ್ರಾಚಾರ್ಯನು ೨೦ ಮಂದಿಗಳಿರಬೇಕೆನ್ನುವನು, ಇನ್ನು ಕೆಲವರು ಎಷ್ಟು ಮಂದಿಗಳು ಇರಲು ಸಾಧ್ಯವೋ ಅಷ್ಟು ಮಂದಿಗಳಿರಬಹುದೆಂದೂ ಹೇಳುವರು – ಇಂಥ ಮಂತ್ರಿಗಳೊಡನೆ ರಾಜನು ತನ್ನ ಯುದ್ಧವೃದ್ಧಿಗಾಗಿ ಮನಸ್ಸಿಟ್ಟು ಮಂತ್ರವನ್ನು ನಡಸಬೇಕು—ಒಂದು, ಮೂರು, ಐದು, ಏಳು ಮೊದಲಾದ ಬೆಸಸಂಖ್ಯೆಯ ಮಂತ್ರಿಗಳೊಡನೆ ಆಲೋಚಿಸಬೇಕೆಂದು

ಕೂನಪವಂತಕ ಎಂಬ ನೀತ್ಯಾಚಾರ್ಯನು ಹೇಳಿರುವನು. ಒಬ್ಬೊಬ್ಬನೊಡನೆ ಬೇರೆಬೇರೆಯಾಗಿ ಮತ್ತೆಮತ್ತೆ ಕಾರ್ಯಾಲೋಚನೆಯನ್ನು ಮಾಡಿ ತನ್ನ ಹಿತವನ್ನಪೇಕ್ಷಿಸುವ ರಾಜನು ಶಾಸ್ತ್ರಸಮ್ಮತವಾಗುವಂತೆ ತನ್ನ ಒಳ್ಳೆಯ ಬುದ್ಧಿಯಿಂದ ಕಾರ್ಯವನ್ನು ಚೆನ್ನಾಗಿ ನಡೆಸಬೇಕು. ಹೀಗೆ ಆಲೋಚಿಸಿ ನಿಶ್ಚಿತವಾದ ಕಾರ್ಯವನ್ನು ನಡೆಸಲು ಸಾವಕಾಶ ಮಾಡಕೂಡದು. ಹಾಗೆ ಸಾವಕಾಶವಾದರೆ ಮತ್ತೆ ಮೊದಲಿನಂತೆಯೇ ಸಮಾಲೋಚನೆ ನಡೆಸಬೇಕು- ಬುದ್ಧಿವಂತನು ಯಾವ ಕಾರ್ಯವನ್ನು ಯಾವಾಗ ಮಾಡಬೇಕೋ ಆಗಲೇ ಮಾಡಬೇಕು, ಕಾರ್ಯಕಾಲವನ್ನು ಮೀರಕೂಡದು, ಸಕಾಲದಲ್ಲಿ ಮಾಡಿದ ಕಾರ್ಯವು ರಸವತ್ತಾದ ಫಲವನ್ನು ಕೊಡುವುದು. ಈ ರೀತಿಯಲ್ಲಿ ಕಾಲ, ದೇಶ, ಸಹಾಯಗಳ ಬಲಾಬಲಗಳನ್ನು ತಿಳಿದು ಕೆಲಸವನ್ನು ಸಾಧಿಸಬೇಕು. ಹಗೆಗಳ ಬಲಾಬಲಗಳನ್ನು ತಿಳಿದುಕೊಳ್ಳದೆ ಅಹಂಕಾರದಿಂದ ತಾನು ಮಹಾ ಪರಾಕ್ರಮಿಯೆಂದು ಚಪಲಚಿತ್ತದಿಂದ ರಾಜನು (ವಿಜಿಗೀಷು) ಹಠಾತ್ತಾಗಿ ಯುದ್ಧವನ್ನಾರಂಭಿಸಿ ಕೇಡನ್ನು ಪಡೆಯುವನು. ಹಾವಾಡಿಗನು ಗರುಡಮಂತ್ರದಿಂದ ದುಷ್ಟಸರ್ಪವನ್ನು ವಶಮಾಡಿಕೊಳ್ಳುವಂತೆ ರಾಜನು ಒಳ್ಳೆಯ ಮಂತ್ರದಿಂದ ಪ್ರಯತ್ನಿಸಿದವನಾಗಿ ಹಗೆಯನ್ನು ವಶಪಡಿಸಿಕೊಳ್ಳಬೇಕು.

ಇಂತು ಮಂತ್ರವಿಚಾರಂ ದ್ವಾದಶಸರ್ಗಂ—

ದೂತಯೋಗಪ್ರಕರಣಂ

ಹೀಗೆ ಮಂತ್ರಸಮಾಲೋಚನೆ ಕ್ರಮವನ್ನು ತಿಳಿದ ರಾಜನು ಮಂತ್ರಿಗಳ ಮಂತ್ರವನ್ನು ಸಮ್ಮತಿಸಿ ಹಗೆಯರಸನಲ್ಲಿಗೆ ದೂತನನ್ನು ಕಳುಹಿಸಬೇಕು - ದೂತನು ಪ್ರೌಢನೂ, ಮೇಲಾದ ಸ್ಮೃತಿಶಕ್ತಿಯುಳ್ಳವನೂ,ವಾಗ್ಮಿ (ಸರಿಯಾದ ಮಾತನ್ನಾಡಬಲ್ಲವ), ಪ್ರಾಜ್ಞನು (ತುಂಬಾ ತಿಳಿವಳಿಕೆಯುಳ್ಳವನು), ಎಲ್ಲಾ ಶಾಸ್ತ್ರಗಳನ್ನು ಚೆನ್ನಾಗಿತಿಳಿದವನೂ, ಕೆಲಸಮಾಡಲನುಭವವುಳ್ಳವನೂ ಆಗಿರುವನು ರಾಜರಿಗೆ ದೂತನಾಗಲು ಅರ್ಹನು, ದೂತರಲ್ಲಿ ನಿಸೃಷ್ಟಾರ್ಥ — ಮಿತಾರ್ಥ — ಶಾಸನಹಾರಕ ಎಂದು ಮೂರುಬಗೆಯವರುಂಟು— ದೌತ್ಯಸಾಮರ್ಥ್ಯದಲ್ಲಿ ಒಬ್ಬರಿಗಿಂತ ಮತ್ತೊಬ್ಬರು ನಾಲ್ಕರಲ್ಲೊಂದು ಪಾಲಿನಷ್ಟು ಹೀನರಾಗಿರುವರು—

ದೂತನು ಸಂಪೂರ್ಣನಾದವನು ತನ್ನ ಸ್ವಾಮಿಯು ಯಾರಲ್ಲಿಗೆ ಹೋಗಬೇಕೆಂದು ಹೇಳುವನೊ ಅವನಲ್ಲಿಗೆ ಹೋಗಬೇಕು. ಹೋಗುವಾಗ ತಾನು ಆ ಗಂತವ್ಯನಲ್ಲಿ ಆಡುವ ಮಾತುಗಳ ಉಕ್ತಿ ಪ್ರತ್ಯುಕ್ತಿಗಳನ್ನು ಹೇಗೆ ಹೇಗೆ ಎಂದು ಮುಂದೆಮುಂದೆ ಯೋಚಿಸುತ್ತಾ ರ್ಥಿರಿಸಿಕೊಳ್ಳಬೇಕು. ಹಗೆಯರಸರ ಗಡಿರಕ್ಷಕರನ್ನೂ (ಅಂತಪಾಲ) ತನ್ನ ವಶಮಾಡಿಕೊಳ್ಳಬೇಕು. ಹಾಗೆಯೇ ಹಗೆಯ ಆಟವಿಕ (ಕಾಡಿನ ಬೇಡರ) ಪಡೆಯ ಒಡನೆ ಸ್ನೇಹವನ್ನು ಬೆಳೆಸಬೇಕು. ಹಗೆಗಳ ದಂಡಿರುವ ಗುಪ್ತಸ್ಥಳಗಳು, ಅವು ನಡೆಯುವ ದಾರಿ ಇವುಗಳನ್ನು ತನ್ನ ಬಲಸಿದ್ಧಿಗಾಗಿ ತಿಳಿದುಕೊಳ್ಳಬೇಕು. ಹಗೆಯು ರಾಷ್ಟ್ರದ ಸಾರವತ್ತೆ (ಧನಧಾನ್ಯ ಸಮೃದ್ಧಿ) ಯನ್ನು ತಿಳಿಯಬೇಕು. ಹಾಗೆಯೇ ಅದರ ದುರ್ಗ ಕೋಟೆ ಮೊದಲಾದ ರಕ್ಷಣವಿಧಾನವನ್ನು ತಿಳಿಯಬೇಕು. ಹಗೆಯ ಛಿದ್ರವನ್ನು, ಅವನ ಬೊಕ್ಕಸ ದಂಡು ಇವುಗಳ ಇಯತ್ತೆಯನ್ನು ತಿಳಿಯಬೇಕು— ಹಗೆಯರಸನು ತನ್ನನ್ನು ಸಂಹರಿಸಲು ಆಯುಧವನ್ನೆತ್ತಿದರೂ ತನ್ನ ಸ್ವಾಮಿಯು ಹೇಳಿಕಳುಹಿಸಿದ ಮಾತನ್ನು ಹೇಳಲು ದೂತನು ಹೆದರಕೂಡದು— ಆತನ ಮುಖನೇತ್ರಗಳ ಚೇಷ್ಟೆಗಳಿಂದ ತಮ್ಮಲ್ಲಿ ಆತನ ರಾಗಾಪರಾಗವನ್ನು ತಿಳಿದುಕೊಳ್ಳಬೇಕು – ಹಗೆಗೆ ತಿಳಿಯುವಂತೆ ದೂತನು ಅವನ ಸಭೆಯನ್ನು

ಪ್ರವೇಶಿಸಕೂಡದು. ಕಾಲವನ್ನು ನಿರೀಕ್ಷಿಸುತ್ತಿದ್ದು ತನ್ನ ಕಾರ್ಯಸಾಧನೆಗಾಗಿ ಹಗೆಯರಸನಿಂದ ಅನುಮತಿಯನ್ನು ಪಡೆದು ಅವನ ಸಭೆಗೆ ಪ್ರವೇಶಿಸಬೇಕು, ಹಗೆಯರಸರ ಅನಿಷ್ಟವಾದ ಮಾತುಗಳನ್ನು ಸಹಿಸಿಕೊಳ್ಳಬೇಕು. ಮದ್ಯಾದಿಪಾನಗಳಿಂದ ವೈಪರೆತ ದೂತನು ತನ್ನ ಮನಸ್ಸಿನಲ್ಲಿರುವ ರಹಸ್ಯ ವಿಷಯಗಳನ್ನು ಬಯಲುಮಾಡಬಹುದು, ಆದುದರಿಂದ ದೂತನಾದವನು ನಿತ್ಯವೂ ತಾನೊಬ್ಬನೇ ಒಂದೆಡೆಯಲ್ಲಿ ಮಲಗಬೇಕು. ಇತರರೊಡನೆ ಮಲಗಬಾರದು (ಕನವರಿಕೆಯಲ್ಲಿ ಮನಸ್ಸಿನ ಭಾವವು ಹೊರಬೀಳುವುದು ಸ್ವಭಾವಸಿದ್ಧ)ಆದುದರಿಂದ ದೂತನು ದ್ಯೂತವನ್ನೂ ಪಾನವನ್ನೂ ಬಿಡಬೇಕು. ಮೇಧಾವಿಯಾದ ದೂತನು ತನ್ನ ಕಾರ್ಯಸಾಧನೆಗಾಗಿ ಸಕಾಲದಲ್ಲಿ ಶತ್ರುವಿನಲ್ಲಿ ಹೋಗಬೇಕು. ವಿಲೋಭನಗಳಿಂದ ಕಾಲವನ್ನು ವ್ಯರ್ಥವಾಗಿ ಕಳೆಯಬಾರದು. ತನ್ನ ರಾಜನ ಮತ್ತು ರಾಜನ ಪಕ್ಷದವರ ಪ್ರಕೃತಿಗಳ (ರಾಜ್ಯಸಪ್ತಾಂಗ) ಕೊರತೆಯನ್ನು ಪ್ರಕಟಪಡಿಸಕೂಡದು – ಹಗೆಯನ್ನೂ ತನ್ನ ಒಡೆಯನನ್ನೂ, ಕುಲೀನನೆಂದೂ, ಒಳ್ಳೆಯ ಹೆಸರುಳ್ಳವನೆಂದೂ, ತುಂಬಾ ಹಣಗಾರನೆಂದೂ, ದೊಡ್ಡದೊಡ್ಡ ಕಾರ್ಯಗಳನ್ನು ಸಾಧಿಸುವವನೆಂದೂ ಇಬ್ಬರನ್ನೂ ಹೊಗಳಬೇಕು. ಮಧ್ಯಸ್ಥತಾಖ್ಯಾಪನಾರ್ಥವಾಗಿ ಉಭಯವೇತನಗಳಿಂದಲೂ ಸಂತೋಷ ಹೊಂದಿ ತನ್ನ ಕೃತ್ಯಪಕ್ಷವನ್ನೂ ತದ್ಭರ್ತೃವಿನ ಚೇಷ್ಟಿತವನ್ನೂ ತಿಳಿಯಬೇಕು. ದೂತನಾದವನು ವಿದ್ಯೆಯನ್ನಾಗಲಿ ಶಿಲ್ಪವನ್ನು ಕಲಿಯುವ ನೆಪದಿಂದ ಶತ್ರುರಾಜರ ದೇಶದಲ್ಲಿ ನೆಲಸಿ, ತನ್ನ ರಾಜನ ಅಭ್ಯುದಯಕ್ಕಾಗಿ ಹಗೆಯರಸಿನ ರಹಸ್ಯವನ್ನು ಭೇದಿಸಿ ತಿಳಿಯಬೇಕು. ತೀರ್ಥಕ್ಷೇತ್ರಗಳನ್ನು ಸಂಚರಿಸುವ ತಾಪಸವೇಷದಿಂದಲೂ,ಶಾಸ್ತ್ರಾಭ್ಯಾಸಮಾಡುವ ನೆಪದಿಂದಲೂ,ತನ್ನ ಸಹಚರರೊಡನೆ ಮಧ್ಯಶಾಲೆಗಳಲ್ಲೂ ಸಂಚರಿಸುತ್ತಾ, ಹಗೆಯರಸಿನ ರಹಸ್ಯಗಳನ್ನು ಭೇದಿಸಬೇಕು. ಭೇದೋಪಾಯವನ್ನು ಅನುಸರಿಸುವ ಸಂದರ್ಭದಲ್ಲಿ ತನ್ನ ರಾಜನ, ಪ್ರತಾಪ, ಕುಲ, ಐಶ್ವರ್ಯ, ತ್ಯಾಗ, ಉತ್ಸಾಹಾತಿಶಯ (ಉತ್ಥಾನ ಸೌಷ್ಠವ), ಅಕ್ಷುದ್ರತೆ, ಭದ್ರತೆ ಇವುಗಳ ಅತಿಶಯವನ್ನು ಹಗೆಯರಸರಲ್ಲಿ ತಿಳಿಸಬೇಕು. ಹೀಗೆ ಹಗೆಯರಸರ ದೇಶದಲ್ಲಿ ಸಮಯನಿರೀಕ್ಷಣೆಗಾಗಿ ಕಾಲವನ್ನು ಕಳೆಯುತ್ತಾ ಹಗೆಯರಸನು ತಮ್ಮ ರಾಜನ ವ್ಯಸಾನಾದಿಗಳನ್ನು ನಿರೀಕ್ಷಿಸುತ್ತಿರುವನೇ, ಅಥವಾ ನಮ್ಮರಸನು ದಂಡೆತ್ತಿ ಬರುವುದನ್ನು ನಿರೀಕ್ಷಿಸುವನೇ – ಅಥವಾ ತಾನೇ ದಂಡೆತ್ತಿ ಬರಲು ಹವಣಿಸುತ್ತಿರುವನೇ ಎಂಬಂಶಗಳನ್ನು ಗಮನಿಸಿ ಅದಕ್ಕೆ ತಕ್ಕ ಪ್ರತೀಕಾರವನ್ನು ಯೋಚಿಸಬೇಕು. ತನ್ನ ಪಕ್ಕದ ಅಭ್ಯುದಯವನ್ನು ಬಯಸುತ್ತಿರುವ ದೂತನು, ಅನುಕೂಲವಾದ ದೇಶಕಾಲಗಳನ್ನು ನಿರೀಕ್ಷಿಸಿ, ತನ್ನ ರಾಜನಿಗೆ ಸಾಧನವೈಕಲ್ಯವಿರುವಾಗ ತನ್ನೊಡೆಯನಮೇಲೆ ಹಗೆಯರಸನು ದಂಡೆತ್ತಿ ಬರುವುದಕ್ಕೆ ವಿಲಂಬವನ್ನು ಏರ್ಪಡಿಸಿ ತನ್ನೊಡೆಯನ ವಿಪತ್ತನ್ನು ಪರಿಹರಿಸಲು ಯತ್ನಿಸಬೇಕು. ಹಗೆಯರಸರಲ್ಲಿ ಆಯುಧಗಳ ಬಲಗಳು ಎಷ್ಟಿವೆ, ಎಂಬುದನ್ನು ತಿಳಿಯುವುದು, ಹಗೆಯ ಸ್ನೇಹಿತರಲ್ಲೂ, ಬಂಧುಗಳಲ್ಲೂ ಭೇದವನ್ನು ಹುಟ್ಟಿಸುವುದು, ಹಗೆಯ ದುರ್ಗ, ಕೋಶ ಇವುಗಳ ಇಯತ್ತೆಯನ್ನು ತಿಳಿಯುವುದು, ಕೃತ್ಯಾಕೃತ್ಯಗಳ ಸಂಗ್ರಹ, ರಾಷ್ಟ್ರಾಂತ ಎಂದರೆ ರಾಜ್ಯಗಡಿಗಳಲ್ಲಿರುವ ರಕ್ಷಕರನ್ನು ಹಣ ಮೊದಲಾದುವುಗಳಿಂದ ತನ್ನ ವಶಮಾಡಿಕೊಳ್ಳೋಣ, ಯುದ್ಧಕ್ಕಾಗಿ ಸಾರವಾಗಿರುವ ಭೂಮಿಯನ್ನು ತಿಳಿಯುವುದು ಇವಿಷ್ಟೂ ದೂತನ ಕೆಲಸವೆಂದು ಹೇಳಲ್ಪಟ್ಟಿದೆ. ರಾಜರು ದೂತರಿಂದಲೇ ಹಗೆಯ ರೀತಿಯನ್ನು ವಿಮರ್ಶಿಸಿ ತಿಳಿಯಬೇಕು. ಹಾಗೆಯೇ ಹಗೆಯ ದೂತರು ತಮ್ಮ ದೇಶದಲ್ಲಿ ನಡೆಸುವ ಕಾರ್ಯಗಳನ್ನು ತಿಳಿಯಬೇಕು ದೂತನು ಹಗೆಯ ರೀತಿ ಕ್ರಮ(ವಿಷಯ) ಗಳನ್ನು ತರ್ಕದಿಂದಲೂ (ಅನುಮಾನ) ಇಂಗಿತಗಳಿಂದಲೂ ತಿಳಿವ ಸಾಮ

ರ್ಥ್ಯವುಳ್ಳವನಾಗಿರಬೇಕು, ಸ್ಮೃತಿಶಕ್ತಿಯುಳ್ಳವನನ್ನು ಧೈರ್ಯಶಾಲಿಯೂ, ಲಘು ಪರಾಕ್ರಮಿಯೂ, ಕ್ಲೇಶಾಯಾಸಗಳನ್ನು ಸಹಿಸಿಕೊಳ್ಳುವವನಾಗಿಯೂ, ಒಡೆಯನಲ್ಲಿ ಪ್ರತಿಪತ್ತಿಯುಳ್ಳವನಾಗಿಯೂ ಇರಬೇಕು. ಋಷಿಗಳವೇಷ, ಹಾವಾಡಿಗರು, ಶಾಸ್ತ್ರಹೇಳುವರು ಮೊದಲಾದವರ ವೇಷವನ್ನು ಧರಿಸಬಲ್ಲವರಾಗಿಯೂ, ಧೂರ್ತರಾಗಿಯೂ, ವ್ಯಾಪಾರಿಗಳಾಗಿಯೂ, ಪ್ರಕಟವಾಗಿ ಹಗೆಯರಸರ ರಾಜ್ಯದಲ್ಲಿ ಸಂಚರಿಸಿ ಹಗೆಯರಸನಲ್ಲಿ ಜನಗಳಿಗಿರುವ ಅಭಿಪ್ರಾಯವನ್ನು ಸಂಗ್ರಹಿಸಬೇಕು- ಆಗಾಗ ಹಗೆಯರಸರ ಸುದ್ಧಿಯನ್ನು ತಮ್ಮ ರಾಜನಿಗೆ ತಿಳಿಸಲು ಆ ದೇಶದಿಂದ ಹೊರಗೆ ಬರಬೇಕು. ಮತ್ತೆ ಹೊಸಹೊಸದಾಗಿ ವಿಷಯಸಂಗ್ರಹಕ್ಕಾಗಿ ಆ ದೇಶದೊಳಕ್ಕೆ ಹೋಗಬೇಕು. ಹೀಗೆ ಚಾರರು ರಾಜನಿಗೆ ತುಂಬಾ ದೂರ ನೋಡುವ ಸಾಮರ್ಥ್ಯವುಳ್ಳ ಕಣ್ಣುಗಳಾಗಿರುವರು. ರಾಜನು ಚಾರರ ಮೂಲಕ ಸೂಕ್ಷ್ಮದೃಷ್ಟಿಯಿಂದ ಹಗೆಯರಸರ ಕ್ರಮಗಳನ್ನು ತಿಳಿಯಬೇಕು. ಚಾರದೃಷ್ಟಿಯುಳ್ಳ ರಾಜನು ಮಲಗಿದ್ದರೂ ಎಚ್ಚರವುಳ್ಳವನಂತೆಯೇ ಇರುವನು. ಆದುದರಿಂದ ಚಾರರೆಂಬ ಕಣ್ಣುಳ್ಳ ರಾಜನು ಹೆಚ್ಚಾದ ಸಂಪತ್ತಿಗೆ ಆಶ್ರಯವಾಗುವನು, ಅಜ್ಞಾನದಿಂದ(ಮೋಹದಿಂದ) ಚಾರರಿಲ್ಲದ ರಾಜನೂ ಕಣ್ಣುಗಳಿದ್ದರೂ ಕುರುಡನೇ ಆಗಿರುವನು— ರಾಜನು ದೂತರಿಂದ ಹಗೆಯರಸರ ಸರ್ವಸಂಪತ್ಸಮೃದ್ಧಿಯನ್ನೂ, ಸರ್ವಾವಸ್ಥೆಗಳನ್ನೂ ಚೇಷ್ಟಿತಗಳನ್ನೂ, ಆ ದೇಶದ ಪ್ರಜೆಗಳ ಪ್ರಾರ್ಥನೆಗಳನ್ನೂ, (ಅಭಿಪ್ರಾಯ) ತಿಳಿಯಬೇಕು. ಪ್ರಕಾಶನು ಅಪ್ರಕಾಶನು ಎಂದು ಚರನು (ದೂತನು) ಎರಡು ವಿಧವು-ಅಪ್ರಕಾಶನಿಗೆ ಉದ್ದಿಷ್ಟನೆಂದೂ, ಪ್ರಕಾಶನಿಗೆ ದೂತನೆಂದೂ ಹೆಸರು— ಯಾಗದಲ್ಲಿ ಋತ್ವಿಕ್ಕು ಸೂತ್ರದಿಂದ ವ್ಯವಹರಿಸುವಂತೆ ರಾಜನು ರಾಜ್ಯವ್ಯವಹಾರದಲ್ಲಿ ಚಾರರಿಂದ ವ್ಯವಹರಿಸಬೇಕು. ದೂತನ ಮೂಲಕ ಸಂಧಾನವನ್ನು ನಡೆಸಬೇಕು. ಚರನ(ಉದ್ದಿಷ್ಟ) ಮೂಲಕ ಸಮಾಚಾರಗಳನ್ನು ತಿಳಿಯಬೇಕು. ಈ ದೂತರಲ್ಲಿ ಕಾರ್ಯಸಾಧನೆಗಾಗಿ ಸಂಸ್ಥಾನರೆಂದೂ ಅಸಂಸ್ಥಾನರೆಂದೂ ಎರಡು ವಿಧವುಂಟು. ಇವರು ಪರದೇಶದಲ್ಲಿ ಸಂಚರಿಸಿ ಪರಚರ್ಯೆಗಳನ್ನು ತಿಳಿದುಕೊಳ್ಳುವವರಾಗಿರಬೇಕು — ಇವರಲ್ಲಿ ಕೆಲವರು ವರ್ತಕವೇಷಧಾರಿಗಳಾಗಿ ಹಗೆಗಳ ದುರ್ಗಗಳನ್ನು ಪ್ರವೇಶಿಸಬೇಕು. ದುರ್ಗದ ಕೊನೆಗಳಲ್ಲಿ ತಪಸ್ವಿವೇಷದಿಂದ ಸಂಚರಿಸಬೇಕು. ದೇಶದೊಳಗೆ ಪುರಾಣಹೇಳುವವೇಷದಿಂದಿರಬೇಕು. ಕಾಡುಗಳಲ್ಲಿ ವನವಾಸಿ (ವಾನಪ್ರಸ್ಥರು) ಗಳ ವೇಷದಲ್ಲಿರಬೇಕು. ಹೀಗೆ ನಾನಾವಿಧವಾಗಿ ತಮ್ಮ ಕಾರ್ಯವನ್ನು ಸಾಧಿಸಬೇಕು. ತಮ್ಮ ಕಡೆಯ ರಾಜನಿಂದ ತುಂಬಾಕಾಲದ ಸಂಬಳವನ್ನು ಪಡೆದು, ವ್ಯಾಪಾರಗಾರ, ವ್ಯವಸಾಯಗಾರ, ಪಾಷಂಡಿ, ಸನ್ಯಾಸಿ, ಉಪಾಧ್ಯಾಯ, ಈ ವೇಷದಿಂದ ಸಂಚರಿಸುತ್ತಾ ಶುಭಾಶಯರಾಗಿ ತಮ್ಮ ಕಾರ್ಯವನ್ನು ಸಾಧಿಸಬೇಕು—ತಮ್ಮ ಪಕ್ಷದವರ ವರ್ತನಗಳನ್ನೂ ಪರಪಕ್ಷದವರ ವರ್ತನಗಳನ್ನೂ ಗುಪ್ತಸಂಚಾರದಿಂದಿದ್ದುಕೊಂಡು ಎಲ್ಲರ ಚಿತ್ತಗಳನ್ನೂ ತಿಳಿದವರಾಗಬೇಕು—ಕ್ರೂರ ಕೆಲಸಮಾಡುವ, ಸನ್ಯಾಸಿಯ, ಕೊಡೆ ಹಿಡಿಯುವ, ತೇರು ಮೊದಲಾದವಾಹನಗಳನ್ನು ನಡೆಸುವ ವೇಷದಲ್ಲಿದ್ದುಕೊಂಡು ಸಂಚಾರ ಮಾಡಬೇಕು. ಒಬ್ಬರಿಗೊಬ್ಬರು ತಿಳಿಯದಂತೆ ವರ್ತಿಸಬೇಕು—ಸ್ವಪಕ್ಷ ಪರಪಕ್ಷಗಳಲ್ಲಿ ಚಿಕೀರ್ಷಿತವನ್ನು ಯಾವನು ತಿಳಿಯನೋ ಅವನು ಎಚ್ಚರವಿರುವ ಹಗೆಗಳಲ್ಲಿ ನಿದ್ದೆಮಾಡಿದವನಾಗಿ ಮತ್ತೆ ಎಚ್ಚರಗೊಳ್ಳುವನಾಗುವುದಿಲ್ಲ—

ಸ್ವಪರಿಗ್ರಹದಲ್ಲಿ ಕಾರಣಾಕಾರಣಗಳಿಂದ ಸಿಟ್ಟುಗೊಂಡವರನ್ನು ತಿಳಿಯಬೇಕು. ಅಕಾರಣವಾಗಿ ಸಿಟ್ಟುಗೊಂಡ ಪಾಪಿಷ್ಠರನ್ನು ಏನನ್ನೂ ಹೇಳದೆ ಮೌನದಿಂದ ದಂಡಿಸಬೇಕು. ಕಾರಣದಿಂದ ಕ್ರುದ್ಧರಾದವರನ್ನು ದಾನಮಾನಾದಿಗಳಿಂದ ಸತ್ಕರಿಸಬೇಕು—ಹೊರಗಣವರಲ್ಲಿ ಮಿತ್ರ, ಉದಾಸೀನ,

ಶತ್ರು ಎಂದು ಮೂವರಿರುವರು–ಕಾರಣಕ್ರುದ್ಧರನ್ನು ತನ್ನ ವಶಕ್ಕೆ ತೆಗೆದುಕೊಂಡು ದಾನಮಾನ
ಗಳಿಂದ ಅವರನ್ನು ಶಾಂತಿಗೊಳಿಸಬೇಕು—ಹೀಗೆ ಅವರು ಶತ್ರುಗಳ ವಶವಾಗುವ ಛಿದ್ರವನ್ನು
ಮುಚ್ಚಬೇಕು—ದೇಶದಲ್ಲಿರುವ ಕ್ಷುದ್ರಶತ್ರುಗಳನ್ನು ಮುಖಭಂಗಪಡಿಸಿ ರಾಜ್ಯದಲ್ಲಿ ಶಾಂತಿಯನ್ನು
ಕಲ್ಪಿಸಬೇಕು—ಹೀಗೆ ಸಾಮದಾನಗಳಿಂದ ಛಿದ್ರವನ್ನು ಮುಚ್ಚಬೇಕು—ಛಿದ್ರವು ಸ್ವಲ್ಪವಾಗಿದ್ದರೂ
(ಛಿದ್ರ=ಹಗೆಯು ಪ್ರವೇಶಿಸಲು ತಕ್ಕ ಅವಕಾಶ) ಹಡಗಿನ ಸಣ್ಣಛಿದ್ರದಲ್ಲಿ ನೀರುನುಗ್ಗಿ ಹಡಗನ್ನು
ಮುಳುಗಿಸುವಂತೆ, ಹಗೆಯರಸರು ನುಗ್ಗಿ ರಾಜ್ಯನಾಶವನ್ನು ಮಾಡುವರು. ರಾಣೀವಾಸದಲ್ಲಿರುವ
ಜಡಮೂಕ ಅಂಧಬಧಿರ, ಕುಬ್ಜಕಿರಾತವಾಮನರು, ಭಿಕ್ಷುಕಿಗಳು, ದಿಗಂಬರ ಸನ್ಯಾಸಿಗಳು—
ದಾಸಿಯರು, ಹೂವಾಡಿಗರು, ಕಲಾವಿದರು (ಸಂಗೀತ ವಾದ್ಯಗಾರರು) ಅಂತಃಪುರದ ಸುದ್ದಿಗಳನ್ನು
ತಾವು ಯಾರಿಗೂ ಕಾಣಿಸಿಕೊಳ್ಳದೆ ಹೋಗಿ ಹೊರಗೆ ಹರಡುವರು—ಕೊಡೆಹಿಡಿಯುವ, ಚಾಮರ
ಬೀಸುವ, ಗಿಂಡಿಯನ್ನು ಹಿಡಿದು ಯಾನವಾಹನಗಳನ್ನು ಧರಿಸಿರುವ, ಮಹಾಮಾತ್ರರು [ಮಾವಟ
ಗರು], ಇತರ ಹೊರಗಿನಊಳಿಗದವರು ರಾಜನ ವೃತ್ತಾಂತವನ್ನು ಹೊರಗೆಡಹುವರು. ಅರಮನೆಯ
ಅಡುಗೆಯವರು, ಗಂಧ ಮೊದಲಾದುವನ್ನು ಒದಗಿಸುವವರು, ಸ್ನಾನಮಾಡಿಸುವವರು, ಅಲಂಕಾರ
ಮಾಡುವವರು, ವಾದಿಗಳು, ವೈಕೈಗಳನ್ನು ಅಮುಕುವವರು, ಫಲಪುಷ್ಪಾದಿಗಳನ್ನು ಕೊಡುವವರು,
ಜಲತಾಂಬೂಲಾದಿಗಳನ್ನು ಒದಗಿಸುವವರು, ಮತ್ತು ಇನ್ನೂ ಹತ್ತಿರದ ಅನೇಕ ಊಳಿಗದವರು
ಹಗೆಗಳಿಂದ ಪ್ರೋತ್ಸಾಹಿತರಾಗಿ ವಿಷಾದಿಗಳನ್ನು ಕೊಟ್ಟು ಕೊಲ್ಲಲುಯತ್ನಿಸುವರು. ಸನ್ನೆಗಳು,
ರಾಜಮುದ್ರೆಯೊತ್ತಿದ ಪತ್ರಗಳು, ಆಕಾರ ಇಂಗಿತಗಳು, ಇವುಗಳಿಂದ ಚರರು ಪರಸ್ಪರವಾಗಿ
ಚರ್ಯೆಗಳನ್ನು ತಿಳಿಯುವವರಾಗಿರಬೇಕು - ಸೂರ್ಯನು ತನ್ನ ಸಾವಿರಕಿರಣಗಳಿಂದ ನೆಲದನೀರನ್ನು
ಹೀರುವಂತೆ ಚರರು, ಶಿಲ್ಪಿ, ಅಧ್ಯಾಪಕ ಮೊದಲಾದ ಬಹುಲಿಂಗರೂಪಧಾರಿಗಳಾಗಿ ಹಗೆಯರಸರ
ರಹಸ್ಯ ಸುದ್ದಿಗಳನ್ನೂ, ತಮ್ಮ ದೇಶದ ಪ್ರಜೆಗಳ ಅಭಿಪ್ರಾಯಗಳನ್ನೂ ಸಂಗ್ರಹಿಸಬೇಕು. ಇದು
ಉತ್ತಮವಾದುದು ಇದು ನೀಚವಾದುದು ಎಂಬ ವಿಮರ್ಶೆಯಿಂದ ಕಾರ್ಯಗಳ ಗುಣಾವಗುಣ
ಗಳನ್ನು ತಿಳಿದವನು ಯಾವ ಪ್ರಕಾರದಿಂದ ಹಗೆಯ ಮೇಲೆ ದಂಡೆತ್ತಿ ಹೋಗಬೇಕೋ [ತನ್ನ
ಸಮೃದ್ಧಿ ಕಾರಣಕ್ಕಾಗಿ] ಅದನ್ನು ತನ್ನಲ್ಲಿ ಸ್ವಚ್ಛವಾಗಿ ನಿರ್ಧರಿಸಿಕೊಂಡು ಆ ವಿಷಯದಲ್ಲಿ
ಬುದ್ಧಿಶಾಲಿಗಳಾಗಿರುವವರ ಸಮಾಲೋಚನೆಯಂತೆ ಕಾರ್ಯಗಳನ್ನು ನಡೆಸಬೇಕು.

ಇಂತು ದೂತಪ್ರಯೋಗಮೆಂಬ ೧೩ನೆಯ ಸರ್ಗವು.

ಪ್ರಕೃತಿ ಪ್ರಯೋಜನ ವ್ಯಸನವಿಭಾಗ ೧೪

ಪ್ರತಿನಿತ್ಯವೂ ಚರರ ಚರ್ಯೆಗಳಿಂದ ದೂತ ಚೇಷ್ಟಿತವು ವಿಫಲವಾಗಲು ಸೂಕ್ಷ್ಮಬುದ್ಧಿ
ಪುರಸ್ಸರನಾಗಿ ಯಾನವೆಂಬ ಗುಣವನ್ನು ಸ್ವೀಕರಿಸಬೇಕು—ಸೂಕ್ಷ್ಮವೂ ಸತ್ವಪ್ರಯತ್ನಗಳಿಂದ
ದೃಢವೂ ಆದ ಬುದ್ಧಿಯಿಂದ ಅಧಿಷ್ಠಿತವಾದ ಕಾರ್ಯವು ಅರಣಿಯು-[ಯಜ್ಞದಲ್ಲಿ ಬೆಂಕಿಯನ್ನುಂಟು
ಮಾಡುವ ಅತ್ತಿಮರದ ಒರಳು ಮತ್ತು ಮಂತಿನಕೋಲು] ಬೆಂಕಿಯನ್ನು ಹುಟ್ಟಿಸುವಂತೆ ಮಳೆಯು
ಫಲವ[ಸಂಪತ್ತ]ನ್ನು ಕೊಡುವುದು. ಅದಿರಿನಿಂದ ಚಿನ್ನವನ್ನೂ, ಮೊಸರಿನಿಂದ ಬೆಣ್ಣೆ [ತುಪ್ಪ]
ಕಡೆದು ತೆಗೆಯುವಂತೆ ಬುದ್ಧಿಪ್ರಯತ್ನಗಳಿಂದ ಮಾಡಿದ ವ್ಯವಸಾಯದಿಂದ ಸ್ಥಿರವಾದ (ನಿಜವಾಗಿ)
ಫಲವು ಸಿದ್ಧಿಸುವುದು. ಧೀಮಂತನು [ಬುದ್ಧಿಶಾಲಿ] ಉತ್ಸಾಹ ಸಂಪನ್ನನೂ ಪ್ರಭುಶಕ್ತಿಯಿಂದ
ಕೂಡಿದವನೂ ಆದ ರಾಜನು ನೀರುಗಳಿಗೆ ಹೇಗೆ ಸಮುದ್ರವು ಪಾತ್ರವಾಗಿರುವುದೊ ಹಾಗೆ ಸರ್ವರ

ಪ್ರೀತಿಗೂ ಪಾತ್ರವಾಗುವನು. ಬುದ್ಧಿಯಿಂದಕೂಡಿದ ಉತ್ಥಾನಾ [ಕಾಲದಲ್ಲಿ ದಂಡೆತ್ತಿ ಹೋಗುವಿಕೆ]
ಧ್ಯವಸಾಯ [ದೃಢನಿಶ್ಚಯ] ಗಳಿಂದ ಮಾಡಿದ ವ್ಯವಸಾಯವು — ನೀರಿನಿಂದ ಕಮಲದ
ಬಳ್ಳಿಯಂತೆ ವಿಸ್ತಾರವಾಗಿ ಹರಡುವುದು ಮತ್ತು ಹೊಟ್ಟು ಮೊದಲಾದುವುಗಳಿಂದ ಬೆಂಕಿಯನ್ನು
ಆರಿಹೋಗದಂತೆ ರಕ್ಷಿಸುವಂತೆ ಕಾರ್ಯವನ್ನು ರಕ್ಷಿಸುತ್ತದೆ — ಉತ್ಸಾಹ ಶಕ್ತಿಸಂಪನ್ನವಾದ
ಲಕ್ಷ್ಮಿಯೂ ಶುದ್ಧವಾದ ಬುದ್ಧಿಪ್ರಸಾರವೂ ಎಂದೂ ನಾಶವಾಗುವುದಿಲ್ಲ ಮತ್ತು ವಿಸ್ತಾರವನ್ನು
ಪಡೆಯುವುದು, ವ್ಯಸನ [ಮೃಗಯಾದಿಸಪ್ತವ್ಯಸನ] ಗಳಲ್ಲಿ ಆಸಕ್ತನಲ್ಲದವನೂ, ಶ್ರಾಂತನಲ್ಲದವನೂ
ಮಹೋತ್ಸಾಹವುಳ್ಳವನೂ, ಮಹಾಮತಿಯೂ ಆದ ರಾಜನನ್ನು ಸಂಪತ್ತುಗಳು ಸರ್ವದಾ
ನೀರುಗಳು ಸಮುದ್ರವನ್ನು ಸೇರುವಂತೆ ಸೇರುವುವು. ಸತ್ವಬುದ್ಧಿಗಳಿಂದ ಕೂಡಿದವನಾಗಿದ್ದರೂ
ವ್ಯಸನಾಸಕ್ತನಾಗಿರುವ ರಾಜನು ಸಂಪತ್ತುಗಳಿಂದ [ಲಕ್ಷ್ಮಿಯಿಂದ] ಸ್ತ್ರೀಯರಿಂದ ಷಂಡನಂತೆ
ತಿರಸ್ಕರಿಸಲ್ಪಡುವನು. ಕಟ್ಟಿಗೆಗಳಿಂದ ಬೆಂಕಿಯನ್ನು ಹೆಚ್ಚಿಸುವಂತೆ ಉತ್ಥಾನದಿಂದ [ಉತ್ಸಾಹ-
ಅಥವಾ ಸತತಪ್ರಯತ್ನ] ಸತ್ವವನ್ನು ವೃದ್ಧಿಗೊಳಿಸಬೇಕು. ಸತತೋತ್ಥಾಯಿಯಾದವನು ದುರ್ಬಲ
ನಾಗಿದ್ದರೂ ಸಿರಿಯನ್ನು ಪಡೆಯುವನು-ಪುರುಷನ ಪ್ರಯತ್ನಗಳಿಂದ ದುಷ್ಟಸ್ತ್ರೀಯನ್ನು ವಶಪಡಿಸಿ
ಕೊಳ್ಳುವಂತೆ ರಾಜನು ಸರ್ವದಾ ಸತತಪ್ರಯತ್ನವನ್ನಿಚ್ಛಿಸುವವನಾಗಿ ಪುರುಷಕಾರ [ಪುರುಷ
ಪ್ರಯತ್ನ] ದಿಂದ ಸಂಪತ್ತನ್ನು ವಶಮಾಡಿಕೊಳ್ಳಬೇಕು. ನಪುಂಸಕನಂತೆ ಬಿಟ್ಟುಬಿಡಕೂಡದು—
ಸದೋತ್ಸಾಹಿಯಾದರಾಜನು ಸಿಂಹಸಂಬಂಧಿಯಾದ ವೃತ್ತಿಯನ್ನಾಶ್ರಯಿಸಿದವನಾಗಿ ಜಯಶ್ರೀಯ
ಮುಂದಲೆಯನ್ನು ಹಿಡಿದು ಎಳೆದುತರುವನು. ಉತ್ಸಾಹಿಯಾದ ಪುರುಷನು, ದುಷ್ಟೆಯಾದ
[ತನಗೆ ಅಡಗದೆ ತಂಟೆಮಾಡುವ] ಸ್ತ್ರೀಯನ್ನು ಮುಂದಲೆಯನ್ನು ಹಿಡಿದು ಎಳೆದುತರುವಂತೆ,
ಕಿರೀಟ ಶಿರಸ್ತ್ರಾಣಗಳಿಂದ ಕೂಡಿದ ಹಗೆಗಳ ತಲೆಯಮೇಲೆ ಕತ್ತಿಯನ್ನು ಚಾಚಿ ಪಾದಾಂಕ್ರಾಂತ
ರನ್ನು ಮಾಡಿಕೊಳ್ಳದಿದ್ದರೆ ರಾಜನು ಭದ್ರವನ್ನು [ಮಂಗಳವನ್ನು] ಪಡೆಯನು—

ಪ್ರಯತ್ನಗಳಿಂದ ಪ್ರೇರಿಸಲ್ಪಟ್ಟ ಮನ (ಬುದ್ಧಿ) ಸ್ತಂಬ ದೊಡ್ಡ ಆನೆಯಿಂದ ಬಲವಾಗಿ
ಬೇರುಬಿಟ್ಟುಕೊಂಡಿರುವ ಹಗೆಯೆಂಬ ಮರವನ್ನು ಬುಡದೊಡನೆ ಕಿತ್ತುಹಾಕದೆಹೋದರೆ ಸುಖವು
ಎಲ್ಲಿಂದ ಬಂದೀತು — ವಿಳಾಸದಿಂದ ಎಳೆಯಲ್ಪಟ್ಟ ಅಲ್ಲಾಡುತ್ತಿರುವ ಪ್ರಕಾಶಮಾನವಾದ
ಕತ್ತಿಯ ಕಿರಣಗಳೆಂಬ ಪರಾಜರಗಳುಳ್ಳ ಸಂಪದ್ಯುಕ್ತವಾದ ಆನೆಯ ಸೊಂಡಿಲಂತಿರುವ ರಾಜನ
ಭುಜಗಳಿಂದ ಸಂಪತ್ತುಗಳು ಆಶ್ರಯಿಸಲ್ಪಡುತ್ತವೆ — ಬೆಟ್ಟದ ಶಿಖರವನ್ನೇರುವವನು ಮೇಲ
ಮೇಲಕ್ಕೆ ತನ್ನ ಪಾದನ್ಯಾಸಗಳನ್ನು ಇಡುವನು. ಹಾಗೆ ಮಾಡದೆ ಹೆದರಿಕೆಯಿಂದ ಕೆಳಗೆ ಇಡು
ವುದಾದರೆ ಕೆಳಗೆ ಬಿದ್ದುಹೋಗುವನು - ಹಗೆಯು ತನಗಿಂತ ಪ್ರಮಾಣದಲ್ಲಿ ಅಧಿಕನಾಗಿದ್ದರೂ
ಹಿಂದೆ ಹೇಳಿದಂತೆ ಮಹೋತ್ಸಾಹದಿಂದ ಕೂಡಿದ ವಿಜಿಗೀಷುವು ನಿರ್ಭಯನಾಗಿ ಹಾವು ಹೆಡೆ
ಯಾಡಿಸಿ ಹೆದರಿಸುವಂತೆ ಹಗೆಯಮೇಲೆ ಸಾಹಸವನ್ನು ತೋರಿಸಿ ಹೆದರಿಸಬೇಕು. ಬಳಿಕ ಬಲಾ
ಬಲಗಳನ್ನು ನೋಡಿಕೊಂಡು ಹಗೆಯಮೇಲೆ ಬೀಳಬೇಕು—ರಾಜನ (ವಿಜಿಗೀಷುವಿನ) ಪ್ರಕೃತಿ
ಗಳು ರಾಜನ ಅನಯಾಪನಯಂಗಳಿಂದಾಗಲಿ ದೈವಯೋಗದಿಂದಾಗಲಿ ವ್ಯಸನಗಳಲ್ಲಿ ಆಸಕ್ತರಾಗ
ಬಹುದು— ಇದು ಮನುಷ್ಯನನ್ನು ಶ್ರೇಯಸ್ಸಿನಿಂದ, ವಿದೂರವಾಗಿ, ಅಸ್ಯೇತ್ - ಬಿಸಾಡೀತು-
ಎಂದರೆ ಶ್ರೇಯಸ್ಸಿಗೆ ನಾಶವನ್ನುಂಟುಮಾಡುವುದು ಎಂಬ ವ್ಯುತ್ಪತ್ತಿಯಿಂದ ವ್ಯಸನವೆಂದು ಹೇಳ
ಲ್ಪಡುವುದು— ಹೀಗೆ ವ್ಯಸನಾಸಕ್ತನಾದವನು ಕೆಳಗೆ ಕೆಳಗೆ ಇಳಿಯುವನು. ಆದುದರಿಂದ ವ್ಯಸನ
ಗಳನ್ನು ವರ್ಜಿಸಬೇಕು. ಬೆಂಕಿ, ನೀರು, ವ್ಯಾಧಿ, ದುರ್ಭಿಕ್ಷ, ಮಾರಿರೋಗ, ಇವೈದೂ ದೈವಿಕ

ವಾದ ವಿಪತ್ತುಗಳು, ಮಾನುಷವಿಪತ್ತುಗಳು (ಅನಯಾಪನಯಗಳಿಂದು) ಎರಡು ವಿಧಗಳು. ದೈವಿಕವಾದುವನ್ನು ಪುರುಷಕಾರ (ಪುರುಷಪ್ರಯತ್ನ) ಶಾಂತಿಕರ್ಮ, ಇವುಗಳಿಂದ ಶಮನಮಾಡಿಕೊಳ್ಳಬೇಕು— ನೀತಿಶಾಸ್ತ್ರೋಕ್ತಮಾರ್ಗದಿಂದ ಮಾನುಷವಿಪತ್ತಿಗಳಿಗೆ ಪ್ರತೀಕಾರಮಾಡಿಕೊಳ್ಳಬೇಕು. ಸ್ವಾಮಿಮೊದಲಾಗಿ ಮಿತ್ರಪರ್ಯಂತವಾದ ಪ್ರಕೃತಿಸಂಬಂಧಪಟ್ಟ ಮಂಡಲವನ್ನು ಅದರ ಕೆಲಸಗಳನ್ನು, ವ್ಯಸನವಿಚಾರಗಳನ್ನು ಯಥಾಕ್ರಮನಾಗಿ ವಿವರಿಸುವನು—

೧. ಸ್ವಾಮಿ— ಅವುಗಳಲ್ಲಿ [೨] ಅಮಾತ್ಯವಿಷಯವು —

ಮಂತ್ರ ಆಲೋಚನೆ - ಸಲಹೆ, ಮಂತ್ರಫಲಾವಾಪ್ತಿ, ಅರ್ಥಿತಃಕಾರ್ಯಾನುಷ್ಠಾನಂ, ರಾಷ್ಟ್ರದ ಆಯವ್ಯಯ, ದಂಡನೀತಿ, ಅಮಿತ್ರಪ್ರತಿಷೇಧ [ಕೃತ್ರಿಮಸ್ನೇಹಿತರನ್ನು ದೂರಮಾಡುವುದು] ವ್ಯಸನಗಳಿಗೆ ಪ್ರತೀಕಾರಕಲ್ಪನ- ಇವು ಮಂತ್ರಿಯ ಕೆಲಸವೆಂದು ಹೇಳಲ್ಪಟ್ಟಿದೆ—

೨. ಮಂತ್ರಿವ್ಯಸನ— ಅಮಾತ್ಯನು ವ್ಯಸನಾಸಕ್ತನಾದರೆ ರಾಜನು ಪ್ರಭ್ವಾದಿಶಕ್ತಿಗಳಿಂದ ಕೂಡಿದವನಾಗಿದ್ದರೂ ರೆಕ್ಕೆ ಕತ್ತರಿಸಲ್ಪಟ್ಟ ಪಕ್ಷಿಯಂತೆ ಮೇಲೆ ಏಳಲಾರನು [ಅಭಿವೃದ್ಧಿಗೆ ಬರಲಾರನು] ಪಕ್ಷಿಯಾದರೋ ಹಾರಲಾರದು—

೩. ರಾಷ್ಟ್ರವಿಚಾರ— ಚಿನ್ನ, ಧಾನ್ಯ, ವಸ್ತ್ರಗಳು, ವಾಹನಗಳು, ಹಾಗೆಯೇ ಇತರ ಎಲ್ಲಾ ಉಪಯುಕ್ತಗಳಾದ ದ್ರವ್ಯಸಮೂಹ — ಇವು ಪ್ರಜೆಗಳಿಂದ ದೊರಕತಕ್ಕುವಲ್ಲವೆ ? ವಾರ್ತೆಯನ್ನು ರಾಷ್ಟ್ರದಲ್ಲಿ ವಿಸ್ತರಿಸಬೇಕು [ಕೃಷಿ, ವಾಣಿಜ್ಯ, ಪಾಶುಪಾಲ್ಯ, ಪ್ರಜೆಗಳು ವ್ಯಸನಾಸಕ್ತರಾದರೆ ಮೇಲೆ ಹೇಳಿದ ಯಾವುದೊಂದೂ ಸಿದ್ಧಿಸುವುದಿಲ್ಲ]—

೪. ದುರ್ಗಪ್ರಯೋಜನಂ— ಪ್ರಜೆಗಳಿಗೆ ಆಪತ್ತುಬಂದಾಗ ಕೋಶವನ್ನು ದಂಡಸ್ಥಾನವಾದ ಆಯುಧಾದಿಗಳನ್ನು ರಕ್ಷಿಸಿಕೊಳ್ಳಬೇಕು — ಪೌರರೂ ದುರ್ಗಸಂಶ್ರಯಕ್ಕಾಗಿ ಉಪಕರಿಸುವರು, ತೂಷ್ಣೀಂಯುದ್ಧ, ಜನಪರಿತ್ರಾಣ, ಮಿತ್ರಾಮಿತ್ರಪರಿಗ್ರಹ, ಸಾಮಂತಾಟವಿಕಬಾಧಾಸಂರೋಧ ಇವಕ್ಕೆ ಸಾಧನವಾದುದು ದುರ್ಗವೆಂಬುದು. ಒಂದು ದುರ್ಗದಲ್ಲಿ ನೆಲಸಿರುವ ರಾಜನು ಸ್ವಪಕ್ಷದವರಿಂದಲೂ, ಪರ [ಹಗೆ] ಪಕ್ಷದವರಿಂದಲೂ ಶ್ಲಾಘಿಸಲ್ಪಡುವನು- ವ್ಯಸನಾಸಕ್ತಿಯುಂಟಾದರೆ ದುರ್ಗವು ನಾಶವಾಗುವುದು—

೫. ಕೋಶ ವಿಚಾರ— ಭೃತ್ಯರನ್ನು ಪೋಷಿಸುವುದು, ದಾನಕೊಡುವುದು, ಒಡವೆಗಳು, ವಾಹನಗಳನ್ನು ಕೊಳ್ಳುವುದು, ಸ್ಥೈರ್ಯಂ, ಪರೋಪಜಾಪ, ದುರ್ಗಸಂಸ್ಕಾರ, ಸೇತುಬಂಧ [ನದಿಗಳನ್ನು ದಾಟಲು - ಕಾಲುವೆ ನೀರಿಗಾಗಿ], ವ್ಯಾಪಾರ ವಿಷಯ, ಮಿತ್ರಪರಿಗ್ರಹ ಇವು ಕೋಶದಿಂದಾಗುವ ಕಾರ್ಯ—ಮತ್ತು ಕ್ಷೀಣವಾದ ಪ್ರಜೆ ಮಿತ್ರ ಇವರನ್ನು ಕೋಶಬಲದಿಂದಲೇ ರಕ್ಷಿಸಬೇಕು—ಧರ್ಮಕಾಮಾರ್ಥ ಸಿದ್ಧಿಗಳೆಂಬ ಪುರುಷಾರ್ಥತ್ರಯಸಿದ್ಧಿಯೂ ಕೋಶದಿಂದಲೇ ಆಗಬೇಕಾಗಿದೆ — ಕೋಶವನ್ನು ವ್ಯಸನಗಳಲ್ಲಿ ಉಪಯೋಗಿಸುವ ರಾಜನು ಮೇಲೆ ಹೇಳಿದ ಪ್ರಯೋಜನವನ್ನೆಲ್ಲಾ ಕಳೆದುಕೊಳ್ಳುವನು.

೬. ಬಲವಿಚಾರ— ಮಿತ್ರಾಮಿತ್ರರು, ಹಿರಣ್ಯ, ಭೂಮಿ ಅಲಂಕಾರ, ದೂರಕಾರ್ಯದ ಆಶುಕಾರಿತ್ವ, ಲಬ್ಧವಾದುದನ್ನು ಪರಿಪಾಲಿಸಿಕೊಳ್ಳೋಣ, ಶತ್ರುಚಕ್ರವನ್ನು ವಿಘಾತಿಸುವುದು, ಸ್ವದಂಡ ಪರಿಗ್ರಹ, ಇವಿಷ್ಟನ್ನೂ ಸೈನ್ಯಬಲದಿಂದಲೇ ಸಾಧಿಸಬೇಕಾಗಿದೆ. ಹಾಗೆ ಈತನ ಬಲದಲ್ಲಿ

ಕೊರತೆಯುಂಟಾದರೆ ಮೇಲೆ ಹೇಳಿದುವೆಲ್ಲಾ ಕ್ಷಯಿಸಿಹೋಗುವುವು. ಹಗೆಗಳು ಕೂಡ ದಂಡವಂತನಾದ ವಿಜಿಗೀಷುಗೆ ಮಿತ್ರರಾಗುವರು—ದಂಡವಂತನಾದ ಭೂಪತಿಯು ಭೂಮಿಯನ್ನು ಆಕ್ರಮಿಸಿಕೊಂಡು ಆಳುವನು—

೭. ಮಿತ್ರವಿಚಾರ— ಮಿತ್ರನು ಅಮಿತ್ರ [ಕೃತ್ರಿಮಮಿತ್ರ] ರನ್ನು ದೂರಮಾಡಿಸುವನು. ಚಲನದಿಂದ ಅಚಲನವನ್ನುಂಟುಮಾಡುವನು. ಹಲವು ಮಂದಿ ಒಳ್ಳೆಯ ಸ್ನೇಹಿತರನ್ನು ಏರ್ಪಡಿಸುವನು. ಅಂತಹ ಮಿತ್ರನು ವ್ಯಸನಾಸಕ್ತನಾದರೆ ಮಿತ್ರನ ಕೆಲಸವೇ ನಡೆಯದೇ ನಿಲ್ಲುವುದು ; ಮಿತ್ರನು ಉಪಕಾರವನ್ನು ನಿರೀಕ್ಷಿಸದೆಯೇ ಮಿತ್ರನ ಶ್ರೇಯಸ್ಸನ್ನು ಕೋರುವನು. ಮಿತ್ರವಂತನಾದ ರಾಜನು-ದುಸ್ಸಾಧ್ಯವಾದ ಕಾರ್ಯಗಳನ್ನು ಸಾಧಿಸುವನು. ಹಣಗಳನ್ನು ಸಾಧಿಸುವನು.

ಹೀಗೆ ಅಮಾತ್ಯಾದಿ ಮಿತ್ರ ಪರ್ಯಂತ ಷಟ್‌ಪ್ರಕೃತಿ ವಿಚಾರವನ್ನು ವಿವರಿಸಿ ಇನ್ನೂ ಪ್ರಧಾನ ಪ್ರಕೃತಿಯಾದ ರಾಜನ (ಸ್ವಾಮಿ) ವಿಚಾರವನ್ನು ವಿವರಿಸುವನು.

ರಾಜನ ಪ್ರಯೋಜನ— ವಿದ್ಯೆಗಳ ಆನ್ವೀಕ್ಷಣ ಸದ್ವರ್ಣಾಶ್ರಮರಕ್ಷಣ, ಯುದ್ಧಶಾಸ್ತ್ರಗಳ ಗ್ರಹಣ, ಯುದ್ಧಮಾರ್ಗೋಪಶಿಕ್ಷಣ, ವ್ಯಾಯಾಮ ಶಾಸ್ತ್ರವಿಜ್ಞಾನ, ಕರ್ಮಗಳ ಲಕ್ಷಣಗಳು, ರಥಾಶ್ವಗಜಪೃಷ್ಠಾರೋಹಣ, ನಿಯುದ್ಧ (ಬಾಹುಯುದ್ಧ) ಕೌಶಲ್ಯ, ಮಾಯೆ ಪರಚಿತ್ತಪ್ರವೇಶನ, ದುಷ್ಟರಲ್ಲಿ ಕ್ರೌರ್ಯ, ಸಜ್ಜನರಲ್ಲಿ ಸದ್ವರ್ತನ ಮಂತ್ರೋದ್ಯೋಗ ಅನುಪಮಂತ್ರತ್ವ ತದ್ವತೋರಕ್ಷ್ಯ, ಉಪೇಕ್ಷೆ (ಔದಾಸೀನ್ಯ) ಸಾಮ ದಾನ ಭೇದ ದಂಡಪ್ರಸಾದನ ಸಮ್ಯಕ್ಪ್ರಚಾರ ವಿಜ್ಞಾನ ದುಷ್ಟರ ಅವರೋಪಣ ಪ್ರಶಾಸ್ತ್ರಸೈನ್ಯಪ್ರಾಸಾದಗತಾಗತಪರೀಕ್ಷಣಂ. ಪ್ರಕೃತಿವ್ಯಸನಾಪಾಯ ಕ್ರುದ್ಧಪ್ರಶಮನ ಕಾರುರಧಿಕಾರಾದಿಗಳಗತಾಗತಪರೀಕ್ಷಣಂ ಪ್ರಶಾಸ್ತ್ರಧ್ಯಕ್ಷ ಸೇನೆಗಳ ಮಂತ್ರ್ಯಮಾತ್ಯಪುರೋಹಿತರಪರೀಕ್ಷಣಂ ಗುರೂಣಾಮನುವೃತ್ತಿ ಪೂಜ್ಯಾನಾಂಪೂಜನಂ ಧರ್ಮಾಸನಪ್ರತಿಷ್ಠಾನ, ರಾಜ್ಯಕಂಟಕಶೋಧನ, ಭೃತಾಭೃತಪರಿಜ್ಞಾನ, ಕೃತಾಕೃತಪರೀಕ್ಷಣಂ ಸರ್ವಾನುಜೀವಿಗಳಲ್ಲಿ ತುಷ್ಟಾತುಷ್ಟವಿಚಾರ ಮಧ್ಯೋದಾಸೀನಚರಿತಜ್ಞಾನ ತತ್ಸಂಧಿಪಾಲನಂ ಮಿತ್ರರ ಪರಿ(ಪ್ರತಿ)ಗ್ರಹ, ಅಮಿತ್ರರನಿಗ್ರಹ ಪುತ್ರದಾರಾದಿಗುಪ್ತಿ ಬಂಧುವರ್ಗಪರಿಗ್ರಹ ಖನಿ ದ್ವೀಪವನಾದಿಗಳ ಸ್ವವೃತ್ತಿಗಳಲ್ಲಿ ಪ್ರವರ್ತನ, ಅಸತಾಂ ಪರಿಕ್ಷೇಪ ಸತಾಂಪರಿಗೂಹನ ಅಭೃತರಾದವರ, ಸ್ತ್ರೀಯರ ಅಧರ್ಮಗಳ ಪರಿವರ್ಜನ, ಅಧರ್ಮ್ಯರ ಅಗ್ರಹಣ ಗ್ರಾಹ್ಯರ ಗ್ರಹಣ. ಅರ್ಥಯುಕ್ತವಾದುದರಕರಣ, ಅನರ್ಥದವರ್ಜನ, ವೈಷಮ್ಯಗಳ ಪ್ರಶಮನ ಭೃತ್ಯರ ಅನಿರೋಧನ ಅರ್ಘನಿರ್ಧಾರಣ (ಬೆಲೆಗಳ ನಿಗದಿ) ಪ್ರಧಾನ ಕರಣಾದನ, ನ್ಯಾಯದಿಂದಕರಾದಾನ ಸ್ವಯಂವಾಪ್ರತಿಮೋಕ್ಷಣಂ ಅವಿಜ್ಞಾತಸ್ಯ ವಿಜ್ಞಾನಂ ವಿಜ್ಞಾನಸ್ಯ ನಿಶ್ಚಯಃ ಆಗಾಗ ಕರ್ಮಗಳ ಆರಂಭ, ಆರಬ್ಧಕರ್ಮಗಳ ಅಂತದರ್ಶನ ನ್ಯಾಯದಿಂದ ಅಲಬ್ಧಸ್ಯಲಿಪ್ಸಾ [ತನ್ನಲ್ಲಿಲ್ಲದುದನ್ನು ಸಂಪಾದಿಸುವಿಚ್ಛೆ] ಲಬ್ಧಸ್ಯಪರಿವರ್ಧನ, ಪರಿವೃದ್ಧವಾದುದನ್ನು ವಿಧಿವತ್ಪಾತ್ರೇಷುಪ್ರತಿಪಾದನಂ, ಅಧರ್ಮಪ್ರತಿಷೇಧ ನ್ಯಾಯಮಾರ್ಗಾನುವರ್ತನ ಉಪಕಾರ್ಯ್ಯಪಕಾರಿತ್ವ ಇವಿಷ್ಟೂ ಮಹೀಪತಿಯ ವೃತ್ತವು-ಇವೆಲ್ಲವನ್ನೂ ಅಮಾತ್ಯಾದಿ ರಾಜ್ಯವನ್ನೂ ನಯಪುರಸ್ಸರವಾಗಿ ಯಾವನು ವ್ಯಸನಾಸಕ್ತನಾಗಿ ಸೇವಿಸುವುದಿಲ್ಲವೋ ಅವನು ಕ್ಷಯವನ್ನು ಹೊಂದುವನು.

ಹೀಗೆ ರಾಜನು ಧರ್ಮಾರ್ಥಗಳಲ್ಲಿ ವ್ಯಗ್ರನಾಗಿ. ಹಾಗೆ ಸ್ವಸ್ಥಚೇತಸ್ಸನಾಗಿರಲು ಮಂತ್ರಿಯೂ ಅವನನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗಲು ಅರ್ಹನಾಗುವನು.

ಇನ್ನು ಪ್ರಕೃತಿಗಳ ವ್ಯಸನಗಳನ್ನು ಹೇಳುವನು

ರಾಜನ ವ್ಯಸನ— ವಾಕ್ಕಿನಲ್ಲಿ ಪಾರುಷ್ಯ (ಯಾವಾಗಲೂ ಬಿರುಸಾದ ಧ್ವನಿಯಿಂದ ಬಯ್ಯುತ್ತಿರುವುದು) ದಂಡದಲ್ಲಿ ಪಾರುಷ್ಯ (ಶಿಕ್ಷೆಯಲ್ಲೇ ವ್ಯಗ್ರವಾಗಿರುವಿಕೆ) ಅರ್ಥದೂಷಣ [ದುಂದುವೆಚ್ಚ] ಪಾನ [ಮದ್ಯಾದಿಗಳ ಕುಡಿತ] ಸ್ತ್ರೀ, ಮೃಗಯಾ [ಬೇಟೆ] ದ್ಯೂತ [ಜೂಜು] ಇವೇಳೂ ರಾಜನಿಗೆ ಸಂಬಂಧಿಸಿದ ವ್ಯಸನಗಳು—

ಅಮಾತ್ಯವ್ಯಸನ— ಆಲಸ್ಯ [ಸೋಮಾರಿತನ] ಸ್ತಬ್ಧತ [ಯಾವಾಗಲೂ ಮೈಮರೆತಿರುವುದು] ದರ್ಪ [ಹೆಮ್ಮೆ] ಪ್ರಮಾದ [ತಪ್ಪಿನಡೆಯುವುದು] ವೈರಕಾರಿತೆ, ಇವೂ, ಇವುಗಳ [ಜರ] ಜತೆಗೆ ರಾಜನಿಗ ಹೇಳಿದ ವ್ಯಸನಗಳೂ ಸೇರಿ ಮಂತ್ರಿಗೆ ಸಂಬಂಧಿಸಿದ ವ್ಯಸನಗಳು—

ರಾಷ್ಟ್ರವ್ಯಸನ— ಅತಿವೃಷ್ಟಿ [ಅಪಾರವಾದ ಮಳೆಸುರಿಯುವಿಕೆ] ಅನಾವೃಷ್ಟಿ [ಮಳೆ ಬೀಳದಿರುವಿಕ] ಇಲಿ[ಹೆಗ್ಗಣ]ಗಳು [ಮೂಷಕ – ಮನೆಯಲ್ಲಿ ಧಾನ್ಯಾದಿಗಳನ್ನು ತಿಂದು, ಬಟ್ಟೆ ಮೊದಲಾದುವನ್ನು ಕಡಿದುಹಾಕಿ ನಷ್ಟಪಡಿಸುವುದು] ಮಿಡಿತೆ [ಶಲಭ–ಪೈರುಪಚ್ಚೆಗಳನ್ನು ತಿನ್ನುವುದು] ಗಿಳಿಗಳು [ಭತ್ತದ ಪೈರನ್ನು ತಿಂದು ಹಾಳುಮಾಡುವುವು] ಅಸತ್ಕವಾದ [ಅಸಮಂಜಸವಾದ] ದಂಡ[ಶಿಕ್ಷೆ]ಪರರಾಜರ ಸೂರೆ, ಕಳ್ಳರು ಇವು ರಾಷ್ಟ್ರೋಪದ್ರವಕಾರಿಗಳು—

ದುರ್ಗವ್ಯಸನ— ಯಂತ್ರಗಳು ಮುರಿದುಹೋಗಿರೋಣ, ಪ್ರಾಕಾರವು ಬಿದ್ದುಹೋಗಿರುವುದು, ಶಸ್ತ್ರಗಳಿಲ್ಲದಿರುವಿಕೆ, ಮುಗಿದುಹೋದ ದವಸಧಾನ್ಯಗಳುಳ್ಳೋಣ–ಇವಿಷ್ಟೂ ದುರ್ಗವ್ಯಸನ–ದುರ್ಗದ ಅಭದ್ರತೆ– ಎಂದು ಹೇಳಲ್ಪಟ್ಟಿವೆ—

ಕೋಶವ್ಯಸನಮುಂ— ಹೆಚ್ಚು ಖರ್ಚುಮಾಡೋಣ, ಭೃತ್ಯಾದಿಗಳಿಂದ ಅಪಹೃತವಾದುದು, ರಕ್ಷಾಧಿಕಾರಿಗಳೇ ತಿಂದುಹಾಕಿರುವುದು, ಕಳ್ಳರಿಂದ ಕದಿಯಲ್ಪಟ್ಟುದು ತುಂಬಾ ದೂರದಲ್ಲಿರುವುದು ಇವಿಷ್ಟೂ ಕೋಶವ್ಯಸನವು—

ಬಲವ್ಯಸನ— ಉಪರುದ್ಧಿ ಪರಿಕ್ಷಿಪ್ತ ವಿಮಾನಿತ ಅಮಾನಿತ ಅಭವ್ಯ–ವ್ಯಾಧಿತ ಶಾಂತ ಇರಾಯಾತ ನವಾಗತಂ – ಪರಿಕ್ಷೀಣ ಪರಿಹತ ಪ್ರಹೃತಾಗ್ರಜನಂ ಆಶಾನಿರ್ವೇದಭೂಯಿಷ್ಠ ಅನೃಪಪ್ರಾಪ್ತಕಳತ್ರಗರ್ಭಂ ವಿಕ್ಷಿಪ್ತ ಅಂತಶ್ಶಿಲ್ಪಂ ಮಿತ್ರಗರ್ಭ ಅಪಸೃತ ಪರಿಮೃಷ್ಟ ಕ್ರುದ್ಧಿಮೌಲ ವಿಮಿಶ್ರ ವಿದ್ವಿಷೇನಿವಿಷ್ಟ ದೂಷ್ಯಯುಕ್ತ ಸ್ವವಿಕ್ಷಿಪ್ತಂ ಮಿತ್ರವಿಕ್ಷಿಪ್ತಂ ವಿಚ್ಛಿನ್ನವಿವಧಾಸಾರಂ ಭಿನ್ನಮೂಲಂ ಅಸ್ವಾಮಿಸಂಗತಂ ಭಿನ್ನಕೂಟ ದುಷ್ಪಾರ್ಷ್ಣಿಗ್ರಾಹಮಂತ್ರ ಇವಿಷ್ಟೂ ಬಲ ವ್ಯಸನಗಳು—

ಉಪರುದ್ಧಂ [ಶತ್ರುನಿರ್ಬಂಧಕ್ಕೆ ಸಿಕ್ಕದ], ನಿರ್ಗತಿ [ಗತ್ಯಂತರಮಿಲ್ಲದುದು], ಆಕ್ಷೇಪಿಸಲ್ಪಟ್ಟುದು, ಪರಿಕ್ಷಿಪ್ತ [ತಪ್ಪಿನಿಂದ ನಿರಾಕೃತವಾದುದು] ವಿಮಾರ್ಗಸ್ಥ, ಸರ್ವತಃಪಾಪವೇಷ್ಟಿತ, ಹೊಸದಾಗಿ ಏರ್ಪಟ್ಟುದು. ಈ ಬಗೆಯ ದಂಡು ಯುದ್ಧಮಾಡಲು ಇಷ್ಟಪಡದು—

ವ್ಯಾಧಿಯುಳ್ಳುದು ಯುದ್ಧಕೆಲಸವನ್ನು ಮಾಡಲಾರದು, ದುಃಖದಿಂದ ಕೂಡಿರುವುದು ತಿರಸ್ಕರಿಸಲ್ಪಡುವುದು, ಪರಿಶ್ರಾಂತವಾದುದು ಕ್ರಮವಾಗಿ ಯುದ್ಧಮಾಡಲಾರದು[ವಿಶ್ರಾಂತಿ ಹೊಂದಿದಮೇಲೆ ಯುದ್ಧಮಾಡಬಹುದು] ದೂರದಿಂದ ಬಂದುದು ಹೃತಪ್ರಾಣವಾಗಿರುವುದರಿಂದ [ಬಲಗುಂದಿರುವುದರಿಂದ] ಆಯುಧವನ್ನು ಹಿಡಿಯಲಾರದು. ಹೊಸದಾಗಿ ಬಂದುದು, ಆ ದೇಶದವ

ವರೊಡನೆ ಸೇರಿಕೊಂಡು ಅವನ ನಯದಿಂದ ಯುದ್ಧಮಾಡುವುದು, ಮುಖ್ಯವೀರನು ಹತನಾಗಲು ಪರಿಕ್ಷೀಣ [ಬೆದರಿಹೋಗು] ವಾಗಿ ಯುದ್ಧಮಾಡುವುದಿಲ್ಲ, ವೀರರೊಡಗೂಡಿದುದು ಯುದ್ಧಮಾಡುವುದು, ಇಲ್ಲದಿದ್ದುದು ಯುದ್ಧಮಾಡುವುದಿಲ್ಲ. ಹಾಗೆಯೇ ಲಬ್ಧಾರ್ಥವಾದ ಪೂರ್ಣವಾದ ದಂಡು ಯುದ್ಧಮಾಡುವುದು, ಆಶಾನಿರ್ವೇದವುಳ್ಳುದು ನಿರುತ್ಸಾಹದಿಂದಿರುವುದು. ಭೂಯಿಷ್ಠವಾದುದು, ಅಲ್ಪತರವಾದುದು ಯುದ್ಧಮಾಡಲಾರದು. ಸಹಾಯಾಯುದ್ಧವಾಹನಗಳುಳ್ಳುದು ಯುದ್ಧಮಾಡುವುದು. ತನ್ನ ಸತ್ವಕ್ಕೆ ಅನುರೂಪವಾದ ಆಯುಧವಾಹನಗಳುಳ್ಳುದು ಯುದ್ಧಮಾಡುವುದು, ಅಮಿತ್ರ ಶಿಲ್ಪವು ಅಂತರ್ಗತವಾಗಿದ್ದರೆ ಅಂತಶ್ಶಿಲ್ಪವೆನಿಸಿಕೊಳ್ಳುದು, ಅನ್ಯೋನ್ಯವಾಗಿ ನಿರ್ಗರ್ಭವಾದುದು ಭಿನ್ನಗರ್ಭವೆನಿಸಿಕೊಂಡು ಯುದ್ಧಮಾಡಲಾರದು. ಹಾಗೆಯೇ ಓಡಿಹೋದುದು [ಅಪಸೃತ] ರಾಜ್ಯಾಂತರೀಕೃತವಾದುದು, ಪರಿಮೃಷ್ಟವಾದುದು, ಅಪಕ್ರಾಂತವಾದುದು ಯುದ್ಧದಲ್ಲಿ ನಿಂತುಕೊಳ್ಳಲು ಸಮರ್ಥವಾಗುವುದಿಲ್ಲ. ಪಿತೃಪೈತಾಮಹಕ್ರಮದಿಂದ ಬಂದ ದಂಡು ಮೌಲಬಲವೆನಿಸಿಕೊಳ್ಳುವುದು; ಕೋಪಗೊಳಿಸಲ್ಪಟ್ಟ ಮೌಲವು ಯುದ್ಧಕ್ಷಮವಾಗಲಾರದು ಪ್ರಧಾನಾಯೋಧಸಂಗುಪ್ತವಾದುದು ಯುದ್ಧಕ್ಕಾಗಿ ಮೇಲೆ ಬಿದ್ದರೂ ಆಪತ್ಕಾಲದಲ್ಲಿ ವಿಕ್ಷಪ್ತವಾಗಿ ಹೋಗುವುದು, ಪ್ರಕೃಷ್ಟದೇಶಕಾಲಮುಳ್ಳೊಣದರಿಂದ ಮಿತ್ರಾಕ್ಷಿಪ್ತವಾದುದು ಅಯೋಗಿಕವಾಗುವುದು, ಸುಹೃದ್ಬಲದಿಂದ ಧಾನ್ಯಾದಿವೀವಧಾಪ್ರಾಪ್ತಿಯಾಗುವುದು, ಸ್ವಾಮಿಯಿಲ್ಲದುದು, ಅಸ್ವಾಮಿಸಂಹತವೆನಿಸಿಕೊಳ್ಳುವುದು, ಅನಾಯಕವಾದುದು ಭಿನ್ನರೂಪವೆನಿಸುವುದು— ಈ ಬಗೆಯ ಬಲ ವ್ಯಸನ [ಕೊರತೆ] ಗಳನ್ನು ಚೆನ್ನಾಗಿ ಪರೀಕ್ಷಿಸಿ ವಿಜಿಗೀಷುವು ಹಗೆಯಮೇಲೆ ಯಾನಮಾಡಬೇಕು– ದೈವೋಪಪೀಡಿತವೂ ಶತ್ರುಬಲಗ್ರಸ್ತವೂ ಕಾಮಕ್ರೋಧಯುಕ್ತವಾದುದೂ ಆದ ದಂಡು ಯುದ್ಧಮಾಡಲಾರದು – ಹೀಗೆ ನರೇಂದ್ರ [ಸ್ವಾಮಿ] ಮೊದಲಾದ ಏಳೂ ಸಪ್ತಪ್ರಕೃತಿಗಳೆಂದು ಹೇಳಿಸಿಕೊಳ್ಳುವುವು [ರಾಜ್ಯಸಪ್ತಾಂಗವೆಂದೂ ವ್ಯವಹಾರವುಂಟು] ಆ ಏಳಕ್ಕೂ ಒದಗಬಹುದಾದ ವ್ಯಸನಗಳನ್ನು ಅವುಗಳ ತಾರತಮ್ಯಗಳನ್ನು ಈ ಸರ್ಗದಲ್ಲಿ ವಿವರಿಸಿದೆ— ಸರ್ಗವನ್ನು ಉಪಸಂಹರಿಸುವನು ಯಾವನು ಪ್ರವೃತಿವ್ಯಸನಗಳನ್ನು ನಿರೀಕ್ಷಿಸದೆ ಉದಾಸೀನಮಾಡುವನೋ ಅವನು ಬೇಗನೆ ಹಗೆಗಳ ವಶನಾಗುವನು [ಅಪಜಯ ಪಡೆವನು] ಆದುದರಂದ ಪ್ರಮಾದದಿಂದಾಗಲಿ ದರ್ಪದಿಂದಾಗಲಿ ಪ್ರಕೃತಿವ್ಯಸನವನ್ನು ವಿಜಿಗೀಷುವು ಉದಾಸೀನ ಮಾಡಕೂಡದು–

ಸ್ವಾಮಿ ದುರ್ಗಾದಿಗಳ ಕ್ರಿಯಾವಿಶೇಷಗಳನ್ನು ಚೆನ್ನಾಗಿ ತಿಳಿದು ತಕ್ಕ ದೇಶಕಾಲಗಳಲ್ಲಿ ನಡೆಸಿ ಮಂತ್ರನಿರ್ಣಯಪೂರ್ವಕವಾಗಿ ಒದಗಿದ ಕೊರತೆಗಳಿಗೆ ಪ್ರತಿಕ್ರಿಯೆಯನ್ನು ಮಾಡಿ ತನ್ನ ಭೃತ್ಯಾದಿಗಳನ್ನು ನೀತಿಶಾಸ್ತ್ರೋಕ್ತರೀತ್ಯಾ ರಕ್ಷಿಸುವ ವಿಜಿಗೀಷು ತ್ರಿವರ್ಗ [ಧರ್ಮಕಾಮಾರ್ಥ] ಫಲವನ್ನು ಚಿರಕಾಲ ಸಂಪೂರ್ಣವಾಗಿ ಅನುಭವಿಸುವನು ಎಂದು ಸರ್ಗಾರ್ಥವನ್ನುಪಸಂಹರಿಸಿರುವನು.

ಇಂತು ಪ್ರಕೃತಿ ಪ್ರಯೋಜನ ವ್ಯಸನವಿಭಾಗ ನಿರೂಪಣಂ ನಾಮ ೧೪ನೆ ಸರ್ಗ—

೧೫ – ಸಪ್ತವ್ಯಸನ ವಿಭಾಗವು

ಅಮಾತ್ಯನೇ ಆದಿಯಾಗಿ ಮಿತ್ರಾಂತವಾದ ಸಪ್ತಪ್ರಕೃತಿಗಳಿಗೆ ರಾಜ್ಯವೆಂದು ವ್ಯವಹಾರವು, ರಾಜ್ಯದ ಎಲ್ಲಾ ವ್ಯಸನಕ್ಕಿಂತಲೂ, ರಾಜನ ವ್ಯಸನವು ದೊಡ್ಡದಾದುದು [ಗುರು] ರಾಜನು ವ್ಯಸನಿಯಲ್ಲದಿರಲು ಇತರ ಪ್ರಕೃತಿಗಳ ವ್ಯಸನವನ್ನು ಹೋಗಲಾಡಿಸಲು ಸಮರ್ಥನಾಗುವನು.

ರಾಜ್ಯವಷ್ಟೂ ಸೇರಿದರೂ, ರಾಜನ ವ್ಯಸನವನ್ನು ಹೋಗಲಾಡಿಸಲಾರವು. [ನೀತಿ] ಶಾಸ್ತ್ರವೆಂಬ ಕಣ್ಣಿಲ್ಲದ ಅರಸು ಕುರುಡನೆಂದೇ ಹೇಳಿಸಿಕೊಳ್ಳುವನು. ಮದದಿಂದ [ಶಾಸ್ತ್ರಮರ್ಯಾದೆಯನ್ನು] ಒಳ್ಳೆಯ ದಾರಿಯನ್ನು ಮೀರಿ ನಡೆಯುವ ಕಣ್ಣುಳ್ಳವನಿಗಿಂತ ಕುರುಡನೇ ಮೇಲಾದವನು. ಕುರುಡನಾದ ರಾಜನು ಮಂತ್ರಕುಶಲರಾದ ಮಂತ್ರಿಗಳಿಂದ ಸುಧಾರಿಸಲ್ಪಡುವನು. [ಧೃತರಾಷ್ಟ್ರನಂತೆ ಹುಟ್ಟುಕುರುಡನಾದವನು - ಮಂತ್ರಿಗಳ ಮೂಲಕ ರಾಜ್ಯವಾಳಿದನು]. ಕಣ್ಣುಗಳುಳ್ಳ ರಾಜನು ಮದಾಂಧನಾಗಿ ಸ್ವೇಚ್ಛೆಯಿಂದ ವರ್ತಿಸುವವನಾಗಿ ತನ್ನನ್ನೇ ಸಂಪೂರ್ಣವಾಗಿ ಹಾಳುಮಾಡಿಕೊಳ್ಳುವನು. ಶಾಸ್ತ್ರವೆಂಬ ಕಣ್ಣುಗಳುಳ್ಳ ರಾಜನು ಮಹಾಮಾತ್ಯರ ಮತದಲ್ಲಿ ಇದ್ದುಕೊಂಡು ಧರ್ಮಾರ್ಥಗಳನ್ನು ಘಾತಿಸುವ ವ್ಯಸನಗಳನ್ನು ದೂರಮಾಡಿ ರಾಜ್ಯವಾಳಬೇಕು.

ವ್ಯಸನ ವಿಭಾಗ

ಹಿಂದೆ ಹೇಳಿದ ಸಪ್ತವ್ಯಸನಗಳಲ್ಲಿ ವಾಕ್ಪಾರುಷ್ಯ, ದಂಡಪಾರುಷ್ಯ, ಅರ್ಥ ದೂಷಣ ಈ ಮೂರು ವ್ಯಸನಗಳೂ ಕ್ರೋಧದಿಂದ ಹುಟ್ಟುವುವು. ಮೃಗಯಾ, ದ್ಯೂತ, ಸ್ತ್ರೀಯರು, ಪಾನ ಈ ನಾಲ್ಕು ವ್ಯಸನಗಳೂ ಕಾಮದಿಂದ ಹುಟ್ಟುವುವು ಎಂದು ವ್ಯಸನಾರ್ಥಜ್ಞರು ಹೇಳುವರು.

ವಾಕ್ಪಾರುಷ್ಯ ವಿಚಾರವು

ಈ ಲೋಕದಲ್ಲಿ ವಾಕ್ಪಾರುಷ್ಯ [ಕಠಿನವಾದ ಮಾತು] ವೆಂಬುದು ಜನರಿಗೆ ತುಂಬಾ ಉದ್ವೇಜನಕರವೂ ಅನರ್ಥಕವೂ ಆಗಿರುವುದು. ಆದುದರಿಂದ ಪ್ರಿಯವಾದ ಮಾತುಗಳನ್ನಾಡುತ್ತಾ ಜನರನ್ನು ವಶಪಡಿಸಿಕೊಳ್ಳಬೇಕು. ಯಾವನು ಅಕಸ್ಮಾತ್ತಾಗಿಯೇ ಕ್ರೂರವಾಗಿ ಬಹುವಾಗಿ ಮಾತಾಡುವನೋ ಅವನಿಂದ ಜನವು ಹಾರುತ್ತಿರುವ ಬೆಂಕಿಕಿಡಿಯಿಂದ ಹೇಗೋ ಹಾಗೆ ಉದ್ವೇಗಪಡುವರು. ಹೃದಯದಲ್ಲಿರುವ ತಪ್ಪಿನಿಂದ ತೀಕ್ಷ್ಣವಾಗಿ ಇತರರ ಮರ್ಮಗಳನ್ನು ಬಿರುಮಾತುಗಳಿಂದ ತಾಕುವನು. ತೇಜಸ್ವಿಗಳಾದವರನ್ನು [ಶೂರರಾದ ಪರಿಜನರನ್ನು] ಸಿಟ್ಟುಗೊಳಿಸುವನು. ಹೀಗೆ ಸಿಟ್ಟುಗೊಂಡವರು ವೈರಿಗಳಾಗುವರು. ಆದುದರಿಂದ ರಾಜನು ಯಾರನ್ನೂ ಬಿರುವಾಕಿನಿಂದ ಉದ್ವೇಗಗೊಳಿಸಬಾರದು. ಪ್ರಿಯವಾದ ಮಾತನ್ನೇ ಆಡುತ್ತಾ ಇರಬೇಕು. ಪ್ರಾಯಶಃ ಲೋಕದಲ್ಲಿ ಪ್ರಿಯವಾದ ಮಾತನ್ನಾಡುವವನು ಕೃಪಣನಾದರೂ ಜನರಿಂದ ಸೇವಿಸಲ್ಪಡುವನು. ಇದನ್ನೇ ವಾಙ್ಮಾಧುರ್ಯಾನ್ನಾನ್ಯದಸ್ತಿಪ್ರಿಯತ್ವಂ– ವಾಕ್ಪಾರುಷ್ಯಾನ್ನನೃದಸ್ತ್ಯಪ್ರಿಯತ್ವಂ||

ಕಿಂವಾಲೋಕೇಕೋಕಿಲೇನೋಪನೀತಂ ಕಿಂವಾಲೋಕೇಗರ್ದಭೇನಾಪನೀತಂ ಎಂಬ ಲೋಕವಾರ್ತೆಯು ಸಮರ್ಥಿಸುವುದು—

ದಂಡಪಾರುಷ್ಯ ವಿಚಾರವು

ಅಸಿದ್ಧವಾದುದನ್ನು ಸಾಧಿಸುವ ಶಿಕ್ಷೆಯೇ [ಶಾಸನ] ಸತ್ಪುರುಷರಿಂದ ದಂಡವೆಂದು ಹೇಳಲ್ಪಡುವುದು ಹೀಗೆ ದಂಡ್ಯನಿಗೆ ವಿಧಿಸುವ ದಂಡವು ತಪ್ಪಿಗೆ ತಕ್ಕಷ್ಟು ವಿಧಿಸಲ್ಪಟ್ಟರೆ ಯುಕ್ತದಂಡವೆಂದು ಹೇಳಲ್ಪಡುವುದು. ದಂಡಪಾರುಷ್ಯವುಳ್ಳ ಅಲ್ಪತಪ್ಪಿಗೂ [ಹೆಚ್ಚಾಗಿ ಶಿಕ್ಷಿಸುವ] ರಾಜನು ಜನಗಳ ಉದ್ವೇಗಕ್ಕೆ ಪಾತ್ರನಾಗುವನು. ಹೀಗೆ ಉದ್ವಿಗ್ನರಾದ ಜನರು ಅವನ ದ್ವೇಷಿಗಳನ್ನು ಆಶ್ರಯಿಸುವರು. ಹೀಗೆ ಉದ್ವಿಗ್ನರಾಗಿ ಬಂದುಸೇರುವ ಜನರಿಂದ ಹಗೆಯು ವೃದ್ಧಿಹೊಂದುವುದರಿಂದ ರಾಜನಿಗೆ ನಾಶಕ್ಕೆ ಫಲವಾಗುವುದು. ಆದುದರಿಂದ ರಾಜನು ಪ್ರಜೆಗಳನ್ನು ದಂಡಪಾರುಷ್ಯ

ದಿಂದ ಉದ್ವೇಗಗೊಳಿಸಕೂಡದು, ಜನಾನುಗ್ರಹಮಾಡುವ [ಜನರನ್ನು ಪ್ರಿಯವಾಕ್ಕಿನಿಂದ ವಶಪಡಿಸಿಕೊಂಡಿರುವ]ರಾಜರು ವೃದ್ಧಿಹೊಂದುವರು. ಮತ್ತು ಪ್ರಜೆಗಳು ವೃದ್ಧಿಹೊಂದಿದರೆ ರಾಜರೂ ಪ್ರವೃದ್ಧರಾಗುವರು. ಲೋಕವು ಕ್ಷೀಣವಾದರೆ ರಾಜನೂ ಕ್ಷೀಣನಾಗುವನು. ಎಂತಹ ದೊಡ್ಡ ತಪ್ಪುಮಾಡಿದವನಿಗೂ ಪ್ರಾಣಾಂತಿಕವಾದ ದಂಡವನ್ನು ಮಾಡಬಾರದು–ಹಾಗೆ ತಪ್ಪುಮಾಡಿದವನ ರಾಜ್ಯವನ್ನಾಗಲಿ ಆಸ್ತಿಪಾಸ್ತಿಗಳನ್ನಾಗಲಿ ತೆಗೆದುಕೊಳ್ಳುವ ದಂಡವು ಪ್ರಶಸ್ಯವಾದುದು—

ಅರ್ಥದೂಷಣ ವಿಚಾರ

ಅಕಸ್ಮಾತ್ತಾಗಿ ಅತಿ ಬಲಶಾಲಿಯಾಗಿರುವವನ ಮೇಲೆ ಸಿಟ್ಟುಗೊಂಡು ದೂಷ್ಯರಿಂದ ಅವನ ದೂಷಣಕ್ಕಾಗಿ ಅಪಾರವಾದ ಹಣವನ್ನು ವ್ರಯಮಾಡುವುದು ಅರ್ಥದೂಷಣವ್ಯಸನವೆಂದು ನೀತಿತತ್ವವನ್ನು ತಿಳಿದವರಿಂದ ಹೇಳಲ್ಪಡುವುದು—ಆದುದರಿಂದ ತನ್ನ ಹಿತವನ್ನು ಬಯಸುವವನು ಅರ್ಥದೂಷಣವನ್ನು ಎಂದೂ ಕೈಗೊಳ್ಳಗೂಡದು—

ಪಾನವ್ಯಸನ ವಿಚಾರವು (ಅತಿಪಾನ)

ಅತಿಪಾನದ ಸಂಪತ್ತಿನಿಂದ – ಕ್ಷುತ್ಪಿಪಾಸಾಶ್ರಮಾಯಾಸಶೀತವಾತೋಷ್ಣಪೀಡನವು ಮಹತ್ತಾದ ಪಾನವ್ಯಸನದಿಂದ ಹುಟ್ಟುವುದು. ಅತಿಪಾನದಿಂ ನಡಗೆಯಲ್ಲಿ ವಿಹ್ವಲತ್ವಮುಹುಟ್ಟುವುದು. ಜ್ಞಾನವು [ಪ್ರಜ್ಞೆ] ನಾಶವಾಗುವುದು, ವಿಷಣ್ಣತೆಯೂ, ಪ್ರಾಣಗ್ಲಾನಿ [ಗ್ಲಾನಿ–ಬಳಲಿಕೆ] ಸುಹೃನ್ನಾಶ [ಸ್ನೇಹಿತರು ದೂರಹೋಗುವರು], ಪ್ರಜ್ಞಾಶ್ರುತಿಮತಿ ಭ್ರಮೆಗಳು, ಸಜ್ಜನರ ಅಗಲಿಕೆ, ದುರ್ಜನರೊಡನೆ ಸಹವಾಸ, ಅನರ್ಥದೊಡನೆ ಸಂಗತಿ, ಸ್ವಗ್ಲಾನಿ, ನಡುಕ, ಸೋಮಾರಿತನ [ತೂಕಡಿಕೆ] ಅತಿಯಾಗಿ ಸ್ತ್ರೀಸೇವನ, ಇವೇ ಮೊದಲಾದ ಹಲವು ಅನರ್ಥಕಾರಿಗಳಾದ ದುರ್ಗುಣಗಳು ಪಾನವ್ಯಸನದಿಂದ ಸಂಭವಿಸುವುವು. ಸತ್ಪುರುಷರು ಇದನ್ನು ನಿಂದಿಸುವರು, ಶ್ರುತ್ರ [ಶಾಸ್ತ್ರ] ಶೀಲ [ಸದಾಚಾರ] ಬಲ [ಸತ್ತ್ವ] ಇವುಗಳಿಂದ ಕೂಡಿದ್ದ ತುಂಬಾ ಯಶಸ್ವಿಗಳಾಗಿದ್ದ ಅಂಧಕವೃಷ್ಣಿಗಳೆಂಬ ಯಾದವರೂ ಕೂಡ ಅತಿಪಾನದಿಂದ ಸಂಪೂರ್ಣವಾಗಿ ಹಾಳಾದರು. ಯೋಗೀಶ್ವರನೂ, ಭೃಗುಪುತ್ರನೂ, ಪೂಜ್ಯನೂ, ಆದ ಶುಕ್ರಾಚಾರ್ಯನು ಅಲ್ಪಬುದ್ಧಿಯುಳ್ಳವನಾಗಿ ಪಾನಮದದಿಂದ ಅಂಧನಾಗಿ ತನ್ನ ಔರಸಪುತ್ರನನ್ನು ತಿಂದುಹಾಕಿದನು. ಅತಿಪಾನಾಸಕ್ತನಾದವನು ಯಾವಯಾವಲ್ಲಿ ಪ್ರವರ್ತಿಸುವನೋ, ಅಲ್ಲಲ್ಲಿ ಅಸದ್ವ್ಯವಹಾರಿಯಾಗುವನು. ಮುಂದೆ ಹೇಳುವವುಗಳಲ್ಲಿ ಸ್ತ್ರೀಯನ್ನು, ಬೇಟೆಯನ್ನು [ಸಪ್ತವ್ಯಸನಗಳನ್ನೂ] ಮಿತವಾಗಿ ಸೇವನೆಮಾಡಿದರೂ ಮಾಡಬಹುದು. ಪಾನ ಮತ್ತು ದ್ಯೂತ ಇವನ್ನು ಸ್ವಲ್ಪವೂ ಸೇವಿಸಕೂಡದು. ಇವರಡೂ ಮಹಾವ್ಯಸನಗಳೆಂದು ಹೇಳಿಸಿಕೊಂಡಿವೆ.

ಬೇಟೆಯ ವಿಚಾರ (ಮೃಗಯಾ ವ್ಯಸನ)

ಮೃಗಯಾದೋಷಗಳು— [ಕಷ್ಟ] ಕಾದಮರಳು, ಕಾಲಿಗೆ ಚುಚ್ಚಿಕೊಳ್ಳುವ ದರ್ಭೆ ನೆಗ್ಗಿಲು ಮೊದಲಾದ ಮುಳ್ಳುಗಳುಳ್ಳ ಭೂಮಿಗಳಲ್ಲಿ ಸಂಚಾರದಿಂದ ಕ್ಲೇಶ, ಮುಳ್ಳುಲತೆಗಳು ಮೈಯನ್ನು ಗೀರಿ ಗಾಯವುಂಟಾಗುವುದು, ಮುಳ್ಳುಹಂದಿಯ ಮುಳ್ಳು ಚುಚ್ಚಿಕೊಳ್ಳುವುದು, ಕಲ್ಲು ಮೊರಡಿಗಳು, ಮೋಟುಮರಗಳು, ಹುತ್ತಗಳು ಇವುಗಳಮೇಲೆ ಸಂಚರಿಸುವ ಕ್ಲೇಶ, ಬೆಟ್ಟ ಕಾಡು ಹಳ್ಳ ಪೊದರು ಮೊದಲಾದ ಅಪಾಯಕರವಾದ ಸ್ಥಳಗಳಲ್ಲಿ ಮೈಮರೆಸುಕೊಂಡಿರುವಿಕೆ [ಹೊಂಚು

ಕಾಯುವುದು] ಸಾಮಂತರಾಜರು ಆಟವಿಕರು [ಕಾಡಿನ ಬೇಡರು ಮೊದಲಾದ ದುಷ್ಟರು] ಇವರಿಂದ ಒದಗಬಹುದಾದ ವಧಬಂಧಾದಿ ಕ್ಲೇಶಗಳು, ತನ್ನ ದಂಡಿಗೂ, ತನ್ನಂತಹವರಿಗೂ [ಪರಮಿಶ್ರರಾದ] ಸಾವುಂಟಾಗುವುದು, ಕರಡಿ, ಹೆಬ್ಬಾವು, ಆನೆ, ಸಿಂಹ, ಹುಲಿ ಮೊದಲಾದ ಕ್ರೂರಮೃಗಗಳ ಹೆದರಿಕೆ, ಕಾಳ್ಕಿಚ್ಚಿನ ಬೆಂಕಿ-ಅದರ ಹೊಗೆಯ ವ್ಯಾಪನೆಯಿಂದ ದಿಕ್ಕುಕಾಣದೆಹೋಗಿ ಕಾಡಲ್ಲೆಲ್ಲಾ ಅಲೆಯುವಿಕೆ, ಮುಂತಾದ ಹಲವು ಕ್ಲೇಶಗಳು ರಾಜರಿಗೆ ಮೃಗಯಾವ್ಯಸನದಿಂದ ಉಂಟಾಗುವುವು.

ಮೃಗಯಾಗುಣಗಳು— ಕಷ್ಟವನ್ನು ಅನುಭವಿಸುವುದರಿಂದ ಯಾವ ಕೆಲಸದಲ್ಲಿ ಶ್ರಮವುಂಟಾಗದಿರುವಿಕೆ, ವ್ಯಾಯಾಮ [ಸಾಧನೆ] ದಿಂದ ಕೊಬ್ಬು ಕಡಿಮೆಯಾಗಿ ಬೊಜ್ಜು ಬೆಳೆಯದಿರುವಿಕೆ, ಅಚಲ [ಸ್ಥಿರವಾಗಿರುವುದು] ಚಲ [ಚಲಿಸುವುದು] ವಾದ ಗುರಿ [ಲಕ್ಷ್ಯಗಳಲ್ಲಿ ತುಂಬಾ ಮೇಲಾದ ಬಾಣದ ಗುರಿ ತಪ್ಪದಿರುವಿಕೆ, ನಾನಾ ಜಾತಿಯ ಮೃಗಗಳ ಪಕ್ಷಿಗಳ ಸುಂದರ ನೋಟ ಅವುಗಳ ಚೇಷ್ಟಾದರ್ಶನದಿಂದ ಮನಸ್ಸಿಗೆ ಹುಟ್ಟುವ ವಿನೋದ— ಇವು ಮೃಗಯಾ ಗುಣವೆನ್ನುವರು. ಆದರೂ ಇವು ಅಷ್ಟು ಮೇಲಾದ ಗುಣಗಳಲ್ಲಿ ದೋಷಗಳು ಹೆಚ್ಚಾಗಿರುವುದರಿಂದ] ಪ್ರಾಯಃಮೃಗಯೆಯಲ್ಲಿ ಉಂಟಾಗುವ ದೋಷಗಳು ಪ್ರಾಣಹರಣಗಳಾಗಿವೆ, ಆದುದರಿಂದ ಇವನ್ನು ಮಹಾವ್ಯಸನವೆಂದೇ ಗಣಿಸಬೇಕು. ಹಗಲಿರುಳು ತಿನ್ನುವ ಹಸಿಯ ಆಹಾರಪದಾರ್ಥ [ಆಮಾದಿಗಳು] ಜೀರ್ಣವಾಗುವುದರಿಂದಲೂ, ಚಲಗಳಾದ ಪಶುಲಕ್ಷ್ಯಗಳಲ್ಲಿ ಗುರಿಯ ಕೌಶಲ್ಯವು ಸಿದ್ಧಿಸುವುದರಿಂದಲೂ ಮೃಗಯೆಯನ್ನು ಮಿತವಾಗ ನಡೆಸಬೇಕು— ಇಷ್ಟಾದರೂ [ದೋಷಬಾಹುಳ್ಯವಿದ್ದರೂ] ಮೃಗಯೆಯನ್ನು ಆಡಲಪೇಕ್ಷೆಯುಂಟಾದರೆ ತನ್ನ ನಗರದ ಹತ್ತಿರದಲ್ಲಿ ವಿನೋದಕ್ಕಾಗಿ ಮನೋರಮವೂ ರಮ್ಯವೂ ಆಗಿರುವಂತೆ ಏರ್ಪಡಿಸಬೇಕು. ಆ ಮೃಗಯಾಭೂಮಿ ಸಮುದ್ರ ಅಥವಾ ಬೆಟ್ಟದ ಪರಿಖೆಯಿಂದ ಪರಿಕ್ಷಿಪ್ತವಾಗಿಯೂ, ಉದ್ದಗಲಗಳಲ್ಲಿ ಅರ್ಧಯೋಜನದಷ್ಟಿರಬೇಕು ಮತ್ತು ಬೆಟ್ಟದ ಹತ್ತಿರ, ಅಥವಾ ನದಿಯದಡ ಇಂತಹ ಸ್ಥಳದಲ್ಲಿ ಹೆಚ್ಚಾದ ನೀರು ಹುಲ್ಲುಗಳ ವಸತಿಯುಳ್ಳದಾಗಿರಬೇಕು. ಮುಳ್ಳಿರುವ ಬಳ್ಳಿಗಳು, ಗಿಡಗಳ ಪೊದರುಗಳು, ವಿಷವೃಕ್ಷಗಳು [ಕಾಯನ್ನು ತಿಂದರೆ ಸಾಯಿಸುವ ಮರಗಳು] ಫಲಪುಷ್ಪಗಳಿಂದ ತುಂಬಿರುವ ಮನೋಹರವಾಗಿ ಪ್ರಸಿದ್ಧವಾದ ಮರಗಿಡ ಬಳ್ಳಿಗಳಿಂದ ಕೂಡಿದುದಾಗಿರಬೇಕು. ಸ್ನಿಗ್ಧ ನೀಲಘನಚ್ಛಾಯೆಗಳುಳ್ಳದಾಗಿ ವಿರಳಗಳಾಗಿರುವ ಮರಗಳಿಂದ ಕೂಡಿರಬೇಕು. ದೂಳುತುಂಬಿದ ಛಿದ್ರವಿಲ್ಲದಿರುವ ಹಳ್ಳಗುಹೆ ಮೊದಲಾದುವಿಲ್ಲದಂತೆ ಮಾಡಿರಬೇಕು. ಮೋಟುಮರ ಕಿತ್ತು ಕಲ್ಲು ಮೊದಲಾದುವಿಲ್ಲದಂತೆ ಶೋಧಿಸಿದ ನೆಲವುಳ್ಳದಾಗಿರಬೇಕು. ಮೊಸಳೆಗಳಿಲ್ಲದಂತೆ ಮಾಡಿದ ತುಂಬಾ ಆಳವಿಲ್ಲದ ನೀರುಳ್ಳ ಕೊಳಗಳುಳ್ಳದಾಗಿರಬೇಕು. ಆ ಕೊಳವು ನಾನಾ ವಿಧವಾದ ಕಮಲ ಕಲ್ಹಾರಾದಿ ಜಲಪುಷ್ಪಗಳಿಂದಲೂ ಜಲಪಕ್ಷಿಗಳಿಂದಲೂ ತುಂಬಿ ನೋಟಕ್ಕೆ ರಮ್ಯವಾಗಿರಬೇಕು— ಆ ನೆಲವು ನಾಯಿ, ಹೆಗ್ಗಣ ಮೊದಲಾದ ಮೃಗಸಂಪೂರ್ಣವಾಗಿರಬೇಕು. ಆನೆಗಳ ಹಿಂಡಿನಿಂದ ಕೂಡಿರಬೇಕು. ಕೋರೆಹಲ್ಲು ಮುರಿದಿರುವ ಮೃಗಗಳಿಂದ ಕೂಡಿರಬೇಕು – ಕೊಂಬು ದಂತಗಳು ಮುರಿದ ಮತ್ತು ಕೋಣ ಮೊದಲಾದ ಕಾಡುಮೃಗಗಳಿಂದ ಕೂಡಿರಬೇಕು. ಸುಖವಾಗಿ ಸಂಸೇವ್ಯವಾಗಿರುವ ಪುಷ್ಪಗಳುಳ್ಳ ಬಳ್ಳಿಗಳಿಂದ ರಮ್ಯವಾಗಿರಬೇಕು. ಶತ್ರುಸೈನ್ಯಗಳಾಗಲಿ ಅವರ ಕಡೆಯವರಾಗಲಿ ಅಲ್ಲಿ ಬಂದುಸೇರಲವಕಾಶವಿರಕೂಡದು. ಅನೇಕಮಂದಿ ಕ್ಲೇಶಸಹಿಷ್ಣುಗಳೂ, ಕಾಡುಮೃಗಗಳ ಸಂಚಾರ ಸ್ವಭಾವಾದಿಗಳನ್ನು ಬಲ್ಲವರೂ, ದೃಢದೇಹಿಗಳೂ ಆದ ಬಿಲ್ಲನ್ನು ಹಿಡಿದಿರುವ ಹಲವು ರಕ್ಷಕರಿಂದ

ಕೂಡಿ ಮನಸ್ಸಿಗೆ ಉಲ್ಲಾಸಕೊಡುವ ಬೇಟೆಯ ಭೂಮಿಯು ರಾಜರಿಗೆ ಭೂತಿಯನ್ನು ಕೊಡುವುದು— ಬೇಟೆಗೆ ಬೇಕಾದ ಮೃಗಗಳನ್ನೆಲ್ಲಾ ಅಲ್ಲಿ ಸೇರಿಸಬೇಕು. ಇಂತಹ ಸ್ಥಳದಲ್ಲಿ ಬೇಟೆಯು ರಾಜನಿಗೆ ಅತ್ಯಾಯಾಸವಾಗಲಾರದು – ಧರ್ಮಾರ್ಥಕ್ಕೆ ಅವಿರೋಧವಾಗಿ, ರಾಜಕಾರ್ಯಕ್ಕೂ ತೊಂದರೆಯಿಲ್ಲದಂತೆ ಆಪ್ತವಾದ ಅಲ್ಪಪರಿವಾರದೊಡನೆ ರಾಜನ ಆಟಕ್ಕಾಗಿ ಆ ಕೃತ್ರಿಮವನವನ್ನು ಪ್ರವೇಶಿಸಬೇಕು. ರಾಜನು ಹೀಗೆ ವನದೊಳಕ್ಕೆ ಹೋದಾಗ ಆ ವನದ ಸುತ್ತಲೂ ಆಯುಧಸನ್ನದ್ಧವಾಗಿರುವ ಸೇನೆಯನ್ನು ಕಾವಲಿಟ್ಟಿರಬೇಕು. ಈ ಬಗೆಯ ಬೇಟೆಯಲ್ಲಿ ಸಜ್ಜನರು ಬೇಟೆಯಲ್ಲಿ ಯಾವಯಾವ ಗುಣಗಳಿವೆ ಎಂದು ಹೇಳಿರುವರೋ ಆ ಗುಣಗಳೆಲ್ಲವೂ ಲಭಿಸುವುವು. ಈ ಬೇಟೆಯ ಕ್ರಮವೇ ರಾಜನಿಗೆ ವಿನೋದವಾದ ಬೇಟೆಯೆಂದು ಹೇಳಲ್ಪಟ್ಟಿರುವುದು.

ದ್ಯೂತ ದೋಷಗಳು— ಇದರಲ್ಲಿ ದೊಡ್ಡವರಿಗೂ ಆಸಕ್ತಿಯುಂಟಾಗುವುದು. ಹಣವು ಕೈಬಿಟ್ಟುಹೋಗುವುದು. ಸುಳ್ಳುಹೇಳುವ ಅಭ್ಯಾಸವಾಗುವುದು. ನಿಷ್ಠುರತೆ, ಕೋಪ, ವಾಕ್ಛಸ್ತ್ರಖಂಡನ, ಲೋಭ, ಧರ್ಮಕ್ರಿಯಾಲೋಪ, ಮಾಡಬೇಕಾದ ಕೆಲಸಗಳಲ್ಲಿ ಅಪ್ರವರ್ತನ, ಸತ್ಪುರುಷರ ಸಮಾಗಮ ತಪ್ಪಿಹೋಗುವಿಕೆ, ಅಸತ್ಪುರುಷರ ಸಹವಾಸ, ಅರ್ಥನಾಶಕ್ರಿಯೆ, ವೈರ, ವೈರಾನುಬಂಧನ, ಧರ್ಮಕ್ರಿಯಾಲೋಪ, ಮತ್ಸರ, ವಿರಾಗಿತಾ, ಅಕ್ಷಪಾತನದಲ್ಲೂ ಸಂದಿಗ್ಧವಿಷಯದಲ್ಲೂ ಚಿತ್ತಾನುಕೂಲಭಾವ, ಪ್ರತಿಕ್ಷಣದಲ್ಲೂ ಕ್ರೋಧಹರ್ಷಗಳು, ಪ್ರತಿಕ್ಷಣದಲ್ಲೂ ಸಂತಾಪ, ಪ್ರತಿಕ್ಷಣವೂ ಸಂಕ್ಲೇಶ, ಪ್ರತಿಕ್ಷಣದಲ್ಲೂ ಸಾಕ್ಷಿಪ್ರಶ್ನೆ, ಸ್ನಾನಾದಿ ದೇಹಸಂಸ್ಕಾರದಲ್ಲೂ, ಉಪಭೋಗಗಳಲ್ಲೂ ಅನಾದರ, ವ್ಯಾಯಾಮವಿಲ್ಲದಿರುವಿಕೆ, ಅಂಗದೌರ್ಬಲ್ಯ, ಶಾಸ್ತ್ರಪ್ರತಿವಿಧೇಕ್ಷಣ, ಮಲಮೂತ್ರಗಳ ಬಂಧನ, ಕ್ಷುತ್ಪಿಪಾಸಾದಿಗಳ ಪೀಡನ ಇವೇ ಮೊದಲಾದ ಹಲವು ದೋಷಗಳು ದ್ಯೂತಗಳಿಂದ ಉಂಟಾಗುವುವೆಂದು ಶಾಸ್ತ್ರನಿಪುಣರು ಹೇಳುವರು.

ದ್ಯೂತದೋಷಕ್ಕೆ ದೃಷ್ಟಾಂತ ಪ್ರದರ್ಶನ— ದಿಕ್ಪಾಲಕರ ಪ್ರಭಾವವುಳ್ಳ ಪಾಂಡುಪುತ್ರನಾದ ಧರ್ಮರಾಜನು ದ್ಯೂತವ್ಯಸನದಿಂದ ರಾಜ್ಯಾದಿಗಳನ್ನಿರಲಿ, ಕಳತ್ರವನ್ನೂ ಕಳೆದುಕೊಂಡನು. ಮಹಾರಾಜನಾದ ನಳನೂ ಕೂಡ ದ್ಯೂತದಲ್ಲಿ ರಾಜ್ಯವನ್ನು ಕಳೆದುಕೊಂಡು ಹಿಂಬಾಲಿಸಿದ ಹೆಂಡಿತಿಯನ್ನು ಕಾಡಿನಲ್ಲಿ ದಿಕ್ಕಿಲ್ಲದಂತೆಮಾಡಿ ತ್ಯಜಿಸಿ ಮತ್ತೊಬ್ಬರ ಸೇವಕನಾಗಬೇಕಾಯಿತು. ಇಂದ್ರನಿಗೆ ಸಮನಾದ ಮಹಿಮೆಯುಳ್ಳ ಮತ್ತು ತನಗೆ ಸಮಾನಧನುರ್ಧರರಿಲ್ಲದಿರುವ, ಮೇರುಪರ್ವತಕ್ಕೆ ಸಮಾನನಾದ ರುಕ್ಮಿಯು ದ್ಯೂತದೋಷದಿಂದ ಕ್ಷಯವನ್ನುಹೊಂದಿದನು (ಈ ಕಥೆ ಅಪೂರ್ವ). ಕಾಶಿಕರೂಷದೇಶಗಳ ರಾಜನಾದ ಚಕ್ರಚಕ್ರನೂ ಕೂಡ ತೀವ್ರವಾದ ದ್ಯೂತಕೃತವಾದ ದೋಷದಿಂದ ಹಲ್ಲುಗಳನ್ನು ಮುರಿದುಕೊಂಡನು (ಈ ಕಥೆಯು ಹೊಸದು– ಪುರಾಣಾದಿಗಳಲ್ಲಿ ಕೇಳಿಲ್ಲ). ದ್ಯೂತದಿಂದ ಅನರ್ಥ ಪರಂಪರೆಗಳು ಸಂಭವಿಸುವುವು. ಸ್ನೇಹವು ನಾಶವಾಗುವುದು. ಐಕಮತ್ಯದಿಂದಿರುವ ಒಂದು ಪಕ್ಷದಲ್ಲಿ ಭೇದವು [ಒಡಕುಮನಸ್ಸು] ಹುಟ್ಟುವುದು. ಹೀಗೆ ಕೇವಲ ದೋಷಬಾಹುಳ್ಯವುಳ್ಳ ದ್ಯೂತವನ್ನು ರಾಜನು ಬಿಡಬೇಕು. ಮೇಧಾವಿಯಾದ ರಾಜನು ಸಮಾರಬ್ಧವಾದ ದ್ಯೂತವಿಚಾರವನ್ನು ತಡೆಗಟ್ಟಬೇಕು. ದ್ಯೂತದಲ್ಲಿ ಕೇವಲ ದೋಷಗಳೇ ಅಲ್ಲದೆ ಗುಣಲೇಶವೂ ಇರದು—

ಸ್ತ್ರೀಸಕ್ತಿ ದೋಷ— ರಾಜನು ಸ್ತ್ರೀಯರಲ್ಲಿಯೇ ಅತ್ಯಾಸಕ್ತನಾಗಿದ್ದರೆ ರಾಜಕಾರ್ಯಗಳನ್ನು [ಯಾತ್ರಾದಿಗಳು] ನಡೆಸಲು ಕಾಲವು ಅತಿಕ್ರಮಿಸಿಹೋಗುವುದು, ಧರ್ಮ ಅರ್ಥ ಇವೆರಡರ ನಾಶವಾಗುವುದು, ಯಾವಾಗಲೂ ಅಂತಃಪುರದಲ್ಲೇ ಇರುವುದರಿಂದ ಎಲ್ಲಾ ಪ್ರಕೃತಿಗಳಿಗೂ ಸಿಟ್ಟು ಬರುವುದು. ಸ್ತ್ರೀಯರಲ್ಲಿ ಪಕ್ಷಪಾತವುಂಟಾಗುವುದರಿಂದ ಅವರೊಳಗೆ ಈರ್ಷ್ಯೆ [ಮಾತ್ಸರ್ಯ]ಯು ಹೆಚ್ಚಿ ಅವರು ಅಕಾರ್ಯದಲ್ಲಿ ಪ್ರವರ್ತಿಸುವರು. ಈರ್ಷ್ಯೆ, ಅಮರ್ಷ, ಕ್ರೋಧ, ವಿರೋಧ ಸಾಹಸಾಪ್ರವರ್ತನ, ಇವೆಲ್ಲವೂ ಸ್ತ್ರೀವ್ಯಸನದಿಂದ ಹುಟ್ಟುವುವು. ಅದರಿಂದ ರಾಜನಾದವನು ಈ ಸ್ತ್ರೀವ್ಯಸನವನ್ನು ದೂರಮಾಡಬೇಕು—

ವ್ಯಸನಸಮುದಾಯ ದೋಷ— ಸ್ತ್ರೀ, ದ್ಯೂತ, ಪಾನ, ಮೃಗಯಾ, ಇವುಗಳಲ್ಲಿ ವ್ಯಗ್ರರಾಗಿರುವ ರಾಜರಿಗೆ ಯೌವನದೊಡನೆ ಇಷ್ಟಾರ್ಥಗಳೂ ಕಳೆದುಹೋಗುವುವು.

ಉಪಸಂಹಾರ— ಇಲ್ಲಿ ಹೇಳಿರುವ ಸಪ್ತವ್ಯಸನಗಳೂ ರಾಜರ ಶ್ರೇಯಸ್ಸಿಗೆ ವಿಘ್ನಕಾರಿಗಳೆಂದು ಇವೊಂದೊಂದೇ ತುಂಬಾ ಅನರ್ಥಕಾರಿಗಳಾಗಿರುವಾಗ ಇವೇಳನ್ನು ಸೇವಿಸುವ ರಾಜನ ಅನರ್ಥಕ್ಕೆ ಮಿತಿಯುಂಟೇ! ನೋಡು! ಬತ್ತಳಿಕೆಯಿಂದ ತೆಗೆದು ಪ್ರಯೋಗಿಸಿದ ಒಂದು ಬಾಣವೇ ಹನನ ಕಾರಿಯಾಗಿರುವಾಗ ಎಲ್ಲಾ ಬಾಣಗಳನ್ನೂ ಪ್ರಯೋಗಿಸುವುದರಿಂದ ಎಷ್ಟು ಮರಣಗಳು ಸಂಭವಿಸುವುವೆಂಬುದನ್ನು ಮತ್ತೆ ಹೇಳಬೇಕೇನು ?– ಇಂದ್ರಿಯಗಳ ಪಟುತರವಾದ ಶಬ್ದಸ್ಪರ್ಶಾದಿ ಭೋಗಗಳು ಶಾಸ್ತ್ರಾಭ್ಯಾಸವನ್ನು ಹಾಳುಮಾಡುವುವು. ಶ್ರೇಷ್ಠತೆಯನ್ನೂ, ಯಶಸ್ಸನ್ನೂ ಕೆಡಿಸುವುವು. ಅಪಾರವಾದ ವಿಭೂತಿಯನ್ನು [ಸಂಪತ್ತು] ಕದಲಿಸುವುದು. ಒಳ್ಳೆಯ ಬುದ್ಧಿವಂತರನ್ನೂ ಕೆಳಗಿನ ದರ್ಜೆಗೆ ಇಳಿಸುವುದು. ಈ ಸಪ್ತವ್ಯಸನಗಳ ದುರಂತವು ಅಷ್ಟಿಷ್ಟಲ್ಲ. ವ್ಯಸನಾಸಕ್ತನಾದ ರಾಜನನ್ನು ಅವನ ಶತ್ರುಗಳು ತಿರಸ್ಕರಿಸುವರು ಮತ್ತು ಮೇಲೆಬಿದ್ದು ಹಾಳುಮಾಡುವರು. ವ್ಯಸನಾಸಕ್ತನಲ್ಲದೆ ಉತ್ಸಾಹೋದ್ಯಮಶಾಲಿಯಾದ ರಾಜನು ತನ್ನ ಹಗೆಗಳನ್ನು ಗೆಲ್ಲುವುದಲ್ಲದೆ ಅವರಿಂದ ದುರ್ಭೇದ್ಯನೂ ಆಗುವನು—

—ಇಂತು ಸಪ್ತ ವ್ಯಸನವಿಭಾಗವು—

ಪ್ರಾಯಿಕವಾಗಿ ನೀತಿಶಾಸ್ತ್ರನಿಪುಣರಾದ ಸಂತರು ಶತ್ರುವು ಸಪ್ತ ವ್ಯಸನಾಕ್ರಾಂತನಾಗಿರುವಾಗ ಅವನ ಮೇಲೆ ವಿಜಿಗೀಷುವು ದಂಡೆತ್ತಿಹೋಗಬೇಕೆಂದು ಹೇಳುವರು—ಆದರೆ ಶತ್ರುಗಳು ಎಲ್ಲರೂ ಯಾವಾಗಲೂ ವ್ಯಸನಾಕ್ರಾಂತರಾಗಿರುವುದಿಲ್ಲ—ಆದುದರಿಂದ ತನಗೆ ಹಗೆಗಳ ಮೇಲೆ ದಂಡೆತ್ತಿಹೋಗಲು ಸಾಮರ್ಥ್ಯವಿದ್ದಾಗ ಅವರ ಮೇಲೆ ಯಾನ ಮಾಡಬೇಕೆಂಬುದೇ ನನ್ನ ಮತ. ಯಾವಾಗ ವಿಜಿಗೀಷುವು ಪ್ರಬಲನಾದ ಹಗೆಯನ್ನು ಗೆಲ್ಲುವ ಸಾಮರ್ಥ್ಯ ಸನ್ನಾಹಗಳುಳ್ಳವನಾಗಿರುವನೋ ಆವಾಗ ಹಗೆಯ ಮೇಲೆ ದಂಡೆತ್ತಿಹೋಗಬೇಕು–ಅವನನ್ನು ಪೀಡಿಸಿ ಕೃಶನಾಗುವಂತೆ ಮಾಡಬೇಕು – ಹಗೆಯರಸನ ರಾಜ್ಯದಲ್ಲಿ ಬೆಳೆಗಳು ಚೆನ್ನಾಗಿ ಬೆಳೆದಿರುವಾಗ ವಿಜಯಕ್ಕಾಗಿ ರಾಜನು ದಂಡೆತ್ತಿಹೋಗಬೇಕು – ಬೆಳೆದಿರುವ ದವಸಧಾನ್ಯಗಳನ್ನು ಲೂಟಿಮಾಡುವುದರಿಂದ ಹಗೆಯ ಜೀವನವನ್ನು ಹಾಳುಮಾಡಿದಂತಾಗುವುದು. ತನ್ನ ಸೈನ್ಯವು ಪುಷ್ಟವಾಗಿ ಹೆಚ್ಚುವುದು– [ಇದಕ್ಕಾಗಿಯೇ ಶರತ್ಕಾಲವು ದಿಗ್ವಿಜಯಕ್ಕೆ ತಕ್ಕ ಕಾಲವೆಂದು ಹೇಳಿದೆ] – ವಿಜಿಗೀಷುವು ತನ್ನ ದೇಶದ ಹಿಂದೆ ಹಗೆಯರಸನು ಇಲ್ಲದಂತೆ ಶುದ್ಧಮಾಡಿಕೊಳ್ಳಬೇಕು. ಮುಂದೆಯೂ ಎಲ್ಲೆಲ್ಲಿ ಭಯವೊದಗುವುದೆಂಬುದನ್ನು ತಿಳಿದುಕೊಳ್ಳಬೇಕು. ತನ್ನ ದಂಡಿಗೆ ಸಾಕಾದಷ್ಟು ದವಸಧಾನ್ಯಗಳೂ

ಇಟ್ಟುಕೊಂಡಿರಬೇಕು. ತಾನು ಹೋಗುವ ದಾರಿಯನ್ನು ಶೋಧಿಸಬೇಕು – ಇಷ್ಟಾದ ಮೇಲೆ ಯಾತ್ರೆ ಹೊರಡಬಹುದು — ಬೇಸಗೆ [ಗ್ರೀಷ್ಮ] ಕಾಲದಲ್ಲಿ ಹೆಚ್ಚು ನೀರಿರುವ ದಾರಿಯಲ್ಲೇ ಪ್ರಯಾಣ ಮಾಡಬೇಕು–ಏಕೆಂದರೆ ಬೇಸಗೆಯ ತಾಪದಿಂದಲೂ [ನೀರಿನಲ್ಲಿ ಸ್ನಾನಮಾಡಲವಕಾಶವಿಲ್ಲದುದರಿಂದಲೂ] ಆನೆಗಳಿಗೆ ಕುಷ್ಠರೋಗವು ಬರುವುದು. ಆನೆಗಳು ಸ್ವಸ್ಥವಾಗಿರುವಾಗಲೇ ಅವುಗಳ ದೇಹದಲ್ಲಿ ಉಷ್ಣವು ಉಜ್ಜ್ವಲಿಸುತ್ತಿರುವುದು—ಹೀಗಿರುವಲ್ಲಿ ನೀರಿಲ್ಲವಿರುವ ದಾರಿಯಲ್ಲಿ ನಡೆಯುವಾಗ ಆನೆಗಳು ರೋಗದಿಂದ ಸಾಯುವುವು ಎಂಬುದನ್ನು ಮತ್ತೆ ಹೇಳಬೇಕೆ ?— ಆನೆಗಳಿರಲಿ ಎಲ್ಲಾ ಪ್ರಾಣಿಗಳೂ ಬೇಸಗೆಯಲ್ಲಿ ನೀರಿಲ್ಲದೆ ಬಳಲಿಹೋಗುವುವು–ಉಷ್ಣಾಧಿಕ್ಯದಿಂದ ಆನೆಗಳಿಗೆ ಕಣ್ಣುಗಳೇ ಕಾಣದೇ ಹೋಗುವುವು.

ದಂಡಿಗೆ ಉತ್ಸಾಹವನ್ನು ಹೆಚ್ಚಿಸುತ್ತಾ ಆಯಾಸವಾಗದಂತೆ ಮೆಲ್ಲಮೆಲ್ಲನೆ ಪ್ರಯಾಣಮಾಡಬೇಕು. ಎಷ್ಟು ಉನ್ನತನಾದ ಶತ್ರುವೂ ಕೂಡ ಅತ್ಯಲ್ಪ ಉತ್ಸಾಹಶಾಲಿಗೂ ಕೂಡ ಹೆದರುವನು– ದಂಡೆತ್ತಿಹೋಗುವಾಗ ಅಪ್ರಮತ್ತನಾಗಿರಬೇಕು. ದೃಷ್ಟವಾದುದನ್ನು ಅದೃಷ್ಟಕ್ಕಾಗಿ ನಾಶಮಾಡಿಕೊಳ್ಳಕೂಡದು. ಆಮೇಲೆ ಪ್ರಕೋಪ ಮುಂದೆ ಫಲ ಇವೆರಡರಲ್ಲಿ ಪಶ್ಚಾತ್ಪ್ರಕೋಪವೇ ಮೇಲಾದುದು– ಹಗೆಗಳ ರಂಧ್ರಗಳನ್ನು ತಿಳಿದು ದಂಡೆತ್ತಿ ಹೋಗುವುದರಲ್ಲಿ ಮಹತ್ವವುಂಟು. ಆದುದರಿಂದ ಹಗೆಗಳಲ್ಲಿ ಛಿದ್ರವನ್ನುಂಟುಮಾಡಿ ಬಳಿಕ ಯಾತ್ರೆಗೆ ಹೊರಡಬೇಕು– ಹಿಂದಾಗಲಿ ಮುಂದಾಗಲಿ ಹಗೆಯು ಯಾವಾಗ ಅಸಮರ್ಥನಾಗಿರುವನೋ ಆಗಲೇ ಯಾತ್ರೆಯು ಪ್ರಶಸ್ಯವು. ಮುಂದೆ ಸಮೃದ್ಧಾನ್ನವಿರಬೇಕು. ಪೃಷ್ಠಭಾಗವು ಶುದ್ಧವಾಗಿರಬೇಕು. ಇದರಿಂದ ತೀವ್ರವಾದ ಪಾರ್ಷ್ಣಿಭೇದವನ್ನು ಪಡೆಯುವನು. ಅವಶ್ಯಯಾತವ್ಯತೆಯಿಂದ ಉದ್ಯತನಾಗಿರಬೇಕು. ಪಶ್ಚಾತ್ಪ್ರಕೋಪವನ್ನು ಶಂಕಿಸಕೂಡದು–ಅನೇಕ ವರ್ಗವುಳ್ಳ ತನ್ನ ಹಸ್ತ್ಯಶ್ವಪಾದಾತಪ್ರಧಾನರ ರಕ್ಷೆಯನ್ನು ಏರ್ಪಡಿಸಿಕೊಂಡು ಹೋಗಬೇಕು. ಹಾಗೆಯೇ ಪೃಷ್ಠದಲ್ಲಿಯೂ ಪಾರ್ಷ್ಣಿದ್ವಯದಲ್ಲಿಯೂ ರಕ್ಷೆಯನ್ನು ಏರ್ಪಡಿಸಿಕೊಳ್ಳಬೇಕು.

ನಗರರಕ್ಷಾವಿಧಾನ— (ತಾನು ಹಗೆಯಮೇಲೆ ದಂಡೆತ್ತಿ ಹೊರಟಾಗ ತನ್ನ ನಗರವನ್ನು ರಕ್ಷಿಸುವ ಏರ್ಪಾಡು) ಸೇನಾಪತಿಯನ್ನಾಗಲಿ ಯುವರಾಜನನ್ನಾಗಲಿ ದಂಡಿನ ಒಂದು ಭಾಗವನ್ನು ಕೊಟ್ಟು ನಗರರಕ್ಷಣೆಗೆ ನಿಯಮಿಸಬೇಕು. ನಗರವನ್ನು ರಕ್ಷಿಸಿಕೊಳ್ಳಲು, ಹಿತೇಪ್ಸುವಾದ ಅಮಾತ್ಯ, ಯುವರಾಜ, ವಂಶೀಯರು, ಸೇನಾಪತಿ ಇತರೇ ಮುಖ್ಯರು – ಈ ಸಂದರ್ಭದಲ್ಲಿ ಅಂತಃಪ್ರಕೋಪವನ್ನುಂಟುಮಾಡಬಹುದು. ಅದನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಏಕೆಂದರೆ ಅಂತಃಪ್ರಕೋಪವು ಬಾಹ್ಯಪ್ರಕೋಪಕ್ಕಿಂತಲೂ ಹೆಚ್ಚು ಕೇಡನ್ನುಂಟುಮಾಡುವುದು– ಅಂತಃಪುರದಲ್ಲಿ ನಂಬಿಕೆಯುಳ್ಳ ಪರಿಜನಂಗಳನ್ನು ದಾನಮಾನಾದಿಗಳಿಂದ ಮನ್ನಿಸಿ ವಿಶ್ವಾಸಪಾತ್ರರನ್ನಾಗಿ ಮಾಡಿಕೊಂಡಿರಬೇಕು – ರಾಷ್ಟ್ರಾಂತಪಾಲಕರು [ಗಡಿಕಾವಲವರು] ಆಟವಿಕರು [ಕಾಡಿನ ಜನರು] ಮೊದಲಾದವರಲ್ಲಿ ಉಂಟಾಗುವ ಪ್ರಕೋಪಕ್ಕೆ ಬಾಹ್ಯಪ್ರಕೋಪವೆಂದು ಹೆಸರು. ಹೀಗೆ ಉಂಟಾಗುವ ಪ್ರಕೋಪವನ್ನು ನಿಪುಣರಾದ ಮಂತ್ರಿಗಳ ಮೂಲಕ ಅಡಗಿಸಬೇಕು – ಹೀಗೆ ಉಂಟಾದ ಬಾಹ್ಯಾಭ್ಯಂತರ ಪ್ರಕೋಪಗಳನ್ನು ಸಾಮಾದ್ಯುಪಾಯಗಳಿಂದ ಪ್ರಕುಪಿತರಾದವರನ್ನು ಸಮಾಧಾನಗೊಳಿಸಬೇಕು. ಅಥವಾ ಅವರಲ್ಲೇ ಪರಸ್ಪರವಾಗಿ ಭೇದವನ್ನು ಹುಟ್ಟಿಸಿ ಶಾಂತಿಗೊಳಿಸಬೇಕು. ಏಕೆಂದರೆ ಹೀಗೆ ಅಸಮಾಧಾನಗೊಂಡವರು ಹಗೆಗಳನ್ನು ಹೋಗಿ

ಸೇರಿಕೊಳ್ಳುವರು. ಅದಕ್ಕೆ ಅವಕಾಶ ಕೊಡಕೂಡದು. ಈ ಯಾನದಲ್ಲಿ ದಂಡಿನ ಯೋಧರು ಆನೆ ಕುದುರೆ ಮೊದಲಾದ ಪ್ರಾಣಿಗಳ ಆಯಾಸವುಂಟಾಗುವುದು. ಚಿನ್ನ–ಯೋಧರು ಇವುಗಳ ವ್ಯಯವೂ ಹೆಚ್ಚಾಗುವುದು. ಆದುದರಿಂದ ತನ್ನ ಸೈನ್ಯಧನಧಾನ್ಯಾದಿ ಸಂಪತ್ತಿಯಿರುವಾಗ ಯಾತ್ರೆಗೆ ಹೊರಡಬೇಕು. ಯಾತ್ರೆಯು–ಕ್ಷಯ, ವ್ಯಯ, ಆಯಾಸ ಇವುಗಳನ್ನುಂಟು ಮಾಡುವುದು—

ಪ್ರಭುಮಂತ್ರೋತ್ಸಾಹ ಶಕ್ತಿಗಳ ಬಲದಿಂದ ಖಂಡಿತವಾಗಿಯೂ ಜಯಸಿದ್ಧಿಯಾಗುವುದೆಂದು ನಿಶ್ಚಿತವಾಗಿರುವ, ಮಹಾಫಲವನ್ನು ಕೊಡುವ, ಪರಿಣಾಮಕಲ್ಪವಾದ ಯಾತ್ರೆಯನ್ನು ಮಾಡಬೇಕು– ಕೇವಲ ವ್ಯಯಾಯಾಸಗಳನ್ನು ಕೊಡುವ ಕ್ಷಯ ದೋಷದುಷ್ಟವಾದ ಯಾತ್ರೆಯನ್ನು ಒಂದು ಕಾಲದಲ್ಲೂ ಮಾಡಕೂಡದು—

ಕಾರ್ಯವ್ಯಸನ (ಕಾರ್ಯದಲ್ಲಿ ಕೊರತೆ– ದೋಷ) — ಅಶಕ್ಯವಾದ ವಸ್ತುಗಳನ್ನು ಸಂಪಾದಿಸಲು ಪ್ರಯತ್ನಿಸುವುದು, ಶಕ್ಯವಾದ ವಸ್ತುವನ್ನು ಮೋಹದಿಂದ ಬಿಟ್ಟುಬಿಡುವುದು–ಶಕ್ಯವಾದುವುಗಳಿಗೂ ಅಕಾಲದಲ್ಲಿ ಪ್ರಯತ್ನಿಸುವುದು ಇವು ಮೂರು ಕಾರ್ಯದೋಷಗಳು—

ಕಾರ್ಯವಿಘ್ನ— ಕಾಮ [ಸಂಗೀತಾದಿಗಳ ಸ್ರಕ್ಚಂದನವನಿತಾದಿಗಳ ಸೌಖ್ಯಾಭಿಲಾಷೆ] ಅಕ್ಷಮ, ಅದಕ್ಷಿಣತಾ, ಅನುಕಂಪಾ (ದಯ), ಹ್ರೀ(ನಾಚುಕೆ), ಸಾಧ್ವಸಂ(ಅಂಜಿಕೆ), ಕ್ರೌರ್ಯ, ಅನರ್ಥತಾ, ದಂಭ, ಅಭಿಮಾನ, ಅಧಾರ್ಮಿಕತೆ, ದೈನ್ಯ, ಸ್ವಯೂಥಕ್ಕೆ ಅವಮಾನಮಾಡೋಣ, [ಮಿತ್ರ] ದ್ರೋಹ, ತನ್ನವರಲ್ಲಿ ಶಂಕೆ [ಭಯ], ಬಾರಿಬಾರಿಗೂ ಉಪೇಕ್ಷೆ, ಶೀತೋಷ್ಣವರ್ಷಗಳನ್ನು ಸಹಿಸಬಾರದುದು– ಇವೇ ಮೊದಲಾದುವು ಕಾರ್ಯನಾಶಕಗಳು—

ಬಲಪಕ್ಷಭೇದವು— ನಿಜ (ಸ್ವಕೀಯ) ಮೈತ್ರ (ಸ್ನೇಹಿತನ ಮೂಲಕ) ಸಮಾಶ್ರಿತನು (ಹಗೆಯ ಕಡೆಯಿಂದ ಬಂದು ತನ್ನನ್ನಾಶ್ರಯಿಸಿದವನು) ಸಂಬಂಧದ (ನಂಟರಮೂಲಕ) ಸೌಶ್ಚ [ಗುರುಶಿಷ್ಯ ಸಂಬಂಧವುಳ್ಳವರ ಮೂಲಕ] ಕ್ರಿಯೋದ್ಭವ ಭೃತ– [ಸಂಬಳಕೊಟ್ಟು ಪೋಷಿಸಿದವನು] ವಿವಿಧೋಪಚಾರಗಳಿಂದ ಗೃಹೀತ [ಪ್ರೋತ್ಸಾಹಿತ] ಎಂದು ಪಕ್ಷವು ಏಳುಬಗೆ–ಸದಾ ತನ್ನನ್ನು ಅನುಸರಣೆ ಮಾಡುತ್ತಿರುವುದು, ತನ್ನ ಗುಣಗಳನ್ನು ಹೊಗಳುತ್ತಿರುವುದು–ತನ್ನ ನಿಂದೆಯನ್ನು ಸಹಿಸದಿರುವುದು, ತನ್ನ ರಂಧ್ರವನ್ನು ಗೋಪನಮಾಡುವುದು [ತನ್ನ ಛಿದ್ರವನ್ನು ಇತರರಿಗೆ ತಿಳಿಸದೆ ಗುಟ್ಟುಮಾಡುವುದು] ತನ್ನ ಕೆಲಸಕಾರ್ಯಗಳಲ್ಲಿ ಆಸಕ್ತನಾಗಿರುವುದು, ಪ್ರಸಕ್ತಿ ಬಂದಾಗ ಮಂಗಳವನ್ನಾಚರಿಸುವುದು ಇವುಗಳುಳ್ಳವನನ್ನು ತನ್ನ ಪಕ್ಷದವನೆಂದು ತಿಳಿಯಬೇಕು—

ಪಕ್ಷದವನಲ್ಲಿರಬೇಕಾದ ಗುಣಗಳು— ಒಳ್ಳೆಯ ಕುಲದಲ್ಲಿ ಜನಿಸಿದವ [ಕುಲೀನ] ಆರ್ಯ [ಪೂಜ್ಯ] ಶ್ರುತವಂತ, ವಿನೀತ, ಅಲೋಲುಪ, ಸತ್ಯ, ಅಹಾರ್ಯಬುದ್ಧಿ, ಕೃತಜ್ಞ, ಊರ್ಜಾವಂತ, ಮತಿವಂತ, ಸತ್ವವಂತ, ಇಂಥವನನ್ನು ತನ್ನ ಪಕ್ಷೀಯನನ್ನಾಗಿ ಮಾಡಿಕೊಳ್ಳಬೇಕು—

ಆತ್ಮಗುಣ— ಉದ್ಯೋಗ, ಮೇಧಾ, ಧೃತಿ, ಸತ್ವ, ಸತ್ಯ, ತ್ಯಾಗ, ಅನುರಾಗಸ್ಥಿತಿ, ಗೌರವ. ಜಿತೇಂದ್ರಿಯತ್ವ, ಸಹಿಷ್ಣುತಾ, ಪ್ರಾಗಲ್ಭ್ಯ, ಇವಿಷ್ಟೂ ಆತ್ಮಗುಣಗಳು—

ಶಕ್ತಿತ್ರಯಸ್ವರೂಪಂ— ಮಂತ್ರಶಕ್ತಿಯೆಂಬುದು ಸುನಯಪ್ರಚಾರ, ಸುಕೋಶಸುದಂಡಗಳೆರಡೂ ಪ್ರಭುಶಕ್ತಿಯು, ಬಲವೃದ್ಧಿಚೇಷ್ಟೆಗಳು ಉತ್ಸಾಹಶಕ್ತಿಯೆನಿಸಿಕೊಳ್ಳುವುದು. ಶೌರ್ಯ ಸುದಾಕ್ಷ್ಯ. ವ್ಯಸನಗಳಲ್ಲಿ ಅದೈನ್ಯ, ಉತ್ಸಾಹ ಸಂಪತ್ತಿ, ಅತಿಧೀರತೆ, ಶಾಸ್ತ್ರಸಮುದ್ಭವವಾದ ಸಾಂಸರ್ಗಿಕ ಧೀ, ಪರಿಣಾಮಿತೆ, ಉತ್ಸಾಹ, ಸತ್ವ, ವ್ಯವಸಾಯ, ಚೇಷ್ಟಾದಾರ್ಢ್ಯ, ಕರ್ಮಗಳಲ್ಲಿ ಅತಿ ಪೌರುಷ, ಅರೋಗತೆ, ಕರ್ಮಫಲೋಪಪತ್ತಿ, ದೈವಾನುಕೂಲ, ಆಧಿರಾಹಿತ್ಯ, [ನಿರಾಧಿತಾ] ಇಷ್ಟು ಗುಣವುಳ್ಳ ರಾಜನು ಸಮುದ್ರಜಲದಿಂದ ಕ್ಷಾಳಿತವಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಆಳುವನು—

ಕಾಲಬೇಧ— ಹೆಚ್ಚು ನೀರು ದೊರಕುವ ಮತ್ತು ಮಳೆಹುಯ್ಯುವ ಕಾಲವು ಆನೆಗಳ ಪ್ರಯಾಣಕ್ಕೆ ತಕ್ಕುದು. ಅದಕ್ಕೆ ಅನ್ಯವಾದ ಕಾಲವು ತುರಗಗಳ ಪ್ರಯಾಣಕ್ಕೆ ಉಚಿತವು. ಸಾಮಾನ್ಯವಾಗಿ ಶೀತೋಷ್ಣಗಳು ಅತಿಯಾಗಿಲ್ಲದೆ ಪೈರು ಪಚ್ಚೆಗಳು ಸಮೃದ್ಧವಾಗಿರುವ ಕಾಲದಲ್ಲಿ ದಂಡೆತ್ತಿಹೋಗುವುದು ತಕ್ಕುದು—

ಕಾಲಪ್ರಯೋಜನ— ರಾತ್ರಿಕಾಲದಲ್ಲಿ ಗೂಬೆಗಳು ಕಾಗೆಗಳ ಮೇಲೆ ಬೀಳುತ್ತವೆ (ರಾತ್ರಿ ಕಣ್ಣುಕಾಣುವುದರಿಂದ). ಹಗಲು ಕಾಲದಲ್ಲಿ ಕಾಗೆಗಳು ಗೂಬೆಗಳನ್ನು ಇದಿರಿಸುತ್ತವೆ (ಗೂಬೆಗಳಿಗೆ ಹಗಲು ಕಣ್ಣುಕಾಣುವುದಿಲ್ಲ). ಆದುದರಿಂದ ಹಗೆಗೆ ಅನುಕೂಲವಿಲ್ಲದ ತನಗೆ ಎಲ್ಲಾ ಬಗೆಯ ಸೌಕರ್ಯವಿರುವ ಕಾಲವು ಇಷ್ಟಾರ್ಥವನ್ನು ಫಲಿಸುವಂತೆ ಮಾಡುವುದು—

ದೇಶಪ್ರಯೋಜನ— ನೀರನ್ನು ಬಿಟ್ಟು ಜಲಾಶಯದ ದಡಕ್ಕೆ ಬಂದ ಮೊಸಳೆಯನ್ನು ಕೂಡ ನಾಯಿ ಎಳೆದುಹಾಕುವುದು. ಅದೇ ನಾಯಿ ನೀರಿನೊಳಗಿಳಿದರೆ ಮೊಸಳೆಯು ಅದನ್ನು ನಾಶಮಾಡುವುದು. ಆದುದರಿಂದ ಅನುಕೂಲವಾದ ದೇಶದಲ್ಲಿರುವವನು ಶತ್ರುಗಳಿಗೆ ಅಸಾಧ್ಯನಾಗುವನು—

ಸಮವಿಷಮಮಿಶ್ರಮಾರ್ಗ ಸಂಚಾರ ಕ್ರಮ— ಸಮನಾದ ನೆಲದಲ್ಲಿ ಕುದುರೆಯನ್ನೇರಿ ನಡೆಯಬೇಕು, ಹಳ್ಳತಿಟ್ಟಿನ (ವಿಷಮ) ಮತ್ತು ನೀರುಳ್ಳ ಬೆಟ್ಟಗಳುಳ್ಳ ನೆಲದಲ್ಲಿ ಆನೆಯನ್ನೇರಿ ನಡೆಯಬೇಕು. ನದಿ ಮೊದಲಾದುವನ್ನು ನಾವಿಕರ ಸಹಾಯದಿಂದಲೂ ಮರುಭೂಮಿಯನ್ನು ಮಿಶ್ರಯಾನಗಳಿಂದಲೂ ದಾಟಿ ನಡೆಯಬೇಕು. ಮಳೆಗಾಲದಲ್ಲಿ ಮರುಭೂಮಿಯಲ್ಲಿ ನೀರಿರುವುದು, ಬೇಸಗೆ ಕಾಲದಲ್ಲಿ ನೀರಿರುವ ಭೂಮಿಗಳು ನೀರಿಲ್ಲದೆ ಒಣಗಿಹೋಗಿರುವುವು. ಈ ವ್ಯತ್ಯಾಸವನ್ನು ತಿಳಿದುಕೊಂಡು ರಾಜನು ತಕ್ಕ ಕಾಲದಲ್ಲಿ ಆಯಾದೇಶವನ್ನು ಕುರಿತು ಪ್ರಯಾಣ ಮಾಡಬೇಕು—ಹೆಚ್ಚು ನೀರಿರುವ ದೇಶವನ್ನೂ ನೀರೇ ಇಲ್ಲದಿರುವ ದೇಶವನ್ನೂ ದವಸ ಧಾನ್ಯ ಸವುದೆಗಳಿಂದ ತುಂಬಿರದಿರುವ ದೇಶವನ್ನೂ ಕುರಿತು ಪ್ರಯಾಣಮಾಡಕೂಡದು. ಮತ್ತು ಹೋಗತಕ್ಕ ದೇಶದ ದಾರಿಯನ್ನು ತಿಳಿದಿರುವವರ ಸಹಾಯದಿಂದ ತಿಳಿದು ಸುಖಪ್ರಯಾಣದಿಂದ ಹಗೆಯನ್ನು ಮುಟ್ಟಬೇಕು. ಒಳ್ಳೆಯ ವೀವಧಸಾರವುಳ್ಳುದಾಗಿಯೂ, ನೀರಿನ ಸೌಕರ್ಯವುಳ್ಳುದೂ, ವಿಶ್ವಾಸಕ್ಕೆ ಪಾತ್ರವಾದ ಜನಗಳುಳ್ಳುದೂ ಶೋಧಿಸಲ್ಪಟ್ಟುದೂ ಆಗಿ ಇಷ್ಟು ಮಾತ್ರ ಸೌಕರ್ಯವುಳ್ಳ ಹಗೆಯ ದೇಶದ ಮೇಲೆ ದಂಡೆತ್ತಿ ಹೋಗಬೇಕು – ಯಾವ ದೇಶದಿಂದ ಮೇಲೆ ಹೇಳಿದ ಸೌಕರ್ಯವಿಲ್ಲದೆ

ಕಷ್ಟದಿಂದ ಹಿಂದಿರುಗಬೇಕಾಗುವುದೋ ಅಂತಹ ದೇಶಕ್ಕೆ ಹೋಗಕೂಡದು – ಯಾವ ರಾಜನು ವಿಚಾರಹೀನನಾಗಿ ಮೂಢತನದಿಂದ ಹಗೆಯ ರಾಜ್ಯದಲ್ಲಿ ಬಹುದೂರ ದಂಡೆತ್ತಿಹೋಗುವನೋ ಅವನು ಆ ರಾಜ್ಯದಲ್ಲಿ ಬಹುಬೇಗನೆ ಹಗೆಗಳ ಅಯತ್ನ ಸಾಧ್ಯವಾದ ಕತ್ತಿಯ ಬಾಯಿಗೆ ಸಿಕ್ಕಿ ಸಾಯಬೇಕಾಗುವುದು.

ರಾತ್ರಿಯಲ್ಲಿ ತಂಗುವ ವಿಚಾರ— ಪ್ರಯಾಣ ಮಾಡುವಾಗ ರಾತ್ರಿ ಕಾಲದಲ್ಲಿ ತಂಗಬೇಕಾದಾಗ ದುರ್ಗಮವಾದ ಸ್ಥಳದಲ್ಲಿ ದಂಡನ್ನಿಳಿಸಿ ಸುತ್ತಲೂ ಕಾವಲನ್ನಿಟ್ಟು ಪಾರ್ಶ್ವಗಳಲ್ಲಿ ಆಯುಧ ಹಿಡಿದು ಸಿದ್ಧರಾಗಿರುವ ಯೋಧರನ್ನು ನಿಯಮಿಸಿ ತಕ್ಕಷ್ಟು ಯೋಗನಿದ್ರೆಯನ್ನು ಮಾಡಬೇಕು (ಗಾಢನಿದ್ರೆ ಕೂಡದು ಎಂದು ಭಾವ)–ಮತ್ತು ಗಸ್ತುತಿರುಗುವುದಕ್ಕಾಗಿ ಏರ್ಪಡಿಸಿರುವ ಕುದುರೆಗಳ ಕೆನೆಯುವ ಶಬ್ದವನ್ನೂ, ಆನೆಗಳ ಘಂಟಾಧ್ವನಿಯನ್ನೂ ಕೇಳುತ್ತಾ–ಅದರ ಮೇಲಿರುವ ಯೋಧರು ಗಸ್ತುತಿರುಗುತ್ತಿರುವರೆಂದು ನಂಬಿಕೆಯುಳ್ಳವನಾಗಿ ನಿದ್ರಿಸಬೇಕು. (ಆನೆ ಕುದುರೆಗಳೂ ತಿರುಗಾಡದೆ ನಿದ್ರೆಮಾಡುತ್ತಿದ್ದರೆ ಕೆನೆಯುವ ಧ್ವನಿ, ಘಂಟಾಧ್ವನಿಗಳು ಕೇಳುತ್ತಿರಲಿಲ್ಲವೆಂದು ಭಾವವು)–ಹೀಗೆ ನಿದ್ರೆಮಾಡಿದ ರಾಜನು ಉಷಃಕಾಲದಲ್ಲಿ ಎದ್ದು–ಮುಖಪ್ರಕ್ಷಾಳನಸ್ನಾನಾದಿಗಳಿಂದ ಶುಚಿಯಾಗಿ ಇಷ್ಟದೈವವನ್ನು ಪೂಜಿಸಿ ಪ್ರಕಾಶಮಾನವಾದ ಆಭರಣಗಳನ್ನು ತೊಟ್ಟು ಸಂತುಷ್ಟನಾಗಿ, ಮೊದಲಿನಂತೆ ಮಂತ್ರಿಪ್ರವರರು, ಪುರೋಹಿತರು, ಅಮಾತ್ಯರು, ಸುಹೃದ್ಗಣಗಳು ಇವರೊಡನೆ ಸೇರಿ ಮುಂದೆ ಮಾಡಬೇಕಾದ (ಕರ್ತವ್ಯ) ಕಾರ್ಯವನ್ನು ಆಲೋಚಿಸಿ ನಿರ್ಧರಿಸಿ ವಂಶಪಾರಂಪರ್ಯವಾಗಿ ಬಂದಿರುವ ತನಗೆ ಸಮಾನರಾದ ಕಾಲಾಳುಗಳಿಂದ ಸುತ್ತುವರಿಯಲ್ಪಟ್ಟು ಹೊರಗೆ ಬರಬೇಕು—ಪ್ರೀತಿಪೂರ್ವಕವಾಗಿ ಹಣವನ್ನು ದಾನಕೊಟ್ಟು ಸಂಗ್ರಹಿಸಲ್ಪಟ್ಟ ಭೃತ್ಯರು [ಯೋಧರು] ಭರ್ತೃವಿಗಾಗಿ ಪ್ರಾಣವನ್ನಾದರೂ ತೆರುವರು—ಆನೆ, ಸೈನ್ಯ ಕುದಿರೆ ಮುಂತಾದ ಸಾಮೂಹಿಕ ವರ್ಗಗಳನ್ನು ಬೇರೆ ಬೇರೆಯಾಗಿ ಸನ್ಮಾನಿಸಿ ಸಂಗ್ರಹಿಸಬೇಕು–ರಥಿಕರು, ಕುದಿರೆ ಸವಾರರು ಆನೆಯ ಮಾವಟಿಗರು–ಬಿಲ್ಲಾಳುಗಳು [ಖಡ್ಗಾದಿ ಆಯುಧಧಾರಿಗಳು] ಇವರು ವೈಹಾಳಿಯಲ್ಲಿ ಪ್ರತಿನಿತ್ಯವೂ ತಮ್ಮ ತಮ್ಮ ಯುದ್ಧಕಾರ್ಯವನ್ನು ಅಭ್ಯಾಸ ಮಾಡುವಂತೆ ನೋಡಿಕೊಳ್ಳಬೇಕು. ನಿತ್ಯವೂ ಮಾಡುವ ಅಭ್ಯಾಸವು ಎಂತಹ ಕಷ್ಟಕಾರ್ಯಗಳನ್ನೂ ಸುಲಭವಾಗಿ ಮಾಡುವಷ್ಟು ಲಾಘವವನ್ನು ಕೊಡುವುದು—ಸೇವಕರನ್ನೂ [ದೂತ] ಗೂಢಚಾರರನ್ನೂ ಹಗೆಯ ದೇಶಗಳಲ್ಲಿ ಸಂಚರಿಸಿ ಹಗೆಯ ಚಲನವಲನ ಶಕ್ತಿಸಾಹಸಬಲಗಳ ವಿಚಾರವನ್ನು ತಿಳಿದುಕೊಳ್ಳಬೇಕು – ಹೀಗೆ ಮಾಡದ ರಾಜನು ಕಣ್ಣುಗಳಿದ್ದವನಾದರೂ ಕುರುಡನೇ ಆಗಿರುವನು. ಹಗೆಯ ಅಂತಪಾಲನನ್ನು [ಗಡಿ ರಕ್ಷಕ] ಸ್ವಲ್ಪ ಹಣಕೊಟ್ಟರೂ ಅವನನ್ನು ಶ್ಲಾಘನೆಯಿಂದ ಪ್ರೋತ್ಸಾಹಿಸಿ ತನ್ನ ಗೆಳೆಯನನ್ನಾಗಿಮಾಡಿಕೊಳ್ಳಬೇಕು–ಅವನು ಹಗೆಯರಸರ ದೇಶದ ಪಣ್ಯಾದಿಗಳನ್ನು ನಾಲಿಕೆಯ ಮೂಲಕ ಒದಗಿಸಿಕೊಡುವನು [ತೆಲುಗು ವ್ಯಾಖ್ಯಾ–ನಲ್ಲಿಯ ಮೂಲಕ ನೀರು ದೊರಕುವಂತೆ ಆತನಿಂದ ಹಗೆಯ ಸಮಾಚಾರವು ತಿಳಿದುಬರುವುದು].

ದೂತರ ಮೂಲಕ ಕ್ರಿಯಮಾಣಸಂಧಿಯುಳ್ಳವನಾಗಿ ವಾಂಛಿತವಾದ ಕಾರ್ಯೋಪಕ್ರಮವನ್ನು ಬೇಗ ಮಾಡಬೇಕು. ದಾನಾದಿಗಳಿಂದ ಭೇದೋಪಾಯವನ್ನು ಮಾಡಬೇಕು. ಇದರಿಂದ ತನಗೆ ಸಮುಚ್ಛ್ರಯವುಂಟಾಗುವುದು. ದುರ್ಗಪಾಲರು, ಅಂತಪಾಲರು, ಆಟವಿಕರು, ಇವರನ್ನು ದಾನಾದಿಗಳಿಂದ ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಕು. ಹೀಗೆ ಸ್ನೇಹಿತರಾದ ಅವರು ಕಷ್ಟವಾದ

ಸ್ಥಳಗಳಲ್ಲಿ ದಾರಿ ಮೊದಲಾದುವನ್ನು ಜಲಾಶಯಾದಿಗಳನ್ನು ತೋರಿಸಿಕೊಡುವರು — ಕಾರಣದಿಂದಾಗಲಿ, ಕಾರಣವಿಲ್ಲದೆಯಾಗಲಿ ಯಾವನೊಬ್ಬ ಮನುಷ್ಯನು ತನ್ನ ವರ್ಗವನ್ನು ಬಿಟ್ಟುಬಂದು ಅರಿಸೇವೆಯನ್ನು ಮಾಡಲು ಬರುವನೋ ಅಂತವನನ್ನು ವಿಚಾರಮಾಡಿ ಸೇರಿಸಿಕೊಳ್ಳಬೇಕು— [ಇದಕ್ಕೆ ವಿಭೀಷಣನೇ ನಿದರ್ಶನವು] ಮಂತ್ರಾಲೋಚನೆಯ ಬಲದಿಂದ ತನ್ನ ವಿಜಯಪ್ರಕಾರವನ್ನು ನಿರ್ಧರಿಸಿಕೊಂಡು ಬಲಾನ್ವಿತನಾಗಿ ಯಾತ್ರಾರಂಭವನ್ನು ಮಾಡಬೇಕು. ತೋಳ ಮತ್ತು ದಂಡಿನ ಬಲಕ್ಕಿಂತ ಮಂತ್ರಬಲವು ಬಲವತ್ತರವಾದುದು. ಹಿಂದೆ ಮಂತ್ರಬಲದಿಂದ ಶುಕ್ರಾಚಾರ್ಯನು ದೇವತೆಗಳನ್ನು ಜಯಿಸಿದನು. ಬಿಲ್ಲಾಳಿನಿಂದ ಬಿಡಲ್ಪಟ್ಟ ಬಾಣವು ಕೊಂದರೆ ಒಬ್ಬನನ್ನು ಕೊಲ್ಲಬಹುದು. ಅಥವಾ ಗೂಲ್ಲದೆ ತಪ್ಪಿಹೋದರೂ ಹೋಗಬಹುದು. ಪ್ರಾಜ್ಞನ ಮಂತ್ರದಿಂದ ಆರಂಭಿಸಲ್ಪಟ್ಟ ಕಾರ್ಯವು ಗರ್ಭಗತವಾದ ಪ್ರಾಣಿಯನ್ನಾದರೂ ಕೊಲ್ಲುವುದು – ನಿರ್ಮಲವಾದ ಮನಸ್ಸೆಂಬ ಕಣ್ಣಿನಿಂದ ಕಣ್ಣಿಂದ ನೋಡಲ್ಪಟ್ಟು ಫಲೋದಯಕ್ಕಾಗಿ ಕೈಗೊಂಡ ಕರ್ಮೋದ್ಯಮವನ್ನು ಆಗಲೇ ನಡೆಸಬೇಕು. ಕಾಲವನ್ನು ಕಳೆಯಕೂಡದು, ಸಕಾಲದಲ್ಲಿ ಬಿತ್ತಿದ ಬೀಜವು ಹುಲುಸಾದ ಬೆಳೆಯನ್ನು ಕೊಡುವಂತೆ ಸಕಾಲದಲ್ಲಿ ನಡೆಸಿದ ಕಾರ್ಯವು ಪೂರ್ಣಫಲವನ್ನು ಕೊಡುವುದು. ಪ್ರತಿಭಾಶಾಲಿಗಳಾಗಿ ಶಾಸ್ತ್ರವನ್ನು ತಿಳಿದು ಶೌರ್ಯದಿಂದ ಕೂಡಿದವರಾಗಿ ಯಥಾವತ್ತಾಗಿ ಕಂಡುಬಂದ ದಾರಿಯಲ್ಲಿ ನಡೆಯುವ ದೈವೀ [ಅದೃಷ್ಟ] ಪ್ರಭಾವವುಳ್ಳವರಿಗೆ ತೋಳುಗಳಲ್ಲಿ ಈ ಭೂಮಿಯು ಚಿರಕಾಲ ನೆಲಸಿರುವುದು – ಜನಸಂಪತ್ತಿನಿಂದ ಕೂಡಿ ಬಹಳವಾದ ಪೈರುಪಚ್ಚೆಗಳಿಂದ ಕೂಡಿ ನೀರಿನ ಪ್ರವಾಹ ಕೆಸರು ಇಲ್ಲದಿರುವ ಕಾಲದಲ್ಲಿ [ಎಂದರೆ ಶರತ್ಕಾಲದಲ್ಲಿ] ದಂಡೆತ್ತಿ ಹೋಗಬೇಕು– ಅಥವಾ ಹೂಕಾಯಿಗಳಿಂದ ತುಂಬಿದ ಮಾವಿನ ಗಿಡಗಳು ಶೋಭಿಸುತ್ತಿರುವ ವಸಂತಕಾಲದಲ್ಲಾಗಲಿ ದಂಡೆತ್ತಿಹೋಗಬಹುದು. ಈ ಕಾಲಗಳಲ್ಲಿ ಜಯವು ಅನಾಯಾಸವಾಗಿ ದೊರಕುವುದು– ಈ ಮೇಲೆ ಹೇಳಿದ ಕ್ರಮದಲ್ಲಿ ವಿಜಯಯಾತ್ರೆಯನ್ನು ಆರಂಭಿಸಿದ ವಿಜಿಗೀಷುಗೆ ಶತ್ರುವು ಸುಲಭಸಾಧ್ಯವಾಗುವನು, ಎಂದು ಸರ್ಗವಿಷಯವನ್ನು ಉಪಸಂಹರಿಸುವನು–*

ಇಂತು ಹದಿನಾರನೆ ಸರ್ಗವು—

ಹದಿನೇಳನೆ ಸರ್ಗದಲ್ಲಿ ಸ್ಕಂಧಾವಾರ ನಿವೇಶಕ್ರಮನನ್ನು ಹೇಳಲಾರಂಭಿಸಿ ದಂಡಿಳಿಯುವ ರಾಜಮಂದಿರ ರಚನೆಯನ್ನು, ಮೂಲಭೃತಶ್ರೇಣಿಬಲ ಸುಹೃದ್ಬಲ ಆಟವಿಕಬಲವೆಂಬ ಆರು ಬಗೆಯ ದಂಡಿನ ನಿವೇಶಕ್ರಮುವನ್ನು, ಆನೆ ಕುದುರೆಗಳ ನಿವೇಶಕ್ರಮುವನ್ನು ಹೇಳಿ ಸ್ಕಂಧಾವಾರದಲ್ಲಿರುವ ರಾಜನು ಆಗಾಗ ದಂಡಿನ ಹೊರಗಡೆ ಶತ್ರುಸೈನ್ಯದ ಚಲನವಲನಗಳನ್ನು ದೂತರಿಂದ ಆಗಾಗ ತಿಳಿದುಕೊಳ್ಳುತ್ತಿರಬೇಕು. ಸ್ಕಂಧಾವಾರದ ಹೊರಗಡೆ ತನ್ನ ಸೈನ್ಯಕ್ಕೆ ಅನುಕೂಲವಾಗುವಷ್ಟು ಸಾಮುಗ್ರಿಗಳನ್ನು ಉಳಿಸಿಕೊಂಡು ಉಳಿದುವನ್ನು ನಾಶಮಾಡಬೇಕು. ಹೊರಗಣ ನೆಲದಲ್ಲಿ ಹಗೆಗಳು ನಡೆದುಬರದಂತೆ ನೆಲದಲ್ಲಿ ಹರಿತವಾದ ಗೂಟಗಳನ್ನು ಮೊಳೆಗಳನ್ನು ಪ್ರಚ್ಛನ್ನವಾಗಿ ನೆಡಬೇಕು. ತಾನು ಮಾತ್ರ ಇದನ್ನು ತಿಳಿದುಕೊಂಡು ಅಪಾಯವಿಲ್ಲದೆ ನಡೆಯಬೇಕು; ತಾನು

* ಈ ಗ್ರಂಥದಲ್ಲಿ ಕವಿಯು ಆದಿಯಲ್ಲಿ ಹದಿನಾರುಸರ್ಗದ ವಿಷಯಾನುಕ್ರಮಣಿಕೆಯನ್ನು ಕೊಟ್ಟಿರುವನು. ಆದರೆ ಎಂಟು ಸರ್ಗದ ಟೀಕೆ ಮಾತ್ರವೇ ಉಪಲಬ್ಧವಾಗಿರುವುದರಿಂದ ಮೂಲವನ್ನು ಅನುಸರಿಸಿ ಆ ಎಂಟು ಸರ್ಗಗಳ ವಿಷಯವನ್ನು ಅನುವಾದ ಮಾಡಿದೆ. ಮುಂದಣ ನಾಲ್ಕು ಸರ್ಗಗಳ ವಿಷಯ ಸೂಚಿಯನ್ನು ಮಾತ್ರ ಕೊಟ್ಟಿದೆ.

ಪ್ರಯಾಣಮಾಡಿ ಇಳಿಯುವ ಸ್ಥಳಗಳಲ್ಲಿ ದಂಡಿನ ವ್ಯಾಯಾಮಕ್ಕೋಸ್ಕರ ವ್ಯಾಯಾಮಭೂಮಿಗಳ ನ್ನೇರ್ಪಡಿಸಬೇಕು, ಯಾವ ದೇಶದಲ್ಲಿ ವ್ಯಾಯಾಮಭೂಮಿಗಳು ತನ್ನ ಸೈನ್ಯಕ್ಕೆ ಅನುಕೂಲವಾಗಿದ್ದು ಹಗೆಯ ಸೈನ್ಯಕ್ಕೆ ಅನುಕೂಲವಿಲ್ಲವೋ ಅದು ಉತ್ತಮ ದೇಶ. ಇಬ್ಬರಿಗೂ ಅನುಕೂಲವಾದುದು ಮಧ್ಯಮ. ತನಗೆ ಅನುಕೂಲವಿಲ್ಲದೆ ಹಗೆಗೆ ಅನುಕೂಲವಾಗಿರುವುದು ಅಧಮ–ಎಂದು ಹೇಳಿ ತನಗೆ ಅಪಜಯವನ್ನು ಸೂಚಿಸುವ ಶಕುನಗಳನ್ನು– (ಬೆಂಕಿಕಾರುವ ನರಿ ಕಾಗೆ ಹದ್ದುಗಳು ಮೇಲೆ ಮಂಡಲಾಕಾರವಾಗಿ ಸುತ್ತೋಣ ಆಕಾಶದಿಂದ ರಕ್ತವೃಷ್ಟಿ ರಾಜಗ್ರಹಕ್ಕೆ ಕ್ರೂರಗ್ರಹಗಳ ಆವರಣ, ಚಂದ್ರಸೂರ್ಯಪರಿವೇಷ–ಭೂಕಂಪ, ಸೂರ್ಯಮಂಡಲದಲ್ಲಿ ಕಬಂಧದರ್ಶನ ಇತ್ಯಾದಿ) ಶುಭಶಕುನಗಳನ್ನು [ಆನೆ ಕುದುರೆಗಳ ಉತ್ಸಾಹಧ್ವನಿ ಪುಣ್ಯಾಹಬ್ರಹ್ಮಘೋಷಾದಿ ಧ್ವನಿಶ್ರವಣ, ಪ್ರದಕ್ಷಿಣವಾಗಿ ತಿರುಗುವ ನರಿಯ ಕೂಗು ರಾಜ ನಕ್ಷತ್ರವು ಗ್ರಹಪೀಡೆಯಿಲ್ಲದೆ ಉಜ್ಜ್ವಲಿಸುವುದು ಇತ್ಯಾದಿ] ಹೇಳಿ ಸ್ಕಂಧಾವಾರ ಶಬ್ದದ ವ್ಯುತ್ಪತ್ತಿಯನ್ನು ಹೇಳಿ ರಾಜನು ಮರದ ತಾಳಿನಂತೆಯೂ [ಬೇರಿಂದ ಕೊನೆಯವರೆಗೂ ಇರುವ ಮರದ ಭಾಗ – ಪಣೆ] ತನ್ನ ಸ್ಕಂಧಾವಾರದಲ್ಲಿ ದವಸಧಾನ್ಯಾದಿಗಳು ಕ್ಷಯವಾಗದಂತೆ ಪ್ರಯತ್ನಪುರಸ್ಸರವಾಗಿ ರಕ್ಷಿಸಬೇಕು– ಹೀಗೆ ರಾಜನು ತನ್ನ ಸ್ಕಂಧಾವಾರ ನಿವೇಶನವನ್ನು ಸ್ಥಾಪಿಸಿ ಶುಭಾಶುಭಗಳನ್ನು ನೋಡಿಕೊಂಡು ಹಗೆಯ ಸೈನ್ಯವನ್ನು ಚೆನ್ನಾಗಿ ನಿರೀಕ್ಷಿಸಿ ಶುಭಕಾಲದಲ್ಲಿ ದಂಡೆತ್ತಬೇಕೆಂದು ಹೇಳಿ ಸರ್ಗವನ್ನುಪಸಂಹರಿಸಿರುವನು–

ಹದಿನೆಂಟನೆಯ ಸರ್ಗ —

ಮಹಾ ಪ್ರಜ್ಞಾನಸಂಪನ್ನನೂ ದೈವೋಪಬೃಂಹಿತನೂ ಆದ ವಿಜಿಗೀಷುವು ಉದ್ಯೋಗಾಧ್ಯವಸಾಯಗಳಿಂದ ಸಾಮಾದ್ಯುಪಾಯಗಳನ್ನು ಪ್ರಯೋಗಿಸಬೇಕು. ಕೋಶದಿಂದ ಚತುರಂಗಬಲವನ್ನು ಸಾಧಿಸಿ ಮಂತ್ರಸಹಾಯದಿಂದ ಅರಿಯನ್ನು ಜಯಿಸಬೇಕು ಎಂದು ಉಪಕ್ರಮಿಸಿ ಸಾಮದಾನ ಭೇದ ದಂಡಗಳೆಂಬ ನಾಲ್ಕುಪಾಯಗಳ ಸ್ವರೂಪಭೇದವು ಭೇದಗಳ ಸ್ವರೂಪವನ್ನು ಹೇಳಿ [ಸಾಮವು ಪಂಚವಿಧ—ದಾನವು ಪಂಚವಿಧ – ಭೇದತ್ರಿವಿಧ – ದಂಡದ್ವಿವಿಧ–] ಸಾಮಾದಿಗಳ ಪ್ರಯೋಗವಿಧಾನವನ್ನು ಹೇಳಿ– ಸಾಮಾದ್ಯುಪಾಯ ಪ್ರಯೋಗಿಸಲ್ಪಡುವ ಪುರುಷ ಲಕ್ಷಣವನ್ನು ಹೇಳಿ ಸರ್ಗವಿಷಯವನ್ನುಪಸಂಹರಿಸಿರುವನು—

ಹತ್ತೊಂಭತ್ತನೆಯ ಸರ್ಗ—

ಸಾಮಾದಿಗಳನ್ನು ಪಯೋಗಿಸುವುದಕ್ಕೆ ಪೂರ್ವದಲ್ಲಿ ಆಚರಿಸಬೇಕಾದ ಕ್ರಮ, ಬಲಸ್ವರೂಪ [ಮೌಲಭೃತ, ಶ್ರೇಣಿ, ಸುಹೃದ್ದ್ವಿಷದಾಟವಿಕವೆಂದು ಆರು ವಿಧ] ಅವುಗಳ ತಾರತಮ್ಯಗಳನ್ನು ಭೃತಬಲಸಂಗ್ರಹಣ, ಶ್ರೇಣೀಬಲಸಂಗ್ರಹಣ, ಸುಹೃದ್ಬಲಸಂಗ್ರಹಣ, ರಿಪುಬಲಸಂಗ್ರಹಣ, ಆಟವಿಕಬಲಸಂಗ್ರಹಣ ಇವುಗಳಿಗೆ ಹೇತುಗಳನ್ನು ಹೇಳಿ ಗಜರಥತುರಗಪದಾತಿಯೆಂಬ ನಾಲ್ಕಂಗದೊಡನೆ ಮಂತ್ರ ಕೋಶಬಲವನ್ನು ಸೇರಿಸಿ ಷಡಂಗಬಲವನ್ನೂ ಛಿದ್ರವಿಲ್ಲದಂತೆ ಪ್ರತಿಯಾಗಿ ವ್ಯೂಹರೂಪದಲ್ಲಿ ನಿಲ್ಲಿಸಿ ಪರಬಲವನ್ನು ಇದಿರಿಸಬೇಕು–ಎಂದು ಹೇಳಿ ಬಳಿಕ ಇವೆಲ್ಲಕ್ಕೂ ಮುಖ್ಯನಾದ ಸೇನಾಪತಿಯ ಲಕ್ಷಣವನ್ನೂ, ಅವನ ಕೃತ್ಯವನ್ನೂ, ಗಮನದಲ್ಲಿ ಸ್ಥಾನ ನಿರೂಪಣವನ್ನೂ ವೀರಪುರುಷಾವೃತನಾಗಿ ನಾಯಕನು ಮುಂದೆ–ಕಳತ್ರ, ಸ್ವಾಮಿಯ ಕೋಶ, ಆಸಾರಬಲ ಇವು ಮಧ್ಯದಲ್ಲಿ, ಉಭಯಪಾರ್ಶ್ವದಲ್ಲಿ ಕುದುರೆ–ಪಕ್ಕದಲ್ಲಿ ರಥ–ಪಕ್ಕದಲ್ಲಿ ಆನೆಗಳು ಪಕ್ಕದಲ್ಲಿ ಆಟವಿಕಬಲ, ಹಿಂದೆ ಸೇನಾಪತಿ – [ಈತನು ಎಲ್ಲರನ್ನೂ ಮುಂದೆ ಬಿಟ್ಟುಕೊಂಡು

ಖಿನ್ನರನ್ನು ಸಮಾಧಾನಗೊಳಿಸುತ್ತಾ ಬರಬೇಕು] ಗಮನದಲ್ಲಿ ರಚಿಸಬೇಕಾದ ವ್ಯೂಹಭೇದಗಳನ್ನೂ, ಕೂಟ ಯುದ್ಧವಿಧಾನವನ್ನೂ, ಸೌಪ್ತಿಕವಧ ಪ್ರಕಾರ [ಮಲಗಿರುವ ಹಗೆಗಳನ್ನು ಕೊಲ್ಲುವುದು–ಭಾರತ ಯುದ್ಧದಲ್ಲಿ ಅಶ್ವತ್ಥಾಮನ ಉದಾಹರಣ] ವನ್ನು ಹೇಳಿ ಸರ್ಗವಿಷಯವನ್ನುಪಸಂಹರಿಸಿರುವನು—

ಇಪ್ಪತ್ತನೆಯ ಸರ್ಗವು—

ಯುದ್ಧದಲ್ಲಿ ಆನೆಗಳ ಕೆಲಸ, ತೇರಿನ ಕಾರ್ಯ, ತುರಗಕರ್ಮ ವಿಷ್ಟಿಗಳ [ಬಿಟ್ಟಿ ಆಳುಗಳು] ಕರ್ಮ, ಇವನ್ನು ಹೇಳಿ ಆನೆ ಕುದುರೆ ತೇರು ಪದಾತಿಗಳು ಬೀಡುಬಿಡುವ ಸ್ಥಳಗಳ ಲಕ್ಷಣವನ್ನೂ, ರಾಜನು ಆನೆಯ ಮೇಲೇರಿಕೊಂಡು ಕೋಶವಿರುವಲ್ಲಿಯೇ ಇರಬೇಕು. ಆಗಾಗ ಹಣವನ್ನು ಹಗೆಯರಸರಲ್ಲಿ ಚತುರ್ಬಲವನ್ನು ಸಂಹರಿಸಿದವರಿಗೆ ಬಹುಮಾನ ಕೊಡಬೇಕು ಎಂದು ಹೇಳಿ ವ್ಯೂಹರಚನಾಕ್ರಮವನ್ನು ವಿವರಿಸಿ–ಆನೆ ಕುದುರೆ ತೇರಿಗೆ ಸಹಾಯವೀರರ ಸ್ವರೂಪಸಂಖ್ಯೆಗಳನ್ನು ಹೇಳಿ ವ್ಯೂಹ ಸ್ವರೂಪವನ್ನೂ, ಪ್ರಧಾನವ್ಯೂಹಗಳ ಹೆಸರನ್ನೂ [ಶ್ಯೇನ, ಸೂಚೀ, ವಜ್ರ, ಶಕಟ, ಮಕರ, ಧ್ವಜ ಮೊದಲಾದುವು] ವ್ಯೂಹಾವಯವದಲ್ಲಿ ಆನೆ ಮೊದಲಾದುವುಗಳ ಸ್ಥಾನವನ್ನೂ ನಿರ್ದೇಶಿಸಿ, ಪ್ರಹರ ಮೊದಲಾದ ಹದಿನಾರು ದಂಡಭೇದಗಳನ್ನೂ, ಗೋಮೂತ್ರಿಕಾ ಮೊದಲಾದ ಅಯ್ದು ಭೋಗಭೇದಗಳನ್ನೂ, ಸರ್ವತೋಭದ್ರ ಮೊದಲಾದ ಆರು ಮಂಡಲಭೇದಗಳನ್ನೂ ಹೇಳಿ, ಮೂರು ನಾಲ್ಕೈದುಸೈನ್ಯಗಳ ಕರ್ಕಟ–ಶೃಂಗಾರಿ ಕಾಕಪಾದಿ, ಗೋಧಿಕಾ ಈ ಆಕಾರಭೇದಗಳನ್ನೂ ಹೀಗೆ ದಂಡಾಕಾರವ್ಯೂಹದಲ್ಲಿ ಹದಿನೇಳು ವಿಧಗಳನ್ನೂ, ಮಂಡಲಾಕಾರದಲ್ಲಿ ಎರಡುವಿಧಗಳನ್ನೂ ಹೇಳಿ ವ್ಯೂಹಭೇದನ ಕ್ರಮವನ್ನೂ ವಿವರಿಸಿ–ಆನೆಗಳ ದಂತಗಳಿಗೆ ದೃಢವಾಗಿ ಲೋಹದ ಆಯುಧಗಳನ್ನೂ, ಬಲವಾದ ಪಾದರಕ್ಷೆಗಳನ್ನೂ ಸೇರಿಸಿ ಮದವೇರಿದ ಆನೆಗಳಿಂದ ಹಗೆಗಳ ದಂಡನ್ನು ಕೊಲ್ಲಿಸಬೇಕು. ಮದಸತ್ವಗುಣೋಪಪನ್ನವಾದ ಒಂದು ಆನೆಯು ಹಗೆಗಳ ಅನೇಕ ಸಂಖ್ಯೆಯ ದಂಡನ್ನು ಸಂಹರಿಸಬಲ್ಲುದು. ಆದುದರಿಂದ ಯುದ್ಧಾಭಿಲಾಷಿಯಾದವನಿಗೆ ಆನೆಯ ದಂಡಿನ ಬಲವೇ ಮುಖ್ಯವಾದುದು. ಇಂತಹ ಆನೆಯ ಬಲವುಳ್ಳ ರಾಜನೇ ಜಯಶಾಲಿಯಾಗುವನು ಎಂದು ಸರ್ಗ ವಿಷಯವನ್ನೂ, ಶಾಸ್ತ್ರವಿಷಯವನ್ನೂ ಉಪಸಂಹರಿಸಿರುವನು—

ಪರಿಶಿಷ್ಟ ೨

ವ್ಯಾಖ್ಯಾಕಾರನು ಉದ್ಧರಿಸಿರುವ ಗ್ರಂಥಭಾಗಗಳ ಪಟ್ಟಿಕೆ—

ಪು. ೧೮—ಯಥಾ ಭೃಗುಃ— ಅಗ್ನಿರ್ವಾಯುಸ್ಸಯಸೂರ್ಕಾಣಾಮಿಂದ್ರಸ್ಯ ವರುಣಸ್ಯಚ||
ಚಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀಃ(ತಂ) ? ||
ಯಸ್ಮಾದಿಹ ಸುರೇಂದ್ರಾಣಾಂ ಮಾತ್ರಾಭ್ಯೋ ನಿರ್ಮಿತೋನೃಪಂ ||
ತಸ್ಮಾದಭಿಭವತ್ಯೇಷ ಸರ್ವಭೂತಾನಿ ತೇಜಸಾ—

ಪು. ೨೦—ತಥಾಚೋಕ್ತಂ— ಬ್ರಹ್ಮಾಧ್ಯಾಯಸಹಸ್ರಾಣಾಂ [1]ಶತಂ ಚಾಣಕ್ಯರುದ್ವಿಜಃ |
ತನ್ಮಾರದೇನ ಶುಕ್ರೇಣ ಗುರುಣಾ ಭಾರ್ಗವೇಣ ಚ ||
ಭಾರದ್ವಾಜ ವಿಶಾಲಾಕ್ಷ ಭೀಷ್ಮಪಾರಾಶರೈಸ್ತಥಾ |
ಸಂಕ್ಷಿಪ್ತಂ ಮನುನಾಚೈವ ತಥಾಚಾನ್ಯೈರ್ಮಹರ್ಷಿಭಿಃ ||
ಪ್ರಜಾನಾಮಾಯುಷೋಹ್ರಾಸಂ ವಿಜ್ಞಾಯ ಚ ಮಹಾತ್ಮನಾ |
ಸಂಕ್ಷಿಪ್ತ ವಿಷ್ಣುಗುಪ್ತೇನ ನೃಪಣಾಮರ್ಥ ಸಿದ್ಧಯೇ ||[2]

,, ಕೌಟಲ್ಯಭಾಷ್ಯೇ ಉಪಧಾಶುದ್ಧ ಪ್ರಕರಣೇ } ಅಧಾರ್ಮಿಕ............... ಇತ್ಯಾದಿ—
ಧರ್ಮೋಪಧಾ ಅರ್ಥೋಪದಾ ಚ ಕಾಮೋಪಧಾ ಚ—
ಶೌಚಹೇತೋರಮಾತ್ಯಾನಾಂ ಕೃತ್ವಾ ಕಾರ್ಯೇ ಚತುರ್ವಿಧೇ |
ಶೌಚಾಶೌಚನುಮಾತ್ಯಾನಾಂ ರಾಜಮಾರ್ಗೇತು ಮಂತ್ರಿಭಿಃ ||

ಪು. ೨೧—ಅದೇಂತೆಂದೊಡೆ—? ರಾಜ್ಯಂ ಹಿ ವ್ರತಮುತ್ಥಾನಂ ಯಜ್ಞ ಕಾರ್ಯಾನುಶಾಸನಂ |
ದಕ್ಷಿಣಾಂ ವೃತ್ತಿಸಾಮ್ಯಂಚ ದೀಕ್ಷಾ ತಸ್ಯಾಭಿಷೇಚನಂ ||
,, ತದಾ ಚೋಕ್ತಮಸ್ಮದ್ಗುರಣಾ (ಚಾಣಕ್ಯೇನ—) ಪ್ರಜಾಸುಖೇ ಸುಖಂರಾಜ್ಞಃ ಪ್ರಜಾನಾಂ ಚ ಹಿತೇ ಹಿತಂ||
ನಾತ್ಮಪ್ರಿಯಂ ಹಿತಂ ರಾಜ್ಞಃ ಪ್ರಜಾನಾಂ ಹಿ ಪ್ರಿಯಂ ಹಿತಂ ||

ಪು. ೨೨—ತಥಾಚೋಕ್ತಂ ಕೌಟಲ್ಯೇನ— ಸುವಿಜ್ಞಾತಪ್ರಣೀತ ದಂಡಂ..........ರಾಜನ್ಯಾಯಂ

ಪು. ೨೩—ತಥಾ ಸುಭಾಷಿತಂ— ಪ್ರಾರಭ್ಯತೇ ನ ಖಲು ವಿಘ್ನಭಯೇನ ನೀಚೈಃ |
ಪ್ರಾರಭ್ಯ ವಿಘ್ನ ನಿಹತಾ ವಿರಮನ್ತಿ ಮಧ್ಯಾಃ ||
ವಿಘ್ನೈಃ ಪುನಪುನರಪಿ ಪ್ರತಿಹನ್ಯಮಾನಾ |
ಪ್ರಾರಬ್ಧ ಮುತ್ತಮಗುಣಾ ನ ಪರಿತ್ಯಜನ್ತಿ ||

---

(1) ಶತಂಚಕ್ರೇ ಸ್ವಬುದ್ಧಜಂ (ಮು. ಪಾ.) (2) ಕೌಟಲ್ಯನ ಅರ್ಥ ಶಾಸ್ತ್ರವಿರಬಹುದು.

,, ೨೫—ಕೌಟಲ್ಯಃ— ಸಯಚ್ಛೀಲಸ್ತಚ್ಛೀಲಾಃ ಪ್ರಕೃತಯೋ ಭವನ್ತೀತಿ ಕೌಟಲ್ಯಃ—
,, ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ

,, ೨೮—ತಥಾ ಚೋಕ್ತಂ— ಆಪಾತರಮ್ಯಾ ವಿಷಯಾಃ ಪರ್ಯಂತ ಪರಿತಾಪಿನಃ—

,, ೨೯—ತಥಾ ಚ ಕೌಟಲ್ಯೇ— ಧರ್ಮಾರ್ಥಾವಿರೋಧೇನ ಕಾಮಂಸೇವೇತ ನಿಸ್ಸುಖಂಸ್ಯಾತ್

,, ೩೦—ತಥಾಚೋಕ್ತಂ ಕಾಮ ಸೂತ್ರೇ—ಕೌಟಲ್ಯೇನೈವ } ಶ್ರೋತ್ರತ್ವಕಾ ಜಿಹ್ವಾ ಘ್ರಾಣೇಂದ್ರಿಯಂಗಳ್ಗೆ—(ಸಂಸ್ಕೃತಿ ಇತಿ)

,, ೩೧—ತಥಾಚ ಕೌಟಲ್ಯಃ— ಏಕೋಭ್ಯಾನ್ಯಾತಿಸೇವಿತೋ ಧರ್ಮೋ ಅರ್ಥಕಾಮೌ ನಾತ್ಮಾನಮಿತಿ.

,, ೩೪—ಕೌಟಲ್ಯೇಚಾಪ್ಯುಕ್ತಂ— ಅನರ್ಥಂಜಾನನ್ ಸಂಸರ್ಗಂ ತ್ಯಜೇತ್—

,, ತಥಾ ಚೋಕ್ತಂ ಕೌಟ್ಟಿಲ್ಯವ್ಯಾಕರಣೇ } — ಕೃತಕಮೆಂದುಂ ಸ್ವಾಭಾವಿಕಮೆಂದುಂ ವಿನಯಂ ದ್ವಿವಿಧಂ—

II ಸರ್ಗ

ಪು. ೩೭— ಅಂಗಾನಿವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ||
(ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಹ್ಯೇತಾ ಚತುರ್ದಶ)||

,, ೩೮—ತಥಾಚ— (ಹಾಗೆ ಹೇಳಿದ್ದು) } — ನೀತಿಸಾಗರನಿಷ್ಕ್ರಾಂತಾಃ ಕುಪ್ರಜಾಮಾರುತೇರಿತಾಃ ||
ವಿಕ್ಷೇಪೇನೇಹ ದೃಶ್ಯನ್ತೇ ನಾನಾಶಾಸ್ತ್ರಮಹೋರ್ಮಯಃ ||

ಕಾಮ್ಯಫಲಮೆಂತೊದೊಡೆ

,, ೪೨— ಆತ್ಮೇಂದ್ರಿಯಗಣೋ ಗತ್ವಾ ಸಾಪ್ವೇಂದ್ರಿಯಗಣಂ ವಿಶೇತ್||
ಐಕ್ಯಂ ಗತ್ವಾ ಸಮಂ ಗಚ್ಛೇತ್ ಇತಿಸಾಧ್ಯಃ ಪುನಃ ಪುನಃ||

ಮೋಕ್ಷಾರ್ಥಮೆಂತೆಂದೊಡೆ

ಪರಮಾತ್ಮಮಯೇ-ವಿಶ್ಯಾನ್ಮಂತ್ರಾತ್ಮಾನಂ ಪರಂ ನಯೇತ್||
ತತಶ್ಚ ತನ್ಮಯೋ ಭೂತ್ವಾ ನ ಕಿಂಚಿದಪಿ ಚಿನ್ತಯೇತ್||

,, ೪೩—ಉಕ್ತಂಚ ಗುರುಣಾ } ಸುವಿಜ್ಞಾತಪ್ರಣೀತೋ ಹಿ ದಂಡಃ ಪ್ರಜಾ ಧರ್ಮಾರ್ಥ ಕಾಮಮೋಕ್ಷೈಃ ಯೋ ಜಯತಿ | ದುಷ್ಪ್ರಣೀತೋ ಹಿ ಕಾಮಕ್ರೋಧಾಭ್ಯಾಂ ವಾನಪ್ರಸ್ಥಪರಿವ್ರಾಜಕಾನಪಿ ಕೋಪಯೇತ್| ಕಿಮಂಗ ಗೃಹಸ್ಥಾ—

ಪು. ೪೫— ಪ್ರಜಾಪತಿಃಪ್ರಜಾಸ್ಸೃಷ್ಟ್ವಾ – ತಾಸಾಂ ಸ್ಥಿತಿನಿಬನ್ಧನಂ||

,, ೪೭—ಕೌಟಲ್ಯೇನಾಪ್ಯುಕ್ತಂ— ಅನರ್ಥಂ ಜಾನನ್ ಸಂಸರ್ಗಂ ತ್ಯಜೇತ್—

,, ,, ತಥಾ ಚ ದಂಡೀ [ಕಾವ್ಯಾದರ್ಶಕರ್ತಾ] } ಮಧುರಂ ರಸವದ್ವಾಚಿ ವಸ್ತುನ್ಯಪಿ ರಸಸ್ಥಿತಿಃ ||
ಯೇನಮಾದ್ಯನ್ತಿ ಧೀಮನ್ತೋ ಮಧುನೇನಮಧುವ್ರತಾಃ||

,, ೪೮— ನ ಪ್ರೇಮುದಾನರಹಿತಂ ದಾನಂ ಪ್ರೇಮ ವಿವರ್ಜಿತಂ ||

,, ೪೯—ಉಕ್ತಂಚ— ಉದ್ವೇಜನೀಯೋ ಭವತಿ ಕ್ರೂರವಾಗರ್ಥತೋಽಪಿ ಸರ್ |

,, ಸರ್ವಸ್ಯಾಭ್ಯಾಗತೋ ಗುರುಃ—

,, ೫೪–ತಥಾ ಚ ಕೌಟಿಲ್ಯಃ— ಶುಶ್ರೂಷಾಶ್ರವಣೇ ಗ್ರಹಣಧಾರಣ ವಿಜ್ಞಾನೋಹಾಪೋಹತತ್ವಾಭಿ ನಿವೇಶಾಃ–ಇತಿ—

,, ,, ಅಭಿಜನ ಪ್ರಜ್ಞಾಶೌರ್ಯಾನುರಕ್ತಾನ್ ಅಮಾತ್ಯಾನ್ ಕುರ್ವೀತಂ ಇತಿ ಕೌಟಿಲ್ಯಂ—

,, ೫೫–ತಥಾ ಚ ಕೌಟಿಲ್ಯಃ— ಶೌರ್ಯಮಮರ್ಷಾದಶಕ್ಯಂಚೋತ್ಸಾಹಗುಣ–ಇತಿ

,, ೫೬–ತಥಾ ಚ ಕೌಟಿಲ್ಯೇ— ಪುರೋಹಿತಃ ಉದಿದೋದಿತಕುಶಲೀ ಷಡಂಗವೇದ ದೈವಾದಿ ನಿಮಿತ್ತೇ ವಿನಿತ್ವಾಂಚಾಭಿವಿನೀತಪದಂ ದೈವ ಮಾನುಷಾಣಾಂ ಅಥರ್ವದ್ಭಿರುಪಾಯೈಃ ಪ್ರತಿಕರ್ತಾರ ಆಚಾರ್ಯ ಶಿಷ್ಯ ಪಿತೃಪುತ್ರ ಭೃತ್ಯಸ್ವಾಮಿರ್ವಾ ಪ್ರವರ್ತೇತ – ಇತಿ ಪುರೋಹಿತಲಕ್ಷಣಂ—

೫೭ ತಥಾಚಕೌಟಿಲ್ಯಃ–ಪ್ರತ್ಯಕ್ಷ ಪರೋಕ್ಷಾನುಮೇಯಾ ಹಿ ರಾಜಪ್ರವೃತ್ತಿಃ–

೫೯ ತಥಾಚಕೌಟಿಲ್ಯಃ–ತಸ್ಯ ಪರಿಖಾತೇಸ್ತಿರ್ಯಗ್ಗರ್ಧಾಂತರಾಶ್ಚತುರ್ದಶ ವಾ ವಿಸ್ತೀರ್ಣಾ–

,, ಕೌಟಿಲ್ಯನಿಂದುಕ್ತಂ–ಯುಕ್ತ ದ್ವೀಪಸ್ಥಲಂ ವಾ ನಿಮ್ನೋಪರುದ್ಧಮೌದಕಮಿತಿ–

೬೦ ಆಪದರ್ಥಂ ಸಂರಕ್ಷ್ಯಃ ಕೋಶವತಾ ಸದಾ—ಇತಿ–

೬೬-೬೭ ಪ್ರವಿಶ್ಯ ಸಾನುರಾಗಸ್ಯ ಚಿತ್ತಂ ಚಿತ್ತಜ್ಞಸಂಮತಃ–

೬೭ ಆಕಾರಗ್ರಹಣಮಾಕಾರ ಇತಿ ಕೌಟಿಲ್ಯಃ–

೬೯ ಯಥಾಹ ಕೌಟಿಲ್ಯಃ–ಮದ್ಯಪಾನಂ ಚ–ಉಗ್ರಪಾನೈರುದ್ವೇಜಯೇಯುರಿತಿ–

,, ತಥಾ ಚ ಕೌಟಿಲ್ಯಃ–ಛಾಯಾ ನಾಟಕಾ ಪ್ರತೋದದಿಂ ಏಕಾಂತದೊಳ್ ಪ್ರಮಾದ ಮನೆಯ್ದುತಿರ್ಪ ಸ್ವಾಮಿಯಂ ಬೋಧಿಸಬೇಕು–

೭೦ ಉದ್ಯೋಗಿನಂ ಪುರುಷಸಿಂಹಮುಪೈತಿ–

,, ತ್ಯಾಗೋ ಗುಣೋ ಗುಣವತಾ ಯಧಿಕೋಮತಃ ಇತಿ–

೭೨ ತಥಾ ಚ ಕೌಟಿಲ್ಯಃ – ನೀಚೈರುಪಹತ ಇತಿ–

,, ತಥಾ ಚ ಕೌಟಿಲ್ಯಃ—ಅಲಬ್ಧಾರ್ಥಲಾಭಮುಂ ಲಬ್ಧಾರ್ಥಪರಿರಕ್ಷಣಮುಂ–

,, ತಥಾಚೋಕ್ತಂ—ಲಕ್ಷಣಜ್ಞೋ ನಿಕೃಷ್ಟಸ್ತು ಲಕ್ಷ್ಯವೇದೀ ತು ಮಧ್ಯಮಃ ।
ಉಭಯಂ ಯೋ ವಿಜಾನಾತಿ ಸ ಉತ್ತಮ ಇತಿ ಸ್ಮೃತಃ ॥

೭೩ ಅತ ಏವ ರಾಮೇಣೋಕ್ತಂ—
ಸರ್ವರತ್ನಪ್ರಧಾನಸ್ಯ ಧಾನ್ಯೇನ ಕುಶಲಂ ಗೃಹಂ ।
ತಥಾ ನಾತ್ಯಾಯಂ ಚ ಕುರ್ಯಾದಿತಿ—

೭೪ ತಥಾ ಚ ಕೌಟಿಲ್ಯಃ–ಮನುಷ್ಯರಚಿತ್ತಾನಿತ್ಯತ್ವದತ್ತಣಿಂ ಸವಿಶ್ವಾಸಧರ್ಮರತಮನುಷ್ಯರ್ ಕರ್ಮಂಗಳೊಳ್ ನಿಯೋಗಿಸಲ್ಪಟ್ಟು ಅಪಕಾರಮುಂ ಮಾಳ್ಪರ್–
" ಬುದ್ಧಿಶ್ಚಿತ್ತ ವಿಕಾರಿಣೀ " ತಚ್ಚ—ಅದು ಕಾರಣ ಅವಿಶ್ವಾಸವು ಕಾರ್ಯವೆಂದು ಬೃಹಸ್ಪತಿಯ ಮತಂ—
ಅವಿಶ್ವಾಸೀ ತಥಾ ಚ ಸ್ಯಾದ್ಯಥಾ ಸಂವ್ಯವಹಾರರ್ವಾ—

೭೫ ಕಾರ್ಯಂ ಮಿತ್ರಾನುಕಾರಕಂ—

೭೬ ತಥಾ ಚ ಕೌಟಿಲ್ಯಃ—
ರಾಜ್ಞೋ ಹಿ ವ್ರತಮುದ್ಧಾನಂ ಯಜ್ಞಸ್ತಸ್ಯಾಭಿಷೇಚನಂ ॥
ರಕ್ಷಿಣಾ ಸಮನುವೃತ್ತಿಸ್ತು ದೀಕ್ಷಾ ತಸ್ಯಾಭಿಷೇಚನಂ ॥

೭೮ ತಥಾ ಚ ಕೌಟಿಲ್ಯಃ—
ತೀಕ್ಷ್ಣೋದಂಡಃ ಪ್ರಜಾನಾಮುದ್ವೇಜನೀಯೋ ಭವತಿ – ಮೃದುದಂಡಃ ಪರಿಭೂಯತೇ–ಯಥಾರ್ಹಮಾದಂಡಃ ಪೂಜ್ಯಃ—ಸುವಿಜ್ಞಾತಪ್ರಣಿಹಿತೋ ದಂಡಃ ಪ್ರಜಾಧರ್ಮ ಕಾಮಾರ್ಥೈಃ ಯೋಜಯತಿ। ದುಷ್ಪ್ರಣೀತಸ್ತು ಕಾಮಕ್ರೋಧಾಭ್ಯಾಮಜ್ಞಾನಾದ್ವಾ ವಾನಪ್ರಸ್ಥ ಪರಿವ್ರಾಜಕಾನಪಿ ಕೋಪಯೇತ್—

೭೯ ತಥಾ ಚ ಕೌಟಿಲ್ಯಃ–ಕುಟ್ಟಿಹಿಡಿದ ಕಾಷ್ಠದ ಹಾಗೆ ಅವಿನೀತ ಪುತ್ರವಾದ ರಾಜಕುಲಂ

,, ತಥಾ ಚ ವ್ಯಾಸಃ—ವ್ಯಸನೇ ಪರಸ್ತ್ರೀಮದ್ಯದ್ಯೂತಾದಿ ಸಪ್ತ ವ್ಯಸನದೊಳ್ ಸಜ್ಜಮಾಶಕ್ತಿಯನೆಯ್ದುತಿಹ ಪ್ರಣಿಹಿತವ್ಯಂಜನಗಳಿಂದ ಅದಕ್ಕೆ ವ್ಯಸನ ಸಂಪಾದಕತ್ವವು ತಥಾ ಚ ವಿಜಿಗೀಷುವು ರಾಜಪುತ್ರನಂ ತನಗೆ ವಶಮಪ್ಪಂತು ಕ್ಲೇಶಪಡಿಸುವುದು—

೮೦ ತಥಾ ಚ ಕೌಟಿಲ್ಯಃ–ಪರಸ್ತ್ರೀಯರೊಳಾಸಕ್ತನಂ ಆಚಾರ್ಯರ್ ಸಂಗತರಾದ ಅರುಚಿಗಳಾದ ಸ್ತ್ರೀಯರಿನುದ್ವೇಜಿಪುದು—

,, ತಥಾ ಚ ಕೌಟಿಲ್ಯಃ–ಸ್ವೇತಾದಿಗಳ್ ಗುಪ್ತಮಾದ ಸರ್ಪವಿಷಂಗಳಂ ಸಹಿಸವು ಎಂದು

,, ತಥಾಚೋಕ್ತಂ–ರಚಿತೋ ಗರುಡೋದ್ಗಾರ ಮಣಿರ್ಯಸ್ಯ ವಿಭೂಷಣಂ ॥
ಸ್ಥಾವರಂ ಜಂಗಮಂತಸ್ಯ ವಿಷಂ ನಿರ್ವಿಷತಾಂ ವ್ರಜೇತ್ ॥ ಇತಿ—

೮೧ ಶ್ಯಾಮಾ ಚ ದಧ್ನೋ ವಿಷದೂಷಿತಸ್ಯ
ಮಧ್ಯೇ ಭವತ್ಯೂರ್ಧ್ವಗತಾ ಚ ರೇಖಾ–

೮೨ " ಬುಭುಕ್ಷಿತಃ ಕಿಂ ನಕರೋತಿ ಪಾಪಂ "

೮೩ ಸರ್ವಸ್ಯೈವಾತುರೋಗುರುಃ

೮೪ " ವಿಷಾಕ್ತೇನ ಚ ಸೌವೀರಂ ಮೇಖಲಾಮಣಿನಾನ್ನೃಪಂ
ನೂಪುರೇಣಚ ವೈರತ್ಯಂ ಜಾತುಷಂ ದರ್ಪಣೇನ ಚ ॥

,, ವೇಣ್ಯಾಂ ಶಸ್ತ್ರಂ ಸಮಾಧಾಯ—

೮೬ " ಕೋಶದಂಡಂ ಪ್ರಭು ಶಕ್ತಿ "—ಇತಿ ವಚನಾತ್

,, ' ಸಪ್ತಪ್ರಕೃತಿಕಂ ರಾಜ್ಯ ' ಮಿತ್ಯುವಾಚ ಬೃಹಸ್ಪತಿಃ–

೮೮ ಸಯಚ್ಛೀಲಃ ತಚ್ಛೀಲಾಃ ಪ್ರಕೃತಯಃ–ಇತಿ ವಚನಾತ್

,, ಶಬ್ದಾದಿಷ್ವಿಂದ್ರಿಯಾರ್ಥೇಷು ಚ ಪ್ರಸಕ್ತಃ ಪ್ರಮಾದೇನೇತಿ–ವಚನಾತ್

೮೯ ಏಕಾರ್ಥಾಭಿನಿವೇಶನ ಮರಿಲಕ್ಷಣಂ–ಇತಿ ವಚನಾತ್

೯೦ ದ್ವೇ ಏವ ಪ್ರಕೃತೀ ನ್ಯಾಯ್ಯೇ ಇತ್ಯುವಾಚ ಪರಾಶರಃ ॥

೯೨ ಉಪಕಾರಾಪಕಾತಾಹಿ ಲಕ್ಷ್ಯಂ ಲಕ್ಷಣಮೇತಯೋಃ–ಇತಿ ವಚನಾತ್

,, ಅನುರಾಗೇಣ ಹಿ ಸರ್ವಗುಣ್ಯ—ಇತಿ ವಚನಾತ್

೯೩ ಉಚ್ಛೇದಾಪಚಯೌ ಕಾಲೇ ಪೀಡನಂ ತರ್ಪಣಂ ತಥಾ–ಇತಿ ವಿದ್ಯಾವಿಧಃ

೯೫ ತಥಾಚೋಕ್ತಂ— ನಾನಾಸ್ತಿ ಪುರುಷೋ ಲೋಕೇಶ್ರಿಯಂಯೋ ನಾಭಿವಾಂಛತಿ ।
ಅಶಕ್ತಿ ಭಗ್ನ ಮಾನಸ್ತು ನರೇಂದ್ರಾನ್ ಪರ್ಯುಪಾಸತೇ ॥

೯೬ ಸ್ವಯಂ ಜ್ಞಾತೇಷು ದೋಷೇಷು ಶಸ್ಯತೇ ದಂಡಪಾತನಂ–ಇತಿ ಪ್ರತೀತಂ–

— ಶುದ್ಧಪತ್ರ —

ಪುಟ	ಪದ್ಯ	ಅಶುದ್ಧ	ಶುದ್ಧ
17	25	ಮಂತೆಯಂ	ಕುತೂಹಲತೆಯಂ
19	12	ಗಳಿಂ ಬಿದ್ದುದು	ಗಳೊಳ್ ಬಿಬ್ದುದು
	29	ಣಾರ್ಯ್ಯಂಯಂ	ಣಾರ್ಥಂ ಯತ್
20	19	ದೆಶಿಸಿವು	ದೇಶಿಪೆವು
	,,	ಭಿನ್ನವಿಷ್ನು	ಭಿನ್ನಂವಿಷ್ನು
	20	ಶುದ್ಧಷ್ಟ	ಶುದ್ಧಷಷ್ಠ
23	10	ದೃಷ್ಟದಿಂ	ದೃಷ್ಟಗುಣದಿಂ
24	30	ಗುಣದಿಂದಮ	ಗುಣದಿಂ ದಮ
	33	ನುಕ್ತಂಗಾಮಿಕ	ನುಕ್ತಾಭಿಗಾಮಿಕ
25	2	ಮಾದ	ಮಾದುದು
	28	ತತ	ತತ್
27	10	ಆಖ್ಯಾಮಿತ	ಅಧ್ಯವಸಾಯಾಖ್ಯಾಮಿತ
28	19	ಪಾಲರಂ	ಪಾಲರುಂ
	20	ಎಯ್ದುವಂ	ಎಯ್ದುವನಲ್ಲಿಂ
	22	ಪರಿಸ್ತ್ರೀ	ಪರಸ್ತ್ರೀ
	29	ಗೇಲ್ದಪಂ	ಪೇಲ್ದಪಂ
29	21	ಏಕೈಶೋಪಿ	ಏಕೈಕಶೋಽಪಿ
32	15	ಮದಶನದಿಂದ	ಮದವಶದಿಂದ
33	21	ಹರಿವೃದ್ಧ	ಪರಿವೃದ್ಧ
	22	ಸೇವಿರ್ತ	ಸೇವಿತಾ
34	18	ಮಾದಕೃತ	ಮಾದವಿನಯಂಕೃತ
36	3	ವೃಕ್ತೃಕ್ತ್ವ	ವಕ್ತ್ರುತ್ವ
38	23	ಸಿಥ್ಯರ್ಥ	ಸ್ಥಿತ್ಯರ್ಥ
39	31	ಸ್ಪೃಶ್ವ	ಹಸ್ಪೃಶ್ವ
45	5	ಪ್ರಚಾಪತಿ	ಪ್ರಜಾಪತಿ
	13	ತೇಭ್ಯೋ-ದುಃಖ ತಂತಿಯೇ	"ತೇಭ್ಯೋ–ದುಂಖ....ರಂತಿಯೇ"
	27	ಆ ನೃಶಂಸ್ಯ	ಆನೃಶಂಸ್ಯ
46	22	ಮತ್ತಪ	ಮತ್ತಮ
57	1	ಹೇಗೆ	ಹೀಗೆ
	7	ಅಲ್ಲಿಂ	ಅಲ್ಲಿಯುಂ
	29	ಪೇಲ್ದಸಂ	ಪೇಲ್ದಪಂ

ಪುಟ	ಪದ್ಯ	ಅಶುದ್ಧ	ಶುದ್ಧ
58	17	ಸ್ಥಿತಭೂಮಿಜನಪದ	ಅವಸ್ಥಿತಭೂಮಿ–ಜನಪದಂ
	19	ತಸ್ಮಾದ	ತಸ್ಮಾದ
59	26	ಔದ್ವ	ಔದಕ
	27	ಕಮಿಶಿ	ಕಮಿತಿ
61	1	ಯಯಾನ್ನಾ	ಯಾಯಾನ್ನ
61	24	ಬ್ರಹನ್ಮ	ಬೃಹನ್ಮ
	32	ಪೈತಾನುಹ	ಪೈತಾಮಹ
62	23	ತ್ಕರುಣೋಕ್ತ	• ಕರಣೋಕ್ತ
63	8	ದದ್ತಣಿಂ	ದತ್ತಣಿಂ
64	21	ಪುನಷ್ಟ	ಮನಷ್ಟ
	31	ಕುಲಂಆಭಿ	ಕುಲಂ–ಆಭಿ
	,,	ರಿಕ್ತ	ರಿಕ್ತಂ
	32	ತಂಮಿಲ್ಲಿ	ತಮಿಲ್ಲಿ
65	3	ಏಭೀರ	ಏಭಿರ
	1	ಭ್ಯಾಂಽಹೀನ	ಭ್ಯಾಂ ಹೀನ
	29	ಸ್ಮಯತ್	ಸ್ವಯಂ
	31	ವರ್ಜಿಯೇತ್	ವರ್ಜಯೇತ್
66	5	ಅಶ್ವಾಸನೆ	ಅಸ್ವಾಸನೆ
	6	ಯವಿಡ	ಯನಿಡ
	20	ಮತಮನೆ	ಮ್ಮತಮನೆ
	22	ಪ್ಪಂತತ್| ಅದಂ	ನಪ್ಪಂ| ತತ್–ಅದಂ
	28	ವೈಶಿಷ್ಮ್ಯಂ	ವೈಶಿಷ್ಟ್ಯಂ
	34	ವರಾ	ಪರಾ
67	23	ಮಂಗ್ರಹಿಸುತದ್ದಾ	ಮಂಗ್ರಹಿಸುತಿದ್ದಾ
69	25	ಯದಾ	ಯಥಾ
70	28	ಜ್ಮುಖಿ	ಜ್ಮುಖಿ
	28	ಸನೂನ	ಸಮಾನ
71	1	ತಿದ್ದೀತು|| ತಾಯಂ	ತಿದ್ದೀತು ತಾಯಂ |
	3	ವೇಲ್ದಪಂ	ಪೇಲ್ದಪಂ
	16	ತಮಿಾದೊ	ತಮಾದೊ
	31	ನಂನಭಿವೃ	ನನಭಿಪೃ
72	7	ಆವಲೋಕ	ಆವ ಲೋಕ
	17	ಯೇನು ? |	ಯೇನು

ಪುಟ ಪದ್ಯ	ಅಶುದ್ಧ	ಶುದ್ಧ
72 — 18	ಪ್ರಯೋಜನ	ಪ್ರಯೋಜನ ?
30	ಕಥಾ	ತಥಾ
73 — 32	ತ್ತರಠಿಂ	ತ್ತರಿಂ
76 — 23	ರಾಷ್ಟ್ರಕೆಲನುಗ್ರಮ	ರಾಷ್ಟ್ರಕೆ ಅನುಗ್ರಹಮ
77 — 2	ಯಲ್ಲಿನುಳಿದು	ಯನುಳಿದು
9	ಧರ್ಮಾರ್ಥ| ವಿವ	ಧರ್ಮಾರ್ಥಂವಿವ
25	ಪ್ರಧೂಷ್ಯ	ಪ್ರದೂಷ್ಯ
28	ದರ್ಶನಂಕೋಸುಗ	ದರ್ಶನಕ್ಕೋಸುಗ
32	ವೃತ್ತರಂ	ವಂತರಂ
78 — 9	ಭ್ಯಾಂಮಜ್ಞಾ	ಭ್ಯಾಮಜ್ಞಾ
79 — 5	ಆರ್ಥಾರ್ಥ	ಅರ್ಥಾರ್ಥ
28	ಕ್ಷುತ್ತ್ರ್ಯೃಷ್ಣಾ	ಕ್ಷುತ್ತೃಷ್ಣಾ
29	ಯೆಂದ	ಯೆಂದು
80 — 4	ಶಿಬಿಕೆಮಂ	ಶಿಬಿಕೆ–ಮಂ
9	ಸ್ವೇತಾದಿ	ಸ್ವೇದಾದಿ
14	ಷವೃತಃ	ಷಗ್ವೃತಃ
15	ಜಾಂಗಳ್ಸಿ| ಭಿದಾ	ಗಳ್ಯಭಿಧಾವಿದ್ಯೆ
17	ಕ್ಷಮಂ	ಕ್ಷಣಮಂ
19	ಚತೋರೋ	ಚಕೋರೋ
20	ವಿರಜ್ಯೇತೆ	ವಿರಜ್ಯೇತೇ
23	ಪೀಡೇ	ಪೀಡೆ
31	ವಸಸ್ಯ	“ರಸಸ್ಯ
32	ಮಾಷಿತಸ್ಯ||	ದೂಷಿತಸ್ಯ”